ಭಾನುವಾರ, ನವೆಂಬರ್ 10, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 311 | ಪುಟ 20

● www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭಾನುವಾರದ ಪುರವಣಿ
ಮಕ್ಕಳ ದಿನಾಚರಣೆ
ಹೊಸ್ತಿಲಲ್ಲಿ ಸಾಧನೆ
ಮಾಡಿದ ಪುಟಾಣಿಗಳ
ಕಥನ, ಸೆಲೆಬ್ರಿಟಿಗಳ ಬಾಲ್ಯದ
ನೆನಪಿನ ಕಟ್ಟುಗಳು

‘ಸರ್ಕಾರಿ ನೌಕರರಾಗಿ ಅಂಗನವಾಡಿ ಸಿಬ್ಬಂದಿ’ 9

ದಿನವೂ ಶಾಲೆಗೆ ಬಂದವರಿಗೆ ವಿಮಾನಯಾನ! 7

ಹಾವೇರಿ ಜಿಲ್ಲೆಯ ಹರನಗಿರಿ ರೈತನ ಸಾವು ಪ್ರಕರಣ
ವಕ್ಫ್ ಆಸ್ತಿ ವಿಷಯಕ್ಕೆ ಮಗ ಆತ್ಮಹತ್ಯೆ 5

ಕೋವಿಡ್ ಅಕ್ರಮ ● ಬೊಕ್ಕಸಕ್ಕೆ ₹14.21ಕೋಟಿ ನಷ್ಟ ● ಡಿ.ಕುನ್ಹಾ ವರದಿಯಲ್ಲಿ ಉಲ್ಲೇಖ

ಬಿಎಸ್‌ವೈ, ರಾಮುಲುಗೆ ಸಂಕಷ್ಟ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ನಿರ್ವಹಣೆಗಾಗಿ ಪಿಪಿಇ ಕಿಟ್ ಖರೀದಿ ಪ್ರಕ್ರಿಯೆಯಲ್ಲಿ ಅಧಿಕಾರ ದುರುಪಯೋಗ ಹಾಗೂ ವೈಯಕ್ತಿಕ ಲಾಭ ಪಡೆದ ಬಿ.ಎಸ್. ಯಡಿಯೂರಪ್ಪ, ಬಿ. ಶ್ರೀರಾಮುಲು ವಿರುದ್ಧ ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಯಡಿ ಕ್ರಿಮಿನಲ್ ಪ್ರಕರಣ ದಾಖಲಿಸಿ ತನಿಖೆ ನಡೆಸುವಂತೆ ನ್ಯಾಯಮೂರ್ತಿ ಮೈಕಲ್ ಡಿ.ಕುನ್ಹಾ ಆಯೋಗ ತನ್ನ ವರದಿಯಲ್ಲಿ ಶಿಫಾರಸು ಮಾಡಿದೆ.

‘ಕೋವಿಡ್ ಅವಧಿಯಲ್ಲಿ ಮುಖ್ಯಮಂತ್ರಿಯಾಗಿದ್ದ ಯಡಿಯೂರಪ್ಪ ಮತ್ತು ಆರೋಗ್ಯ ಸಚಿವರಾಗಿದ್ದ ಬಿ.ಶ್ರೀರಾಮುಲು ಅವರು, ಅಧಿಕಾರಿಗಳ ಶಿಫಾರಸುಗಳನ್ನು ಬದಿಗೊತ್ತಿ, ಅಧಿಕಾರ ದುರುಪಯೋಗ ಮಾಡಿಕೊಂಡಿದ್ದಾರೆ. ಇದರಿಂದ ವೈಯಕ್ತಿಕ ಲಾಭ ಮಾಡಿಕೊಂಡಿದ್ದಾರೆ’ ಎಂದೂ ಆಯೋಗದ ವರದಿ ಉಲ್ಲೇಖಿಸಿದೆ.

ಕೋವಿಡ್ ಅಕ್ರಮದ ಬಗ್ಗೆ ತನಿಖೆ ನಡೆಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸರ್ಕಾರ, ನ್ಯಾ. ಡಿ.ಕುನ್ಹಾ ನೇತೃತ್ವದಲ್ಲಿ ಆಯೋಗ ರಚಿಸಿತ್ತು. ಆಯೋಗವು ಸರ್ಕಾರಕ್ಕೆ ಸಲ್ಲಿಸಿರುವ ಮಧ್ಯಂತರ ವರದಿಯ 14 ಪುಟಗಳು ಮಾಧ್ಯಮಗಳಿಗೆ ಸೋರಿಕೆಯಾಗಿವೆ. ಈ ವರದಿ ಅಕ್ರಮ ನಡೆದ ಬಗೆಯನ್ನು ವಿವರಿಸಿದೆ.

‘ನಿರ್ಲಕ್ಷ್ಯ ಹಾಗೂ ವೈಯಕ್ತಿಕ ಲಾಭ ಮಾಡಿಕೊಂಡ ಇಬ್ಬರ ವಿರುದ್ಧವೂ ಭ್ರಷ್ಟಾಚಾರ ತಡೆ ಕಾಯ್ದೆಯ ಸೆಕ್ಷನ್–7 ಮತ್ತು ಸೆಕ್ಷನ್–11ರ ಅಡಿ ಪ್ರಕರಣ ದಾಖಲಿಸುವಂತೆ ಶಿಫಾರಸು ಮಾಡಿದೆ.

ಖರೀದಿಸಿದ ಕಿಟ್	ನೀಡಿದ ದರ (ಪ್ರತಿ ಕಿಟ್‌ಗೆ)
3 ಲಕ್ಷ	₹2,049ರಿಂದ ₹2,117 (ಚೀನಾ ಕಂಪನಿ)
1.50 ಲಕ್ಷ	₹330.40ರಿಂದ ₹725 (ಸ್ಥಳೀಯ)
2,000	₹656.25 (ಸ್ಥಳೀಯ)
18.07 ಲಕ್ಷ	₹400ರಿಂದ ₹1,444.80 (ಸ್ಥಳೀಯ)

ವರದಿಯಲ್ಲಿ ಏನಿದೆ?: ‘₹330ರಿಂದ ₹750ರ ದರದಲ್ಲಿ ಪಿಪಿಇ ಕಿಟ್‌ಗಳನ್ನು ಪೂರೈಸಲು ದೇಶೀಯ ಕಂಪನಿಗಳು ಸಿದ್ಧವಿದ್ದವು. ಈ ಕಂಪನಿಗಳಿಂದಲೇ ಕಿಟ್ ಖರೀದಿಸಬೇಕು ಎಂದು ಅಧಿಕಾರಿಗಳು ಶಿಫಾರಸು ಮಾಡಿದ್ದರೂ, ಅದನ್ನು ಬದಿಗೊತ್ತಲಾಗಿದೆ. ₹2,049ರಿಂದ ₹2,117 ದರದಲ್ಲಿ 3 ಲಕ್ಷ ಕಿಟ್‌ಗಳನ್ನು ಚೀನಾದ ಕಂಪನಿಗಳಿಂದ ಖರೀದಿಸುವ ಒಪ್ಪಂದಕ್ಕೆ ಸ್ವತಃ ಮುಖ್ಯಮಂತ್ರಿ ಮತ್ತು ಆರೋಗ್ಯ ಸಚಿವ ಸಹಿ ಹಾಕಿದ್ದಾರೆ. ಮೂಲ ಖರೀದಿ ನಿಯಮಗಳು ಮತ್ತು ಕಾರ್ಯವಿಧಾನ ಅನುಸರಿಸದೆ, ಟೆಂಡರ್ ಕರೆಯದೆ ಒಪ್ಪಂದ ಮಾಡಿಕೊಂಡಿದ್ದಾರೆ. ಈ ಮೂಲಕ ರಾಜ್ಯದ ಬೊಕ್ಕಸಕ್ಕೆ ಅಪಾರವಾದ ನಷ್ಟ ಉಂಟು ಮಾಡಿದ್ದಾರೆ’ ಎಂದು ಆಯೋಗ ಆರೋಪಿಸಿದೆ.

5ನೇ ಪುಟ ನೋಡಿ

ತನಿಖೆ ತಲೆಕೆಡಿಸಿಕೊಳ್ಳುವ ಅಗತ್ಯವಿಲ್ಲ. ದುರುದ್ದೇಶದಿಂದ ಎಲ್ಲ ಕೆದಕುವ ಪ್ರಯತ್ನ ನಡೆದಿದೆ. ಇದರಿಂದ ಲಾಭವಾಗುವುದಿಲ್ಲ. ನಾವು ತಪ್ಪು ಮಾಡಿಲ್ಲ. ಸತ್ಯ ಸಂಗತಿ ಎಲ್ಲರಿಗೂ ಗೊತ್ತಿದೆ

ಬಿ.ಎಸ್ ಯಡಿಯೂರಪ್ಪ, ಸದಸ್ಯ, ಬಿಜೆಪಿ ಸಂಸದೀಯ ಮಂಡಳಿ

ಒಂದೂವರೆ ವರ್ಷ ಸುಮ್ಮನಿದ್ದ ಸರ್ಕಾರ ಈಗ ತನ್ನ ಹಗರಣ ಮುಚ್ಚಿಕೊಳ್ಳಲು ಯಡಿಯೂರಪ್ಪ ಹಾಗೂ ನನ್ನ ವಿರುದ್ಧ ತನಿಖೆಗೆ ಯತ್ನಿಸುತ್ತಿದೆ. ಗೊಡ್ಡು ಬೆದರಿಕೆಗೆ ಜಗ್ಗುವುದಿಲ್ಲ

ಬಿ.ಶ್ರೀರಾಮುಲು, ಮಾಜಿ ಸಚಿವ

ರಾಜ್ಯ ಸರ್ಕಾರ ತನ್ನ ಅಧೀನ ಸಂಸ್ಥೆಗಳನ್ನು ಹಾಗೂ ಅಧಿಕಾರಿಗಳನ್ನು ದುರುಪಯೋಗ ಮಾಡಿಕೊಂಡು ಪ್ರತಿಪಕ್ಷ ನಾಯಕರನ್ನು ಹತ್ತಿಕ್ಕುವ ಪ್ರಯತ್ನ ಮಾಡುತ್ತಿದೆ. ಸೇಡಿನ ರಾಜಕೀಯಕ್ಕೆ ಜನರೇ ಪಾಠ ಕಲಿಸುತ್ತಾರೆ

ಎಚ್.ಡಿ.ಕುಮಾರಸ್ವಾಮಿ, ಕೇಂದ್ರ ಸಚಿವ

ಅಕ್ರಮದ ಬಗ್ಗೆ ಕ್ರಮಕೈಗೊಳ್ಳುತ್ತೇವೆ. ಕೋವಿಡ್ ಅವಧಿಯಲ್ಲಿನ ಸಾವುಗಳಿಗೆ ನೇರ ಹೊಣೆಗಾರರಾದ ಯಡಿಯೂರಪ್ಪ, ವಿಜಯೇಂದ್ರ ಹಾಗೂ ಶ್ರೀರಾಮುಲುಗೆ ಮಾನ ಇದ್ದರೆ, ಉಪಚುನಾವಣೆಯಲ್ಲಿ ಮತ ಕೇಳಲು ಹೋಗಬಾರದು

ಸಿದ್ದರಾಮಯ್ಯ, ಮುಖ್ಯಮಂತ್ರಿ

ಚಿನಕುರುಳಿ

ಪ್ರಕಾಶ್ ಶೆಟ್ಟಿ

ಕರ್ನಾಟಕ ಮದ್ಯ ವರ್ತಕರಿಂದ ₹700 ಕೋಟಿ ಸುಲಿಗೆ ಮಾಡಿದ ಕಾಂಗ್ರೆಸ್: ಪ್ರಧಾನಿ ಆರೋಪ

ಪ್ರಜಾವಾಣಿ ವಾರ್ತೆ/ಪಿಟಿಐ

ಅಕೋಲಾ (ಮಹಾರಾಷ್ಟ್ರ): ‘ಮಹಾರಾಷ್ಟ್ರ ವಿಧಾನಸಭೆ ಚುನಾವಣೆಗಾಗಿ ಪಕ್ಷದ ನೇತೃತ್ವದ ಆಡಳಿತವಿರುವ ಕರ್ನಾಟಕದಲ್ಲಿ ಮದ್ಯದ ಅಂಗಡಿಗಳ ಮಾಲೀಕರಿಂದ ಕಾಂಗ್ರೆಸ್ ₹700 ಕೋಟಿಯಷ್ಟು ಸುಲಿಗೆ ಮಾಡಿದೆ’ ಎಂದು ಪ್ರಧಾನಿ ಮೋದಿ ಶನಿವಾರ ಆರೋಪಿಸಿದ್ದಾರೆ.

ಇಲ್ಲಿ ನಡೆದ ಪ್ರಚಾರ ಸಭೆಯಲ್ಲಿ ಮಾತನಾಡಿದ ಅವರು, ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಕರ್ನಾಟಕ ಸರ್ಕಾರದ ವಿರುದ್ಧದ ಟೀಕೆಯನ್ನು ಹರಿತಗೊಳಿಸಿದರು.

> **ಅಂಬೇಡ್ಕರ್ ಅವರ ಪರಂಪರೆಗೆ ಸಂಬಂಧಪಟ್ಟ ಸ್ಥಳಗಳನ್ನು ನಮ್ಮ ಸರ್ಕಾರ ಅಭಿವೃದ್ಧಿಪಡಿಸಿದೆ. ಯುಪಿಐಗೆ ಭೀಮ್ ಯುಪಿಐ ಎಂದು ಹೆಸರಿಟ್ಟಿದೆ**
>
> **ನರೇಂದ್ರ ಮೋದಿ** ಪ್ರಧಾನಿ

‘ಮಹಾರಾಷ್ಟ್ರ ವಿಧಾನಸಭೆ ಚುನಾವಣೆ ಹೆಸರಿನಲ್ಲಿ ಕರ್ನಾಟಕದಲ್ಲಿ ಮಾಡುತ್ತಿರುವ ‘ವಸೂಲಿ’ ಇತ್ತೀಚಿನ ದಿನಗಳಲ್ಲಿ ದುಪ್ಪಟ್ಟಾಗಿದೆ ಎಂದು ಜನರು ಹೇಳುತ್ತಿದ್ದಾರೆ. ಚುನಾವಣೆಗಳು ನಡೆಯುತ್ತಿರುವುದು ಮಹಾರಾಷ್ಟ್ರದಲ್ಲಾದರೂ ಕಾಂಗ್ರೆಸ್ ಆಡಳಿತವಿರುವ ನೆರೆಯ ರಾಜ್ಯಗಳಾದ ಕರ್ನಾಟಕ, ತೆಲಂಗಾಣದಲ್ಲಿ ‘ವಸೂಲಿ’ ಮಾಡಲಾಗುತ್ತಿದೆ’ ಎಂದರು.

‘ಯಾವ ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಸ್ತಿತ್ವಕ್ಕೆ ಬರತ್ತದೆಯೋ ಆ ರಾಜ್ಯವು ಪಕ್ಷದ ‘ರಾಜ ಕುಟುಂಬ’ದ (ಶಾಹಿ ಪರಿವಾರ) ಎಟಿಎಂ ಆಗುತ್ತದೆ. ಪ್ರಸ್ತುತ ಕರ್ನಾಟಕ, ಹಿಮಾಚಲ ಪ್ರದೇಶ ಹಾಗೂ ತೆಲಂಗಾಣದಂತಹ ರಾಜ್ಯಗಳು ಕಾಂಗ್ರೆಸ್ ಪಾಲಿಗೆ ಎಟಿಎಂ ಆಗಿವೆ. ಆದರೆ, ಮಹಾರಾಷ್ಟ್ರವು ಕಾಂಗ್ರೆಸ್‌ನ ಎಟಿಎಂ ಆಗುವುದಕ್ಕೆ ನಾವು ಅವಕಾಶ ನೀಡುವುದಿಲ್ಲ’ ಎಂದರು.

‘ಚುನಾವಣೆಗಳನ್ನು ಗೆಲ್ಲುವುದಕ್ಕಾಗಿಯೇ ಕಾಂಗ್ರೆಸ್ ಪಕ್ಷ ಈ ಪ್ರಮಾಣದಲ್ಲಿ ಭ್ರಷ್ಟವಾಗುತ್ತಿದ್ದು, ಅದು ಅಧಿಕಾರಕ್ಕೆ ಬಂದ ನಂತರ ಇನ್ನೂ ಎಷ್ಟು ಭ್ರಷ್ಟವಾಗಬಲ್ಲದು ಎಂಬುದನ್ನು ಯೋಚಿಸಿ’ ಎಂದು ಕಾಂಗ್ರೆಸ್ ವಿರುದ್ಧ ಟೀಕಾಪ್ರಹಾರ ನಡೆಸಿದರು.

7ನೇ ಪುಟ ನೋಡಿ

PES UNIVERSITY ADMISSIONS 2025

ENGINEERING
B.Tech (CSE, CSE-AI&ML, ECE, Mech, EEE, & BT)
M.Tech

MEDICINE
MBBS

COMMERCE
B.Com (Day/Evening) / B.Com (Hons.) with ACCA / B.Com (Hons.) with CMA

LAW
BBA, LLB (Hons.) / BA, LLB (Hons.)

PERFORMING ARTS
BA (Hons.)

PHARMACY
B.Pharm / M.Pharm / Pharm.D

DESIGN
Bachelor of Design

RESEARCH
Ph.D / M.Tech by Research

PSYCHOLOGY
B.Sc (Hons.) / M.Sc.

MANAGEMENT
MBA / BBA (Hons.) in Business Analytics / BBA - General / Sports Management / Hospitality & Event Management

COMPUTER APPLICATIONS
BCA / MCA

ARCHITECTURE
B.Arch

NURSING
B.Sc (Bachelor of Science)

ECONOMICS
B.Sc (Hons.)

ALLIED HEALTH SCIENCES
B.Sc. (Hons) in Cardiac Care / Anaesthesia & OT / Medical Radiology & Imaging / Dialysis Therapy / Emergency / Medical Lab / Medical Science

PHYSIOTHERAPY
Bachelor of Physiotherapy (BPT)

NEW PROGRAMS
B.Sc (Hons) Journalism and Mass Communication
B.A (Hons) Liberal Arts
M.A in Public Policy

PESU will use only JEE Main and KCET scores from 2025 for B.Tech
JEE MAIN KCET
Note: PESSAT will not be applicable for B.Tech Admission 2025

REGISTER TODAY
admissions.pes.edu

#1 UNIVERSITY IN KARNATAKA
New Universities Under 5 Years, KSURF 2019

PES UNIVERSITY
A+ NAAC — PES UNIVERSITY IS NAAC A+ ACCREDITED

PESU SCHOLARSHIPS
₹75+ Crore merit scholarships given till date
pes.edu/scholarships

FLEXIBLE CURRICULUM
B.Tech Major/Minor & M.Tech Switch Program
pes.edu/btech

RESEARCH DRIVEN LEARNING
pes.edu/research

INTERNATIONAL INTERNSHIPS
pes.edu/summer

Some leading companies our students are placed at include: Adobe, Amazon, Apple, Netflix, Facebook, Google, Goldman Sachs, Mercedes Benz, Microsoft, Morgan Stanley...

8010 297 297 admissions@pes.edu
100 Feet Ring Road, BSK III Stage
Bengaluru 560085

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

PROPERTY CORNER

ಕ್ಲಾಸಿಫೈಡ್ಸ್

SVV MONTANA VISTA

Own Your Plot Near Nandi Hills!

- Ready-to-Build Plots
- 5-Star Clubhouse & Amenities
- Kids' Play Area & Walking Path
- Scenic Nandi Hills View
- Prime Location on State Highway

Limited Offer: ~~4000/-~~ ₹3,500/sq. ft. – Call Now!

SVV A HORIZON OF FAITH

98451 70821
90606 09166
www.shrivasaventures.com

REAL ESTATE SELLING

BDA ALLOTED PLOT 30x40 NORTH FACING, 10th BLOCK, BANASHANKARI 6TH STAGE, DIRECT BUYERS: 9945492464

Agricultural Land

Out-Station

2100 SFT SE CORNER BDA SITE 1150 Sft. Margin Land, CK ACHKUT, Clear Title. 9591566166.

HUBLI AGRICULTURAL LAND FOR SALE
Measuring 23 acres
Located at 11km on Hubli-Karwar Road with mango plantation, well, 2 borewell.
Also suitable for any Industry, Education centre, Resort or Convert to NA.
Location: Opposite to Hubli Water World, Anchatageri Village
Brokers excuse.
Genuine Party Contact
9108133206

Magadi Road

FULLY DEVELOPED Agriculture Land near Magadi Road, Nelamangala 2.14 Acres Sale, 2.10 Crores. Suitable for Resort, Farm land. Top location. 9880564557, 8073961925.

MANTRALAYA ENTERPRISES: BUYING And SELLING BDA/`A` Khatha SITES. BANASHANKARI 6th Stage, Anjanapura, Vishweswaraiah Layout. 9945724472.

Sites

Anjanapura

WANTED BDA & BBMP SITES. Anjanapura, JP.Nagar,Banashankari 6th Stage, Vishweshwaraiah Layout. Any Measurements Immediate Settlement Genuine Sellers Contact: 9972223222, 9606632777

BANASHANKRI VI Stage 50x80 commercial site, East-facing on sixty feet road 12500/sft, sale 8088593281 9739875631

BDA SITE NO 536/D 20X30 WEST FACING BANASHANKARI 6th STAGE, 4th T-BLOCK Rs. 70 LAKHS Shivakumar 9845875555

SITE FOR SALE 20x60 East facing Anjanapura 10th Block, 1.10 crore & 40x60 8th Block Anjanapura East facing, 2.25 crore Contact: 9008844447

Gnanabharathi

"AVAILABLE 30X50 West facing Site Shanthi Vidhya Layout Attached Bangalore University, Good location. 9845500019/ 7019314962"

ANJANAPURA SITE for Sale 4th Block 30x40 facing South good location immediate construction near last Bus stop. 9845132011, 9663554448

ANJANAPURA 6TH Block 30x40 West Facing Site For Sale Good Location Immediate Construction. Contact: 9880812364.

ANJANAPURA BDA Site For Sale 40X55 #786 8th block 12000/- per sqft Contact:8095504466

Hebbal

MS RAMAIAH NORTHCITY 50X60 North Facing Site Behind Element Mall Nagavara, For Details Call 9900001973

Banashankari

BSK 6TH Stage 11th Block BDA 20X30 North facing allottee site 78,00,000/- excellent vastu for sale -9986975122

BDA 60X40 Site 511 East Face NTI PH2 Rajiv Gandhi Nagar Kodigehalli 6364712736

J P Nagar

SITE FOR Sale Banashankari 6th Stage 40X60 Good Location 40 feet Road Contact:9448050035

SALE 40X60-BDA Prime Corner Property J.P.Nagar 2nd Phase Near Innisfree House School Only Genuine Buyers Call:9886079998

'AVAILABLE' BDA Sites,Banashankari 6th stage, 10th Block,30x40, North Facing Owner Meeting:9663393533

Kengeri

AVAILABLE 30X60 CORNER SITE 60FT ROAD BLUEJAY ARDLEY PHASE 2 [DODDABELE] NEAR MYSORE ROAD CHALLEGATTA METRO STATION: 8050908920/ 9986866661

Koramangala

KORAMANGALA NEAR BDA Complex Corner Site 2,200 sft. and 1st Block, 100'x72' Commercial Old Building. David 9845855663.

Kempegowda Layout

***NADAPRABHU* KEMPEGOWDA** Layout 1st-block K Sector 30x40 west facing,7th block F Sector 50x80 west-facing,Nayara Petrol bunk backside and VishveshwaraiahLayout 3rd-block 40x60 east-facing. Contact: 9686469799

KEMPEGOWDA LAYOUT, COMMERCIAL BDA SITE FOR SALE 20x30, 30x40, 40x60, 50x80, Contact Kumar: 9945119449

Nagarabhavi

SALE: SITE 30x60 Nagarabhavi 2nd Stage, 'A' Khata. Immediate Registration. Genuine Buyers. Contact: 6361819741.

"NAGARABHAVI NEAR BDA Complex 30x45 North 40x60 South BDA 100% Vasthu Site 40ft Road. 9448432633"

Rajajinagar

RAJAJINAGAR MODI Hospital Road Commercial 30x55, 100 Feet Road Near Kadamba Hotel Contact: 72593 60517

Ramamurthy Nagar

BBMP 40X60 Residential N/F Site Sale at RR Layout, Vijinapur, near Ramamurthy Nagar Close to Jubilee School. Genuine Buyers Contact: 9481604679.

R T Nagar

SULTANPALYA MAIN ROAD, R.T.NAGAR, SALE 10,000-20,000SQFT CORNER PLOTS, CLEAR TITLES IMMEDIATE REGISTRATION, 9743745648

Sanjaynagar

RMV BHOOPASANDRA BDA Site 29'x57' E/F 40' Road, off Chawla Road @ 17,500 per Sft, Owner:9980555558

Vishweswariah Layout

BDA SITE, No 2234, 40X60 WEST FACING, VISHVESHWARAIAH LAYOUT, 1ST BLOCK, Rs 12600/- SFT, Hemanth 9341226446 Shivakumar 9845875555

"30X40 WEST facing BDA site for Sale Vishveshwaraiah Layout 5th Block, Good location. 9845500019/ 7019314962"

30X40 VISHVESHWARAIAH Layout 1st Block Near Watar Tank, 40x60 Site Sale 1st Block Near KHB: 8310003509

"VISHVESHWARAIAH 1ST-BLOCK 50x80 North 40ft Road, parallel to 80ft Road near Shirckey circle. 9886908408"

Yeshwanthpur

***YESVANTHPUR* NEXT** to METRO WHOLE SALE Suitablefor Apartment 75x125 SITE FOR SALE. Contact: 9945079777

Gottigere

GOTTIGERE SITE for Sale, Converted BBMP 'A' Khatha, 30x40 East facing, Clear Titles, near Bhanneraghatta Main Road. 9901043000

Kengeri Satellite Town

SITE FOR Sale 18X25 KHB Site at Kengeri Satellite Town 11500/- per sqft Contact :9108171093

House

Chamarajpet

2BHK 1S FLOOR SE 27000/- 2 BHK 2ND FLOOR NF 27000/-, VEG ONLY AGENT: 9972129530

Indiranagar

INDEPENDENT HOUSE Built on 40x80 site Available for sale. Six bedroom. North facing. MANOJ- 9845095450

Jayanagar

SALE 65X122 East Facing old House 3rd Block Jayanagar Near Ashoka Pillar Main Road Prime Location Call:9611844667 8123515830

PRIME COMMERCIAL Prop 10th Main 4th Block 42/66 W/F Clear Titles Genuine Buyers Call: 9686522990

J P Nagar

JP.NAGAR 1ST 30x40 Old Building East`3.55Cr, JP.Nagar`2nd 30x50 Duplex 4.42Cr East and`Jayanagar 9th 30x40`West 3.25Cr: 9945310899.

DUPLEX VASTU Spacious AC 4BHK Fully Furnished 4Car parking JPNagar Phase5 NRI/ MNC Prefered: 6364372796

Nagarabhavi

30X50 EAST 3 FLOOR 45X50 E/S 5 FLOOR P.G HEJJALA 40X42 4 FLOOR NAGARBHAVI: 9448081380

"FOR SALE: Ground, first`&, 2nd-floor old house Nagarabhavi BDA 11th Block East facing Papareddypalya. 9845014134"

Nandini Layout

BDA 30X40 North Facing, 2BHK Independent House in Railway Layout at Nandini Layout for sale call 9844039482

Vijayanagar

HOUSE FOR SALE, 65x28 EAST FACING 1820 sqft. Vijayanagar 3rd Main Hosahalli, Rental Income Rs. 70,000/- Clear Titles, Genuine Buyers Contact: 9845064657, 9845143415

BDA 30X40 NF, GF House RPC Layout, Vijayanagar, 18,500/- PSqft Near Swimming Pool Owner 9739957911

AASTHA INDUSTRIAL CITY
INDUSTRIAL PLOTS FOR SALE
DC Converted
Dabaspete
Bangalore-Mumbai Economic Corridor
Ready For Registration
Clear Title, Bank Loan Available
Call for more details :
7676343099, 9513142299

Mallathalli

ITI LAYOUT MALLATHAHALLI 30X50 SOUTH FACING DUPLEX 3 BEDROOM HOUSE 2,80,00,000/-NEGOTIABLE ABHILASHA CONSULTANT 9480565758

Andrahalli

FOR SALE 25x33 feet 3000 sqt 2 & 1 BHK 5 house building. good rent income. E Katha. Andrahalli Bangalore. Price 99 laks . Call 9901889675

T C Palya

"TC.PALYA GATED Community BBMP B-Katha New Independent House Ground and First Floor 1.50`Crore. Owner. 9449008336"

Flat

HRBR Layout

3 BHK Apartment Fully Furnished. Mathews Isaac, Apt 302, Jeeja A.H. Residency behind Shoba Store, HRBR II Stage, 4th G Main near Sena Vihar. Interested parties Call: +91 7909249712 for appointment to see the flat. Price around 2.5 Cr. Negotiable. Brokers Excuse.

J P Nagar

SALE OVER 10 YEAR, SEMI-FURNISHED 2 BHK FLAT 1080 SQFT, WITH ROOFED CAR-PARKING JPNAGAR 5TH PHASE: 9986763007

FLAT FOR Sale Near JP Nagar Metro. 55 Lakhs. 9663676464

Kengeri

1 BHK BDA Apartment at Kengeri, Mysore Road, Rs. 16 Lakhs, Lokesh Contact: 98862 01690

Langford Town

✓ **SALE: BEAUTIFUL** 3 BHK flat, 2500 sft, 3 balconies, 3 car parks, on Eagle Street, 'A' Khata. G.N Properties 9845044179

Old Airport Road

TENENTED FULLY FURNISHED 2 BHK FLAT @ OLD AIRPORT, RENT GETTING 30,000/ PRICE 69L 9980577227

Commerical

HRBR Layout

HRBR COMMERCIAL 100 Feet Road BDA North Facing, Excellent Site 40x60 For Sale Call: 7829203369

Jayanagar

SALE COMMERCIAL 50x85 at Jayanagar 4th Block on 80feet Road Excellent Location Ct: 9844134068 8073859758

SALE COMMERCIAL Corner 100x100 Jayanagar 5th Block on 100feet Road Excellent Location Ct: 9844134068 8073859758

J C Road

✓ **SALE: COMMERCIAL** Site 'A' Khata, clear title. 45' width x 37' depth. Behind Cherry Agencies, J.C Road. G.N Properties 9845044179

Majestic And Around

COMMERCIAL PREMISES Sale 'Suprabhata Lodging' Sheshadri Road, Near Anand Rao Circle 1520sqft. Built-Up 8000 Sqft: 9844059690

Mysore

SITE FORSALE@MONDYA Bangalore mysore road Sugar Factory circle 27500sft'Northfacing_Commercial Plot'Suitable_for Mall' Multiplextheatre'Hospital' Educational_Institution' commercial Complex Call:8747036555

Chitradurga

HIRIYUR 6000 sqft commercial property in prime location Hiriyur Main Road, immediate sale. Genuine buyers only. 9591945892

Commercial Building

Jayanagar

JAYANAGAR J.P.NAGAR Commercial Rental Income Properties Available For Sale 10Cr to 30Cr(Genuine Buyers) Rao: 9341906338/ 9742211233

M G Road And Around

TENENTED NEW COMMERCIAL BUILDING NEAR COMMERCIAL STREET, GETTING 3 LAKHS, PRICE 4.95 CRORES 9980577227

Mysore Road

FIVE FLOORS Commercial Complex, Chamarajpet, Site 5296 Sft. Flat`Roofing Construction 19,000+ Sft. Contact: 9341260793.

Seshadripuram

4185 SQ.FT Land with Building for Sale in Seshadripuram opposite Mantri Mall, 17,000 sq.ft built up area. 9945939990

Commercial Land

Kengeri

SALE 4500 sqft, S/West Corner, Nagadevanahalli Ring Road. Ideal for Shopping Mall, Hospital. etc. 9845780996

Farm House/ Land/ Resorts

Multiple Locations

NANDI HILLS road 18.6 guntas gated converted eKhata 15 rooms ready 9Cr non-nego Ph:9677002197

Industrial & Factory

Tumkur Road

DABESPET-KORATAGERE Road. Sale 99 acres Land suitable for Warehouse, Industry, Residential School, University. 9141326819

Residential/ Commercial

M G Road And Around

FOR SALE 2 Bed Room 2000 Sq Ft 3.7 Cr 3 Bed room 2700 Sft 5 Cr Infantry Road close to Metros Markets Hospitals Bus Stand Jayaram 9845049918

RENTAL PROPERTIES

Accommodation Available

Commercial

"KASTURINAGAR 1ST-FLOOR 450 Sqft Rs.26000/-Per month for`Showroom/ Office close to Ring Road & upcoming Metro station. 9845286505"

Commercial Property FOR SALE & RENT
IMMIDIATE POSSESSION

VACANT PROPERTY
North East Corner Commercial Property located in the heart of MALLESHWARAM In the Densely Populated Market Area
11th cross, Sampige road, Malleshwaram.
Property is spread on 3600 sqft area offers around 18 SHOPS on the ground & basement,
it has 4 levels
Basement, Ground, 1st and 2nd floor.
interested parties please contact:
97408 00003 / 84472 99780
OPENING A GATEWAY TO VARIOUS BUSINESS OPPORTUNITIES
YIELD HIGH RENTAL INCOME

Farm House/Land/ Resorts

COMMERCIAL LAND for Rent 34000 sq ft land for rent just off airport road near A2B restaurant (before toll). 200 feet from Airport road. 96326 15254

Industrial And Factory

AVAILABLE OF Industrial Shed of 95000`sqft at Soukya Road, Whitefield. Available Built-to-Suit Warehouse 160000 sqft.`Vijipura Hoskote Contact: 9341234288/ 9663224353/ 9845417487.

House

3 BHK Corner First Floor House With Garage Close to Bashyam Circle Rajajinagar Contact: 9945070268

BUILDERS ESSENTIAL

Roofing Materials

***WE-FIX* LEAKING** ROOF, TANK, SUMP, BATHROOM, SKYLIGHT, HOUSE PAINTING, TILING, CARPENTRY, EPOXY, CIVIL WORKS. 9448572697

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

DH DECCAN HERALD Classifieds
More value, more impact
ಪ್ರಜಾವಾಣಿ

REAL ESTATE

BOOK YOUR REAL ESTATE ADS IN DH ALL KARNATAKA + PRAJAVANI BENGALURU CITY ON SATURDAY + SUNDAY

@ 2481/-*
FOR 15 WORDS



www.dhclassifieds.com
BOOK NOW

*Conditions apply

Book your ad with us now! For more details contact:
+91 9845114560 | +91 9901641752 | +91 9886213331
+91 9731810277 | +91 9900428036 | 080-45557163/164

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

ಪ್ರತಿಯೊಬ್ಬರಿಗೂ ಉಪಯುಕ್ತ

ಪ್ರಜಾವಾಣಿ
ಕ್ಲಾಸಿಫೈಡ್ಸ್

REAL ESTATE BUYING

Commercial Building

Koramangala

WANTED COMMERCIAL VACANT 60x40 SITE/ With Building for Purchase, (Rental Building Preferred) Ejaipura/ Koramangala. 7760392299, 9845135208.

Joint Development

Joint Venture

"URGENTLY REQUIRED- PROPERTY any dimensions in &`around Bangalore for Builders (Joint Venture or Individual). Genuine Parties-Call: 9019533999/ 9731379933"

Sites

Anjanapura

WANTED BDA Site Anjanapura, Banashankari 6th Stage, Vishveshwaraiah layout & any BDA Katha & Mysore MUDA Sites, immediate settlement, genuine Sellers Contact:9902038118, 9449060605

Banashankari

BDA SITES WANTED ARKAVATHY ANJANAPURA BANASHANKRI 6TH STAGE VISHWESHWARAIA KEMPEGOWDA ANY BDA LAYOUT. CONTACT: 9845062822, 8660751654

WANTED BDA SITES Anjanapura, Banashankari 6th Stage, NPKL Layout, Vishveshwaraiah Layout, Contact: 9845298419

Multiple Locations

WANTED BDA SITES Anjanapura- Arkavathi Banashankari 6th.Stage, Vishveswaraiah, Kempegowda, Dr.Shivaramkaranth Layout.Contact: SAPTHAGIRI. 9900268073 9448068073.

North

WANTED SITE/ BUILDING ON 60x90 or 50x80 AT BANGALORE NORTH LOCATION FOR IMMEDIATE PURCHASE. OWNERS CALL: 8884433342/ 8884433324.

Vishweshwariah Layout

BUYING/ SELLING 20x30,30x40,40x60 50x80 BDA sites at VISHVESHWARAIAH LAYOUT, BSK 6th-stage. Contact: 9844533371/ 9341733480

WANTED/ AVAILABLE 50x80, 40x60, 30x40, 20x30, BDA Sites Vishveswaraiah Layout, Kempegowda Layout. Contact: 9886634578/ 9742681666

JOB OPPORTUNITIES

General

REQUIRED PHARMACIST Diploma Holders for Retail License of a Pharmaceutical Company, Location: Timber Yard Layout. Call 98450-26204 for Walk-in- Interview immediately

HOTEL MANAGER, HOUSE KEEPING MANAGER, CASHIER-CUM- RECEPTIONIST: With experience in hotel industry. Contact: 9964982607 (SHIVU)

WANTED INCHARGE to take care of farm land preferably knowledge of farming staying in & around Mandya. Good salary call 9632449277

WANTED MALE staff with computer knowledge to Balija Sangha near Attiguppe Metro contact: 9448476465/8088384110

EARN MORE than Rs 50,000/- per month, Part/ Full time, Age above 30 Years, 9343616020

Hospital & Medical Jobs

A MALE AND LADY DOCTOR Wanted For Private Practice. For More Details Please Contact: 9972280981.

HOSMAT HOSPITAL

HOSMAT HOSPITAL, is Recruiting the following Medical Professionals at HOSMAT Main Unit, Magrath Road, Second Unit at Ring Road, Hennur Junction and Third Unit of Hosmat at Sadashivanagar, Palace Orchards, No.18, Bellary Main (Airport) Road.

1. General Surgeon with Laparoscopic and Trauma experience
2. Anesthetists and Intensivists
3. Neurologist and Stroke specialist
4. Orthopaedic Surgeon with Trauma and Sub Speciality experience
5. Radiologist
6. Urologist
7. Diabetologis
8. Nephrologist
9. Oncologist – Surgical and Medical
10. ENT – Surgeon
11. Medical & Surgical Gastroenterologist
12. CMO & Emergency Medicine Doctors
13. Operations Manager
14. Marketing Executives with Hospital experience
15. OT Scrub Nurses
16. ICU Nurses
17. Medical Transcriptionists
18. Rehabilitation Center – Manager with relevant experience
19. Chemotherapy Nurse
20. Billing Executive – With ECHS Experience
21. Billing & Recovery Executives with Hospital Experience
22. Front office Executive with Hotel/ Hospital Exp
23. Patient Care Coordinator

Medical and Surgical Specialty Groups are welcome to respond.

Call: 080 24497508/ 91084 50312
coordinatorhosmat@gmail.com;
hr@hosmathospitals.com

Accounts & Finance

WANTED ACCOUNTANT B.Com with minimum 03 Years experience, working knowledge of Tally and MS Office for immediate appointment at The Auro School (Managed by Sri Aurobindo Complex Trust), Kanakapura Main Road.Contact: The Secretary, Mob:9880295312, send your resume to Email: sactmsf@gmail.com

Factory

JOB OPENINGS at an ISO-Certified Company located in Jigani seeking qualified candidates for the following positions: 1. General manager- operations (machine shop, fabrication and machine building) 2. Purchase Engineer -Castings and sheet metal 3. Production Supervisor- Experience in fabrication and machine shop operations. 4. Stores executive- Relevant experience preferred. 5. Quality supervisors in machined parts and sheet metal 6. CNC Programmer with CAD CAM knowledge 7. CAD designer with machine tool experience 8. Fresh Graduate Engineers- Mechanical and Electrical disciplines. 9. Diploma and ITI Engineers- electrical and fitters To Apply: Send your resume to info@excelwirecut.com Or Contact: 9686198499

Drivers

DRIVER WANTED. Salary 18,000/- with Accommodation. BMS Aqua and Beverages P. Ltd. Rajarajeshwarinagara Mysore Road, Bangalore-59. Mobile: 9341702079. Send resume by whatsapp.

Teachers/ Professors

WANTED EXPERIENCED Mathematics Teacher Female/ Male for High School. Walk-in Interview. Salary 20000-25000. New Oxford English School, 6th Cross, Gandhinagar,Bangalor e-9. Contact immediately. 080-22261590/ 9880718533

WANTED HIGHER-PRIMARY Hindi, Mathematics and`High School,English Teacher for`a Reputed Institution`in Sunkadakatte, Magadi Main-Road. Contact: 9845892062

EDUCENTRIX
Smart Education Solutions
No.600, Bhuwaneshwar Nagar, R.T. Nagar Post, Bengaluru - 560 032

VACANCIES OPEN FOR REPUTED SCHOOLS IN BANGALORE

REQUIRED

1. Principal & Vice Principal
Qualification: B.Com/ BA/ B.Sc/ M.Sc/M.Com/ B.Ed/M.Ed
Experience Min 5 years
2. Academic Co-ordinators
Qualification: BA/B.Com/ B.Sc/ B.Ed/M.Ed Preferred
Experience: Min 3 years
3. High School Teachers
Qualification: BA/MA/B.Sc/ M.Sc / B.Ed
Experience: Min 3 years
4.Primary/ Middle Primary Teacher
Qualification:BA/B.Sc/B.Com TTE / TCH Preferred
Experience: Min 1 year / Fresher
5.NTT Trained Teachers
Qualification: NTT/MTT/ TCM/D.Ed
Experience: Min 1 year/ Fresher
6.PE Teachers
Qualification: BP.Ed / MP.Ed
Experience: Min 1 year/ Fresher
7.Accountants
Qualification: B.Com/M.Com (Tally) with experience
Experience: Min 1 year
8.Cashier
Qualification: PUC/Diploma/ Graduate with experience
Experience: Min 1 year / Fresher
9.Computer Teacher
Qualification: BCA/Diploma in Computer Science
Experience: Min 1 year / Fresher

SALARY AS PER QUALIFICATION & EXPERIENCE

FOR MORE QUERIES CALL:
+91 99000 46660
+91 82776 54873
E-mail: info@educentrix.in

Security & Detectives

GDA SECURITY PVT LTD.,
(A DIVISION OF GLOBE DETECTIVE AGENCY PVT LTD.,)

WANTED
1. SAFETY & SECURITY SUPERVISOR
2. SAFETY & SECURITY OFFICER

For Software MNC at Sarjapur Road, Bangalore. Male Candidates. CTC Rs. 51,000/- (Supervisor) & Rs. 34,000/- (Officer). Minimum 4 - 5 Years experience as Security Supervisor / Security Guard in IT Sector. Age around 30. Graduate with Computer Knowledge & fluency in English Language. Local language preferred.

Contact: Mr. SANJAY
9148932103

A LEADING Company engaged from past 28 YEARS in providing SECURITY & HOUSE KEEPING SERVICES, is looking for following Category persons with past experience: (1) AREA GENERAL MANAGER- Bangalore South (2) AREA FIELD OFFICER'S- Bangalore South & Electronic City (3) TRAINING OFFICER -2 Nos. (4) FIELD OFFICER- Housekeeping Services (5) SECURITY OFFICERS- Electronic City & Thanisandra (6) EXPERIENCED LADY SALES COORDINATOR- for Corporate office. Location: BTM 2nd Stage. (7) LADY COMPUTER OPERATOR. Location: BTM 2nd Stage. Candidates can Contact Director: 9900596738 or email resume to: info@networkda.com

Wanted

WANTED

Accounts Manager - 7LPA
Sales/Marketing Executive -5LPA
Houskeeping Manager - 6LPA
Resident Manager - 12LPA

Hotel industry background, fluent English communication, good with computer skills

Address:-
Vijayshree Resort, Hampi, Hosapete-583201, Vijayanagara District, Karnataka,
Mob:- 9844713111

WANTED MALE & Female For a Branded Unisex Saloon & SPA in Seshadripuram, Bengaluru. Salary 18000 to 20000/- Call 9019626612

SURIE POLEX

URGENT REQUIREMENT
OFFICE ASSISTANCE (Female)
Good Communication Skill & Basic Computer Knowledge
M/s SURIE POLEX INDUSTRIES Pvt. Ltd
17/40, 6th Cross, B.G. Road, B'lore-30
Mob: 93419 69809

Engg/ Production Technical

REQUIRE ELECTRICANS 3- 4 years Industrial Experience in around Whitefield area for project work Salary based on the experience Contact: 9845557526

BUSINESS

Business to Business

Business

HIGH RETURNS franchise business opportunity in Karnataka from established Company for unique healthcare business Contact 9731172980.

WANTED INVESTOR on profit sharing basis for a startup manufacturing company to expand into exports. Call/ whatsapp 9448340164/ 9480043463

PINEWOOD REAPERS Kd-Kiln Dried Good Quality Available@ Reasonable/Cheap Rates 9632912101 9986495950 @Bidadi Industrial Area

Services

SEEKING EQUITY funds for`25 years old NGO. Entering into Profitable Social Venture. Contact: 7619278091. utkarshequity22@ gmail.com

CAUTION NOTICE

Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.

Advertisement Manager
The Printers (Mysore) Pvt. Ltd. Bengaluru

Business Offers

General

FOOT AND calf muscle automatic Massager, going cheap, call 9900084198

EDUCATIONAL

Diploma Courses

KARNATAKA SANSKRIT University Online Diploma / P G Diploma in Yoga Through Jnana Jyothi Study Centre Bangalore Admission Started Last Date 20 November Contact 9483141411 6362363044

OTHERS

For Sale

HOUSEHOLD THINGS FRIDGE GEESER SOUNDBARS WOOFERS TABLE CHAIRS SOFAS ALMIRAHS DINING CORNER STANDS ETC: 9341273990

MATRIMONIAL

Brides Wanted

Hindu

BRIDE WANTED
Tamil Hindu
Adi Dravida Boy D.O.B 8 May 1985, B.Tech (Computer Science) I.I.T. Madras, Height 5'8" Fair, Settled in Bengaluru. Well to do, Salary Rs.50 lac per annum, Contact:
P.K . Doss, Phone 080- 49709778. Caste No Bar. Agents, Brokers Excuse.

Brahmin

WANTED A brahmin girl for a 51 year old smartha boy, having consultation business and own house. No dependents. Divorcee/Widow fine. Phone 9845038481.

Kannada

DOCTOR IN Canada, age 35, fair boy seeks Kannada graduate girl, fair within 26 to settle Canada sundarsgms@gmail.com 9382679711

SC/ ST

"**SC-AK (RIGHT)** 26,BE, Software Engineer, Bangalore requires well Employed Bride from good family. 7760388034/ 9242135834"

Grooms Wanted

Hindu

EDIGA KANNADA bride, 38 years, 5'6', B.E(CSE), working in IT firm, Bangalore. Preferred groom - similar background, caste no bar. Contact: 9916600748

PERSONAL

Change of Name

CHANGE OF NAME
I,THANMAYI Residing at # 91, 2nd Main, 10th Cross, Govindarajanagar, Vijayanagar, Bangalore-560040 have changed my name to **SNEHA K THANMAYI** vide affidavit dated 08.11.2024 before Notary B. Prasanna, Bangalore. Henceforth I shall be known as **SNEHA K THANMAYI** only.

I, KAMAL KUMAR MUTHA S/o.Megharaj Jain R/a#1, 9th`Cross Agrahara Dasarahalli Basaveshwara Nagar Bangalore 560079 have Changed My Name to KAMAL KUMAR MUTHA JAIN vide`affidavit dated:8.11.2024 before`Notary K.C.Shashikala Bangalore

Community Centre (R) - 1956

ಕಮ್ಯೂನಿಟಿ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಸ್ಟಡೀಸ್ (ಸಿಐಎಂಎಸ್)

COMMUNITY INSTITUTE OF MANAGEMENT STUDIES [CIMS]

Affiliated to **BENGALURU CITY UNIVERSITY**, Approved by **AICTE,** New Delhi
#2/1, Natabhairava Shri V Vajramuni Road, 9th Cross, 9th Main, 2nd Block, Jayanagar, Bengaluru - 560011.
LOCATED IN PRIME LOCATION **NEAR ASHOKA PILLAR, JAYANAGAR, BENGALURU**

MBA

MASTER IN BUSINESS ADMINISTRATION
2 YEARS FULL – TIME PROGRAM
WITH DUAL SPECIALISATION
FINANCE / MARKETING / HUMAN RESOURCE MGT

UNIVERSITY RANK HOLDERS - MBA (BATCH 2021 - 23)

3rd Rank

Ms. Brunda T J

4th Rank

Ms. Muntha Jyothsna

5th Rank

Ms. Zhohara Zabeena

MCA

2 YEARS FULL TIME PROGRAM WITH ADVANCED LAB FACILITY

MANAGEMENT QUOTA 2024 ADMISSION PROCESS

ADMISSION INTAKE
MBA : 90 SEATS
MCA : 60 SEATS

CAMPUS VISIT
> DOCUMENT VERIFICATION
> ADMISSION APPROVAL
ON BACHELOR'S DEGREE %

89% STUDENTS PLACED IN 2023*

250+ COMPANIES

GOVERNMENT QUOTA 2024 ADMISSION PROCESS

ADMISSION INTAKE
MBA : 90 SEATS
MCA : 60 SEATS

APPEAR FOR PGCET EXAM > SELECT CIMS IN OPTION ENTRY > ADMISSION APPROVAL ON PGCET CUT-OFF RANK

SELECT "COMMUNITY INSTITUTE OF MANAGEMENT STUDIES, JAYANAGAR" IN PGCET OPTION ENTRY

PGCET CODE:
MBA - B153 / MCA – C528

- FEE CONSESSION FOR MERITORIUS STUDENTS*
- FINANCIAL ASSISTANCE WILL BE PROVIDED*

FOR ADMISSION ENQUIRY CONTACT:
88844 01104 / 97310 22994 / 080 26577851
Website: www.cimsbschool.org Email ID: cimsadmissions01@gmail.com

- Secretary

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

ನ್ಯಾಷನಲ್ ಪಬ್ಲಿಕ್ ಸ್ಕೂಲ್
ಕೆ ಆರ್ ಪುರಂ

NATIONAL PUBLIC SCHOOL
KR PURAM

65 YEARS OF EDUCATIONAL EXCELLENCE

REGISTRATIONS OPEN 2025-26
NURSERY - GRADE 7

+91 91089 10101
info@npskrpuram.com

Scan to Register

6 Acre Campus with International Standard Sports Facility

Dr. K P Gopalkrishna
Chairman, NPS Group of Institutions

www.npskrpuram.com

Sy No. 72/1, Hirandhalli Village, Bidarahalli Hobli, Virgonagar Post, Bangalore - 560049

ನ್ಯಾಷನಲ್ ಕಾಲೇಜು 'ಸಾಹಿತ್ಯ ಹಬ್ಬದ'ಲ್ಲಿ ಚರ್ಚೆ– ಲೇಖಕ ಬಂಜಗೆರೆ ಜಯಪ್ರಕಾಶ್ ಪ್ರತಿಪಾದನೆ

'ದಲಿತ ಮಹಿಳೆ ಎಂಬ ವಿಶೇಷಣ ಬೇಕು'

ಪ್ರಜಾವಾಣಿ ವಾರ್ತೆ

ಬಂಜಗೆರೆ ಜಯಪ್ರಕಾಶ್

ಬೆಂಗಳೂರು: 'ಉನ್ನತ ವರ್ಗದ ಮಹಿಳೆಯರ ಮೇಲೆ ಅತ್ಯಾಚಾರವಾದರೆ ಈ ಸಮಾಜ ಅತ್ಯಂತ ತೀವ್ರವಾಗಿ ಪ್ರತಿಕ್ರಿಯಿಸುತ್ತದೆ. ಆದರೆ ದಲಿತ ಮಹಿಳೆ ಮೇಲೆ ಅತ್ಯಾಚಾರ ನಡೆದಾಗ ಅನುಕಂಪವೂ ಬರುವುದಿಲ್ಲ' ಎಂದು ಲೇಖಕ ಬಂಜಗೆರೆ ಜಯಪ್ರಕಾಶ್ ಹೇಳಿದರು.

ನ್ಯಾಷನಲ್ ಕಾಲೇಜು ಸಾಹಿತ್ಯ ಹಬ್ಬದಲ್ಲಿ ಅವರು ಶನಿವಾರ ಮಾತನಾಡಿದರು.

'ದಲಿತ ಬಂಡಾಯ ಸಾಹಿತ್ಯ ಅವಲೋಕನ' ಕುರಿತು ವಿಚಾರ ಮಂಡಿಸುವಾಗ ಪ್ರಾಧ್ಯಾಪಕಿಯೊಬ್ಬರು, 'ಮಹಿಳೆಯ ಮೇಲೆ ದೌರ್ಜನ್ಯ ನಡೆದರೆ ಅದನ್ನು ಮಹಿಳೆ ಮೇಲಿನ ದೌರ್ಜನ್ಯ ಎಂದೇ ಕರೆಯಲಾಗುತ್ತದೆ. ಆದರೆ ದಲಿತ ಮಹಿಳೆ ಮೇಲೆ ನಡೆದರೆ, ದಲಿತ ಮಹಿಳೆ ಮೇಲಿನ ದೌರ್ಜನ್ಯ ಎನ್ನಲಾಗುತ್ತದೆ. ಇಬ್ಬರೂ ಮಹಿಳೆಯರೇ ಅಲ್ಲವೇ. ದಲಿತ ಮಹಿಳೆ ಎಂಬ ವಿಶೇಷಣದ ಅಗತ್ಯವೇನಿದೆ' ಎಂದು ಪ್ರಶ್ನಿಸಿದ್ದರು.

ಅದಕ್ಕೆ ಉತ್ತರಿಸಿದ ಜಯಪ್ರಕಾಶರು, 'ಹೈದರಾಬಾದ್‌ನಲ್ಲಿ ಪಶುವೈದ್ಯೆಯ ಮೇಲೆ ಅತ್ಯಾಚಾರ ನಡೆದು ಆಕೆಯನ್ನು ಸುಟ್ಟುಹಾಕಿದ ಪ್ರಕರಣದಲ್ಲಿ ಇಡೀ ದೇಶವೇ ತೀವ್ರ ಆಕ್ರೋಶ ವ್ಯಕ್ತಪಡಿಸಿತು. ಒತ್ತಡದ ಕಾರಣದಿಂದ ಪೊಲೀಸರು ಯಾರನ್ನೋ ಎನ್‌ಕೌಂಟರ್‌ನಲ್ಲಿ ಕೊಂದು ಪ್ರಕರಣವನ್ನು ತಣ್ಣಗಾಗಿಸಿದರು. ಆದರೆ ಉತ್ತರ ಪ್ರದೇಶದ ಹಾಥರಸ್‌ನಲ್ಲಿ ದಲಿತ ಬಾಲಕಿ ಮೇಲೆ ಅತ್ಯಾಚಾರ ನಡೆದು ಆಕೆಯನ್ನು ಸುಟ್ಟುಹಾಕಿದರೂ ಇಡೀ ದೇಶ ಅದಕ್ಕೆ ಎಲ್ಲಿ ಸ್ಪಂದಿಸಿತು' ಎಂದು ಮರುಪ್ರಶ್ನಿಸಿದರು.

ಸಾಹಿತ್ಯ ಹಬ್ಬದಲ್ಲಿ ವಿದ್ಯಾರ್ಥಿಗಳು ಹಾಗೂ ಸಾಹಿತ್ಯ ಆಸಕ್ತರು ಪಾಲ್ಗೊಂಡಿದ್ದರು ಪ್ರಜಾವಾಣಿ ಚಿತ್ರ

'ವೇದನೆ ನಿವೇದನೆ'

'ಶತಮಾನಗಳಿಂದ ತಾವು ಅನುಭವಿಸಿದ್ದ ವೇದನೆಗಳನ್ನು ಜನರು ನಿವೇದಿಸಿಕೊಳ್ಳಲು ಆರಂಭಿಸುವ ಮೂಲಕ ದಲಿತ ಮತ್ತು ಬಂಡಾಯ ಸಾಹಿತ್ಯ ರೂಪುಗೊಂಡವು' ಎಂದು ಬಂಜಗೆರೆ ಜಯಪ್ರಕಾಶ ಅವರು ಹೇಳಿದರು.

'ಸ್ವಾತಂತ್ರ್ಯ ಮತ್ತು ಸಂವಿಧಾನದ ಮೂಲಕ ಶಿಕ್ಷಣ ಪಡೆದು ಒಂದೆರಡು ದಶಕಗಳ ನಂತರವೇ ದಲಿತರು ಮತ್ತು ಶೋಷಿತರು ತಮ್ಮ ತಮ್ಮ ಕತೆಗಳನ್ನು ಬರೆಯಲು ಆರಂಭಿಸಿದರು. ಗಟ್ಟಿಯಾದ ಸಾಹಿತ್ಯ ರೂಪುಗೊಳ್ಳಬೇಕಾದರೆ, ಬರೆಯುವವನಲ್ಲಿ ಹೇಳಲು ಗಟ್ಟಿ ವಿಷಯ ಇರಬೇಕು. ಪರಿಣಾಮಕಾರಿಯಾಗಿ ಬರೆಯಲೂ ಬರಬೇಕು' ಎಂದರು.

'ಈ ಸಮುದಾಯಗಳ ಬರಹಗಾರರಲ್ಲಿ ಬರೆಯಲು ಸಾಕಷ್ಟು ವಿಷಯ ಇತ್ತು. ಆದರೆ ಅದು ಮೊದಲ ಬರಹವಾದ್ದರಿಂದ, ಕೆಲವರು ಮೂದಲಿಸಿದ್ದೂ ಉಂಟು. ಆದರೆ ಒಟ್ಟಾರೆ ಕನ್ನಡ ಸಾಹಿತ್ಯ ವಲಯವು, ದಲಿತ ಮತ್ತು ಬಂಡಾಯ ಸಾಹಿತ್ಯವನ್ನು ಸ್ವೀಕರಿಸಿ ಬೆಳೆಸಿತು' ಎಂದು ಹೇಳಿದರು.

'ಸಾಮಾಜಿಕ ಕಾರಣಕ್ಕೇ ದಲಿತ ಮಹಿಳೆ ಮೇಲೆ ದೌರ್ಜನ್ಯ ಹೆಚ್ಚು ನಡೆಯುತ್ತದೆ ಮತ್ತು ಆ ಬಗ್ಗೆ ಸಮಾಜದ ಎಲ್ಲ ವರ್ಗಗಳಿಂದ ಆಕ್ರೋಶ ವ್ಯಕ್ತವಾಗದು. ಹೀಗಾಗಿ, 'ದಲಿತ ಮಹಿಳೆ ಮೇಲೆ ದೌರ್ಜನ್ಯ/ ಅತ್ಯಾಚಾರ' ಎಂದು ವಿಶೇಷಣ ಸೇರಿಸಿಯೇ ಹೇಳಬೇಕಾಗುತ್ತದೆ' ಎಂದರು.

ಮತ್ತೊಬ್ಬ ಸಭಿಕರು, 'ಸಾಹಿತ್ಯ ಘಟ್ಟಗಳನ್ನು ಬಂಡಾಯ ಮತ್ತು ದಲಿತ ಎಂದು ಗುರುತಿಸುವ ಅಗತ್ಯವೇನಿದೆ? ಬಂಡಾಯ ಎಂಬುದು ವ್ಯವಸ್ಥೆಯ ವಿರುದ್ಧದ ಹೋರಾಟ. ಸಾಹಿತ್ಯಕ್ಕೆ ಅದನ್ನು ಸೇರಿಸಿಬಿಟ್ಟರೆ ಅದರ ವ್ಯಾಪ್ತಿ ಸೀಮಿತವಾಗುವುದಿಲ್ಲವೇ? ಬಂಡಾಯ ಮತ್ತು ದಲಿತ ಸಾಹಿತ್ಯಕ್ಕೆ ಉತ್ತಮ ಹೆಸರನ್ನು ಏಕೆ ಆಯ್ಕೆ ಮಾಡಬಾರದು' ಎಂಬ ಪ್ರಶ್ನೆ ಮುಂದಿಟ್ಟರು.

'ಕನ್ನಡದ ಬೇರೆಲ್ಲಾ ಸಾಹಿತ್ಯ ಘಟ್ಟಗಳನ್ನು ರೂಪಿಸಿದವರಲ್ಲಿ ಅವರ ಜಾತಿ ಮತ್ತು ಸಾಮಾಜಿಕ ಹಿನ್ನೆಲೆ ಮುಖ್ಯವಾಗಿರಲಿಲ್ಲ. ಆದರೆ ಬಂಡಾಯ ಮತ್ತು ದಲಿತ ಸಾಹಿತ್ಯವನ್ನು ರೂಪಿಸಿದವರ ಜಾತಿ ಮತ್ತು ಸಾಮಾಜಿಕ ಸ್ಥಿತಿ ಮುಖ್ಯವಾಗುತ್ತದೆ. ಈ ಕಾರಣದಿಂದ ಆ ಘಟ್ಟವನ್ನು ಆ ಹೆಸರಿನಿಂದಲೇ ಗುರುತಿಸಬೇಕು' ಎಂದು ಜಯಪ್ರಕಾಶ್ ಪ್ರತಿಪಾದಿಸಿದರು.

'ಸಾಹಿತ್ಯ ಹಬ್ಬ'ದ ಎರಡನೇ ದಿನವಾದ ಪ್ರಾಧ್ಯಾಪಕಿ ಎನ್.ಆರ್. ಲಲಿತಾಂಬ ಅವರು, 'ಜೈನ ಸಾಹಿತ್ಯ ಮತ್ತು ತತ್ವಗಳು' ಕುರಿತು ವಿಷಯ ಮಂಡಿಸಿದರು. ವಿದ್ಯಾರ್ಥಿಗಳು ಸಂವಾದದಲ್ಲಿ ಭಾಗಿಯಾದರು. ನಂತರದ ಅವಧಿಯಲ್ಲಿ ಕಾಲೇಜು ವಿದ್ಯಾರ್ಥಿಗಳ ತಂಡವು ಜನಪದ ನೃತ್ಯಗಳನ್ನು ಪ್ರದರ್ಶಿಸಿತು. ಸುಧಾಕರ ಜೈನ್ ಮತ್ತು ತಂಡವು ತಾಳ ಮದ್ದಳೆ ಪ್ರಸ್ತುತಪಡಿಸಿತು.

ಹೊತ್ತಿ ಉರಿದ ಫರ್ನಿಚರ್ ಕಾರ್ಖಾನೆ: ಕಾರ್ಮಿಕ ಸಾವು

ಪ್ರಜಾವಾಣಿ ವಾರ್ತೆ

ಆನೇಕಲ್: ತಾಲ್ಲೂಕಿನ ಅತ್ತಿಬೆಲೆ ಕೈಗಾರಿಕಾ ಪ್ರದೇಶದ ಯಡವನಹಳ್ಳಿ ಸಮೀಪ ಶನಿವಾರ ಶ್ರೀರಾಮ್ ವುಡ್ ಮತ್ತು ಫರ್ನಿಚರ್ ಕಾರ್ಖಾನೆಯಲ್ಲಿ ಬೆಂಕಿ ಅವಗಢ ಸಂಭವಿಸಿದ್ದು, ಉತ್ತರಪ್ರದೇಶ ಮೂಲದ ಕಾರ್ಮಿಕ ಗೋವಿಂದ (24) ಮೃತಪಟ್ಟಿದ್ದಾರೆ.

₹5 ಕೋಟಿಗೂ ಹೆಚ್ಚು ಮೌಲ್ಯದ ಮರದ ತುಂಡಗಳು ಮತ್ತು ಫರ್ನಿಚರ್ ಸಾಮಗ್ರಿ ಸುಟ್ಟು ಭಸ್ಮವಾಗಿವೆ. ಭಾರಿ ಪ್ರಮಾಣದಲ್ಲಿ ಬೆಂಕಿ ಆವರಿಸಿದ್ದರಿಂದ ಭಯದಿಂದ ಕಾರ್ಖಾನೆಯಲ್ಲಿಯೇ ಉಳಿದ ಗೋವಿಂದ ಬೆಂಕಿಗೆ ಸಿಲುಕಿ ಮೃತಪಟ್ಟಿದ್ದಾರೆ.

ಕಾರ್ಖಾನೆಯಲ್ಲಿಯೇ ವಾಸವಾಗಿದ್ದ 24 ಕಾರ್ಮಿಕರು ಹೊರಗೆ ಓಡಿ ಪ್ರಾಣ ರಕ್ಷಿಸಿಕೊಂಡಿದ್ದಾರೆ. ಬೆಳಗಿನ ಜಾವ 3.30ಕ್ಕೆ ಬೆಂಕಿ ತಗುಲಿದೆ. ಕಾರ್ಖಾನೆಯ ಇತರೆಡೆಗೂ ವ್ಯಾಪಿಸಿ ಮರದ ತುಂಡುಗಳು ಹೊತ್ತು ಉರಿದಿವೆ. ಬೆಂಕಿ ನಂದಿಸಲು ಅಗ್ನಿಶಾಮಕ ಸಿಬ್ಬಂದಿ ಪರದಾಡಿದರು. ಎಲೆಕ್ಟ್ರಿಕ್ ಶಾರ್ಟ್ ಸರ್ಕಿಟ್ ಅಥವಾ ಕಾರ್ಮಿಕರು ಅಡುಗೆ ಮಾಡಿಕೊಳ್ಳುತ್ತಿದ್ದ ಮನೆಯಿಂದ ಬೆಂಕಿ ಹೊತ್ತಿರಬಹುದು ಎಂದು ಪೊಲೀಸರು ಅನುಮಾನಿಸಿದ್ದಾರೆ.

ಹೊತ್ತು ಉರಿದ ಕಾರ್ಖಾನೆ

ಎಲೆಕ್ಟ್ರಾನಿಕ್ ಸಿಟಿ, ಸರ್ಜಾಪುರ, ಜಯನಗರ, ಆನೇಕಲ್ ಅಗ್ನಿಶಾಮಕ ದಳದ ಐದಕ್ಕೂ ಹೆಚ್ಚು ವಾಹನ ಮತ್ತು ಸಿಬ್ಬಂದಿ ಸತತ ಏಳು ತಾಸಿಗೂ ಹೆಚ್ಚು ಸಮಯ ಕಾರ್ಯಾಚರಣೆ ನಡೆಸಿ ಬೆಂಕಿ ನಂದಿಸುವಲ್ಲಿ ಯಶಸ್ವಿಯಾದರು.

ಶ್ರೀರಾಮ್ ವುಡ್ ಕಾರ್ಖಾನೆ ಪಕ್ಕದಲ್ಲಿಯೇ ಆಶೀರ್ವಾದ್ ಪೈಪ್, ಟಿಂಬರ್ಸ್ ಕಾರ್ಖಾನೆಗಳಿದ್ದು ಅಲ್ಲಿಗೂ ಬೆಂಕಿ ಹಬ್ಬಿತ್ತು. ಅಗ್ನಿಶಾಮಕ ದಳದ ಸಿಬ್ಬಂದಿ ಬೆಂಕಿ ನಂದಿಸಿ ಅಪಾಯ ತಪ್ಪಿಸಿದರು. ಎಸ್‌ಪಿ ಸಿ.ಕೆ. ಬಾಬಾ, ಎಎಸ್ಪಿ ನಾಗೇಶ್ ಕುಮಾರ್ ಸ್ಥಳಕ್ಕೆ ಭೇಟಿ ನೀಡಿದ್ದರು.

ಕೆಂಗೇರಿ ಸಮೀಪ ಬೆಂಜ್ ಕಾರು ಡಿಕ್ಕಿ –ಟೆಕಿ ಸಂಧ್ಯಾ ಸಾವು ಪ್ರಕರಣ

ಹಾರ್ಡ್‌ಡಿಸ್ಕ್ ಜಪ್ತಿಗೆ ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬೆಂಜ್ ಕಾರು ಡಿಕ್ಕಿ ಹೊಡೆದು ಕೆಂಗೇರಿಯ ಸಮೀಪ 30 ವರ್ಷದ ಟೆಕ್ಕಿ ಸಂಧ್ಯಾ ಸಾವನ್ನಪ್ಪಿದ ಘಟನಾ ಸ್ಥಳದಲ್ಲಿನ ಸಿಸಿಟಿವಿ ಕ್ಯಾಮೆರಾದ ದೃಶ್ಯಗಳನ್ನು ಒಳಗೊಂಡ ಹಾರ್ಡ್‌ಡಿಸ್ಕ್ ಜಪ್ತಿ ಮಾಡಿ' ಎಂದು ಕೆಂಗೇರಿ ಸಂಚಾರ ಪೊಲೀಸ್ ಠಾಣೆಯ ಇನ್‌ಸ್ಪೆಕ್ಟರ್‌ಗೆ ಹೈಕೋರ್ಟ್ ನಿರ್ದೇಶಿಸಿದೆ.

ಈ ಸಂಬಂಧ ಮೃತ ಸಂಧ್ಯಾ ಅವರ ಪತಿ ಬೆಂಗಳೂರಿನ ಬಸವೇಶ್ವರ ನಗರದ ಎನ್. ಶಿವಕುಮಾರ್ ಸಲ್ಲಿಸಿರುವ ರಿಟ್ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಹೇಮಂತ್ ಚಂದನ್ ಗೌಡರ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

ವಿಚಾರಣೆ ವೇಳೆ ಅರ್ಜಿದಾರ ಶಿವಕುಮಾರ್ ಪರ ಹೈಕೋರ್ಟ್ ವಕೀಲ ಸುನಿಲ್ ಶೇಷಗಿರಿ ರಾವ್ ವಾದ ಮಂಡಿಸಿ, 'ಆರೋಪಿ ಧನುಷ್ ಪ್ರಭಾವಿ ವ್ಯಕ್ತಿಯಾಗಿದ್ದು, ಅವರ ಕುಟುಂಬಸ್ಥರು ರಾಜಕಾರಣಿಗಳ ಜೊತೆ ನಿಕಟ ಸಂಪರ್ಕ ಹೊಂದಿದ್ದಾರೆ. ಹೀಗಾಗಿ, ಪ್ರಕರಣವನ್ನು ಮುಚ್ಚಿ ಹಾಕುವ ಸಾಧ್ಯತೆ ಇದೆ. ಆದ್ದರಿಂದ, ಘಟನೆಯ ಹಾರ್ಡ್ ಡಿಸ್ಕ್ ಜಪ್ತಿ ಮಾಡಲು ತನಿಖಾಧಿಕಾರಿಗೆ ನಿರ್ದೇಶಿಸಬೇಕು' ಎಂದು ಕೋರಿದರು.

ಮುಖ್ಯಾಂಶಗಳು

- ಆರೋಪಿ ಪ್ರಭಾವಿ ವ್ಯಕ್ತಿ, ರಾಜಕಾರಣಿಗಳ ಜೊತೆ ನಿಕಟ ಸಂಪರ್ಕ
- ಪಾನಮತ್ತ ಚಾಲನೆ– ಅಪಘಾತಕ್ಕೆ ಕಾರಣ ಎಂದು ಆರೋಪ
- ಹೈಕೋರ್ಟ್‌ಗೆ ರಿಟ್ ಅರ್ಜಿ ಸಲ್ಲಿಸಿದ್ದ ಸಂಧ್ಯಾ ಪತಿ

'ಘಟನೆಗೆ ಸಂಬಂಧಿಸಿದ ಆ ಗಳಿಗೆಯ ದೃಶ್ಯಗಳು ಸಮೀಪದ ಬಿಬಿಎಂಪಿ ಸಾರ್ವಜನಿಕ ಶೌಚಾಲಯದಲ್ಲಿ ಅಳವಡಿಸಿರುವ ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿವೆ. ಅಪಘಾತದಲ್ಲಿ ಸಂಧ್ಯಾ ಮೃತಪಡಲು ಪಾನಮತ್ತನಾಗಿ ಕಾರು ಚಲಾಯಿಸುತ್ತಿದ್ದ ಧನುಷ್ ನಿರ್ಲಕ್ಷ್ಯವೇ ಕಾರಣ ಎಂಬುದಕ್ಕೆ ಈ ದೃಶ್ಯಾವಳಿ ಸಾಕ್ಷ್ಯ ಒದಗಿಸಲಿವೆ. ಇದೇ ಹಿನ್ನೆಲೆಯಲ್ಲಿ ಸಿಸಿಟಿವಿ ಕ್ಯಾಮೆರಾದ ದೃಶ್ಯಾವಳಿಗಳನ್ನು ಸಂಗ್ರಹಿಸಲು ಅರ್ಜಿದಾರರು ಸಾಕಷ್ಟು ಪ್ರಯತ್ನಿಸಿದರೂ ಪೊಲೀಸರು ನೆರವಾಗಿಲ್ಲ. ಸರ್ವರ್ ತೊಂದರೆ, ಹಾರ್ಡ್‌ಡಿಸ್ಕ್‌ನಿಂದ ದೃಶ್ಯಾವಳಿ ಪಡೆಯುವಲ್ಲಿ ತಾಂತ್ರಿಕ ಸಮಸ್ಯೆಗಳಿವೆ. ಒಂದು ಕ್ಯಾಮೆರಾದಲ್ಲಿ ಎಚ್‌ಡಿಆರ್ ಇಲ್ಲ, ಇನ್ನೊಂದು ಕ್ಯಾಮೆರಾದ ಡಿವಿಆರ್ ಘಟನೆಯ ವಿಡಿಯೊ ಸೆರೆ ಹಿಡಿದಿಲ್ಲ ಎಂಬ ನೆಪಗಳನ್ನು ಹೇಳುತ್ತಿದ್ದಾರೆ. ಆದ್ದರಿಂದ, ಕೋರ್ಟ್ ಅರ್ಜಿದಾರರ ಮನವಿಯನ್ನು ಪರಿಗಣಿಸಬೇಕು' ಎಂದು ಕೋರಿದರು.

ಇದನ್ನು ಮಾನ್ಯ ಮಾಡಿದ ನ್ಯಾಯಪೀಠ, ಕೆಂಗೇರಿ ಸಂಚಾರಿ ಪೊಲೀಸ್ ಠಾಣೆಯ ಇನ್‌ಸ್ಪೆಕ್ಟರ್ ಅವರಿಗೆ ಹಾರ್ಡ್‌ಡಿಸ್ಕ್ ಜಪ್ತಿ ಮಾಡುವಂತೆ ಎಂದು ಆದೇಶಿಸಿತು.

ಪ್ರಕರಣದ ಪ್ರತಿವಾದಿಗಳಾದ ಬೆಂಗಳೂರು ಪೊಲೀಸ್ ಆಯುಕ್ತರು, ಪಶ್ಚಿಮ ವಿಭಾಗದ ಡಿಸಿಪಿ, ಎಸಿಪಿ ಮತ್ತು ಕೆಂಗೇರಿ ಸಂಚಾರಿ ಪೊಲೀಸರಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿತು.

'ಕಾಂಗ್ರೆಸ್‌ನಿಂದ ಸಂವಿಧಾನಕ್ಕೆ ಅಪಚಾರ'

ಪುಸ್ತಕ ಬಿಡುಗಡೆಗೊಳಿಸಿ ಕೇಂದ್ರ ಕಾನೂನು ಸಚಿವ ಮೇಘ್ವಾಲ್ ಆರೋಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಂವಿಧಾನ ಉಳಿಸುತ್ತೇವೆ ಎಂದು ಹೇಳುವ ಕಾಂಗ್ರೆಸ್, ಸಂವಿಧಾನಕ್ಕೆ ಅಪಚಾರ ಎಸಗುವಂತಹ ಕೆಲಸವನ್ನೇ ಮಾಡಿಕೊಂಡು ಬಂದಿದೆ' ಎಂದು ಕೇಂದ್ರ ಕಾನೂನು ಸಚಿವ ಅರ್ಜುನ್ ರಾಮ್ ಮೇಘ್ವಾಲ್ ಆರೋಪಿಸಿದರು.

ಸಿಟಿಜನ್ಸ್ ಫಾರ್ ಸೋಷಿಯಲ್ ಜಸ್ಟೀಸ್ ಮತ್ತು ಅಯೋಧ್ಯಾ ಪಬ್ಲಿಕೇಷನ್ಸ್ ನಗರದಲ್ಲಿ ಶನಿವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ, ವಿಕಾಸ್ ಕುಮಾರ್ ಪಿ. ಅವರ 'ಸಂವಿಧಾನ ಬದಲಾಯಿಸಿದ್ದುಯಾರು?'ಪುಸ್ತಕವನ್ನುಬಿಡುಗಡೆ ಮಾಡಿ ಅವರು ಮಾತನಾಡಿದರು.

'ಅಂಬೇಡ್ಕರ್ ಅವರು ಸಂವಿಧಾನ ಸಭೆಗೆ ಆಯ್ಕೆಯಾಗುವುದೇ ಕಾಂಗ್ರೆಸ್‌ಗೆ ಇಷ್ಟವಿರಲಿಲ್ಲ. ಹೋರಾಟದ ಮೂಲಕ ಅವರು ಆ ಸ್ಥಾನಕ್ಕೆ ಬಂದರು. ಸಂವಿಧಾನ ಕರಡು ರಚನೆಯಲ್ಲೂ ಅವರನ್ನು ಕಡೆಗಣಿಸಲಾಗಿತ್ತು. ಜಮ್ಮು ಮತ್ತು ಕಾಶ್ಮೀರಕ್ಕೆ ವಿಶೇಷ ಸ್ಥಾನ ನೀಡಲು ಅಂಬೇಡ್ಕರ್ ಅವರ ವಿರೋಧವಿತ್ತು. ಆದರೆ ಅವರ ಅನುಪಸ್ಥಿತಿಯಲ್ಲಿ 370ನೇ ವಿಧಿಯನ್ನು ಪಾಸು ಮಾಡಿಕೊಂಡು, ಅವರಿಗೆ ದ್ರೋಹ ಮಾಡಲಾಯಿತು' ಎಂದು ಆರೋಪಿಸಿದರು.

ಮಾಜಿ ಪೌರಕಾರ್ಮಿಕರಾದ ಮಲ್ಲಮ್ಮ ಹೂವಿನಹಡಗಲಿ ಮತ್ತು ಸ್ಮಶಾನ ನೌಕರ ಅಂತೋಣಿಸ್ವಾಮಿ ಕುಟ್ಟಿ ಅವರಿಗೆ 'ಸಂವಿಧಾನ ಬದಲಾಯಿಸಿದ್ದು ಯಾರು?' ಪುಸ್ತಕದ ಮೊದಲ ಪ್ರತಿಗಳನ್ನು ನೀಡಲಾಯಿತು. ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ, ಕೇಂದ್ರ ಸಚಿವ ಅರ್ಜುನ್ ರಾಮ್ ಮೇಘ್ವಾಲ್, ಎನ್. ಮಹೇಶ್ ಮತ್ತು ಲೇಖಕ ಪಿ.ವಿಕಾಸ್ ಕುಮಾರ್ ಇದ್ದರು –ಪ್ರಜಾವಾಣಿ ಚಿತ್ರ

'ಸಂವಿಧಾನ ಉಳಿಸುತ್ತೇವೆ ಎನ್ನುವ ಕಾಂಗ್ರೆಸ್ ಅಧಿಕಾರದಲ್ಲಿ ಇದ್ದಾಗಲೆಲ್ಲಾ ಅದಕ್ಕೆ ತಿದ್ದುಪಡಿ ತಂದಿದೆ. ಸಂವಿಧಾನದ ಸ್ವರೂಪವನ್ನೇ ಬದಲಿಸುವ 76 ತಿದ್ದುಪಡಿಗಳನ್ನು ಅದು ಮಾಡಿದೆ' ಎಂದು ಆರೋಪಿಸಿದರು.

ಪುಸ್ತಕ ಕುರಿತು ಮಾತನಾಡಿದ ಮಾಜಿ ಶಾಸಕ ಎನ್.ಮಹೇಶ್, 'ಅಂಬೇಡ್ಕರ್ ಅವರು ಪರಿಶಿಷ್ಟರಿಗೆ ಪ್ರತ್ಯೇಕ ರಾಜಕೀಯ ಕ್ಷೇತ್ರಗಳನ್ನು ಕೇಳಿದಾಗ ವಿರೋಧಿಸಿದ ಗಾಂಧೀಜಿ, ದೇಶ ವಿಭಜನೆ ಸಂದರ್ಭದಲ್ಲಿ ಏನೂ ಮಾಡಲಿಲ್ಲ. ನನ್ನ ಹೆಣದ ಮೇಲೆ ದೇಶ ವಿಭಜನೆ ಆಗಬೇಕು ಎಂದು ಸವಾಲೊಡ್ಡಿದ್ದರೂ, ವಿಭಜನೆ ಆದಾಗ ಸುಮ್ಮನಿದ್ದರು' ಎಂದರು.

'ನ.26ರಿಂದ ಜ.26ರವರೆಗೂ ಸಂವಿಧಾನ ಜಾಗೃತಿ ಅಭಿಯಾನ ನಡೆಸುತ್ತೇವೆ' ಎಂದು ಈ ವೇಳೆ ತಿಳಿಸಿದರು.

ಬಸ್ ವರ್ಕ್‌ಶಾಪ್‌ನಲ್ಲಿ ಜೋಡಿ ಕೊಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉತ್ತರ ತಾಲ್ಲೂಕಿನ ಸಿಂಗಹಳ್ಳಿಯ ಎಸ್‌ಆರ್‌ಎಸ್ ಕಂಪನಿಯ ವರ್ಕ್‌ಶಾಪ್‌ನಲ್ಲಿ ಶುಕ್ರವಾರ ತಡರಾತ್ರಿ ಜೋಡಿ ಕೊಲೆ ನಡೆದಿದೆ. ರಾಮನಗರದ ನಾಗೇಶ್ (52) ಹಾಗೂ ಮಂಡ್ಯದ ಮಂಜೇಗೌಡ (44) ಕೊಲೆಯಾದ ಕಾರ್ಮಿಕರು.

ನಾಗೇಶ್ ಅವರ ಪುತ್ರಿ ಕೆ.ಎನ್. ಸಹನಾ ಅವರು ದೂರು ನೀಡಿದ್ದು, ಬಾಗಲೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಮದ್ಯದ ಅಮಲಿನಲ್ಲಿ ಮೂವರು ಸಹೋದ್ಯೋಗಿಗಳ ನಡುವೆ ಉಂಟಾದ ಜಗಳ ಇಬ್ಬರ ಕೊಲೆಯಲ್ಲಿ ಅಂತ್ಯವಾಗಿದೆ.

ನಾಗೇಶ್, ಮಂಜೇಗೌಡ ಎರಡು ವರ್ಷಗಳಿಂದ ಸಿಂಗಹಳ್ಳಿಯಲ್ಲಿ ವರ್ಕ್‌ಶಾಪ್‌ನಲ್ಲಿ ಕೆಲಸ ಮಾಡುತ್ತಿದ್ದರು. ಕೃತ್ಯ ಎಸಗಿದ್ದಾನೆ ಎನ್ನಲಾದ ಸುರೇಶ್, 4 ತಿಂಗಳ ಹಿಂದಷ್ಟೇ ಕೆಲಸಕ್ಕೆ ಸೇರಿದ್ದ. ಮೂವರು ಕಾರ್ಮಿಕರ ಶೆಡ್‌ನಲ್ಲಿ ವಾಸವಾಗಿದ್ದರು ಎಂದು ಪೊಲೀಸರು ಹೇಳಿದರು.

ಪಾರ್ಟಿ ವೇಳೆ ಗಲಾಟೆ: 'ಶುಕ್ರವಾರ ಮೂವರು ತಡರಾತ್ರಿವರೆಗೂ ಮದ್ಯ ಸೇವಿಸಿದ್ದರು. ಮೂವರ ಮಧ್ಯೆ ಗಲಾಟೆ ನಡೆದಿದ್ದು, ವಿಕೋಪಕ್ಕೆ ಹೋದಾಗ ಸುರೇಶ್ ಇತರ ಇಬ್ಬರ ಮೇಲೆ ಕಬ್ಬಿಣದ ರಾಡ್‌ನಿಂದ ಹೊಡೆದು ಕೊಲೆ ಮಾಡಿ ಪರಾರಿಯಾಗಿದ್ದಾನೆ' ಎಂದು ಮೂಲಗಳು ತಿಳಿಸಿವೆ.

ನಾಗೇಶ್

ಮಂಜೇಗೌಡ

ಅಪರಾಧ ಸುದ್ದಿ

ಎಸ್‌ಆರ್‌ಎಸ್ ಬಸ್ ಚಾಲಕ ಸುನಿಲ್ ಕುಮಾರ್ ಶನಿವಾರ ಬೆಳಿಗ್ಗೆ ವರ್ಕ್‌ಶಾಪ್‌ಗೆ ಬಂದಾಗ ಕೊಲೆ ನಡೆದಿರುವುದು ಗೊತ್ತಾಗಿದೆ. ಇಬ್ಬರು ರಕ್ತದ ಮಡುವಿನಲ್ಲಿ ಬಿದ್ದಿದ್ದರು. ಕೂಡಲೇ ಮೇಲ್ವಿಚಾರಕರಿಗೆ ಮಾಹಿತಿ ನೀಡಿದ್ದರು. ಬಳಿಕ ನಾಗೇಶ್ ಪುತ್ರಿಯೂ ದೂರು ನೀಡಿದ್ದರು.

ಸ್ಥಳಕ್ಕೆ ಈಶಾನ್ಯ ವಿಭಾಗದ ಡಿಸಿಪಿ ವಿ.ಜೆ.ಸಜೀತ್, ಸಂಪಿಗೆಹಳ್ಳಿ ಉಪ ವಿಭಾಗದ ಎಸಿಪಿ ಹಾಗೂ ಬಾಗಲೂರು ಠಾಣಾಧಿಕಾರಿಗಳು ಭೇಟಿ ನೀಡಿ ಪರಿಶೀಲಿಸಿದರು.

ಸಚಿವರ ಹೆಸರಲ್ಲಿ ವಂಚನೆ: ಬಂಧನ

ಬೆಂಗಳೂರು: ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಹೆಸರು ಬಳಸಿ ಸರ್ಕಾರಿ ಅಧಿಕಾರಿಗಳನ್ನು ಬೆದರಿಸಿ ವಂಚಿಸುತ್ತಿದ್ದ ಆರೋಪಿಯನ್ನು ವಿಧಾನಸೌಧ ಠಾಣೆ ಪೊಲೀಸರು ಬಂಧಿಸಿದ್ದಾರೆ.

ತುಮಕೂರಿನ ರಘುನಾಥ್ ಬಂಧಿತ ಆರೋಪಿ.

'ಶನಿವಾರ ಆರೋಪಿಯನ್ನು ಬಂಧಿಸಿ ವಿಚಾರಣೆ ನಡೆಸಿ ನ್ಯಾಯಾಲಯಕ್ಕೆ ಹಾಜರು ಪಡಿಸಲಾಯಿತು. ಕೋರ್ಟ್ 14 ದಿನ ನ್ಯಾಯಾಂಗ ಬಂಧನ ವಿಧಿಸಿದ್ದು, ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹಕ್ಕೆ ಆರೋಪಿಯನ್ನು ಕಳುಹಿಸಲಾಗಿದೆ' ಎಂದು ಪೊಲೀಸರು ಹೇಳಿದರು.

'ಉಪ ಮುಖ್ಯಮಂತ್ರಿ ಅವರ ವಿಶೇಷಾಧಿಕಾರಿ ಹಾಗೂ ಆಪ್ತ ಕಾರ್ಯದರ್ಶಿ ಎಂದು ಹೇಳಿಕೊಂಡು ಸರ್ಕಾರಿ ಅಧಿಕಾರಿಗಳಿಗೆ ಕರೆ ಮಾಡಿ ಆರೋಪಿ ವಂಚಿಸುತ್ತಿದ್ದ' ಎಂದು ಪೊಲೀಸರು ಹೇಳಿದರು.

'ಪಂಚಾ ಯತ್ ರಾಜ್ ಇಲಾಖೆಯ ಚಳ್ಳಕೆರೆ ಉಪ ವಿಭಾಗದ ಎಂಜಿನಿಯರ್ ಎನ್.ಕಾವ್ಯಾ ಅವರು ಸ್ಥಳ ನಿರೀಕ್ಷಣೆಯಲ್ಲಿ ಇದ್ದರು. ಈ ಮಾಹಿತಿ ತಿಳಿದಿದ್ದ ಆರೋಪಿ ಅ.14ರಂದು ಕರೆ ಮಾಡಿ, ಪ್ರಿಯಾಂಕ್ ಖರ್ಗೆ ಅವರ ಆಪ್ತ ಸಹಾಯಕ ಹಾಗೂ ವಿಶೇಷಾಧಿಕಾರಿ ಎಂದು ಕಾವ್ಯಾ ಅವರ ಬಳಿ ಪರಿಚಯಿಸಿಕೊಂಡಿದ್ದ. ಕಾವ್ಯಾ ಅವರ ವರ್ಗಾವಣೆಗೆ ಸಂಬಂಧಿಸಿದಂತೆ ₹2 ಲಕ್ಷಕ್ಕೆ ಬೇಡಿಕೆ ಇಟ್ಟು ಬೆದರಿಸಿದ್ದ. ನಂತರ, ಯುಪಿಐ ಮೂಲಕ ₹80 ಸಾವಿರ ಪಡೆದಿದ್ದ' ಎಂದು ಪೊಲೀಸರು ಹೇಳಿದರು.

ರಘುನಾಥ್

ಪ್ರಿಯಾಂಕ್ ಖರ್ಗೆ ಅವರ ಹೆಸರು ಬಳಸಿ ವ್ಯಕ್ತಿಯೊಬ್ಬ ಹಣ ವಸೂಲಿ ಮಾಡುತ್ತಿದ್ದಾನೆ ಎಂದು ಆರೋಪಿಸಿ ಸಚಿವರ ವಿಶೇಷ ಕರ್ತವ್ಯಾಧಿಕಾರಿ ನಾಗರಾಜ್ ದೂರು ನೀಡಿದ್ದರು. ದೂರು ಆಧರಿಸಿ ಕಾರ್ಯಾಚರಣೆ ನಡೆಸಿ ಆರೋಪಿಯನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.

ಗೃಹಿಣಿ ಕೊಲೆ

ಬೆಂಗಳೂರು: ಹೊಂಗಸಂದ್ರದ ಮನೆಯೊಂದರಲ್ಲಿ ಒಂಟಿಯಾಗಿ ವಾಸಿಸುತ್ತಿದ್ದ ಜಯಮ್ಮ (44) ಅವರನ್ನು ಕತ್ತು ಹಿಸುಕಿ ಕೊಲೆ ಮಾಡಿರುವ ಘಟನೆ ನಡೆದಿದೆ.

ಜಯಮ್ಮ

ಬೊಮ್ಮನಹಳ್ಳಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ದುಷ್ಕರ್ಮಿಗಳ ಪತ್ತೆಗೆ ಪೊಲೀಸರು ಶೋಧ ನಡೆಸುತ್ತಿದ್ದಾರೆ.

'ಪತಿಯಿಂದ ದೂರವಾಗಿದ್ದ ಜಯಮ್ಮ 20 ವರ್ಷಗಳಿಂದ ಒಂಟಿಯಾಗಿ ವಾಸಿಸುತ್ತಿದ್ದರು. ಇಬ್ಬರು ಮಕ್ಕಳ ಪೈಕಿ ಒಬ್ಬಾತ ಕೆಲವು ತಿಂಗಳಿಂದ ಮನೆಗೆ ಬರುತ್ತಿರಲಿಲ್ಲ. ಮತ್ತೊಬ್ಬ ಪುತ್ರ ಕೆಎಸ್‌ಆರ್‌ಟಿಸಿ ಚಾಲಕನಾಗಿ ಇತ್ತೀಚೆಗೆ ಕೆಲಸಕ್ಕೆ ಸೇರಿದ್ದರು. ಅವರೂ ಬೇರೆ ಮನೆಯಲ್ಲಿ ವಾಸವಿದ್ದರು. ಶುಕ್ರವಾರ ತಡರಾತ್ರಿ ಮನೆಗೆ ನುಗ್ಗಿದ ದುಷ್ಕರ್ಮಿಗಳು ಕೊಲೆ ಮಾಡಿದ್ದಾರೆ' ಎಂದು ಪೊಲೀಸರು ಹೇಳಿದರು.

'ಮನೆಯಲ್ಲಿ ಕಳ್ಳತನ ಆಗಿಲ್ಲ. ಆರೋಪಿಗಳು ಕೊಲೆ ಮಾಡುವ ಉದ್ದೇಶದಿಂದಲೇ ಮನೆಗೆ ನುಗ್ಗಿರುವ ಶಂಕೆಯಿದೆ' ಎಂದು ಪೊಲೀಸರು ಹೇಳಿದರು.

ಡಿಸಿಪಿಗಳಿಗೆ ರಾಜ್ಯ ಪೊಲೀಸ್ ಮಹಾನಿರ್ದೇಶಕರ ಸೂಚನೆ

ರೌಡಿ ಚಟುವಟಿಕೆಗಳಿಗೆ ಕಡಿವಾಣ ಹಾಕಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅಪರಾಧ ಹಾಗೂ ರೌಡಿ ಚಟುವಟಿಕೆ ನಿಯಂತ್ರಿಸಲು ನಗರದ ಎಲ್ಲ ವಿಭಾಗದ ಡಿಸಿಪಿ ಹಾಗೂ ಸ್ಥಳೀಯ ಠಾಣಾ ಪೊಲೀಸರು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು' ಎಂದು ರಾಜ್ಯ ಪೊಲೀಸ್ ಮಹಾನಿರ್ದೇಶಕ ಅಲೋಕ್ ಮೋಹನ್ ಸೂಚನೆ ನೀಡಿದರು.

ನಗರ ಪೊಲೀಸ್ ಕಮಿಷನರ್ ಕಚೇರಿಯಲ್ಲಿ ನಡೆದ ಸಭೆಯಲ್ಲಿ ಅವರು ಮಾತನಾಡಿದರು.

ಸಭೆಯಲ್ಲಿ ನಗರದ ಎಂಟು ವಿಭಾಗಗಳ ಪೈಕಿ ಆಗ್ನೇಯ, ಪೂರ್ವ, ಪಶ್ಚಿಮ ಹಾಗೂ ಉತ್ತರ ವಿಭಾಗ ವ್ಯಾಪ್ತಿಯ ಪೊಲೀಸ್ ಠಾಣೆಗಳ ಅಪರಾಧ ಪ್ರಕರಣಗಳು ಹಾಗೂ ಪತ್ತೆ ಕಾರ್ಯ, ತನಿಖೆ ಕುರಿತು ಸಂಬಂಧಪಟ್ಟ ಡಿಸಿಪಿಗಳು ಹಾಗೂ ಎಸಿಪಿಗಳಿಂದ ಮಾಹಿತಿ ಪಡೆದುಕೊಂಡರು. ಉಳಿದ ನಾಲ್ಕು ವಿಭಾಗಗಳ ಬಗ್ಗೆ ಪ್ರತ್ಯೇಕ ಸಭೆ ಕರೆದು ಚರ್ಚಿಸುವುದಾಗಿ ತಿಳಿಸಿದರು.

ಡಿಸಿಪಿ ಹಾಗೂ ಎಸಿಪಿಗಳು ನಿತ್ಯ ತಮ್ಮ ವ್ಯಾಪ್ತಿಯ ಒಂದೊಂದು ಪೊಲೀಸ್ ಠಾಣೆಗೆ ಭೇಟಿ ನೀಡಬೇಕು. ವಾರಕ್ಕೊಮ್ಮೆ ಪ್ರಕರಣಗಳ ತನಿಖೆ, ಪತ್ತೆ ಕಾರ್ಯ ಕುರಿತು ಪರಿಶೀಲಿಸಬೇಕು ಎಂದೂ ಅಲೋಕ್ ಮೋಹನ್ ಸೂಚನೆ ನೀಡಿದರು. ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ, ಹೆಚ್ಚುವರಿ ಪೊಲೀಸ್ ಕಮಿಷನರ್ ಸತೀಶ್ ಕುಮಾರ್, ಸಿಸಿಬಿ ಜಂಟಿ ಪೊಲೀಸ್ ಕಮಿಷನರ್ ಚಂದ್ರಗುಪ್ತ ಹಾಜರಿದ್ದರು.

ಕಾರ್ಯಕ್ರಮದಲ್ಲಿ ವೈದ್ಯರು, ಪಾರ್ಶ್ವವಾಯುವಿನಿಂದ ಚೇತರಿಸಿಕೊಂಡವರು ಹಾಗೂ ಅವರ ಕುಟುಂಬದ ಸದಸ್ಯರು ಪಾರ್ಶ್ವವಾಯುವಿನ ಬಗ್ಗೆ ಜಾಗೃತಿ ಮೂಡಿಸಿದರು

'ಪಾರ್ಶ್ವವಾಯು: ಅಂಗವೈಕಲ್ಯ ಸಾಧ್ಯತೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪಾರ್ಶ್ವವಾಯುವಿಗೆ ತುರ್ತಾಗಿ ಚಿಕಿತ್ಸೆ ಒದಗಿಸಬೇಕು. ನಿಗದಿತ ಅವಧಿಯಲ್ಲಿ ಚಿಕಿತ್ಸೆ ನೀಡದಿದ್ದರೆ ಅಂಗವಿಕಲರಾಗುವ ಸಾಧ್ಯತೆ ಇರುತ್ತದೆ' ಎಂದು ಸರ್ಜಾಪುರದ ಮಣಿಪಾಲ್ ಆಸ್ಪತ್ರೆಯ ವೈದ್ಯರು ಹೇಳಿದರು.

'ವಿಶ್ವ ಪಾರ್ಶ್ವವಾಯು ದಿನ' ನಿಮಿತ್ತ ಆಸ್ಪತ್ರೆಯು ನಗರದಲ್ಲಿ ಶನಿವಾರ ಹಮ್ಮಿಕೊಂಡ 'ಬಿ ಫಾಸ್ಟ್ ಟು ಬೀಟ್ ದಿ ಸ್ಟ್ರೋಕ್' ಜಾಗೃತಿ ಕಾರ್ಯಕ್ರಮದಲ್ಲಿ ತ್ವರಿತ ಚಿಕಿತ್ಸೆಯ ಮಹತ್ವದ ಬಗ್ಗೆ ವೈದ್ಯರು ತಿಳಿಸಿದರು.

ಪಾರ್ಶ್ವವಾಯುವಿನಿಂದ ಚೇತರಿಸಿಕೊಂಡವರು ಚಿಕಿತ್ಸೆ ಅವಧಿಯಲ್ಲಿನ ಅನುಭವವನ್ನು ಹಂಚಿಕೊಂಡರು.

ನರರೋಗ ತಜ್ಞ ಡಾ.ಶಿವಕುಮಾರ್ ಆರ್., 'ಪಾರ್ಶ್ವವಾಯುವಿಗೆ ಒಳಗಾದ ತಕ್ಷಣ ಚಿಕಿತ್ಸೆ ನೀಡಿದಲ್ಲಿ ಮಿದುಳಿಗೆ ಹಾನಿ ತಡೆಯುವುದು, ಚೇತರಿಕೆಗೆ ನೆರವಾಗಲು ಸಾಧ್ಯವಾಗುತ್ತದೆ. ಜನರಲ್ಲಿ ಈ ಸಮಸ್ಯೆ ಬಗ್ಗೆ ಅರಿವು ಮೂಡಬೇಕು' ಎಂದು ಹೇಳಿದರು.

ನರರೋಗ ವಿಭಾಗದ ಡಾ. ಲಕ್ಷ್ಮೀ ಕೃಷ್ಣ, 'ಈ ಸಮಸ್ಯೆಯು ಅಧಿಕ ರಕ್ತದೊತ್ತಡ ಇರುವವರಿಗೆ ಹೆಚ್ಚು ಕಾಣಿಸಲಿದೆ. ಧೂಮಪಾನ ಮತ್ತು ಮದ್ಯಪಾನವನ್ನು ತ್ಯಜಿಸುವುದು, ಒತ್ತಡ ನಿರ್ವಹಣೆ ಸೇರಿ ವಿವಿಧ ಮುನ್ನೆಚ್ಚರಿಕೆ ಕ್ರಮಗಳಿಂದ ಇದನ್ನು ತಡೆಯಬಹುದು' ಎಂದರು.

ಚಿತ್ರಾವಳಿ

ನೇತ್ರಧಾಮ, ಶ್ರದ್ಧಾ ಐ ಕೇರ್ ಟ್ರಸ್ಟ್ ಮತ್ತು ರೋಟರಿ ಬೆಂಗಳೂರು ಫೈಮ್ ಸಹಯೋಗದಲ್ಲಿ ನಡೆದ ಬೆಂಗಳೂರು ಪೊಲೀಸ್ ನೇತ್ರ ಆರೈಕೆ ಯೋಜನೆ'ಗೆ ಪೊಲೀಸ್ ಕಮಿಷನರ್ ಬಿ.ದಯಾನಂದ ಶುಕ್ರವಾರ ಚಾಲನೆ ನೀಡಿದರು. ಶ್ರದ್ಧಾ ಐ ಕೇರ್‌ನ ಟ್ರಸ್ಟಿ ಗಣೇಶ್, ಸವಿತಾ ಅರುಣ್, ರೋಟರಿ ಬೆಂಗಳೂರು ಫೈಮ್‌ನ ಅಧ್ಯಕ್ಷ ವಿ.ಎಸ್ ಹರೀಶ್ ಹಾಜರಿದ್ದರು.

ಅಜಿತ್‌ಕುಮಾರ್ ಸ್ಮಾರಕ ಸಾಂಸ್ಕೃತಿಕ ವೇದಿಕೆ ನೀಡುವ 2024ನೇ ಸಾಲಿನ 'ಜೀವಮಾನ ಸಾಧನೆ ರಾಷ್ಟ್ರೀಯ ಅಜಿತಶ್ರೀ ಪ್ರಶಸ್ತಿ'ಯನ್ನು ನಾಟ್ಯ ಗುರು ಲಲಿತಾ ಶ್ರೀನಿವಾಸನ್ ಅವರಿಗೆ ಪ್ರದಾನ ಮಾಡಲಾಯಿತು. ಅಜಿತ್‌ಕುಮಾರ್ ಸ್ಮಾರಕ ಸಾಂಸ್ಕೃತಿಕ ವೇದಿಕೆ ಅಧ್ಯಕ್ಷ ಬಿ.ಎಲ್. ಶಂಕರ್, ಮಾಜಿ ಸಚಿವ ಪಿ.ಜಿ.ಆರ್. ಸಿಂಧ್ಯ, ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ ಎಂ. ಮೋಹನ ಆಳ್ವ , ಸಾಮಾಜಿಕ ಕಾರ್ಯಕರ್ತ ಮಾ. ವೆಂಕಟರಾಮು ಉಪಸ್ಥಿತರಿದ್ದರು

ಮಂಗಳೂರಿನಲ್ಲಿ ನಡೆದ ಭಾರತೀಯ ಸಾರ್ವಜನಿಕ ಸಂಪರ್ಕ ಮಂಡಳಿಯ (ಪಿಆರ್‌ಸಿಐ) 18ನೇ ವಿಶ್ವ ಸಂವಹನ ಸಮ್ಮೇಳನದಲ್ಲಿ ಕೇಂದ್ರ ಇಂಧನ ಖಾತೆ ರಾಜ್ಯ ಸಚಿವ ಶ್ರೀಪಾದ್ ಯೆಸ್ಸೊ ನಾಯ್ಕ್ ಅವರು ಶಿಕ್ಷಣ ತಜ್ಞ ವೂಡೇ ಪಿ. ಕೃಷ್ಣ ಅವರಿಗೆ 'ಚಾಣಕ್ಯ–2024' ಪ್ರಶಸ್ತಿ ಪ್ರದಾನ ಮಾಡಿದರು. ವೂಡೇ ಪಿ.ಕೃಷ್ಣ ಅವರ ಮಾನವೀಯ ಕಾರ್ಯಗಳನ್ನು ಗುರುತಿಸಿ ಈ ಪ್ರಶಸ್ತಿ ನೀಡಿ ಗೌರವಿಸಲಾಗಿದೆ.

ಪೀಣ್ಯ ದಾಸರಹಳ್ಳಿ ಸಮೀಪದ ಹಾವನೂರು ಬಡಾವಣೆಯ ಭೂಮಿಕಾ ಸೇವಾ ಫೌಂಡೇಶನ್ ಸಭಾಂಗಣದಲ್ಲಿ ನಟ ದಿವಂಗತ ಶಂಕರ್ ನಾಗ್ ಹುಟ್ಟುಹಬ್ಬ ಆಚರಿಸಲಾಯಿತು. ಫೌಂಡೇಶನ್ ಅಧ್ಯಕ್ಷೆ ಲತಾ ಕುಂದರಗಿ, ಉಪಾಧ್ಯಕ್ಷೆ ಲಲಿತಾ ನೀಲಕಂಠ, ಕನ್ನಡ ಸೇನೆ ಖಜಾಂಚಿ ರಾಜೇಂದ್ರ ಕೊಣ್ಣೂರ, ಗಿರೀಶ್ ಗಲಗಲಿ, ಎಂ.ಎಚ್. ಪಾಟೀಲ್, ವೀರಭದ್ರಪ್ಪ, ಪದಾಧಿಕಾರಿಗಳಾದ ಗೀತಾ ವಿ.ಆರ್. ವಿಜಯಲಕ್ಷ್ಮಿ, ಕಮಲ, ಗಿರಿಜಮ್ಮ, ಪುಷ್ಪಲತಾ, ಕಿರಣ್, ಜ್ಯೋತಿ, ಲಕ್ಷ್ಮೀ, ಚೈತ್ರಾ, ಭೂಮಿಕಾ ಹಾಜರಿದ್ದರು

ಸಿಸಿಬಿ ಪೊಲೀಸರ ದಾಳಿ: ನಕಲಿ ಉತ್ಪನ್ನಗಳ ಜಪ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶೌಚಾಲಯ ಸ್ವಚ್ಛತೆಗೆ ಬಳಸುವ ಲೈಜಾಲ್ ಹಾಗೂ ಹಾರ್ಪಿಕ್‌ಗಳ ನಕಲಿ ಉತ್ಪನ್ನ ತಯಾರಿಕಾ ಗೋದಾಮಿನ ಮೇಲೆ ಸಿಸಿಬಿ ಮತ್ತು ಜೀವನ್‌ಬಿಮಾ ನಗರ ಠಾಣೆ ಪೊಲೀಸರು ದಾಳಿ ನಡೆಸಿ ಅಪಾರ ಪ್ರಮಾಣದ ನಕಲಿ ಉತ್ಪನ್ನಗಳನ್ನು ಜಪ್ತಿ ಮಾಡಿಕೊಂಡಿದ್ದಾರೆ.

ಅನಿಲ್ ಪಟೇಲ್ ಮತ್ತು ಅನಂತ್ ಪಟೇಲ್ ಎಂಬವರನ್ನು ಬಂಧಿಸಲಾಗಿದೆ. ಜೀವನ್‌ಬಿಮಾನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಆರೋಪಿಗಳು ನಗರದ ಹೊರವಲಯದ ಆವಲಹಳ್ಳಿಯಲ್ಲಿ ಕಂಪನಿಗಳ ಹೆಸರಿನಲ್ಲಿ ಸ್ವಚ್ಛತಾ ಉತ್ಪನ್ನಗಳನ್ನು ತಯಾರಿಸಿ, ಅವುಗಳಿಗೆ ಅಸಲಿ ಕಂಪನಿಯ ಸ್ಟಿಕರ್ ಅಂಟಿಸಿ ಮಾರಾಟ ಮಾಡುತ್ತಿದ್ದರು.

ಖಚಿತ ಮಾಹಿತಿ ಆಧರಿಸಿ ದಾಳಿ ನಡೆಸಿ ನಕಲಿ ಲೈಜಾಲ್, ಹಾರ್ಪಿಕ್, ವಿಮ್ ಲಿಕ್ವಿಡ್‌ಗಳು ಹಾಗೂ ಎರಡು ಸರಕು ಸಾಗಣೆ ವಾಹನಗಳು, ತಯಾರಿಕಾ ಉಪಕರಣಗಳು ಹಾಗೂ ಇತರೆ ವಸ್ತುಗಳನ್ನು ವಶಕ್ಕೆ ಪಡೆಯಲಾಗಿದೆ ಎಂದು ಪೊಲೀಸರು ಮಾಹಿತಿ ನೀಡಿದರು.

ಕ್ರಿಕೆಟ್: ಕರ್ನಾಟಕಕ್ಕೆ ಇನಿಂಗ್ಸ್ ಸೋಲು

ಬೆಂಗಳೂರು: ಹಾಲಿ ಚಾಂಪಿಯನ್ ಕರ್ನಾಟಕ ತಂಡ, ವಡೋದರದ ರಿಲಯನ್ಸ್ ಕ್ರಿಕೆಟ್ ಕ್ರೀಡಾಂಗಣದಲ್ಲಿ ಕೂಚ್ ಬಿಹಾರ್ ಟ್ರೋಫಿಗಾಗಿ ನಡೆಯುತ್ತಿರುವ ಬಿಸಿಸಿಐ 19 ವರ್ಷದೊಳಗಿನವರ ಟೂರ್ನಿಯಲ್ಲಿ ಆತಿಥೇಯ ಬರೋಡ ಎದುರು ಇನಿಂಗ್ಸ್ ಮತ್ತು 212 ರನ್‌ಗಳ ಹೀನಾಯ ಸೋಲು ಕಂಡಿತು.

ನಾಲ್ಕನೇ ದಿನವಾದ ಶನಿವಾರ ಕರ್ನಾಟಕ ತಂಡವು (ಶುಕ್ರವಾರ 207/7) 97.1 ಓವರ್‌ಗಳಲ್ಲಿ 265 ರನ್ ಗಳಿಸಿ ಹೋರಾಟವನ್ನು ಮುಗಿಸಿತು. ಧೀರಜ್ ಗೌಡ (50;163ಎ) ಮತ್ತು ಸಮರ್ಥ್ ಎನ್. (31) ಅವರು ಇನಿಂಗ್ಸ್ ಸೋಲು ತಪ್ಪಿಸಲು ಪ್ರಯತ್ನಿಸಿದರೂ ಸಾಧ್ಯವಾಗಲಿಲ್ಲ.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಕರ್ನಾಟಕ: 127; ಬರೋಡ: 7 ವಿಕೆಟ್‌ಗೆ 604 ಡಿಕ್ಲೇರ್. ಎರಡನೇ ಇನಿಂಗ್ಸ್: ಕರ್ನಾಟಕ: 97.1 ಓವರ್‌ಗಳಲ್ಲಿ 265 (ಧೀರಜ್ ಗೌಡ 50, ಸಮರ್ಥ್ ಎನ್ 31, ಕೇಶವ ಎಂ.ವಾರ್ಕೆ 111ಕ್ಕೆ 5, ಹೆಟ್ ಜಿ. ಪಟೇಲ್ 16ಕ್ಕೆ 2, ಕವೀರ್ ದೇಸಾಯಿ 57ಕ್ಕೆ 2. ಫಲಿತಾಂಶ: ಬರೋಡ ತಂಡಕ್ಕೆ ಇನಿಂಗ್ಸ್ ಮತ್ತು 212 ರನ್‌ಗಳ ಜಯ

ಟಿ.ಟಿ: ಅಥರ್ವಗೆ ಪ್ರಶಸ್ತಿ ಡಬಲ್

ಪ್ರಶಸ್ತಿಯೊಂದಿಗೆ ಅಥರ್ವ ನವರಂಗ ಮತ್ತು ಹಿಮಾಂಶಿ ಚೌಧರಿ

ಬೆಂಗಳೂರು: ಅಥರ್ವ ನವರಂಗ ಮತ್ತು ಹಿಮಾಂಶಿ ಚೌಧರಿ ಅವರು ಶನಿವಾರ ಡಾ.ಎಂ.ಎಸ್.ರಾಮಯ್ಯ ಸ್ಮಾರಕ ಕರ್ನಾಟಕ ರಾಜ್ಯ ರ್‍ಯಾಂಕಿಂಗ್ ಟೇಬಲ್ ಟೆನಿಸ್ ಟೂರ್ನಿಯಲ್ಲಿ ಕ್ರಮವಾಗಿ 17 ವರ್ಷದೊಳಗಿನ ಬಾಲಕರ ಮತ್ತು ಬಾಲಕಿಯರ ಸಿಂಗಲ್ಸ್ ಪ್ರಶಸ್ತಿಯನ್ನು ಗೆದ್ದರು.

ದೊಡ್ಡಬಳ್ಳಾಪುರದ ಹಿಲ್ ಸ್ಪೋರ್ಟ್ಸ್ ಅಕಾಡೆಮಿಯಲ್ಲಿ ನಡೆಯುತ್ತಿರುವ ಟೂರ್ನಿಯಲ್ಲಿ ಅಥರ್ವ 3-0 (11-2, 11-4, 11-7)ಯಿಂದ ಸಿದ್ಧಾಂತ್ ಧರಿವಾಲ್ ಅವರನ್ನು ಹಿಮ್ಮೆಟ್ಟಿಸಿ ಚಾಂಪಿಯನ್ ಆದರು. ಸೆಮಿಫೈನಲ್‌ನಲ್ಲಿ ಅಥರ್ವ 3–2ರಿಂದ ವಿಭಾಸ್ ವಿ.ಜಿ. ವಿರುದ್ಧ; ಸಿದ್ಧಾಂತ್ 3–1ರಿಂದ ಬಿ.ಆರ್.ಗೌರವ್ ವಿರುದ್ಧ ಗೆಲುವು ಸಾಧಿಸಿದ್ದರು. ಅಥರ್ವ ಅವರಿಗೆ ಇದು ಟೂರ್ನಿಯಲ್ಲಿ ಎರಡನೇ ಪ್ರಶಸ್ತಿಯಾಗಿದೆ. ಅವರು ಶುಕ್ರವಾರ 19 ವರ್ಷದೊಳಗಿನವರ ವಿಭಾಗದಲ್ಲೂ ಚಾಂಪಿಯನ್ ಆಗಿದ್ದರು.

ಬಾಲಕಿಯರ ಫೈನಲ್‌ನಲ್ಲಿ ಹಿಮಾಂಶಿ 3–1 (9-11, 11-6, 11-8, 11-5)ರಿಂದ ಹಿಯಾ ಸಿಂಗ್ ಅವರನ್ನು ಸೋಲಿಸಿದರು. ಸೆಮಿಫೈನಲ್‌ನಲ್ಲಿ ಹಿಮಾಂಶಿ 3–1ರಿಂದ ಕೈರಾ ಬಾಳಿಗಾ ವಿರುದ್ಧ; ಹಿಯಾ 3–1ರಿಂದ ನೀತಿ ಅಗರವಾಲ್ ವಿರುದ್ಧ ಜಯ ಸಾಧಿಸಿದ್ದರು.

ಬಿಜೆಪಿ–ಕಾಂಗ್ರೆಸ್ ನೇರ ಹಣಾಹಣಿ • ಭರತ್ ಕಟ್ಟಿಹಾಕಲು ಪಠಾಣ ಕಸರತ್ತು

ಬೊಮ್ಮಾಯಿ ವಿರುದ್ಧ ತೊಡೆತಟ್ಟಿದ ಪೈಲ್ವಾನ

• ಸಂತೋಷ ಜಿಗಳಿಕೊಪ್ಪ

ಶಿಗ್ಗಾವಿ (ಹಾವೇರಿ ಜಿಲ್ಲೆ): ಶಿಗ್ಗಾವಿ ವಿಧಾನಸಭಾ ಕ್ಷೇತ್ರದ ಉಪಚುನಾವಣೆಯಲ್ಲಿ ಬಿಜೆಪಿ-ಕಾಂಗ್ರೆಸ್ ನೇರ ಹಣಾಹಣಿಯಿದೆ. ಕಾಂಗ್ರೆಸ್‌ನಿಂದ ಯಾಸೀರ್ ಅಹಮದ್ ಖಾನ್ ಪಠಾಣ ಮತ್ತು ಬಿಜೆಪಿಯಿಂದ ಭರತ್ ಬೊಮ್ಮಾಯಿ ಕಣದಲ್ಲಿದ್ದಾರೆ. ಕ್ಷೇತ್ರವನ್ನು ಬಿಜೆಪಿ ತೆಕ್ಕೆಯಲ್ಲಿ ಉಳಿಸಿಕೊಳ್ಳಲು ಬಸವರಾಜ ಬೊಮ್ಮಾಯಿ ಕಸರತ್ತು ನಡೆಸಿದ್ದಾರೆ. ಕ್ಷೇತ್ರದಲ್ಲಿ ಈ ಬಾರಿಯಾದರೂ ಹಿಡಿತ ಸಾಧಿಸಲು ಕಾಂಗ್ರೆಸ್, ತೀವ್ರ ಪೈಪೋಟಿ ಒಡ್ಡುತ್ತಿದೆ.

ಶಿಗ್ಗಾವಿ ಹಾಗೂ ಸವಣೂರು ತಾಲ್ಲೂಕು ವ್ಯಾಪ್ತಿಯುಳ್ಳ ಈ ಕ್ಷೇತ್ರ, ಭಾವೈಕ್ಯ ಹಾಗೂ ಸೌಹಾರ್ದಕ್ಕೆ ಹೆಸರಾಗಿದೆ. ಜನಸಂಖ್ಯೆಯಲ್ಲಿ ಲಿಂಗಾಯತರು ಮೊದಲ ಸ್ಥಾನದಲ್ಲಿದ್ದರೆ, ಅಲ್ಪಸಂಖ್ಯಾತರು ಎರಡನೇ ಸ್ಥಾನದಲ್ಲಿದ್ದಾರೆ. ಕುರುಬರು, ಪರಿಶಿಷ್ಟ ಪಂಗಡ-ಪರಿಶಿಷ್ಟ ಜಾತಿ ಹಾಗೂ ಇತರೆ ಸಮುದಾಯದವರು ನಂತರದ ಸ್ಥಾನದಲ್ಲಿದ್ದಾರೆ.

2008ರಲ್ಲಿ ಮೊದಲ ಬಾರಿಗೆ ಶಾಸಕರಾಗಿ ಆಯ್ಕೆಯಾದ ಬಸವರಾಜ ಬೊಮ್ಮಾಯಿ ಅವರು 'ಸರ್ವಜನಾಂಗದ ಅಭಿವೃದ್ಧಿಗೆ ಬದ್ಧ' ಎಂದು ಶಪಥ ಮಾಡಿ ನಾಲ್ಕು ಅವಧಿಯೂ ವಿಧಾನಸೌಧ ಪ್ರವೇಶಿಸಿದರು. ಅವರು ಸಂಸದರಾಗಿದ್ದರಿಂದ ತೆರವಾಗಿರುವ ಶಾಸಕ ಸ್ಥಾನಕ್ಕೆ ಉಪ ಚುನಾವಣೆ ನಡೆಯುತ್ತಿದ. ಈಗ ಅವರ ಮಗ ಭರತ್ ಬೊಮ್ಮಾಯಿ ಅವರು ಟೊಂಕಕಟ್ಟಿ ನಿಂತಿದ್ದಾರೆ.

'ನಮ್ಮದು ಸಾಮಾಜಿಕ ನ್ಯಾಯದ ಪಕ್ಷ' ಎನ್ನುವ ಕಾಂಗ್ರೆಸ್, ಕ್ಷೇತ್ರದಲ್ಲಿ ಎರಡನೇ ಸ್ಥಾನದಲ್ಲಿರುವ ಅಲ್ಪಸಂಖ್ಯಾತ ಸಮಯದಾಯದ ಯಾಸೀರ್ ಅಹಮದ್ ಖಾನ್ ಪಠಾಣ ಅವರಿಗೆ ಎರಡನೇ ಬಾರಿ ಟಿಕೆಟ್ ನೀಡಿದೆ. 2023ರ ಸಾರ್ವತ್ರಿಕ ಚುನಾವಣೆಯಲ್ಲಿ ಬೊಮ್ಮಾಯಿ ವಿರುದ್ಧ ಸೋತಿದ್ದ ಪಠಾಣ ಅವರಿಗೆ ಎರಡನೇ ಬಾರಿಗೆ ಟಿಕೆಟ್ ಸಿಕ್ಕಿದೆ. ಅವರ ಗೆಲುವಿಗೆ ಸಚಿವರು, ಶಾಸಕರು ಶ್ರಮಿಸುತ್ತಿದ್ದಾರೆ. 'ಪೈಲ್ವಾನ್ ಪಠಾಣ' ಎಂದು ಪ್ರಚಾರ ಮಾಡುತ್ತಿದ್ದಾರೆ.

'ತಂದೆಯ ಕೆಲಸ ನೋಡಿ, ಮತ ನೀಡಿ' ಎಂದು ಭರತ್ ಬೊಮ್ಮಾಯಿ ಪ್ರಚಾರ ಮಾಡಿದರೆ, 'ಕಾಂಗ್ರೆಸ್ ಸರ್ಕಾರದ ಅಭಿವೃದ್ಧಿ ಕೆಲಸ, ಸಿದ್ದರಾಮಯ್ಯ-ಡಿ.ಕೆ. ಶಿವಕುಮಾರ ಮುಖ ನೋಡಿ ಮತ ಹಾಕಿ' ಎಂದು ಯಾಸೀರ್ ಅಹಮದ್ ಪಠಾಣ ಮತ ಯಾಚಿಸುತ್ತಿದ್ದಾರೆ. ಈ ಕ್ಷೇತ್ರವನ್ನು ಹೇಗಾದರೂ ಮಾಡಿ ತಮ್ಮದಾಗಿಸಿಕೊಳ್ಳುವುದು ಸಂಸದ ಬಸವರಾಜ ಬೊಮ್ಮಾಯಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಪ್ರತಿಷ್ಠೆಯಾಗಿದೆ.



ಕ್ಷೇತ್ರದಲ್ಲಿ ಗೆಲುವು ಯಾರಿಗೆ ಎಂಬುದು ಹೇಳುವುದು ಸುಲಭವಲ್ಲ. ಪಕ್ಷಕ್ಕಿಂತ ಬಸವರಾಜ ಬೊಮ್ಮಾಯಿ ವ್ಯಕ್ತಿನಿಷ್ಠೆಯ ಕಟ್ಟಾ ಅಭಿಮಾನಿಗಳು ಕ್ಷೇತ್ರದಲ್ಲಿದ್ದಾರೆ. ಸತತ ಸೋಲು ಕಂಡರೂ ಕಾಂಗ್ರೆಸ್ ಬೇರುಗಳು ಕ್ಷೇತ್ರದಲ್ಲಿ ಚಿಗುರೊಡೆದಿವೆ. ಅತ್ತಿತ್ತ ಪಕ್ಷ ಬದಲಾಯಿಸುವ ಜನರೂ ಹೆಚ್ಚಾಗಿದ್ದಾರೆ. 'ಹಣ-ಹೆಂಡ ಚುನಾವಣೆಯಲ್ಲಿ ಕೆಲಸ ಮಾಡಲಿದೆ' ಎಂದು ಕಾಂಗ್ರೆಸ್-ಬಿಜೆಪಿ, ಪರಸ್ಪರ ಆರೋಪ ಮಾಡುತ್ತಿವೆ. ನಾಮಪತ್ರ ಸಲ್ಲಿಕೆ ದಿನದಿಂದಲೇ, ತಲೆ ಎಣಿಕೆ ಲೆಕ್ಕ ಶುರುವಾಗಿದೆ.

ಭರತ್ ಅಭ್ಯರ್ಥಿಯಾದರೂ ತಂದೆಯೇ ಹೆಚ್ಚು ಪ್ರಚಾರ ಮಾಡುತ್ತಿದ್ದಾರೆ. ತಂದೆ ಕಟ್ಟಿರುವ 'ಬಿಜೆಪಿ' ಸಾಮ್ರಾಜ್ಯ ಮಗನ ತೆಕ್ಕೆಗೆ ಹೋಗದಂತೆ ನೋಡಿಕೊಳ್ಳಲು, ಪಠಾಣ ಪರವಾಗಿ ಸರ್ಕಾರವೇ 'ಬಂಡೆ'ಯಂತೆ ನಿಂತಿದೆ. 'ಬೊಮ್ಮಾಯಿಗೆ ಜೈ' ಎನ್ನುವ ಪಡೆ ಕ್ಷೇತ್ರದಲ್ಲಿದ್ದು, ಮಗನಿಗೆ ಪಟ್ಟಾಭಿಷೇಕ ಮಾಡಲು ಕಾಯುತ್ತಿದೆ. ಕಾಂಗ್ರೆಸ್‌ಗೆ ಗೆಲ್ಲುವ ಅವಕಾಶವಿದ್ದರೂ ಬಿಜೆಪಿ ಸುಲಭವಾಗಿ ಕೈ ಚೆಲ್ಲುವುದಿಲ್ಲವೆಂಬುದು ಮತದಾರರಿಗೆ ಗೊತ್ತಿದೆ. ಕಾಂಗ್ರೆಸ್ ಹೆಣೆಯುವ ತಂತ್ರಕ್ಕೆ, ಬಿಜೆಪಿಯೂ ಪ್ರತಿತಂತ್ರ ಹೆಣೆಯುತ್ತಿದೆ.

ಟಿಕೆಟ್ ಹಂಚಿಕೆ ವಿಚಾರದಲ್ಲಿ ಬಿಜೆಪಿಯ ಶ್ರೀಕಾಂತ ದುಂಡಿಗೌಡ್ರ ಹಾಗೂ ಕಾಂಗ್ರೆಸ್‌ನ ಅಜ್ಜಂಪೀರ ಖಾದ್ರಿ, ಮಂಜುನಾಥ ಕುನ್ನೂರ ಬಂಡಾಯ ಎದ್ದಿದ್ದರು. ಖಾದ್ರಿ ಹಾಗೂ ಕುನ್ನೂರ, ಪಕ್ಷೇತರರಾಗಿ ನಾಮಪತ್ರ ಸಲ್ಲಿಸಿ ನಾಯಕರ ಮನವೊಲಿಕೆ ನಂತರ ವಾಪಸು ಪಡೆದುಕೊಂಡಿದ್ದಾರೆ. ಬಂಡಾಯದ ಬಿಸಿ ಆರಿದಂತೆ ಕಂಡರೂ ಹೊಗೆ ಮಾತ್ರ ನಿಂತಿಲ್ಲ. ಚುನಾವಣೆ ಫಲಿತಾಂಶದ ಮೇಲೆ 'ಹೊಗೆ' ಪರಿಣಾಮ ಬೀರಬಹುದು. ಧಾರವಾಡ ಲೋಕಸಭಾ ಕ್ಷೇತ್ರ ವ್ಯಾಪ್ತಿಯಲ್ಲಿರುವ, ಶಿಗ್ಗಾವಿ ವಿಧಾನಸಭಾ ಕ್ಷೇತ್ರದಲ್ಲಿ ಕಳೆದ ಬಾರಿ ಕಾಂಗ್ರೆಸ್‌ಗೆ ಬಹುಮತ ಸಿಕ್ಕಿದೆ (ಬಿಜೆಪಿಗಿಂತ 8,500 ಹೆಚ್ಚಿನ ಮತಗಳು). ಇದೇ ಫಲಿತಾಂಶ, ಉಪ ಚುನಾವಣೆಯಲ್ಲಿ ಮರುಕಳಿಸಬಹುದೆಂಬ ಲೆಕ್ಕಾಚಾರ ಕಾಂಗ್ರೆಸ್‌ನದ್ದು.

'ಸವಾಲಿಗೆ- ಪ್ರತಿ ಸವಾಲು' ಎಂಬ ಜಿದ್ದಾಜಿದ್ದಿನಲ್ಲಿ ನಡೆಯುತ್ತಿರುವ ಪ್ರಚಾರಗಳಿಂದ ಚುನಾವಣೆ ಕಣ ರಂಗೇರಿದೆ. ಕಣದಲ್ಲಿರುವ ಕೆಆರ್‌ಎಸ್ ಪಕ್ಷದ ರವಿ ಕೃಷ್ಣಾರೆಡ್ಡಿ ಹಾಗೂ ಪಕ್ಷೇತರರು ಸೇರಿ 6 ಮಂದಿ, ಮತ ಸೆಳೆಯಲು ಪ್ರಚಾರ ಮಾಡುತ್ತಿದ್ದಾರೆ. ಎಲ್ಲವನ್ನೂ ಮತದಾರರು ಸೂಕ್ಷ್ಮವಾಗಿ ಗಮನಿಸುತ್ತಿದ್ದಾರೆ. ❖

ಸಂಡೂರು ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಬಂಗಾರು ಹನುಮಂತ ಹಾಗೂ ಕಾಂಗ್ರೆಸ್ ಅಭ್ಯರ್ಥಿ ಇ.ಅನ್ನಪೂರ್ಣ ಸಂದರ್ಶನ

ಪ್ರಜಾವಾಣಿ ಸಂದರ್ಶನ
• ಹರಿಶಂಕರ್ ಆರ್.

ಗಣಿ ಅಕ್ರಮಕ್ಕೆ ಲಾಡ್ ಕಾರಣ

ಬಳ್ಳಾರಿ: 'ಜನಾರ್ದನ ರೆಡ್ಡಿ ಅಥವಾ ಅವರ ಸಂಬಂಧಿಕರದ್ದು ಬಳ್ಳಾರಿ ಜಿಲ್ಲೆಯಲ್ಲಿ ಒಂದು ಗಣಿಯೂ ಇಲ್ಲ. ಅಕ್ರಮ ಗಣಿಗಾರಿಕೆ ಮಾಡಿದ್ದು ಸಂತೋಷ್ ಲಾಡ್. ತಮ್ಮ ತಪ್ಪು ಮುಚ್ಚಿಕೊಳ್ಳಲು ತುಕಾರಾಂ ಕುಟುಂಬ ಪೋಷಿಸುತ್ತಿದ್ದಾರೆ...' ಇದನ್ನು ಹೇಳಿದವರು ಸಂಡೂರು ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಬಂಗಾರು ಹನುಮಂತ. 'ಪ್ರಜಾವಾಣಿ'ಗೆ ವಿಶೇಷ ಸಂದರ್ಶನ ನೀಡಿರುವ ಅವರು ಹಲವು ವಿಷಯಗಳ ಬಗ್ಗೆ ಮಾತನಾಡಿದ್ದಾರೆ.

• ಜನರ ಸ್ಪಂದನೆ ಹೇಗಿದೆ?

ಜನರಿಂದ ಉತ್ತಮ ಸ್ಪಂದನೆಯಿದೆ. ಬದಲಾವಣೆ ಬಯಸಿದ್ದಾರೆ. ಕಾಂಗ್ರೆಸ್ ಸೋಲು ಖಚಿತ, ಬಿಜೆಪಿ ಗೆಲುವು ನಿಶ್ಚಿತ ಎಂಬ ಮಾತು ಎಲ್ಲೆಡೆ ಕೇಳಿಬರುತ್ತಿದೆ.

• ತಾವು ಸಿನಿಮಾ ಕ್ಷೇತ್ರದಲ್ಲೂ ಆಸಕ್ತಿ ಇಟ್ಟುಕೊಂಡವರು. ಎರಡೂ ಕ್ಷೇತ್ರಗಳನ್ನು ಹೇಗೆ ನಿಭಾಯಿಸುತ್ತೀರಿ?

ನಾನು ಪಕ್ಕಾ ರಾಜಕಾರಣಿ. 20 ವರ್ಷದಿಂದ ಈ ಕ್ಷೇತ್ರದಲ್ಲಿ ತೊಡಗಿಸಿಕೊಂಡಿದ್ದೇನೆ. ಎಬಿವಿಪಿ, ಬಿಜೆಪಿಯ ವಿವಿಧ ಸ್ತರಗಳಲ್ಲಿ ಕೆಲಸ ಮಾಡಿದ್ದೇನೆ. 2008ರಲ್ಲೇ ನಾನು ಕೂಡ್ಲಿಗಿಯಿಂದ ಸ್ಪರ್ಧಿಸಲು ಪ್ರಯತ್ನಿಸಿದ್ದೆ. 2013 ಮತ್ತು 2018ರಲ್ಲಿ ಸಾಧ್ಯವಾಗಲಿಲ್ಲ. ಈ ಮಧ್ಯೆ ನನ್ನ ಪರಿಚಿತರೊಬ್ಬರು ಸಿನಿಮಾ ಮಾಡಲು ಬಲವಂತ ಮಾಡಿದರು. ಆಗ ನಾನೇ ನಟಿಸಿದೆ. ಆದರೆ, ನನಗೆ ಆ ಕ್ಷೇತ್ರದಲ್ಲಿ ಆಸಕ್ತಿ ಇಲ್ಲ.

• ಬಿಜೆಪಿ ಗೆದ್ದರೆ ಅಕ್ರಮ ಗಣಿಗಾರಿಕೆಯ ಯುಗ ಮತ್ತೆ ಆರಂಭವಾಗಲಿದೆ ಎಂಬ ಮಾತುಗಳು ಕೇಳಿಬರುತ್ತಿವೆಯಲ್ಲ.

ವಿಎಸ್‌ಎಲ್ ಗಣಿ ಯಾರದ್ದು? ಸಂತೋಷ್ ಲಾಡ್ ಅವರದ್ದಲ್ಲವೇ. ಅವರೇ ಅಕ್ರಮ ಗಣಿಗಾರಿಕೆ ಮಾಡಿದವರು. ಅದಕ್ಕೇ ಅವರ ಗಣಿ 'ಸಿ' ವರ್ಗ ಸೇರಿತು. ಜನಾರ್ದನ ರೆಡ್ಡಿ ಮತ್ತೆ ಅಕ್ರಮ ಮಾಡುತ್ತಾರೆ ಎಂದು ಅವರು ಅಪಪ್ರಚಾರ ಮಾಡುತ್ತಿದ್ದಾರೆ. ಬಳ್ಳಾರಿಯಲ್ಲಿ ರೆಡ್ಡಿ ಅವರದ್ದು ಒಂದೇ ಒಂದು ಗಣಿ ಇಲ್ಲ. ಆಂಧ್ರಪ್ರದೇಶದಲ್ಲಿ ಇತ್ತಷ್ಟೆ. ಕಾಂಗ್ರೆಸ್ ಸರ್ಕಾರ ಇದ್ದಾಗಲೂ ಇಲ್ಲಿ ಅಕ್ರಮ ಗಣಿಗಾರಿಕೆ ನಡೆದಿದೆ. ಅಕ್ರಮ ಶುರುವಾಗಿದ್ದೇ ಸಂತೋಷ್ ಲಾಡ್ ಅವರಿಂದ.

• ಆರಂಭದಲ್ಲಿ ಟಿಕೆಟ್ ಗೊಂದಲಗಳಿದ್ದವು. ದಿವಾಕರ್ ಮುನಿಸಿಕೊಂಡಿದ್ದರು. ಈಗ ಪರಿಸ್ಥಿತಿ ಹೇಗಿದೆ?

ಟಿಕೆಟ್ ಕೈ ತಪ್ಪಿದರೆ ಸಾಮಾನ್ಯವಾಗಿ ಒಂದೆರಡು ದಿನ ನೋವಿರುತ್ತದೆ. ಆದರೆ, ಅವರು ಈಗ ಪ್ರಾಮಾಣಿಕವಾಗಿ ಕೆಲಸ ಮಾಡುತ್ತಿದ್ದಾರೆ. ದಿವಾಕರ್ ಅವರಿಗೆ ಪಕ್ಷದಲ್ಲಿ ಕಾರ್ಯದರ್ಶಿಯಾಗಿ ಉನ್ನತ ಸ್ಥಾನ ನೀಡಲಾಗಿದೆ. ಈಗ ಪರಿಸ್ಥಿತಿ ಸಹಜವಾಗಿದೆ.

• ಇಲ್ಲಿನ ಪ್ರಮುಖ ಸಮಸ್ಯೆಗಳು ಏನು?

ಇಲ್ಲಿ ಕುಡಿಯುವ ನೀರಿನ ಸಮಸ್ಯೆ ಇದೆ. ಶಾಲೆಗಳಿಲ್ಲ. ಶಾಲೆಗಳು ಇರುವಲ್ಲಿ ಕೊಠಡಿಗಳಿಲ್ಲ. ಹೈಟೆಕ್ ಆಸ್ಪತ್ರೆ ಇಲ್ಲ. ನಿರುದ್ಯೋಗ ಹೆಚ್ಚಾಗಿದೆ. ಹಾಗಾಗಿಯೇ ಪ್ರತಿ ಗ್ರಾಮದಲ್ಲೂ ಸಂತೋಷ್ ಲಾಡ್‌ಗೆ ಜನ ಪ್ರಶ್ನೆ ಮಾಡುತ್ತಿದ್ದಾರೆ. ಸಿದ್ದರಾಮಯ್ಯ ಅವರ ಕಾರ್ಯಕ್ರಮಕ್ಕೆ ಜನರನ್ನು ಕರೆತರಲು ದುಡ್ಡು ಕೊಡಲಾಗಿದೆ. ಇವರು ಕೆಲಸ ಮಾಡಿದ್ದರೆ, ಗ್ಯಾರಂಟಿ ಕೆಲಸ ಮಾಡಿದ್ದರೆ ದುಡ್ಡು ಕೊಟ್ಟು ಜನರನ್ನು ಸೇರಿಸಬೇಕಿತ್ತಾ? ಹಣ ಹಂಚದೇ ಚುನಾವಣೆ ಗೆಲ್ಲುತ್ತೇವೆ ಎಂದು ಅವರು ಯಾವುದಾದರೂ ಗುಡಿಯಲ್ಲಿ ಪ್ರಮಾಣ ಮಾಡಲಿ.

• ನಿಮ್ಮ ಅಫಿಡವಿಟ್‌ನಲ್ಲಿ ದೋಷ ಇದೆ ಎನ್ನಲಾಗಿದೆಯಲ್ಲ?

ಗೊಂದಲ ಏನಿಲ್ಲ. ಬೆಳ್ಳಿ ಸಿಂಹಾಸನವನ್ನು ಮಠಗಳಿಗೆ ನೀಡಿದ್ದೇನೆ ಎಂದು ಅಪಪ್ರಚಾರ ಮಾಡಿದರು. ಸಿಂಹಾಸನವನ್ನು ಭಕ್ತರು ಕೊಟ್ಟರು. ನಾನು ಅಲ್ಲಿದ್ದ ಮಾತ್ರಕ್ಕೆ ಬಂಗಾರು ಹನುಮಂತ ನೇತೃತ್ವ ವಹಿಸಿದರು ಎಂದರು. ನಾನು ನನ್ನ ಖಾತೆಯಿಂದ ದುಡ್ಡು ಖರ್ಚು ಮಾಡಿ ಕೊಟ್ಟಿದ್ದರೆ ಅದನ್ನು ಹೇಳಲಿ. ತುಕಾರಾಂಗೆ ಹಣ ಮಾಡಿಕೊಳ್ಳಲು ಗೊತ್ತೇ ವಿನಾ ಕೊಡಲು ಗೊತ್ತಿಲ್ಲ. ಹಾಗಾಗಿ ಇಂತ ವಿಷಯಗಳಲ್ಲಿ ತಪ್ಪು ಹುಡುಕುತ್ತಾರೆ.

• ಗೆದ್ದ ಕೂಡಲೇ ಮಾಡಲೇಬೇಕು ಎಂದುಕೊಂಡಿರುವ ಕೆಲಸಗಳೇನು?

ಕುಡಿಯುವ ನೀರಿನ ಸಮಸ್ಯೆ ನಿವಾರಿಸುವುದು ಮೊದಲ ಆದ್ಯತೆ. ಕ್ಷೇತ್ರದಾದ್ಯಂತ ಹದಗೆಟ್ಟಿರುವ. ರಸ್ತೆಗಳನ್ನು ಸರಿಪಡಿಸಬೇಕು.

ವೈದ್ಯಕೀಯ ತುರ್ತು ಎದುರಾದರೆ ಒಂದೋ ಬಳ್ಳಾರಿಗೆ ಹೋಗಬೇಕು, ಇಲ್ಲವೇ ಹೊಸಪೇಟೆಗೆ ಹೋಗಬೇಕು. ಆದ್ದರಿಂದ ಕ್ಷೇತ್ರದಲ್ಲಿ ಒಂದು ಸುವ್ಯವಸ್ಥಿತ ಆಸ್ಪತ್ರೆ ಕಟ್ಟಿಸುವ ಗುರಿಯಿದೆ. ❖

• ಸಂಡೂರು ಕ್ಷೇತ್ರ ನಿರೀಕ್ಷಿತ ಮಟ್ಟದಲ್ಲಿ ಅಭಿವೃದ್ಧಿ ಆಗಿಲ್ಲವೇ?

ಇದು ಮೀಸಲು ಕ್ಷೇತ್ರ. ಇಲ್ಲಿ ಸಾಮಾಜಿಕ ನ್ಯಾಯ ಬದಿಗಿರಿಸಿ, ತುಕಾರಾಂ ಮತ್ತು ಅವರ ಪತ್ನಿಗೆ ಟಿಕೆಟ್ ಕೊಡಲಾಗಿದೆ. ಸಾವಿರಾರು ಕೋಟಿ ಅನುದಾನ ತಂದಿರುವುದಾಗಿ ಹೇಳುತ್ತಾರೆ. ಆದರೆ, ಇಲ್ಲಿ ಅವ್ಯವಸ್ಥೆಯೇ ಹೆಚ್ಚಿದೆ. ಅನುದಾನಕ್ಕಾಗಿ ನಕಲಿ ಬಿಲ್ ಸೃಷ್ಟಿಸಿದರೇ ಎಂಬ ಅನುಮಾನವಿದೆ. ಅವ್ಯವಹಾರ ಹೊರಬರುತ್ತದೆ ಎಂಬ ಭಯದಿಂದ ಬೇರೆ ಯಾರೂ ಶಾಸಕರು ಆಗದಂತೆ ನೋಡಿ-ಕೊಳ್ಳಲಾಗುತ್ತಿದೆ.

ಬಂಗಾರು ಹನುಮಂತ

ಕರಾಳ ಅಧ್ಯಾಯ ಮರುಕಳಿಸದಿರಲಿ

ಸಂಡೂರು (ಬಳ್ಳಾರಿ ಜಿಲ್ಲೆ): 'ಮೀಸಲು ಕ್ಷೇತ್ರವಾದರೆ ಏನಂತೆ, ಇಲ್ಲಿ ಸೇವೆ ಮುಖ್ಯ. ಸಂಡೂರಿನ ಅಭಿವೃದ್ಧಿಗೆ ಬಸ್ ನಿಲ್ದಾಣ ಮಾನದಂಡವಲ್ಲ. ಅಕ್ರಮ ಗಣಿಗಾರಿಕೆಯ ಕರಾಳ ಅಧ್ಯಾಯ ಮರುಕಳಿಸಬಾರದು' ಎಂಬುದು ಸಂಡೂರು ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಇ.ಅನ್ನಪೂರ್ಣ ಅವರ ಕಾಳಜಿ. 'ಪ್ರಜಾವಾಣಿ'ಗೆ ನೀಡಿದ ವಿಶೇಷ ಸಂದರ್ಶನದಲ್ಲಿ ಅವರು ಹಲವು ವಿಷಯಗಳ ಬಗ್ಗೆ ಮಾತನಾಡಿದ್ದಾರೆ. ವಿವರ ಹೀಗಿದೆ.

• ನಿಮಗೆ ಚುನಾವಣೆ ಹೊಸದಲ್ಲ. ಆದರೆ, ಇದು ಮೊದಲ ಚುನಾವಣೆ. ಏನನ್ನಿಸುತ್ತಿದೆ?

ಇ.ಅನ್ನಪೂರ್ಣ: ತುಕಾರಾಂ ಅವರ ಹಿಂದೆ ನಿಂತು ನಾನು ಕೆಲಸ ಮಾಡುತ್ತಿದ್ದೆ. ಈಗ ನಾನೇ ಕಣಕ್ಕಿಳಿದಿದ್ದೇನೆ. ತೆರೆ ಹಿಂದೆ ಕೆಲಸ ಮಾಡುವುದಕ್ಕೂ, ತೆರೆ ಮುಂದೆ ಬರುವುದಕ್ಕೂ ತುಂಬಾ ವ್ಯತ್ಯಾಸವಿದೆ. ಕ್ಷೇತ್ರದ ಸಮಸ್ಯೆ ಅರಿಯಲು ಸಾಧ್ಯವಾಗಿದೆ.

• ತಮಗೆ ಓದು, ಬರವಣಿಗೆ ಹವ್ಯಾಸ ಇದೆಯೇ?

ನಮ್ಮದು ವಿದ್ಯಾವಂತ ಕುಟುಂಬ. ನನ್ನ ಹುಟ್ಟೂರು ಕಮಲಾಪುರ. ತಂದೆ ಕೃಷಿಯಲ್ಲಿ ಬಿ.ಎಸ್ಸಿ ಪದವೀಧರರು. ಸಿದ್ದರಾಮಯ್ಯ ಅವರಿಗೆ ಸ್ನೇಹಿತರು. ನನ್ನ ಚಿಕ್ಕಪ್ಪ ಪ್ರಾಧ್ಯಾಪಕರಾಗಿದ್ದರು. ನಮ್ಮ ಮನೆಯಲ್ಲಿ ಪತ್ರಿಕೆಗಳನ್ನು ತಂದು ಮಕ್ಕಳಿಗೆ ಓದಲು ಕೊಡುತ್ತಿದ್ದರು. ಆಗಿಂದಲೂ ಸಾಹಿತ್ಯದ ಒಲವು ಬೆಳೆಯಿತು. ನನ್ನ ಅನಿಸಿಕೆಗಳನ್ನು ಬರೆಯುತ್ತೇನೆ. ಸಂಸದ ತುಕಾರಾಂ ಅವರ ಜೀವನ ಚರಿತ್ರೆ ಬರೆಯುವ ಉದ್ದೇಶವಿದೆ.

• ಟಿಕೆಟ್ ವಿಷಯದ ಗಲಾಟೆ ಈಗ ಬಗೆಹರಿದಿದೆಯೇ?

ಅದು ನಮ್ಮ ಕುಟುಂಬದ ಗಲಾಟೆ. ಕುಟುಂಬ ಎಂದ ಮೇಲೆ ಸಣ್ಣಪುಟ್ಟ ಸಮಸ್ಯೆ ಸಾಮಾನ್ಯ. ಇದನ್ನು ಹಿರಿಯರು ಬಗೆಹರಿಸಿದ್ದಾರೆ. ಈಗ ಎಲ್ಲರೂ ಒಗ್ಗಟ್ಟಾಗಿ ಚುನಾವಣೆ ನಡೆಸುತ್ತಿದ್ದಾರೆ.

• ಎಸ್‌ಟಿ ಮೀಸಲು ಕ್ಷೇತ್ರದಲ್ಲಿ ಕುಟುಂಬಸ್ಥರಿಗೆ ಆದ್ಯತೆ ನೀಡುತ್ತಿರುವುದು ಸಾಮಾಜಿಕ ನ್ಯಾಯದ ನಿರಾಕರಣೆ ಅಲ್ಲವೇ?

ಇಲ್ಲಿ ಸಮಾನತೆ ಆಧಾರದಲ್ಲಿ ಮಹಿಳೆಗೆ ಅವಕಾಶ ನೀಡಲಾಗಿದೆ. ಇಲ್ಲಿ ನಾವು ಮಾಡಿದ ಸೇವೆ ಮುಖ್ಯವಾಗುತ್ತದೆ. ಯಾರಿಗೆ ಅನ್ಯಾಯವಾಯಿತು ಎಂಬುದು ಮುಖ್ಯ ಅಲ್ಲ.

• ಬಿಜೆಪಿ ಅಭ್ಯರ್ಥಿ ವಿರುದ್ಧ ಕಾಂಗ್ರೆಸ್ ಗಣಿ ಅಸ್ತ್ರ ಪ್ರಯೋಗಿಸುತ್ತಿದೆ ಎಂಬ ಮಾತಿದೆ.

ಅದು ನಿಜ. ಅಕ್ರಮ ಗಣಿಗಾರಿಕೆ ಕಾಲದಲ್ಲಿ ಏನಾಯಿತು ಏನೆಂಬುದು ಎಲ್ಲರಿಗೂ ಗೊತ್ತಾಗಿದೆ. ಇಲ್ಲಿನ ಗಣಿ ಮಾಲೀಕರು ತೊಂದರೆ ಅನುಭವಿಸಿದ್ದಾರೆ. ಜನ ಆಗ ಕೃಷಿಯನ್ನೇ ಮಾಡುತ್ತಿರಲಿಲ್ಲ. ಪರಿಸ್ಥಿತಿ ಈಗ ಸಹಜವಾಗಿದೆ. ಇದಕ್ಕೆ ಸಮಯ ಹಿಡಿಯಿತು. ಮತ್ತೆ ಆ ಕರಾಳ ಹಸ್ತ ಸಂಡೂರಿನ ಮೇಲೆ ಬೀಳದಿರುವಂತೆ ನಾವು ಮಾಡಬೇಕಿದೆ.

• ಬಸ್ ನಿಲ್ದಾಣದ ದುಃಸ್ಥಿತಿಯೇ ಸಂಡೂರು ಅಭಿವೃದ್ಧಿಗೆ ಸಾಕ್ಷಿ ಎಂದು ಬಿಜೆಪಿ ಹೇಳುತ್ತಿದೆ.

ಒಂದು ತಾಲ್ಲೂಕಿನ ಅಭಿವೃದ್ಧಿಗೆ ಬಸ್ ನಿಲ್ದಾಣ ಮಾನದಂಡವಲ್ಲ. ಶಿಕ್ಷಣ, ಮೂಲಸೌಲಭ್ಯ ಸಿಗಬೇಕು. ದ್ವೀಪ ರಾಷ್ಟ್ರದಂತಿದ್ದ ಸಂಡೂರು ಈಗ ಬದಲಾಗಿದೆ. ನಮ್ಮ ವಿರುದ್ಧ ಆರೋಪಿಸುತ್ತಿರುವ ಬಿಜೆಪಿಯವರು ಐಷಾರಾಮಿ ಕಾರಿನಲ್ಲಿ ಬಂದು, ಪ್ರಚಾರ ಮಾಡುತ್ತಿದ್ದಾರೆ. ಅಂಥ ಕಾರುಗಳು ಇಲ್ಲಿ ಓಡಾಡುತ್ತಿವೆ ಎಂದರೆ ಇಲ್ಲಿನ ರಸ್ತೆ ಗುಣಮಟ್ಟ ಎಂಥದ್ದು ಎಂದು ಅವರೇ ತಿಳಿಯಬೇಕು. ಶ್ರೀರಾಮುಲು ಆರೋಗ್ಯ ಸಚಿವರಾಗಿದ್ದಾಗ ಒಬ್ಬ ಶಸ್ತ್ರಚಿಕಿತ್ಸಕರನ್ನು ಕೊಡಲಿಲ್ಲ. ತಾಲ್ಲೂಕನ್ನು ಕಡೆಗಣಿಸಿದರು. ಸಾರಿಗೆ ಸಚಿವರಾದರೂ ಅವರು ಬಸ್ ಕೊಡಲಿಲ್ಲ. ತುಕಾರಾಂ, ₹1,500 ಕೋಟಿ ತಂದು ಕ್ಷೇತ್ರ ಅಭಿವೃದ್ಧಿ ಮಾಡಿರುವುದಾಗಿ ಸ್ವತಃ ಸಿದ್ದರಾಮಯ್ಯ ಅವರೇ ಹೇಳಿದ್ದಾರೆ.

• ಇದು ಸಂತೋಷ್ ಲಾಡ್ ವರ್ಚಸ್ಸಿನ ಚುನಾವಣೆಯೋ, ತುಕಾರಾಂ ವರ್ಚಸ್ಸಿನ ಆಧಾರದ ಚುನಾವಣೆಯೋ?

ಸಂತೋಷ್ ಲಾಡ್ ನಮ್ಮ ಶಕ್ತಿ. ಸಂಡೂರಿನ ರಾಜಕಾರಣ, ಅಭಿವೃದ್ಧಿಯಲ್ಲಿ ಅವರು ಹಸ್ತಕ್ಷೇಪ ಮಾಡಿಲ್ಲ. 2004ರ ಬಳಿಕ ಅವರು ಮಾಡಿದ ಬದಲಾವಣೆ ಜನ ಒಪ್ಪಿದ್ದಾರೆ. ನಮ್ಮನ್ನು ಗುರುತಿಸಿ ರಾಜಕೀಯದಲ್ಲಿ ಬೆಳೆಸುವಲ್ಲಿ ಅವರ ಪಾತ್ರ ಹಿರಿದು.

• ಗೆದ್ದರೆ ಏನು ಮಾಡಬೇಕು ಎಂದುಕೊಂಡಿದ್ದೀರಿ?

200 ಬೆಡ್‌ಗಳ ಸುಸಜ್ಜಿತ ಆಸ್ಪತ್ರೆಗೆ ಭೂಮಿ ಪೂಜೆ ಆಗಿದೆ. ಅದನ್ನು ಬೇಗ ಪೂರ್ಣಗೊಳಿಸಬೇಕು. ಇಲ್ಲಿ ಅಪಘಾತಗಳು ಹೆಚ್ಚು. ಹೆಣ್ಣುಮಕ್ಕಳ ವಿದ್ಯಾಭ್ಯಾಸಕ್ಕೆ ಹೆಚ್ಚಿನ ಒತ್ತು ನೀಡಬೇಕು. ಮಹಿಳೆಯರ ಕೌಶಲಾಭಿವೃದ್ಧಿ ಕೇಂದ್ರ ತೆರೆಯಬೇಕೆಂದು ಬಯಸಿದ್ದೇನೆ. ಇಲ್ಲಿ ನರ್ಸಿಂಗ್ ಕಾಲೇಜು ಮಾಡುವ ಆಸೆ ಇದೆ. ನಾನು ಮತ್ತು ಸಂಸದರು ಈ ಕೆಲಸ ಮಾಡಲಿದ್ದೇವೆ. ❖

• ಸಂಡೂರಿನ ಪ್ರಾಕೃತಿಕ ಸಂಪತ್ತು ಕರಗುತ್ತಿದೆ. ಇದರ ಬಗ್ಗೆ ಏನು ಹೇಳುತ್ತೀರಿ?

ಇಲ್ಲಿನ ಪ್ರಾಕೃತಿಕ ಸಂಪತ್ತು ಸಂಡೂರಿಗಷ್ಟೇ ಸೀಮಿತವಲ್ಲ. ಇಡೀ ದೇಶಕ್ಕೆ ಸೇರಿದ್ದು. ಅಕ್ರಮ ಗಣಿಗಾರಿಕೆಗೆ ಉತ್ತರ ಸಿಕ್ಕಿದೆ. ಅದು ಕರಾಳ ಅಧ್ಯಾಯ. ಈಗ ಕಾನೂನಾತ್ಮಕ ರೀತಿಯಲ್ಲಿ ಮಾತ್ರ ಗಣಿಗಾರಿಕೆಗೆ ಅವಕಾಶ ಇದೆ. ಇಲ್ಲಿನ ಸಂಪತ್ತನ್ನು ಮುಂದಿನ ಪೀಳಿಗೆಗೆ ಉಳಿಸಬೇಕು. ಈ ನಿಟ್ಟಿನಲ್ಲಿ ನಾನು ಕೆಲಸ ಮಾಡುವೆ. ಇದು ಸರ್ಕಾರ, ಜನರ ಜವಾಬ್ದಾರಿ ಕೂಡ ಹೌದು.

ಇ. ಅನ್ನಪೂರ್ಣ

'ಶಿಗ್ಗಾವಿಯಲ್ಲಿ ಬಿಜೆಪಿ ಗೆದ್ದರೆ ರಾಜ್ಯ ಸರ್ಕಾರ ಪತನ'

ಪ್ರಜಾವಾಣಿ ವಾರ್ತೆ

ಶಿಗ್ಗಾವಿ (ಹಾವೇರಿ ಜಿಲ್ಲೆ): 'ಜಗತ್ತಿನ ಯಾವ ಶಕ್ತಿ ಬಂದರೂ ಶಿಗ್ಗಾವಿ ಕ್ಷೇತ್ರದಲ್ಲಿ ಬಿಜೆಪಿ ಗೆಲುವು ತಡೆಯಲು ಆಗದು. ಶಿಗ್ಗಾವಿಯಲ್ಲಿ ಬಿಜೆಪಿ ಗೆದ್ದರೆ, ರಾಜ್ಯ ಸರ್ಕಾರ ಪತನವಾಗುತ್ತದೆ. ಮತ್ತೆ ಬಿಜೆಪಿ ಸರ್ಕಾರ ಬರುತ್ತದೆ' ಎಂದು ಸಂಸದ ಬಸವರಾಜ ಬೊಮ್ಮಾಯಿ ಹೇಳಿದರು.

ಬಿಜೆಪಿ ಅಭ್ಯರ್ಥಿ ಭರತ್ ಬೊಮ್ಮಾಯಿ ಪರ ಮತಯಾಚಿಸಿದ ಅವರು, 'ಬಸವರಾಜ ಬೊಮ್ಮಾಯಿ ಮತ್ತು ಕಾಂಗ್ರೆಸ್ ಸರ್ಕಾರ ನಡುವಿನ ಚುನಾವಣೆಯಿದು. ಅಭಿವೃದ್ಧಿ ಕೆಲಸ ನೋಡಿರುವ ಜನ, ಬಿಜೆಪಿಯನ್ನು ಗೆಲ್ಲಿಸಲಿದ್ದಾರೆ' ಎಂದರು.

'ನಾನು ಮುಖ್ಯಮಂತ್ರಿ ಆಗಿದ್ದಾಗ ಶಿಗ್ಗಾವಿ ಕ್ಷೇತ್ರದ ಅಭಿವೃದ್ಧಿಗಾಗಿ ₹ 300 ಕೋಟಿ ಮಂಜೂರು ಮಾಡಿದ್ದೆ. ಈ ಹಣವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ವಾಪಸು ಪಡೆದಿದ್ದಾರೆ. ಈ ಹಣವನ್ನು ಬಿಡುಗಡೆ ಮಾಡಿದ ನಂತರವೇ ಅವರು ಕ್ಷೇತ್ರಕ್ಕೆ ಬಂದು ಮತ ಕೇಳಬೇಕು' ಎಂದು ಬಸವರಾಜ ಬೊಮ್ಮಾಯಿ ವಾಗ್ದಾಳಿ ನಡೆಸಿದರು.

ಶಿಗ್ಗಾವಿ ಕ್ಷೇತ್ರದ ಹುಲಗೂರಿನಲ್ಲಿರುವ ಹಜರತ್ ಶಾ ದರ್ಗಾಗೆ ಶುಕ್ರವಾರ ಭೇಟಿ ನೀಡಿದ ವಿಧಾನಪರಿಷತ್ ಸದಸ್ಯ ಯತೀಂದ್ರ ಸಿದ್ದರಾಮಯ್ಯ ಪ್ರಾರ್ಥನೆ ಸಲ್ಲಿಸಿದರು. ಮುಖಂಡ ಅಜ್ಜಂಪೀರ ಖಾದ್ರಿ ಜೊತೆಗಿದ್ದರು

ಮಹಾರಾಷ್ಟ್ರದ ಫಂಡರಪುರಕ್ಕೆ ತೆರಳುತ್ತಿದ್ದ ಶಿಗ್ಗಾವಿ ಕ್ಷೇತ್ರದ ತಡಸ ಗ್ರಾಮದ ಮಹಿಳೆಯರಿಗೆ ಸಂಸದ ಬಸವರಾಜ ಬೊಮ್ಮಾಯಿ ಅವರು ಶುಕ್ರವಾರ ನಮಸ್ಕರಿಸಿ, ಬೀಳ್ಕೊಟ್ಟರು

> **ಬಿಜೆಪಿಯವರು ಸುಳ್ಳಿನ ಸರಮಾಲೆ ಮೇಲೆ ರಾಜಕಾರಣ ಮಾಡುತ್ತಿದ್ದಾರೆ. ಅವರ ಸುಳ್ಳಿನ ರಾಜಕೀಯ, ಉಪಚುನಾವಣೆಯಲ್ಲಿ ನಡೆಯುವುದಿಲ್ಲ. ಜನರು ಬಿಜೆಪಿಗೆ ತಕ್ಕ ಪಾಠ ಕಲಿಸುವರು**
> **ಈಶ್ವರ ಖಂಡ್ರೆ,** ಸಚಿವ

ಬಿಜೆಪಿ ಸೋಲಿಸಿ ಪ್ರಜಾಪ್ರಭುತ್ವ ಗೆಲ್ಲಿಸಿ: ಯತೀಂದ್ರ

ಶಿಗ್ಗಾವಿ (ಹಾವೇರಿ ಜಿಲ್ಲೆ): 'ವಿರೋಧ ಪಕ್ಷಗಳ ಆಡಳಿತವಿರುವ ರಾಜ್ಯಗಳಲ್ಲಿ ಮುಖ್ಯಮಂತ್ರಿಯವರನ್ನು ಅಧಿಕಾರದಿಂದ ಕೆಳಗಿಳಿಸಲು ಬಿಜೆಪಿ ನಾನಾ ಸುಳ್ಳು ಹೇಳುತ್ತಿದೆ. ಶಿಗ್ಗಾವಿ ಉಪಚುನಾವಣೆಯಲ್ಲಿ ಬಿಜೆಪಿಯನ್ನು ಸೋಲಿಸಿ, ಪ್ರಜಾಪ್ರಭುತ್ವ ಗೆಲ್ಲಿಸಬೇಕು' ಎಂದು ವಿಧಾನ ಪರಿಷತ್ ಸದಸ್ಯ ಯತೀಂದ್ರ ಸಿದ್ದರಾಮಯ್ಯ ಹೇಳಿದರು.

ಶಿಗ್ಗಾವಿ ವಿಧಾನಸಭಾ ಕ್ಷೇತ್ರದ ಹುಲಗೂರಿನಲ್ಲಿ ಕಾಂಗ್ರೆಸ್ ಅಭ್ಯರ್ಥಿ ಯಾಸೀರ್ ಅಹ್ಮದ್ ಖಾನ್ ಪಠಾಣ ಪರ ಪ್ರಚಾರ ನಡೆಸಿದ ಅವರು, 'ಕಾಂಗ್ರೆಸ್ ಗೆಲ್ಲಿಸುವ ಮೂಲಕ ಸಿದ್ದರಾಮಯ್ಯ ನೇತೃತ್ವದ ರಾಜ್ಯ ಸರ್ಕಾರಕ್ಕೆ ಶಕ್ತಿ ನೀಡಬೇಕು' ಎಂದರು.

'ಬಿಜೆಪಿ, ಸುಳ್ಳಿನ ಪಕ್ಷ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಅಧಿಕಾರದಿಂದ ಕೆಳಗೆ ಇಳಿಸಬೇಕೆಂದು, ರಾಜಕೀಯಕ್ಕೆ ಬಾರದ ನನ್ನ ತಾಯಿ ಮೇಲೆ ಸುಳ್ಳು ಆರೋಪ ಮಾಡಿದರು. ಅವರ ಆರೋಪದಲ್ಲಿ ಯಾವುದೇ ಹುರುಳಿಲ್ಲ' ಎಂದರು.

'ಬಳ್ಳಾರಿಯನ್ನು ಭಯಮುಕ್ತ ಮಾಡಿದ್ದು ನಾನು'

ಪ್ರಜಾವಾಣಿ ವಾರ್ತೆ

ಬಳ್ಳಾರಿ: 'ಜನಾರ್ದನರೆಡ್ಡಿ ಜುಜುಬಿ ರಾಜಕಾರಣಿ. ಜೈಲಿಗೆ ಹೋಗಿ ಬಂದ ನಿಮ್ಮ ಅಟ್ಟಹಾಸ ಮುರಿದಿದ್ದು ಮತ್ತು ಬಳ್ಳಾರಿ ಜನರನ್ನು ಭಯಮುಕ್ತ ಗೊಳಿಸಿದ್ದು ಇದೇ ಸಿದ್ದರಾಮಯ್ಯ ಎಂಬುದನ್ನು ಮರೆಯಬೇಡಿ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಸಂಡೂರಿನ ವಿಠಲಾಪುರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಅನ್ನಪೂರ್ಣ ಪರ ಪ್ರಚಾರ ಮಾಡಿದ ಅವರು, 'ರೆಡ್ಡಿಯವರೇ, ಕರ್ನಾಟಕ ರಾಜಕಾರಣಕ್ಕೆ ನನ್ನ ಮತ್ತು ನಿಮ್ಮ ಕೊಡುಗೆ ಏನು? ನೀವೇನು ಬಳ್ಳಾರಿ ಯಜಮಾನರಾ' ಎಂದರು.

'ಕಳೆದ ವಿಧಾನಸಭಾ ಚುನಾವಣೆಯಲ್ಲಿ ನಾನು ಗಂಗಾವತಿಗೆ ಪ್ರಚಾರಕ್ಕೆ ಹೋಗಲು ಆಗಲಿಲ್ಲ. ನಮ್ಮ ಅಭ್ಯರ್ಥಿಯೂ ಸರಿಯಾದ ಪ್ರಚಾರ ಮಾಡಲಿಲ್ಲ. ಹೀಗಾಗಿ ನೀವು ಗೆಲ್ಲುವಂತಾಯಿತು. ನಿಮ್ಮ ಈ ಗೆಲುವು ಶಾಶ್ವತ ಅಲ್ಲ. ಯಾರ ಗೆಲುವೂ ಶಾಶ್ವತ ಅಲ್ಲ. ನನ್ನ ಬಗ್ಗೆ ಏಕವಚನದಲ್ಲಿ ಮಾತನಾಡುವ ಯೋಗ್ಯತೆ ನಿಮಗಿಲ್ಲ' ಎಂದರು.

ಆರ್‌ಎಸ್‌ಎಸ್ ವಿರುದ್ಧ ಆಕ್ರೋಶ: 'ಮಹಾತ್ಮ ಗಾಂಧೀಜಿಯನ್ನು ಕೊಂದ ಗೋಡ್ಸೆ, ಸಾವರ್ಕರ್, ಗೋಳ್ವಾಲ್ಕರ್ ದೇಶದ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿ, ಜೈಲಿಗೆ ಹೋಗಿದ್ದಾರಾ? ಬಿಜೆಪಿ, ಆರ್‌ಎಸ್‌ಎಸ್ ಪರಿವಾರದ ಯಾರೊಬ್ಬರೂ ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ ಉದಾಹರಣೆ ಇಲ್ಲ' ಎಂದರು.

ಸಂಡೂರಿನಲ್ಲಿ ಶನಿವಾರ ನಡೆದ ಕಾಂಗ್ರೆಸ್ ಪ್ರಚಾರ ಸಭೆಯೊಂದರಲ್ಲಿ ಅಭಿಮಾನಿಗಳು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಕುರಿ ಉಡುಗೊರೆ ನೀಡಿದರು.

> **ಸಿದ್ದರಾಮಯ್ಯ ಜೈಲಿಗೆ ಹೋಗುತ್ತಾರೆ ಎನ್ನುವ ಬಿಎಸ್‌ವೈ ತಾವು ಪೋಕ್ಸೊ ಪ್ರಕರಣದ ಆರೋಪಿ ಎಂಬುದನ್ನು ಮರೆತಂತಿದೆ. ನಾವು ಗ್ಯಾರಂಟಿಗಳನ್ನು ನಿಲ್ಲಿಸುವುದಿಲ್ಲ; ಗಟ್ಟಿಗೊಳಿಸುತ್ತೇವೆ**
> **ಎಚ್.ಕೆ. ಪಾಟೀಲ,** ಕಾನೂನು ಸಚಿವ

> **ಸಿದ್ದರಾಮಯ್ಯ ನನ್ನ ವಿರುದ್ಧ ಬೈದಾಡಿ, ಹೋದಲ್ಲಿ ಮತ್ತು ಬಂದಲ್ಲಿ ನನ್ನ ಜಪ ಮಾಡುತ್ತಾರೆ. ನಾನು 14 ವರ್ಷ ಹೊರಗಡೆ ಇದ್ದೆ. ಬಳ್ಳಾರಿಯಲ್ಲಿ ನಿರುದ್ಯೋಗ ನೀಗಿಸದಿದ್ದರೆ ರಾಜಕೀಯ ಬಿಡುವೆ**
> **ಜನಾರ್ದನ ರೆಡ್ಡಿ,** ಶಾಸಕ

ಕಾಂಗ್ರೆಸ್‌ನವರು ಡಿಎಂಕೆ ಒಪ್ಪಿಸಲಿ: ಎಚ್‌ಡಿಕೆ ಸವಾಲು

ಪ್ರತಿಧ್ವನಿಸಿದ 'ಮೇಕೆದಾಟು' ರಾಜಕೀಯ

ಪ್ರಜಾವಾಣಿ ವಾರ್ತೆ

ಚನ್ನಪಟ್ಟಣ (ರಾಮನಗರ): ಉಪ ಚುನಾವಣೆ ಪ್ರಚಾರದಲ್ಲಿ ಮೇಕೆದಾಟು ಅಣೆಕಟ್ಟೆ ನಿರ್ಮಾಣ ಅನುಮತಿ ವಿಷಯವು ಪ್ರತಿಧ್ವನಿಸಿದ್ದು, ಕಾಂಗ್ರೆಸ್ ಮತ್ತು ಜೆಡಿಎಸ್ ನಾಯಕರ ನಡುವೆ ವಾಕ್ಸಮರಕ್ಕೂ ಕಾರಣವಾಗಿದೆ.

'ಯೋಜನೆಗೆ ಯಾಕಿನ್ನೂ ಅನುಮತಿ ಕೊಡಿಸಿಲ್ಲ' ಎಂಬ ಕಾಂಗ್ರೆಸ್ ನಾಯಕರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ, 'ಕಾಂಗ್ರೆಸ್‌ನವರು ತಮ್ಮ ಮಿತ್ರಪಕ್ಷ ಡಿಎಂಕೆಯನ್ನು ಮೊದಲು ಒಪ್ಪಿಸಲಿ' ಎಂದು ಸವಾಲು ಹಾಕಿದ್ದಾರೆ.

ತಾಲ್ಲೂಕಿನ ಮುಕುಂದ ಗ್ರಾಮದಲ್ಲಿ ಪುತ್ರ ನಿಖಿಲ್ ಕುಮಾರಸ್ವಾಮಿ ಪರವಾಗಿ ಶನಿವಾರ ಪ್ರಚಾರ ನಡೆಸಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಅವರು ಡಿಎಂಕೆಯನ್ನು ಒಪ್ಪಿಸಿದರೆ ಕೇಂದ್ರ ಸರ್ಕಾರದಿಂದ ಅನುಮತಿ ಕೊಡಿಸುವ ಜವಾಬ್ದಾರಿ ನಮ್ಮದು. ಆದರೆ, ಅವರ ಮಿತ್ರಪಕ್ಷ ಕ್ಯಾತೆ ತೆಗೆದುಕೊಂಡು ಕೂತಿದೆಯಲ್ಲಾ. ಕಾಂಗ್ರೆಸ್‌ನವರು ಮೊದಲು ಅದರ ಬಗ್ಗೆ ಬಾಯಿ ಬಿಡಲಿ' ಎಂದರು.

'ಯೋಗೇಶ್ವರ್ ಕಾಂಗ್ರೆಸ್ ಪಕ್ಷಕ್ಕೆ ಸೇರುವ ವ್ಯಾಪಾರ ಮೂರು ತಿಂಗಳ ಹಿಂದೆ ಲೋಕಸಭೆ ಚುನಾವಣೆ ಸಂದರ್ಭದಲ್ಲೇ ಆಗಿದೆ. ನೆಪ ಮಾತ್ರಕ್ಕೆ ಲೋಕಸಭೆ ಚುನಾವಣೆಯಲ್ಲಿ ನಮ್ಮೊಂದಿಗಿದ್ದ ಅವರು, ಮಾನಸಿಕವಾಗಿ ಕಾಂಗ್ರೆಸ್‌ನಲ್ಲಿದ್ದರು. ಕಡೆಗೆ ಇಬ್ಬರಿಗೂ ಟೋಪಿ ಹಾಕಿ ಹೋದರು' ಎಂದು ಬೇವೂರಿನಲ್ಲಿ ನಡೆದ ಪ್ರಚಾರ ಸಭೆಯಲ್ಲಿ ಕುಮಾರಸ್ವಾಮಿ ಆಕ್ರೋಶ ವ್ಯಕ್ತಪಡಿಸಿದರು.

ಮೂರು ದಿನಗಳ ಹಿಂದೆಯಷ್ಟೇ ಪ್ರಚಾರಸಭೆಯಲ್ಲಿ, 'ನನ್ನ ಕೊನೆಯುಸಿರು ಹೋಗುವುದರೊಳಗೆ ಮೇಕೆದಾಟುಗೆ ಅನುಮತಿ ಕೊಡಿಸುವೆ' ಎಂದಿದ್ದ ಗೌಡರು, ತಾಲ್ಲೂಕಿನ ಎಸ್.ಎಂ. ಹಳ್ಳಿಯಲ್ಲಿ ನಡೆದ ಪ್ರಚಾರ ನಡೆಸುವಾಗ ತಮ್ಮ ಮಾತು ಪುನರುಚ್ಚರಿಸಿದರು.

'ಕಾಂಗ್ರೆಸ್‌ನಿಂದ ಮೇಕೆದಾಟು ಯೋಜನೆ ಕಾರ್ಯಗತಗೊಳಿಸಲು ಸಾಧ್ಯವಿಲ್ಲ. ನಾನದನ್ನೂ ಮಾಡಿಯೇ ತೀರುತ್ತೇವೆ. ಉಪ ಚುನಾವಣೆಯಲ್ಲಿ ನಿಖಿಲ್ ಗೆದ್ದರೆ ರಾಜ್ಯಸಭೆ ಮತ್ತು ಲೋಕಸಭೆಯಲ್ಲಿ ಹೋರಾಟ ನಡೆಸಿ ಯೋಜನೆ ಜಾರಿಗೊಳಿಸುವೆ' ಎಂದು ಭರವಸೆ ನೀಡಿದರು.

ಜನರನ್ನು ಸುಲಿಗೆ ಮಾಡುತ್ತಿರುವ ರಾಜ್ಯದ ಕಾಂಗ್ರೆಸ್ ಸರ್ಕಾರ ಅವಧಿ ಪೂರ್ಣಗೊಳಿಸುವುದಿಲ್ಲ. ಇಂತಹ ಸರ್ಕಾರ ಇರಲೇಬಾರದು. ಹಾಗಾಗಿ, ನಿಖಿಲ್ ಬೆಂಬಲಿಸಿ ಪ್ರಧಾನಿ ಮೋದಿ ಮತ್ತು ಕೇಂದ್ರ ಸಚಿವ ಕುಮಾರಸ್ವಾಮಿ ಕೈ ಬಲಪಡಿಸಿ ಎಂದು ಮನವಿ ಮಾಡಿದರು.

ಚನ್ನಪಟ್ಟಣ ಉಪ ಚುನಾವಣೆಯ ಕಾಂಗ್ರೆಸ್ ಅಭ್ಯರ್ಥಿ ಸಿ.ಪಿ. ಯೋಗೇಶ್ವರ್ ಅವರ ಊರಾದ ಚಕ್ಕೆರೆಯಲ್ಲಿ ನಡೆದ ಜೆಡಿಎಸ್ ಪ್ರಚಾರಸಭೆಯಲ್ಲಿ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಎಚ್‌.ಡಿ. ದೇವೇಗೌಡ ಮಾತನಾಡಿದರು. ಅಭ್ಯರ್ಥಿ ನಿಖಿಲ್ ಕುಮಾರಸ್ವಾಮಿ ಇದ್ದಾರೆ

'ನಿಮ್ಮ ವಿರುದ್ಧ ತೊಡೆ ತಟ್ಟಿದ್ದ ನಮ್ಮಣ್ಣ'

'ಇನ್ನೊಬ್ಬರ ಬಳಿ ಕೈ ಚಾಚುವ ರೀತಿ ನಮ್ಮ ಅಪ್ಪ-ಅಮ್ಮ ನಮ್ಮನ್ನು ಬೆಳೆಸಿಲ್ಲ ದೇವೇಗೌಡರೇ. 23ನೇ ವಯಸ್ಸಿಗೇ ನಮ್ಮಣ್ಣನನ್ನು ನಿಮ್ಮ ವಿರುದ್ಧ ತೊಡೆ ತಟ್ಟಿ ನಿಲ್ಲಿಸಿದ್ದಾರೆ. ಯಾರ ಬಳಿಯೂ ಕೆರೆಯನ್ನು ಬರೆಸಿಕೊ ಎಂದು ಹೇಳಿಲ್ಲ. ನೀವು ಡಿಸಿಎಂ ಬಗ್ಗೆ ಮಾತನಾಡಿದರೆ ಸುಮ್ಮನಿರುತ್ತಿದ್ದೆ. ಆದರೆ, ನಮ್ಮಣ್ಣನ ಬಗ್ಗೆ ಮಾತನಾಡಿದ್ದೀರಿ. ಹಿರಿಯರು ಅಂತ ಗೌರವ ಕೊಟ್ಟರೆ ಏನೇನೊ ಮಾತನಾಡುತ್ತೀರಾ? ಕುತಂತ್ರ ಮಾಡಿ ನಮ್ಮಣ್ಣನನ್ನು ಜೈಲಿಗೆ ಕಳಿಸಿದ್ದ ನೀವು, ಈಗ ಸಿದ್ದರಾಮಯ್ಯ ಅವರ ವಿರುದ್ದವು ಅದೇ ಕೆಲಸ ಮಾಡಲು ಮುಂದಾಗಿದ್ದೀರಿ. ಗ್ಯಾರಂಟಿ ಯೋಜನೆಗಳನ್ನು ಕೊಟ್ಟಿದ್ದಕ್ಕೆ ಹೀಗೆ ಮಾಡ್ತಿದ್ದೀರಾ? ಮೊಮ್ಮಗನ ಚುನಾವಣಾ ಪ್ರಚಾರಕ್ಕೆ ಈಗ ಬಂದು ಸರ್ಕಾರ ತೆಗೆಯುತ್ತೇನೆ ಎಂದು ಎದೆ ಬಡಿದುಕೊಂಡು ಮಾತನಾಡುತ್ತೀರಾ ಗೌಡರೇ' ಎಂದು ತಮ್ಮ ಅಣ್ಣ ಡಿಕೆಶಿ ವಿರುದ್ಧದ ಗೌಡರ ಟೀಕೆಗೆ ಮಾಜಿ ಸಂಸದ ಡಿ.ಕೆ. ಸುರೇಶ್ ಆಕ್ರೋಶ ವ್ಯಕ್ತಪಡಿಸಿದರು.

> **ಇಂಡಿಯಾ ಮೈತ್ರಿಕೂಟದಲ್ಲಿ ಪ್ರಧಾನಿಯಾಗಬಲ್ಲ ನಾಯಕ ಯಾರಾದಾರೂ ಇದ್ದಾರೆಯೇ? ಸ್ಟಾಲಿನ್ ಅಥವಾ ಮಮತಾ ಬ್ಯಾನರ್ಜಿ ಪ್ರಧಾನಿ ಆಗಬಹುದೇ?**
> **ಎಚ್‌.ಡಿ. ದೇವೇಗೌಡ,** ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ

ಸಂಕ್ಷಿಪ್ತ ಸುದ್ದಿ

ಚಿಕ್ಕಮಗಳೂರಿನಲ್ಲಿ ಇಂದು ಶೋಭಾಯಾತ್ರೆ ಪ್ರಮೋದ್ ಮುತಾಲಿಕ್

ಹಾಸನ: 'ದತ್ತಮಾಲಾ ಅಭಿಯಾನದ ಅಂಗವಾಗಿ ಚಿಕ್ಕಮಗಳೂರಿನಲ್ಲಿ ನವೆಂಬರ್ 10 ರಂದು ಶೋಭಾಯಾತ್ರೆ ಮತ್ತು ಧಾರ್ಮಿಕ ಸಭೆಯನ್ನು ಆಯೋಜಿಸಲಾಗಿದೆ' ಎಂದು ಶ್ರೀರಾಮಸೇನೆ ಸಂಸ್ಥಾಪಕ ಪ್ರಮೋದ್ ಮುತಾಲಿಕ್ ಹೇಳಿದರು.

ನಗರದಲ್ಲಿ ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿ, 'ಚಂದ್ರದ್ರೋಣ ಪರ್ವತದ ಪೀಠದಲ್ಲಿ ಸತ್ಯದತ್ತ ವ್ರತ ಮತ್ತು ದತ್ತ ಹೋಮ ಆಯೋಜಿಸಲಾಗಿದೆ. ತೆಲಂಗಾಣ ಹಿಂದೂ ನಾಯಕಿ ಮಾಧವಿ ಲತಾ ಹಾಗೂ ವಿವಿಧ ಮಠಾಧೀಶರು ವಿಶೇಷ ಆಹ್ವಾನಿತರಾಗಿ ಪಾಲ್ಗೊಳ್ಳಲಿದ್ದಾರೆ. ವಿಧಾನ ಪರಿಷತ್ ಸದಸ್ಯ ಸಿ.ಟಿ. ರವಿ, ಮಾಜಿ ಸಂಸದ ಪ್ರತಾಪ್ ಸಿಂಹ ಭಾಗವಹಿಸಲಿದ್ದಾರೆ' ಎಂದರು.

'ಅಭಿಯಾನದಲ್ಲಿ ಹಾಸನ ಜಿಲ್ಲೆಯವರೂ ಸೇರಿ 5 ಸಾವಿರಕ್ಕೂ ಹೆಚ್ಚು ಮಂದಿ ಭಾಗವಹಿಸಲಿದ್ದಾರೆ. ದತ್ತಪೀಠವನ್ನು ಸಂಪೂರ್ಣ ನಮ್ಮ ವಶಕ್ಕೆ ಪಡೆಯಲು ಪ್ರಯತ್ನ ನಡೆಯುತ್ತಿದೆ. ಮುಂದಿನ ದಿನಗಳಲ್ಲಿ ಸಂಪೂರ್ಣ ದತ್ತಪೀಠವಾಗಿ ಉಳಿಸಲು ಹೋರಾಟ ನಡೆಸಲಾಗುವುದು' ಎಂದರು.

ಅತ್ಯಾಚಾರ, ಕೊಲೆ ಇಬ್ಬರು ಬಾಲಕರಿಗೆ 25 ವರ್ಷ ಜೈಲು

ರಾಣೆಬೆನ್ನೂರು (ಹಾವೇರಿ ಜಿಲ್ಲೆ): ಬಾಲಕಿಯ ಮೇಲೆ ಅತ್ಯಾಚಾರ ಎಸಗಿ, ಕೊಲೆ ಮಾಡಿದ ಇಬ್ಬರು ಬಾಲಕರಿಗೆ ಸೆಷನ್ಸ್ ನ್ಯಾಯಾಧೀಶ ನಿಂಗನಗೌಡ ಪಾಟೀಲ ಅವರು 25 ವರ್ಷ ಜೈಲು ಮತ್ತು ತಲಾ ₹3 ಲಕ್ಷ ದಂಡ ವಿಧಿಸಿ ಆದೇಶಿಸಿದ್ದಾರೆ.

ದಂಡದ ಹಣದಲ್ಲಿ ಮೃತ ಬಾಲಕಿಯ ತಾಯಿ ಮತ್ತು ತಮ್ಮನಿಗೆ ₹ 3 ಲಕ್ಷ ಪರಿಹಾರ, ಕರ್ನಾಟಕ ಸರ್ಕಾರವು ನೊಂದವರ ಪರಿಹಾರ ನಿಧಿ ಯೋಜನೆಯಡಿ ನೀಡುವ ಪರಿಹಾರ ನಿಧಿಯಿಂದ ಬಾಲಕಿಯ ತಾಯಿ, ತಮ್ಮನಿಗೆ ₹10 ಲಕ್ಷ ಪರಿಹಾರ ನೀಡಬೇಕೆಂದು ತೀರ್ಪು ನೀಡಿದ್ದಾರೆ. ಸರ್ಕಾರದ ಪರವಾಗಿ ಸರ್ಕಾರಿ ಅಭಿಯೋಜಕ ವಿಜಯಕುಮಾರ ಶಂಕರಗೌಡ ಪಾಟೀಲ ವಾದ ಮಂಡಿಸಿದ್ದರು.

ಹಿನ್ನೆಲೆ: 2016 ರಲ್ಲಿ ನ. 19ರಂದು ಇಬ್ಬರು ಬಾಲಕರು ಮನೆಯೊಂದರಲ್ಲಿ ಯಾರೂ ಇಲ್ಲದ ವೇಳೆ ಬಾಲಕಿಯನ್ನು ಸ್ಟೋರ್ ರೂಂಗೆ ಕರೆದೊಯ್ದು, ಅತ್ಯಾಚಾರ ಮಾಡಿ ಕುತ್ತಿಗೆಗೆ ಚಾಕುವಿನಿಂದ ಚುಚ್ಚಿ ಕೊಲೆ ಮಾಡಿದ್ದರು. ಈ ಬಗ್ಗೆ ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ನಗರ ಠಾಣೆ ಸಿಪಿಐ ರವೀಂದ್ರ ಕುರುಬಗಟ್ಟಿ ಅವರು ತನಿಖೆ ಕೈಗೊಂಡು ಇಬ್ಬರು ಬಾಲಕರನ್ನು ಬಂಧಿಸಿ ಪೋಕ್ಸೊ ಕಾಯ್ದೆಯ ಅಡಿ ನ್ಯಾಯಾಲಯಕ್ಕೆ ದೋಷಾರೋಪಣ ಪಟ್ಟಿ ಸಲ್ಲಿಸಿದ್ದರು. ಸುಮಾರು 8 ವರ್ಷಗಳ ಕಾಲ ವಿಚಾರಣೆಯ ನಂತರ ಈಗ ನ್ಯಾಯಾಲಯವು ತೀರ್ಪು ನೀಡಿದೆ.

ಜಿಎಸ್ಎಸ್ ಪ್ರಶಸ್ತಿ ಕವನ ಸಂಕಲ ಆಹ್ವಾನ

ಬೆಂಗಳೂರು: ಶೂದ್ರ ಶ್ರೀನಿವಾಸ ನೆಲದ ಮಾತು ಪ್ರತಿಷ್ಠಾನವು 'ರಾಷ್ಟ್ರಕವಿ ಡಾ.ಜಿ.ಎಸ್. ಶಿವರುದ್ರಪ್ಪ ಪ್ರಶಸ್ತಿ'ಗೆ 2023ರಲ್ಲಿ ಪ್ರಥಮ ಮುದ್ರಣವಾಗಿ ಪ್ರಕಟವಾಗಿರುವ ಕವನ ಸಂಕಲನಗಳನ್ನು ಆಹ್ವಾನಿಸಿದೆ.

ಪ್ರಶಸ್ತಿಯು ₹ 15 ಸಾವಿರ ನಗದು ಹಾಗೂ ಪ್ರಶಸ್ತಿ ಒಳಗೊಂಡಿದೆ. ಆಸಕ್ತರು ಕವನ ಸಂಕಲನದ ಎರಡು ಪ್ರತಿಗಳನ್ನು 'ಮಾನಸ ವಿದ್ಯಾಕೇಂದ್ರ', ಅಣ್ಣಯ್ಯರೆಡ್ಡಿ ಬಡಾವಣೆ, ಜೆ.ಪಿ.ನಗರ ಆರನೇ ಹಂತ, ಬೆಂಗಳೂರು–560078 ಈ ವಿಳಾಸಕ್ಕೆ ಡಿ.10ರೊಳಗೆ ಕಳಿಸಬೇಕು ಎಂದು ಪ್ರತಿಷ್ಠಾನದ ಅಧ್ಯಕ್ಷ ಎಚ್. ದಂಡಪ್ಪ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. **ಸಂಪರ್ಕಕ್ಕೆ:** 7899896744, 9481485109

ಪಕ್ಷಿಕೆರೆ: ಪತ್ನಿ, ಮಗು ಕೊಂದು ವ್ಯಕ್ತಿ ಆತ್ಮಹತ್ಯೆ

ಮೂಲ್ಕಿ: ಇಲ್ಲಿನ ಪೊಲೀಸ್ ಠಾಣೆ ವ್ಯಾಪ್ತಿಯ ಪಕ್ಷಿಕೆರೆಯ ವ್ಯಕ್ತಿರೊಬ್ಬರು ಪತ್ನಿ ಹಾಗೂ ಮಗು ಕೊಂದು ಹಳೆಯಂಗಡಿ ಬಳಿ ಚಲಿಸುತ್ತಿದ್ದ ರೈಲಿಗೆ ತಲೆಕೊಟ್ಟು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಆತ್ಮಹತ್ಯೆ ಮಾಡಿಕೊಂಡ ವ್ಯಕ್ತಿಯನ್ನು ಪಕ್ಷಿಕೆರೆ ನಿವಾಸಿ ಕಾರ್ತಿಕ್ ಭಟ್ (32) ಎಂದು ಗುರುತಿಸಲಾಗಿದೆ. ಪತ್ನಿ, ಶಿವಮೊಗ್ಗದ ಪ್ರಿಯಾಂಕಾ (28) ಮತ್ತು ಪುತ್ರ ಹೃದಯನನ್ನು (4) ಚೂರಿಯಿಂದ ಇರಿದು ಹತ್ಯೆ ಮಾಡಿ, ಬಳಿಕ ಆತನೂ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಈ ಬಗ್ಗೆ ಡೆತ್‌ನೋಟ್ ಪತ್ತೆಯಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಕಾರ್ತಿಕ್ ಭಟ್ ಅವರು ಪೋಷಕರೊಂದಿಗೆ ಪಕ್ಷಿಕೆರೆ ಮುಖ್ಯ ಜಂಕ್ಷನ್‌ನಲ್ಲಿ ಹೋಟೆಲ್ ನಡೆಸುತ್ತಿದ್ದರು. ಅಲ್ಲೇ ಸಮೀಪದಲ್ಲಿ ಫ್ಲ್ಯಾಟ್ ಒಂದರಲ್ಲಿ ವಾಸವಾಗಿದ್ದರು.

ಕೋವಿಡ್ ಅಕ್ರಮ: ತೋರಣಗಲ್‌ನಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿಕೆ

'ವರದಿ ಕೈಸೇರಿದ ಬಳಿಕ ತನಿಖೆ ನಿರ್ಧಾರ'

ಪ್ರಜಾವಾಣಿ ವಾರ್ತೆ

ಬಳ್ಳಾರಿ: 'ಕೋವಿಡ್ ಕಾಲದ ಅಕ್ರಮದ ಕುರಿತ ನ್ಯಾಯಮೂರ್ತಿ ಜಾನ್ ಮೈಕೆಲ್ ಡಿ ಕುನ್ಹಾ ಆಯೋಗದ ಮಧ್ಯಂತರ ವರದಿಯನ್ನು ಪರಿಶೀಲಿಸಿ ಸಂಪುಟ ಉಪ ಸಮಿತಿಯು ಸರ್ಕಾರಕ್ಕೆ ವರದಿ ಕೊಟ್ಟ ಬಳಿಕ ತನಿಖೆ ಕುರಿತು ತೀರ್ಮಾನಿಸಲಾಗುವುದು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ.

ಸಂಡೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ತೋರಣಗಲ್‌ನಲ್ಲಿ ಶನಿವಾರ ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ನಾನು ವಿರೋಧ ಪಕ್ಷದ ನಾಯಕನಾಗಿದ್ದಾಗಲೇ ಕೋವಿಡ್ ಅಕ್ರಮದ ಕುರಿತು ಸದನದ ಒಳಗೆ–ಹೊರಗೆ ಹೋರಾಟ ಮಾಡಿದ್ದೆ. ಸರ್ಕಾರ ಬಂದ ಬಳಿಕ ಆಯೋಗ ರಚಿಸಲಾಗಿತ್ತು' ಎಂದರು.

'ಮುಡಾ ವಿಷಯಕ್ಕೂ ಹಿಂದೆಯೇ ಹಗರಣದ ಬಗ್ಗೆ ನಾನು ಮಾತನಾಡಿದ್ದೆ. ಆಯೋಗ ರಚನೆಯನ್ನೂ ಮಾಡಿದ್ದೆ. ಇದರಲ್ಲಿ ರಾಜಕೀಯ ದುರುದ್ದೇಶವೇನೂ ಇಲ್ಲ. ಯಡಿಯೂರಪ್ಪ ಅವರ ಮೇಲೆ ಪೋಕ್ಸೊ ಪ್ರಕರಣ ಇದೆ. ಅದು ರಾಜಕೀಯ ದುರುದ್ದೇಶವೇ' ಎಂದು ಅವರು ಪ್ರಶ್ನಿಸಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ 15 ದಿನಗಳಲ್ಲಿ ರಾಜೀನಾಮೆ ನೀಡಲಿದ್ದಾರೆ ಎಂಬ ಬಿ.ಎಸ್ ಯಡಿಯೂರಪ್ಪ ಅವರ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, 'ಯಡಿಯೂರಪ್ಪ ಶಾಸ್ತ್ರ ಹೇಳುತ್ತಾರಾ? ಮುಡಾ ಹಗರಣದಲ್ಲಿ ನಾನು ತಪ್ಪು ಮಾಡಿಲ್ಲ ಎಂಬುದು ನನ್ನ ಆತ್ಮಸಾಕ್ಷಿಗೆ ಗೊತ್ತಿದೆ' ಎಂದರು.

'ಯಡಿಯೂರಪ್ಪ ₹2 ಸಾವಿರ ಕೋಟಿ ಕೊಟ್ಟು ಮುಖ್ಯಮಂತ್ರಿಯಾದರೆ, ವಿಜಯೇಂದ್ರ ಹಣ ಕೊಟ್ಟು ಬಿಜೆಪಿ ಅಧ್ಯಕ್ಷರಾದರು ಎಂದು ಬಿಜೆಪಿ ನಾಯಕ ಬಸನಗೌಡ ಪಾಟೀಲ ಯತ್ನಾಳ ಹೇಳಿದ್ದಾರೆ. ಇದರ ಬಗ್ಗೆ ಯಡಿಯೂರಪ್ಪ ಮಾತನಾಡಲಿ' ಎಂದು ಸವಾಲು ಹಾಕಿದರು.

'ಗೃಹಲಕ್ಷ್ಮಿ ಯೋಜನೆಯಲ್ಲಿ ಹೆಣ್ಣುಮಕ್ಕಳಿಗೆ ಹಣ ನೀಡಲು ಸರ್ಕಾರದ ಬಳಿ ಹಣವೇ ಇಲ್ಲ' ಎಂಬ ಜೆಡಿಎಸ್ ವರಿಷ್ಠ ಎಚ್.ಡಿ. ದೇವೇಗೌಡರ ಆರೋಪಕ್ಕೆ ಪ್ರತಿಕ್ರಿಯಿಸಿದ ಮುಖ್ಯಮಂತ್ರಿಯವರು, 'ದೇವೇಗೌಡರು ಸುಳ್ಳು ಹೇಳುತ್ತಾರೆ. ಅಕ್ಟೋಬರ್‌ವರೆಗಿನ ಗೃಹಲಕ್ಷ್ಮಿ ಹಣ ಕೊಟ್ಟಿದ್ದೇವೆ. ನವೆಂಬರ್ ತಿಂಗಳಿನದ್ದು ಕೊಡಬೇಕು. ವಿಳಂಬವಾದ ಮಾತ್ರಕ್ಕೆ ಸರ್ಕಾರದ ಬಳಿ ಹಣವಿಲ್ಲ ಎಂದಲ್ಲ. ಅದಕ್ಕೆ ಬೇರೆ ಬೇರೆ ಕಾರಣ ಇರುತ್ತವೆ' ಎಂದರು.

ನಾಗೇಂದ್ರಗೆ ಮತ್ತೆ ಸಚಿವಗಿರಿ?: ವಾಲ್ಮೀಕಿ ನಿಗಮದ ಹಗರಣದಲ್ಲಿ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿದ್ದ ನಾಗೇಂದ್ರ ಅವರನ್ನು ಮತ್ತೆ ಸಚಿವ ಸಂಪುಟಕ್ಕೆ ತೆಗೆದುಕೊಳ್ಳುವರೇ ಎಂಬ ಪ್ರಶ್ನೆಗೆ ಉತ್ತರಿಸಿದ ಅವರು, 'ಚುನಾವಣೆಗಳು ನಡೆದಿವೆ. ಚುನಾವಣೆಗಳು ಮುಗಿಯಲಿ. ಬಳಿಕ ತೀರ್ಮಾನ ತೆಗೆದುಕೊಳ್ಳುತ್ತೇವೆ' ಎಂದರು. ಇದಕ್ಕೂ ಮುನ್ನ, ವಾಲ್ಮೀಕಿ ನಿಗಮದ ವಿಷಯದಲ್ಲಿ ನಾಗೇಂದ್ರ ವಿರುದ್ಧ ಸುಳ್ಳು ಪ್ರಕರಣ ದಾಖಲಾಗಿದೆ ಎಂದರು.

'₹15 ಸಾವಿರ ಕೋಟಿ ಭ್ರಷ್ಟಾಚಾರ'

ಬೆಂಗಳೂರು: ಕೋವಿಡ್ ಸಮಯದಲ್ಲಿ ಸುಮಾರು ₹15 ಸಾವಿರ ಕೋಟಿ ಭ್ರಷ್ಟಾಚಾರ ನಡೆದಿದೆ ಎನ್ನಲಾಗಿದ್ದು, ತನಿಖಾ ಸಮಿತಿ ಆ ಎಲ್ಲ ದಾಖಲೆಗಳನ್ನು ಸಂಗ್ರಹಿಸಿರಬಹುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ.

ಕೋವಿಡ್‌ನಿಂದ ರಾಜ್ಯದಲ್ಲಿ ಮಕ್ಕಳು, ಮಹಿಳೆಯರು ಸೇರಿ 50 ಸಾವಿರಕ್ಕೂ ಹೆಚ್ಚಿನ ಜನರು ಮೃತಪಟ್ಟಿದ್ದಾರೆ. ರಾಜ್ಯ ಸರ್ಕಾರ ಅಂದು ಸಕಾಲದಲ್ಲಿ ಚಿಕಿತ್ಸೆ, ಔಷಧಿ ಮತ್ತು ಪ್ರತಿಬಂಧಕ ಕ್ರಮಗಳನ್ನು ಕೈಗೊಂಡಿದ್ದರೆ ಇಷ್ಟೊಂದು ಸಾವು ಖಂಡಿತ ಸಂಭವಿಸುತ್ತಿರಲಿಲ್ಲ. ಜನ ಕೊರೊನಾ ವೈರಸ್‌ಗಿಂತ ಹೆಚ್ಚಾಗಿ ಬಿಜೆಪಿಯ ಭ್ರಷ್ಟಾಚಾರದ ವೈರಸ್‌ನಿಂದ ಮೃತಪಟ್ಟಿರು. ಈ ಸಾವಿಗೆ ಅಂದಿನ ಬಿಜೆಪಿ ಸರ್ಕಾರವೇ ನೇರ ಹೊಣೆ ಎಂದು ದೂರಿದ್ದಾರೆ.

ಸಾವನ್ನೂ ಸಂಭ್ರಮಿಸುವ, ಹೆಣ ಬಿದ್ದಲ್ಲಿ ರಾಜಕೀಯದ ಬೇಳೆ ಬೇಯಿಸುವ ಬಿಜೆಪಿ ಮತ್ತು ಅದರ ನೇತೃತ್ವದ ಆಗಿನ ಸರ್ಕಾರ ಕೊರೊನಾ ಕಾಲದಲ್ಲಿಯೂ ಇದೇ ಕೆಲಸ ಮಾಡಿದೆ. ಜನರು ಸಾಯುತ್ತಿರುವಾಗ ಹಾಸಿಗೆ, ವೆಂಟಿಲೇಟರ್, ಔಷಧಿ, ಪಿಪಿಇ ಕಿಟ್, ವ್ಯಾಕ್ಸಿನ್, ಮಾಸ್ಕ್, ಸ್ಯಾನಿಟೈಸರ್ ಖರೀದಿಯಲ್ಲೂ ದುಡ್ಡು ಹೇಗೆ ಬಾಚಬಹುದು ಎನ್ನುವ ಲೆಕ್ಕದಲ್ಲಿ ತೊಡಗಿತ್ತು. ಇದು ಬಿಜೆಪಿ ನಾಯಕರ ಅಮಾನವೀಯ ನಡವಳಿಕೆ ಎಂದು ಟೀಕಿಸಿದ್ದಾರೆ.

'ಯಡಿಯೂರಪ್ಪನವರ ಮಗ ವಿಜಯೇಂದ್ರ ತಾನೊಬ್ಬ ಸತ್ಯ ಹರಿಶ್ಚಂದ್ರನ ಮಗನಂತೆ ಕಾಂಗ್ರೆಸ್ ವಿರುದ್ಧ ಸುಳ್ಳು ಆರೋಪ ಮಾಡುತ್ತಾ ತಿರುಗಾಡುತ್ತಿದ್ದಾರೆ. ಯಡಿಯೂರಪ್ಪ ಮುಖ್ಯಮಂತ್ರಿಯಾಗಿದ್ದ ಕಾಲದಲ್ಲಿಯೂ ಆಡಳಿತದ ಸೂತ್ರ ವಿಜಯೇಂದ್ರನ ಕೈಯಲ್ಲಿಯೇ ಇತ್ತು. ಮುಖ್ಯಮಂತ್ರಿ ಸಹಿಯನ್ನು ತಾನೇ ಹಾಕುತ್ತಿದ್ದ ಎಂದು ಅವರ ಪಕ್ಷದ ನಾಯಕರೇ ಆರೋಪ ಮಾಡಿದ್ದಾರೆ. ಕೊರೊನಾ ಭ್ರಷ್ಟಾಚಾರದಲ್ಲೂ ಅವರ ಪಾಲು ಇದೆ' ಎಂದು ಆರೋಪಿಸಿದ್ದಾರೆ.

ಬಿಎಸ್‌ವೈ, ರಾಮುಲುಗೆ ಸಂಕಷ್ಟ?

ಒಂದನೇ ಪುಟದಿಂದ...

'2020ರ ಏಪ್ರಿಲ್‌ನಲ್ಲಿ ಚೀನಾದ ಡಿಎಚ್‌ಬಿ ಗ್ಲೋಬಲ್ ಹಾಂಗ್‌ಕಾಂಗ್ ಮತ್ತು ಬಿಗ್ ಫಾರ್ಮಾಸ್ಯುಟಿಕಲ್ಸ್ ಕಂಪನಿಗಳ ಜತೆ ₹62.71 ಕೋಟಿಗೆ ಮಾಡಿಕೊಂಡ ಒಪ್ಪಂದದಲ್ಲಿ ಎಲ್ಲ ಸ್ವರೂಪದ ಸಾಗಣೆ ವೆಚ್ಚವೂ ಸೇರಿತ್ತು. ಹೀಗಿದ್ದೂ, ಈ ಎರಡೂ ಕಂಪನಿಗಳಿಗೆ ಹೆಚ್ಚುವರಿಯಾಗಿ ಒಟ್ಟು ₹14.21 ಕೋಟಿ ಸಾಗಣೆ ವೆಚ್ಚ ನೀಡಲಾಗಿದೆ. ಇವೆಲ್ಲವೂ ಮುಖ್ಯಮಂತ್ರಿ ಮತ್ತು ಆರೋಗ್ಯ ಸಚಿವರ ಕಣ್ಗಾವಲಿನಲ್ಲೇ ನಡೆದಿದೆ' ಎಂದು ವರದಿ ವಿವರಿಸಿದೆ.

'ಅಧಿಕಾರಿಗಳ ಆಕ್ಷೇಪದ ಹೊರತಾಗಿಯೂ, ಈ ಕಂಪನಿಗಳಿಗೆ ಶೇ 50ರಷ್ಟು ಮುಂಗಡ ನೀಡಲಾಗಿದೆ ಎಂದು ದಾಖಲೆಗಳ ಪರಿಶೀಲನೆ ವೇಳೆ ಗೊತ್ತಾಗಿದೆ. ಜತೆಗೆ ಎಲ್ಲ ಕಿಟ್‌ಗಳನ್ನು ಪೂರೈಸುವ ಮುನ್ನವೇ ಒಪ್ಪಂದದ ಪೂರ್ಣ ಹಣವನ್ನು ಪಾವತಿ ಮಾಡಲಾಗಿದೆ. ವಿತರಣೆ ಮಾಡಲು ವಿಳಂಬ ಮಾಡಿದ್ದಕ್ಕೆ ವಿಧಿಸಲಾಗಿದ್ದ ₹1.53 ಕೋಟಿ ದಂಡವನ್ನೂ ವಸೂಲಿ ಮಾಡಿಲ್ಲ. ಈ ಎಲ್ಲಾ ಹಂತಗಳಲ್ಲಿ ಮುಖ್ಯಮಂತ್ರಿ ಮತ್ತು ಆರೋಗ್ಯ ಸಚಿವರು, ಪೂರೈಕೆದಾರರ ಮೂಲಕ ವೈಯಕ್ತಿಕ ಲಾಭ ಪಡೆದುಕೊಂಡಿದ್ದಾರೆ' ಎಂದು ಆಯೋಗ ಆರೋಪಿಸಿದೆ.

ಕೋವಿಡ್ ಸಾಂಕ್ರಾಮಿಕವು ರಾಜ್ಯವನ್ನು ಕಾಡಿದಾಗ, ಬಿ.ಎಸ್. ಯಡಿಯೂರಪ್ಪ ನೇತೃತ್ವದ ಬಿಜೆಪಿ ಸರ್ಕಾರ ರಾಜ್ಯದಲ್ಲಿ ಅಧಿಕಾರದಲ್ಲಿತ್ತು. ಈ ಅವಧಿಯಲ್ಲಿ ಅಕ್ರಮ ನಡೆದಿದೆ ಎಂದು ವಿಧಾನಮಂಡಲದ ಸಾರ್ವಜನಿಕ ಲೆಕ್ಕಪತ್ರ ಸಮಿತಿ ವರದಿ ನೀಡಿತ್ತು. ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ಬಳಿಕ, ಕೋವಿಡ್ ಅಕ್ರಮದ ತನಿಖೆಗೆ ಆಯೋಗವನ್ನು ರಚಿಸಿತ್ತು. ಆಯೋಗವು ಕಳೆದ ಆ 31ರಂದು ಸರ್ಕಾರಕ್ಕೆ ಮಧ್ಯಂತರ ವರದಿ ಸಲ್ಲಿಸಿತ್ತು. ಸಚಿವ ಸಂಪುಟದ ಉಪಸಮಿತಿ ವರದಿಯನ್ನು ಪರಿಶೀಲಿಸುತ್ತಿದೆ.

'ಕ್ರಮ ಖಚಿತ'

'ಕೋವಿಡ್ ನಿರ್ವಹಣೆ ನೆಪದಲ್ಲಿ ಯಡಿಯೂರಪ್ಪ, ಶ್ರೀರಾಮುಲು ಅಕ್ರಮ ಎಸಗಿ, ಸರ್ಕಾರಕ್ಕೆ ನಷ್ಟ ಮಾಡಿರುವುದನ್ನು ಆಯೋಗ ಪತ್ತೆ ಮಾಡಿದೆ. ಶಿಫಾರಸಿನ ಅನ್ವಯ ಕ್ರಮಕೈಗೊಳ್ಳುತ್ತೇವೆ' ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದರು.

ಸುದ್ದಿಗಾರರ ಜತೆ ಶನಿವಾರ ಮಾತನಾಡಿದ ಅವರು, ರಾಜ್ಯದ ಜನರು ಸಂಕಷ್ಟದಲ್ಲಿದ್ದ ಸಮಯದಲ್ಲಿ ಪರಿಸ್ಥಿತಿಯ ಲಾಭ ಪಡೆದು ಸರ್ಕಾರದ ಹಣವನ್ನು ಲೂಟಿ ಮಾಡಿದ್ದಾರೆ. ಪ್ರಾಮಾಣಿಕ ನ್ಯಾಯಮೂರ್ತಿಗಳು ನೀಡಿದ ವರದಿಯಲ್ಲಿ ರಾಜಕೀಯ ಕಾರಣ ಹುಡುಕಲು ಆಗದು. ಇಂತಹ ಕೃತ್ಯ ಎಸಗಿದವರು ಆತ್ಮಾವಲೋಕನ ಮಾಡಿಕೊಳ್ಳಬೇಕು ಎಂದರು.

ಆಯೋಗ 1,500 ಪುಟಗಳ ಮಧ್ಯಂತರ ವರದಿ ನೀಡಿದೆ. ಇನ್ನು ಆರು ತಿಂಗಳಲ್ಲಿ ಅಂತಿಮ ವರದಿ ನೀಡಲಿದೆ. ಆರೋಗ್ಯ ಇಲಾಖೆಯಲ್ಲಿನ ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ವಿಚಾರಣೆಗೆ ಪ್ರತ್ಯೇಕ ತಂಡ ರಚಿಸಲಾಗುವುದು ಎಂದರು.

₹14.75 ಕೋಟಿ ಮೌಲ್ಯದ ಚಿನ್ನ ಕಳವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಜಯನಗರದ ಅರಿಹಂತ್ ಚಿನ್ನಾಭರಣ ಅಂಗಡಿ ಮಾಲೀಕ ಸುರೇಂದ್ರ ಕುಮಾರ್ ಜೈನ್ ಅವರ ಮನೆಯಲ್ಲಿದ್ದ ₹14.75 ಕೋಟಿ ಮೌಲ್ಯದ ಚಿನ್ನಾಭರಣ, ₹40.80 ಲಕ್ಷ ನಗದು ಕಳ್ಳತನವಾಗಿದ್ದು, ವಿಜಯನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಗಿರವಿ ಇಟ್ಟುಕೊಂಡಿದ್ದ 8 ಕೆ.ಜಿ 900 ಗ್ರಾಂ ಚಿನ್ನಾಭರಣ ಸೇರಿದಂತೆ ಮನೆಯಲ್ಲಿದ್ದ ಒಟ್ಟು 18 ಕೆ.ಜಿ 437 ಗ್ರಾಂ ಚಿನ್ನಾಭರಣ ಕಳ್ಳತನವಾಗಿದೆ' ಎಂದು ಮಾಲೀಕ ದೂರು ನೀಡಿದ್ದಾರೆ.

'ದೂರುದಾರರ ಮನೆಯಲ್ಲಿ ಕೆಲಸಕ್ಕಿದ್ದ ನೇಪಾಳದ ನಮ್ರಾಜ್ ಜತೆಗೆ ಇನ್ನೂ ಮೂವರು ಆರೋಪಿಗಳು ಸೇರಿಕೊಂಡು ಕೃತ್ಯ ಎಸಗಿರುವ ಶಂಕೆಯಿದೆ. ಆರೋಪಿಗಳು ಚಿನ್ನಾಭರಣ, ನಗದು ಸಹಿತ ನೇಪಾಳಕ್ಕೆ ಪರಾರಿ ಆಗಿದ್ದಾರೆ. ವಿಶೇಷ ಪೊಲೀಸ್ ತಂಡ ನೇಪಾಳಕ್ಕೆ ತೆರಳಿದೆ' ಎಂದು ಪೊಲೀಸರು ಹೇಳಿದರು.

'ಮಾಗಡಿ ರಸ್ತೆಯ ವಿದ್ಯಾರಣ್ಯನಗರ ಒಂದನೇ ಮುಖ್ಯರಸ್ತೆಯಲ್ಲಿ ಸುರೇಂದ್ರ ಕುಮಾರ್ ಜೈನ್ ಮಾಲೀಕತ್ವದ ಚಿನ್ನಾಭರಣ ಮಳಿಗೆಯಿದೆ. ಹೊಸಹಳ್ಳಿಯ ಪ್ರಿಯಾಂಕ ಟೆಂಟ್ ಹೌಸ್ ಎದುರಿನ ಲ್ಲಿರುವ ಅವರ ಮನೆಯಲ್ಲಿ ಸುರೇಂದ್ರ ಹಾಗೂ ಕುಟುಂಬಸ್ಥರು ವಾಸಿಸುತ್ತಿರುವ ಮನೆಯಲ್ಲಿ ಕಳ್ಳತನ ನಡೆದಿದೆ' ಎಂದು ಪೊಲೀಸರು ಹೇಳಿದರು.

'ನಮ್ರಾಜ್ ಎಂಬಾತ ಸೆಕ್ಯೂರಿಟಿ ಗಾರ್ಡ್ ಆಗಿ ಕೆಲಸ ಮಾಡುತ್ತಿದ್ದ. ನಮ್ರಾಜ್‌ಗೆ ಮನೆಯಿಲ್ಲದ ಕಾರಣಕ್ಕೆ ಸುರೇಂದ್ರ ಕುಮಾರ್ ಮನೆಯ ಪಾರ್ಕಿಂಗ್ ಸ್ಥಳದಲ್ಲಿದ್ದ ಕೊಠಡಿಯನ್ನು ವಾಸ್ತವ್ಯಕ್ಕೆ ನೀಡಲಾಗಿತ್ತು. ಸೆಕ್ಯೂರಿಟಿ ಕೆಲಸದ ಜತೆಗೆ ಮಹಡಿಯಲ್ಲಿದ್ದ ಆಲಂಕಾರಿಕ ಗಿಡಗಳಿಗೆ ನೀರು ಹಾಕುವ ಕೆಲಸವನ್ನೂ ಆತ ಮಾಡುತ್ತಿದ್ದ. ಮನೆಯಲ್ಲಿ ನಗದು, ಚಿನ್ನಾಭರಣ ಇಡುತ್ತಿದ್ದ ಜಾಗ ಆತನಿಗೆ ತಿಳಿದಿತ್ತು. ಆತನೇ ಕೃತ್ಯ ಎಸಗಿದ್ದಾನೆ' ಎಂದು ಮಾಲೀಕರು ನೀಡಿರುವ ದೂರು ಆಧರಿಸಿ ಎಫ್‌ಐಆರ್‌ನಲ್ಲಿ ಉಲ್ಲೇಖಿಸಲಾಗಿದೆ.

ಜಾತ್ರೆಗೆ ತೆರಳಿದ್ದ ವೇಳೆ ಕಳ್ಳತನ: 'ಸುರೇಂದ್ರ ಕುಮಾರ್ ಕುಟುಂಬ ಸಹಿತ ನವೆಂಬರ್ 1ರಂದು ಗುಜರಾತ್‌ನ ಗಿರ್ನಾರ್ ಜಾತ್ರೆಗೆ ತೆರಳಿದ್ದರು. ಅದೇ ಸಮಯ ನೋಡಿಕೊಂಡು ಆರೋಪಿ ಕೃತ್ಯ ಎಸಗಿದ್ದಾನೆ' ಎಂದು ಮೂಲಗಳು ತಿಳಿಸಿವೆ.

ಸುರೇಂದ್ರ ಕುಮಾರ್ ಮನೆಯವರಿಗೆ ಸೇರಿದ್ದ 2 ಕೆ.ಜಿ 835 ಗ್ರಾಂ ಚಿನ್ನಾಭರಣ, ಅವರ ಸಹೋದರಿಯರ 2 ಕೆ.ಜಿ 790 ಗ್ರಾಂ ಚಿನ್ನಾಭರಣ, 700 ಗ್ರಾಂ ಚಿನ್ನದ ಬಿಸ್ಕೆಟ್, 212 ಗ್ರಾಂ ವಜ್ರಾಭರಣ, ಅಂಗಡಿಯಿಂದ ಮನೆಗೆ ತಂದು ಇಡಲಾಗಿದ್ದ 3 ಕೆ.ಜಿ ಚಿನ್ನ ಹಾಗೂ ಗ್ರಾಹಕರಿಂದ ಗಿರವಿ ಇಟ್ಟುಕೊಂಡಿದ್ದ 8 ಕೆ.ಜಿ 900 ಗ್ರಾಂ ಚಿನ್ನಾಭರಣ ಕಳ್ಳತನ ಮಾಡಲಾಗಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ. 'ಒಟ್ಟು ₹15.15 ಕೋಟಿ ಮೊತ್ತದ ಚಿನ್ನ, ನಗದು ಕಳ್ಳತನವಾಗಿದೆ' ಎಂದು ದೂರುದಾರರು ತಿಳಿಸಿದ್ದಾರೆ.

ಕಾರು, ಟಿಪ್ಪರ್ ಡಿಕ್ಕಿ ಮೂವರು ಸಾವು

ಕನಕಪುರ (ರಾಮನಗರ): ಸಂಗಮ ರಸ್ತೆಯ ಹುಲಿಬೆಲೆ ಮತ್ತು ಕರಿಯಣ್ಣನದೊಡ್ಡಿ ನಡುವಿನ ಹುಲಿಬೆಲೆ ಬೋರೆಯಲ್ಲಿ ಶನಿವಾರ ಸಂಜೆ ಕಾರು ಮತ್ತು ಟಿಪ್ಪರ್ ನಡುವೆ ಡಿಕ್ಕಿ ಸಂಭವಿಸಿ, ಕಾರಿನಲ್ಲಿದ್ದ ಮೂವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಮೃತರನ್ನು ಬೆಂಗಳೂರು ನಗರದ ಬನಶಂಕರಿ ನಿವಾಸಿಗಳಾದ ರಾಮಚಂದ್ರ, ಮಂಜುನಾಥ್ ಮತ್ತು ಸತೀಶ್ ಎಂದು ಗುರುತಿಸಲಾಗಿದೆ. ಮೂವರು ಸುಮಾರು 30 ರಿಂದ 35 ವರ್ಷದವರಾಗಿದ್ದು, ರಿಯಲ್ ಎಸ್ಟೇಟ್ ಡಾಕುಮೆಂಟ್ಸ್ ಸಂಗ್ರಹ ವೃತ್ತಿಯಲ್ಲಿದ್ದರು ಎಂದು ತಿಳಿದು ಬಂದಿದೆ.

ತಾಲ್ಲೂಕಿನ ಪ್ರಸಿದ್ಧ ಪ್ರವಾಸಿ ತಾಣ ಸಂಗಮಕ್ಕೆ ಕಾರಿನಲ್ಲಿ (ಕೆಎ–50 ಎಂ–5767) ತೆರಳಿದ್ದ ಮೂವರೂ ಸಂಜೆ ಬೆಂಗಳೂರಿಗೆ ಮರಳುತ್ತಿದ್ದಾಗ ಹುಲಿಬೆಲೆ ಬೋರೆಯಲ್ಲಿ ಟಿಪ್ಪರ್‌ಗೆ ಡಿಕ್ಕಿ ಹೊಡೆದಿದೆ.

ಅಪಘಾತ: ದಂಪತಿ ಸೇರಿ ನಾಲ್ವರ ಸಾವು

ಪ್ರಜಾವಾಣಿ ವಾರ್ತೆ

ಕಮಲಾಪುರ (ಕಲಬುರಗಿ ಜಿಲ್ಲೆ): ತಾಲ್ಲೂಕಿನ ಮರಗುತ್ತಿ ಕ್ರಾಸ್ ಸಮೀಪದ ರಸ್ತೆಯಲ್ಲಿ ಶನಿವಾರ ಸರಕು ಸಾಗಣೆ ವಾಹನ ಹಾಗೂ ಕಾರು ನಡುವೆ ಡಿಕ್ಕಿ ಸಂಭವಿಸಿ ತೆಲಂಗಾಣದ ದಂಪತಿ ಮತ್ತು ಪುತ್ರ ಸೇರಿ ನಾಲ್ವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ.



ಶ್ರೀನಿವಾಸ ಭಾರ್ಗವಕೃಷ್ಣ

ಸಂಗೀತಾ ಲಕ್ಷ್ಮಿ

ರಾಘವೇಂದ್ರ ಗೌಡ

ತೆಲಂಗಾಣದ ರಂಗಾರೆಡ್ಡಿ ಜಿಲ್ಲೆಯ ನಾಗೂತಿ ಹಯಾತ್ ನಗರ ನಿವಾಸಿ, ಬಿಡಿಎಲ್ ಕಂಪನಿಯ ಮುಖ್ಯ ಮೆಕಾನಿಕಲ್ ಶ್ರೀನಿವಾಸ ಭಾರ್ಗವ ಕೃಷ್ಣ ರಾಘವಾಚಾರ್ಯ (58), ಅವರ ಪತ್ನಿ ಸಂಗೀತಾ ಲಕ್ಷ್ಮಿ (51), ಮೀರಜಪೇಟೆಯ ಬಿಡಿಎಲ್ ಕಂಪನಿ ಕಾರ್ಮಿಕ ಭಾನುಪ್ರಸಾದ ಬಾಲರಾಜ ಪೂಜಾರಿ (24) ಹಾಗೂ ವನಪರ್ತಿ ಜಿಲ್ಲೆಯ ಧಾಡಪರ್ತಿ ನಿವಾಸಿ, ತೆಲಂಗಾಣ ಸಾರಿಗೆ ಇಲಾಖೆಯಲ್ಲಿ ಚಾಲಕನಾಗಿದ್ದ ರಾಘವೇಂದ್ರಗೌಡ ವೆಂಕಟಗೌಡ (48) ಮೃತರು.

ಈ ನಾಲ್ವರು ಹೈದರಾಬಾದ್‌ನಿಂದ ಅಫಜಲಪುರ ತಾಲ್ಲೂಕಿನ ದೇವಲ ಗಾಣಗಾಪುರದ ದತ್ತ ಮಹಾರಾಜರ ದರ್ಶನಕ್ಕೆ ತೆರಳುತ್ತಿದ್ದರು. ಮರಗುತ್ತಿ ಸಮೀಪ ಎದುರಿನಿಂದ ಬಂದ ಸರಕು ವಾಹನ ರಾಘವೇಂದ್ರಗೌಡ ಚಲಾಯಿಸುತ್ತಿದ್ದ ಕಾರಿಗೆ ಡಿಕ್ಕಿ ಹೊಡೆದಿದೆ.

ಹಾವೇರಿಯ ಹರನಗಿರಿ ರೈತನ ಸಾವು ಪ್ರಕರಣ; ಮೃತನ ತಂದೆಯ ಆರೋಪ

'ವಕ್ಫ್ ಆಸ್ತಿ ವಿಷಯಕ್ಕೆ ಮಗ ಆತ್ಮಹತ್ಯೆ'

ಪ್ರಜಾವಾಣಿ ವಾರ್ತೆ

ಹಾವೇರಿ: ಜಿಲ್ಲೆಯ ಹಾನಗಲ್ ತಾಲ್ಲೂಕಿನ ಹರನಗಿರಿ ಗ್ರಾಮದ ರೈತ ರುದ್ರಪ್ಪ ಬಾಳಿಕಾಯಿ (24) ಆತ್ಮಹತ್ಯೆ ಪ್ರಕರಣ ಹೊಸ ತಿರುವು ಪಡೆದಿದೆ. 'ನಮ್ಮ ಜಮೀನು, ವಕ್ಫ್ ಆಸ್ತಿ ಆಯಿತು ಎಂಬ ಕಾರಣಕ್ಕೆ ಮಗ ರುದ್ರಪ್ಪ ಆತ್ಮಹತ್ಯೆ ಮಾಡಿಕೊಂಡ' ಎಂದು ರುದ್ರಪ್ಪ ತಂದೆ ಚನ್ನಪ್ಪ ಬಾಳಿಕಾಯಿ ಆರೋಪಿಸಿದ್ದಾರೆ.

'ಅಲ್ಲಾಪುರ ಗ್ರಾಮದಲ್ಲಿದ್ದ ಮೊಹಮ್ಮದ್ ಯೂಸೂಫ್ ಎಂಬುವರಿಗೆ ಸೇರಿದ್ದ 4 ಎಕರೆ 36 ಗುಂಟೆ ಜಮೀನನ್ನು ನಮ್ಮ ತಂದೆ 1964ರಲ್ಲಿ ಖರೀದಿಸಿದ್ದರು. ಎಲ್ಲ ದಾಖಲೆಗಳು ತಂದೆ ಹೆಸರಿಗೆ ವರ್ಗಾವಣೆಯಾಗಿದ್ದವು. ಅವರ ನಂತರ, ನನ್ನ ಹೆಸರಿಗೆ ಜಮೀನು ಬಂದಿತ್ತು. 2015ರಲ್ಲಿ ಪೊಲೀಸರ ಸಮೇತ ಬಂದ ಉಪವಿಭಾಗಾಧಿಕಾರಿ ಹಾಗೂ ಇತರರು ಜಮೀನು ಸುಪರ್ದಿಗೆ ಪಡೆದು, 'ವಕ್ಫ್ ಆಸ್ತಿ ಮೊಕಾಶಿ ಟ್ರಸ್ಟ್'ಗೆ ನೀಡಿದ್ದಾರೆ' ಎಂದು ಅವರು ಶನಿವಾರ ಸುದ್ದಿಗಾರರಿಗೆ ತಿಳಿಸಿದರು.

'ಜಮೀನು ತೆರವಿಗೆ ನಮ್ಮ ಒಪ್ಪಿಗೆ ಇರಲಿಲ್ಲ. ಪಂಚನಾಮೆಯಲ್ಲಿ ಮಗನ ನಕಲಿ ಸಹಿ ಮಾಡಲಾಗಿದೆ. ನಮ್ಮ ಪರ ಧ್ವನಿ ಎತ್ತಿದ್ದಕ್ಕೆ ತೇಜಸ್ವಿ ಸೂರ್ಯ ವಿರುದ್ಧ ಎಫ್‌ಐಆರ್ ದಾಖಲಿಸಿದ್ದು ಸರಿಯಲ್ಲ' ಎಂದರು.

'₹7 ಲಕ್ಷ ಸಾಲ ತೀರಿಸಲಾಗದೇ ಮಗ ಆತ್ಮಹತ್ಯೆ ಮಾಡಿಕೊಂಡನೆಂದು ಪೊಲೀಸರೇ ಸಿದ್ಧಪಡಿಸಿದ ದೂರಿಗೆ ನಾನು ಪೊಲೀಸರ ಒತ್ತಾಯದಿಂದ ಸಹಿ ಮಾಡಿದೆ. ಸರ್ಕಾರದಿಂದ ₹ 5 ಲಕ್ಷ ಪರಿಹಾರ ಬಂತು. ಆದರೆ, ನಂತರ ವಕ್ಫ್‌ಗೆ ಸಂಬಂಧಿಸಿದಂತೆ ದೂರು ಕೊಡಲು ಆಗಲಿಲ್ಲ' ಎಂದರು.

ಹಾವೇರಿ ಜಿಲ್ಲೆಯ ಹಾನಗಲ್ ತಾಲ್ಲೂಕಿನ ಹರನಗಿರಿ ಗ್ರಾಮದಲ್ಲಿರುವ ರೈತ ರುದ್ರಪ್ಪ ಬಾಳಿಕಾಯಿ ಮನೆಗೆ ಶನಿವಾರ ಭೇಟಿ ನೀಡಿದ ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ದಾಖಲೆಗಳ ಪರಿಶೀಲನೆ ನಡೆಸಿದರು

> **ಬೆಂಗಳೂರಿನ 175 ಎಕರೆಯಲ್ಲಿರುವ ಮೆಜೆಸ್ಟಿಕ್ ಬಸ್ ನಿಲ್ದಾಣ ಸಹ ವಕ್ಫ್ ಆಸ್ತಿ ಎಂದು ವಕ್ಫ್ ಹೇಳುತ್ತಿದೆ. ವಿಧಾನಸೌಧ ವಕ್ಫ್ ಆಸ್ತಿಯಾದರೂ ಆಶ್ಚರ್ಯವಿಲ್ಲ**
> **ಪ್ರಲ್ಹಾದ ಜೋಶಿ,** ಕೇಂದ್ರ ಸಚಿವ

> **ವಕ್ಫ್ ಆಸ್ತಿ ರಕ್ಷಿಸುವುದಾಗಿ ಬಿಜೆಪಿಯವರೇ ತಮ್ಮ ಪ್ರಣಾಳಿಕೆಯಲ್ಲಿ ಹೇಳಿದ್ದಾರೆ. ಸದ್ಯ ನೋಟಿಸ್ ಹಿಂಪಡೆಯಲು, ರೈತರನ್ನು ಒಕ್ಕಲೆಬ್ಬಿಸದಂತೆ ಸೂಚಿಸಲಾಗಿದೆ**
> **ಸಿದ್ದರಾಮಯ್ಯ,** ಮುಖ್ಯಮಂತ್ರಿ

'ರೈತರ ಕಾನೂನು ಹೋರಾಟಕ್ಕೆ ಬೆಂಬಲ'

'ವಕ್ಫ್ ಆಸ್ತಿ ವಿಷಯಕ್ಕೆ ಮಗ ರುದ್ರಪ್ಪ ಆತ್ಮಹತ್ಯೆ ಮಾಡಿಕೊಂಡಿರುವುದಾಗಿ ತಂದೆ ಹೇಳಿದ್ದು, ದಾಖಲೆಗಳನ್ನು ಪಡೆದಿದ್ದೇವೆ. ವಕ್ಫ್ ಆಸ್ತಿಯೆಂದು ರಾಜ್ಯದಲ್ಲಿ 9 ಲಕ್ಷ ಎಕರೆ ಕಬಳಿಸುವ ಹುನ್ನಾರ ನಡೆದಿದೆ. ರೈತರ ಕಾನೂನು ಹೋರಾಟ ನಮ್ಮ ಬೆಂಬಲವಿದ್ದು, ಎಲ್ಲ ವೆಚ್ಚವನ್ನು ನಾವೇ ಭರಿಸುತ್ತೇವೆ' ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಹೇಳಿದರು.

ಬಿಜೆಪಿ ನಿಯೋಗದ ನೇತೃತ್ವ ವಹಿಸಿಕೊಂಡು ಶನಿವಾರ ರುದ್ರಪ್ಪ ಮನೆಗೆ ಭೇಟಿ ನೀಡಿದ ಬಳಿಕ ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ವಕ್ಫ್ ಆಸ್ತಿ ವಿಷಯದಲ್ಲಿ ಸುಪ್ರೀಂಕೋರ್ಟ್ ಆದೇಶಿಸಿದೆ. ಇದನ್ನು ಉಲ್ಲಂಘಿಸಿ, ನೋಟಿಸ್ ನೀಡದೇ ಜಮೀನು ವಕ್ಫ್ ಆಸ್ತಿ ಮಾಡಲಾಗಿದೆ' ಎಂದರು.

ನ್ಯಾಯಮೂರ್ತಿ ಬಿ.ಪದ್ಮರಾಜ ನಿಧನ

ಬೆಂಗಳೂರು: ಕರ್ನಾಟಕ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಬಿ.ಪದ್ಮರಾಜ (80) ಶುಕ್ರವಾರ ನಗರದ ಮಹಾವೀರ ಜೈನ್ ಆಸ್ಪತ್ರೆಯಲ್ಲಿ ನಿಧನರಾದರು.

ಅವರಿಗೆ ಪತ್ನಿ, ಪುತ್ರ ಮತ್ತು ಪುತ್ರಿ ಇದ್ದಾರೆ. 'ಅಂತ್ಯಕ್ರಿಯೆ ಶುಕ್ರವಾರ ಹೆಬ್ಬಾಳ ಚಿತಾಗಾರದಲ್ಲಿ ನೆರವೇರಿತು' ಎಂದು ಅವರ ಪುತ್ರ ಮೋಹನ ಪದ್ಮರಾಜ ತಿಳಿಸಿದ್ದಾರೆ.

ಚಿತ್ರದುರ್ಗದ ಪದ್ಮರಾಜ ಅವರು ಅಲ್ಲಿಯೇ ಶಿಕ್ಷಣ ಪಡೆದಿದ್ದರು. ಅಲ್ಲಿನ ಸರಸ್ವತಿ ಕಾನೂನು ಕಾಲೇಜಿನಲ್ಲಿ ಕಾನೂನು ಪದವಿ ಪಡೆದಿದ್ದರು.

1969ರಲ್ಲಿ ವಕೀಲರಾಗಿ ಸನ್ನದು ಸಂಪಾದಿಸಿದ್ದ ಅವರು, ಬಾಲ ಸುಬ್ರಹ್ಮಣ್ಯಂ ಅವರ ಬಳಿ ಕಿರಿಯ ವಕೀಲರಾಗಿ ವೃತ್ತಿ ಆರಂಭಿಸಿ 1983ರವರೆಗೆ ವಕೀಲಿಕೆ ನಡೆಸಿದ್ದರು.

1983ರಲ್ಲಿ ಜಿಲ್ಲಾ ನ್ಯಾಯಾಧೀಶರಾದ ಅವರು ಕಲಬುರಗಿ, ಬೆಂಗಳೂರು, ಕೋಲಾರ, ಧಾರವಾಡ, ಮಂಗಳೂರಿನಲ್ಲಿ ಜಿಲ್ಲಾ ಪ್ರಧಾನ ನ್ಯಾಯಾಧೀಶರಾಗಿ ಕಾರ್ಯ ನಿರ್ವಹಿಸಿದರು. ನಂತರ 1994ರಿಂದ 2006ರವರೆಗೆ ಹೈಕೋರ್ಟ್ ನ್ಯಾಯಮೂರ್ತಿ ಆಗಿದ್ದರು.

ನಿವೃತ್ತಿಯ ನಂತರ 2007ರಿಂದ 2009ರವರೆಗೆ ರೈಲ್ವೆ ಕ್ಲೇಮು ನ್ಯಾಯಮಂಡಳಿ ಅಧ್ಯಕ್ಷರಾಗಿ ದೆಹಲಿಯಲ್ಲಿದ್ದರು. ನಂತರ ಶಿಕ್ಷಣ ಇಲಾಖೆಯ ಶುಲ್ಕ ನಿಯಂತ್ರಣ ಸಮಿತಿ ಅಧ್ಯಕ್ಷರಾಗಿದ್ದರು.

ಕೆಎಂಎಫ್: ಅಕ್ಟೋಬರ್ ತಿಂಗಳ ಮಾರಾಟದಲ್ಲಿ ಹೊಸ ದಾಖಲೆ

722 ಟನ್ ಸಿಹಿ ಉತ್ಪನ್ನ ಮಾರಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾರಾಟದಲ್ಲಿ ಹೊಸ ಪ್ರಯತ್ನ, ಸಿಬ್ಬಂದಿ ಪರಿಶ್ರಮ, ದಸರಾ, ದೀಪಾವಳಿ ಹಬ್ಬಗಳ ಪರಿಣಾಮವಾಗಿ ಅಕ್ಟೋಬರ್ ತಿಂಗಳೊಂದರಲ್ಲೇ ಕರ್ನಾಟಕ ಹಾಲು ಒಕ್ಕೂಟದ (ಕೆಎಂಎಫ್) ನಂದಿನಿ ಬ್ರ್ಯಾಂಡ್‌ನ ಸಿಹಿ ಉತ್ಪನ್ನಗಳು ದಾಖಲೆ ಪ್ರಮಾಣದಲ್ಲಿ ಮಾರಾಟವಾಗಿವೆ.

ಈ ವರ್ಷಾರಂಭದಲ್ಲಿ ಯುಗಾದಿ ಮತ್ತು ರಂಜಾನ್ ಹಬ್ಬದ ಸಮಯದಲ್ಲಿ, ಕೆಎಂಎಫ್ 16.5 ಲಕ್ಷ ಲೀಟರ್ ಮೊಸರು ಮತ್ತು 51 ಲಕ್ಷ ಲೀಟರ್ ಹಾಲನ್ನು ಮಾರಾಟ ಮಾಡಿ ದಾಖಲೆ ನಿರ್ಮಿಸಿತ್ತು. ಈಗ ದಸರಾ–ದೀಪಾವಳಿ ಸಮಯದಲ್ಲಿ ಸಿಹಿ ಉತ್ಪನ್ನಗಳೂ ದಾಖಲೆ ಪ್ರಮಾಣದಲ್ಲಿ ಮಾರಾಟವಾಗಿವೆ.

'ಅಕ್ಟೋಬರ್ ತಿಂಗಳಲ್ಲಿ 722 ಟನ್‌ನಷ್ಟು ನಂದಿನಿ ಸಿಹಿ ತಿನಿಸುಗಳು ಮಾರಾಟವಾಗಿವೆ. ಇದು ಕೆಎಂಎಫ್‌ನ ಐತಿಹಾಸಿಕ ದಾಖಲೆಯಾಗಿದೆ' ಎಂದು ಕೆಎಂಎಫ್ ವ್ಯವಸ್ಥಾಪಕ ನಿರ್ದೇಶಕ ಎಂ.ಕೆ.ಜಗದೀಶ್ 'ಪ್ರಜಾವಾಣಿ'ಗೆ ತಿಳಿಸಿದರು. ಕಳೆದ ವರ್ಷ ಇದೇ ದಸರಾ–ದೀಪಾವಳಿ ಹಬ್ಬದ ಸಮಯದಲ್ಲೂ 400 ಟನ್‌ನಷ್ಟು ಸಿಹಿ ಉತ್ಪನ್ನಗಳು ಮಾರಾಟವಾಗಿದ್ದವು. ಈ ವರ್ಷ ಅದು ದುಪ್ಪಟ್ಟಾಗಿದೆ.

'ಈ ವರ್ಷ ನಮ್ಮ ಸಿಬ್ಬಂದಿ ನಾಲ್ಕೈದು ತಿಂಗಳಿಗೂ ಮುನ್ನವೇ ದೊಡ್ಡ ದೊಡ್ಡ ಕೈಗಾರಿಕೆಗಳು ಮತ್ತು ಕಂಪನಿಗಳನ್ನು ಸಂಪರ್ಕಿಸಿ ನಂದಿನಿ ಸಿಹಿ ಉತ್ಪನ್ನಗಳನ್ನು ಖರೀದಿಸುವಂತೆ ಪ್ರಸ್ತಾವನೆ ಸಲ್ಲಿಸಿದ್ದರು. ಕಂಪನಿಗಳು ನಮ್ಮ ಪ್ರಸ್ತಾವನೆ ಒಪ್ಪಿ, ದೊಡ್ಡ ಪ್ರಮಾಣದಲ್ಲಿ ಬೇಡಿಕೆ ಸಲ್ಲಿಸಿದ್ದವು. ಕಂಪನಿಯವರ ಬೇಡಿಕೆಗೆ ಅನುಸಾರ ಉತ್ಪನ್ನಗಳನ್ನು ಪೂರೈಸಿದೆವು. ಕಂಪನಿಯೊಂದು 35 ಟನ್ ಮೈಸೂರ್ ಪಾಕ್ ಖರೀದಿಸಿತು' ಎಂದು ಜಗದೀಶ್ ವಿವರಿಸಿದರು.

ನಂದಿನಿ ಉತ್ಪನ್ನಗಳು

ಮುಖ್ಯಾಂಶಗಳು

- ತಿಂಗಳಲ್ಲಿ ₹175 ಕೋಟಿ ವಹಿವಾಟು
- ನಾಲ್ಕು ತಿಂಗಳಿನ ಪ್ರಯತ್ನದ ಫಲ
- ಬೇಡಿಕೆಗಳಿಗೆ ತಕ್ಕಂತೆ ಪೂರೈಕೆ

'ಸಾಮಾನ್ಯವಾಗಿ, ಉತ್ಪನ್ನಗಳನ್ನು ಪ್ರತ್ಯೇಕ ಪ್ಯಾಕೆಟ್ ಮಾಡಿ ಮಾರಾಟ ಮಾಡುತ್ತಿದ್ದೆವು. ಕಂಪನಿಗಳ ಬೇಡಿಕೆ ಹಾಗೂ ಹೊಸ ಪ್ರಯತ್ನವಾಗಿ ಇದೇ ಮೊದಲ ಬಾರಿಗೆ ನಂದಿನಿಯ ಎಲ್ಲ ಸಿಹಿ ಉತ್ಪನ್ನಗಳನ್ನು ಮಿಶ್ರಮಾಡಿ ಪ್ಯಾಕೆಟ್ ಮಾಡಿದ್ದೆವು. ಅದು ಯಶಸ್ವಿಯೂ ಆಯಿತು' ಎಂದು ಅವರು ತಿಳಿಸಿದರು.

'ಹಬ್ಬದ ವೇಳೆಯಲ್ಲಿ ಕಂಪನಿಗಳು ತಮ್ಮ ಉದ್ಯೋಗಿಗಳಿಗೆ, ಗ್ರಾಹಕರಿಗೆ ನಂದಿನಿ ಸಿಹಿ ಉತ್ಪನ್ನಗಳನ್ನೇ ಉಡುಗೊರೆಯಾಗಿ ನೀಡಿದ್ದಾರೆ. ಇದರಲ್ಲಿ ಬಹಳಷ್ಟು ಮಂದಿ ಮಿಶ್ರ ಸಿಹಿ ತಿನಿಸುಗಳ ಪೊಟ್ಟಣವನ್ನೇ ಆಯ್ಕೆ ಮಾಡಿಕೊಂಡಿದ್ದಾರೆ' ಎಂದು ಕೆಎಂಎಫ್‌ನ ಹಿರಿಯ ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

ಸದ್ಯ ನಂದಿನಿ ಬ್ರ್ಯಾಂಡ್‌ನಲ್ಲಿ 30 ವಿಧದ ಸಿಹಿ ಉತ್ಪನ್ನಗಳನ್ನು ಮಾರಾಟ ಮಾಡಲಾಗುತ್ತಿದೆ. ಇವುಗಳಲ್ಲಿ ಮೈಸೂರ್ ಪಾಕ್ ಅತಿ ಹೆಚ್ಚು ಬೇಡಿಕೆಯ ಉತ್ಪನ್ನ. ಇದರ ಜೊತೆಗೆ, ಪೇಡಾ, ಬರ್ಫಿ ಮತ್ತು ಲಾಡುಗಳು ಕೂಡ ಬಹಳ ಜನಪ್ರಿಯವಾಗಿವೆ. ಈ ಬಾರಿಯ ದೀಪಾವಳಿಯಲ್ಲಿ ಮೈಸೂರ್ ಪಾಕ್ ಹಾಗೂ ಪೇಡಾ ಹೆಚ್ಚಿನ ಪ್ರಮಾಣದಲ್ಲಿ ಮಾರಾಟವಾಗಿದೆ ಎಂದು ಅವರು ಹೇಳಿದರು. ಅಕ್ಟೋಬರ್ ತಿಂಗಳಲ್ಲಿ ಒಟ್ಟು ಉತ್ಪನ್ನಗಳ ವಹಿವಾಟು ₹175 ಕೋಟಿಯಷ್ಟಾಗಿದೆ. ಕಳೆದ ವರ್ಷ ಆಗಸ್ಟ್ ತಿಂಗಳಲ್ಲಿ ₹151 ಕೋಟಿ ವಹಿವಾಟು ನಡೆಸಿತ್ತು. ಹಾಗಾಗಿ ಇದೊಂದು ಐತಿಹಾಸಿಕ ದಾಖಲೆಯ ವಹಿವಾಟು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ದೋಸೆ, ಇಡ್ಲಿ ಹಿಟ್ಟು ಶೀಘ್ರ ಬಿಡುಗಡೆ

ನಂದಿನಿ ಬ್ರ್ಯಾಂಡ್‌ನ ರೆಡಿ ಟು ಕುಕ್ ದೋಸೆ ಮತ್ತು ಇಡ್ಲಿ ಹಿಟ್ಟು ಸಿದ್ಧವಾಗಿದ್ದು, ಶೀಘ್ರದಲ್ಲೇ ಮಾರುಕಟ್ಟೆಗೆ ಬಿಡುಗಡೆ ಮಾಡಲಾಗುತ್ತದೆ. ಅದೇ ರೀತಿ, ಕೆಎಂಎಫ್ ರಾಗಿ ಅಂಬಲಿ ಮತ್ತು ಪ್ರೊಬಯಾಟಿಕ್ ಮೊಸರನ್ನು ಈ ವರ್ಷದ ಆರಂಭದಲ್ಲಿ ಪ್ರಾಯೋಗಿಕವಾಗಿ ಮಾರುಕಟ್ಟೆಗೆ ಬಿಡುಗಡೆ ಮಾಡಿತ್ತು. ಸದ್ಯ ಈ ಎರಡು ಉತ್ಪನ್ನಗಳನ್ನು ಮೈಸೂರಿನಲ್ಲಿ ಮಾರಾಟ ಮಾಡಲಾಗುತ್ತಿದೆ. ಮುಂದಿನ ವರ್ಷ ಬೆಂಗಳೂರಿನಲ್ಲಿಯೂ ಈ ಉತ್ಪನ್ನಗಳನ್ನು ಬಿಡುಗಡೆಗೆ ಚಿಂತನೆ ನಡೆಸಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ದಾಂಪತ್ಯ ಸಾಂಗತ್ಯಗಳ ಸುತ್ತ

• ರಶ್ಮಿ ಎಸ್, ಬಿ.ಎಸ್. ಷಣ್ಮುಖಪ್ಪ

'ಪತಿ ಮತ್ತು ಪತ್ನಿಯ ಬದಲಿಗೆ ಇನ್ನು ಮುಂದೆ ಸಂಗಾತಿ ಎಂಬ ಪದವನ್ನು ಬಳಸಬೇಕು' ಎಂದು ಸುಪ್ರೀಂ ಕೋರ್ಟ್ ಇತ್ತೀಚೆಗೆ ನೀಡಿರುವ ತೀರ್ಪು ಎಲ್‌ಜಿಬಿಟಿಕ್ವೀರ್ ಸಮುದಾಯಕ್ಕೆ ಐತಿಹಾಸಿಕ ಮೈಲಿಗಲ್ಲಾಗಿದೆ. ಈ ತೀರ್ಪಿನ ಪರಿಣಾಮದಿಂದಾಗಿ ಈಗಾಗಲೇ ಒಟ್ಟಿಗೆ ಬದುಕುತ್ತಿರುವ ಸಲಿಂಗಿಗಳು ತಮ್ಮ ಸಂಗಾತಿಯನ್ನು 'ನಾಮಿನಿ'ಗಳಾಗಿ ಮಾಡಬಹುದಾಗಿದೆ. ಆರೋಗ್ಯ ಕ್ಷೇತ್ರದ ವಿಮಾ ಸೌಲಭ್ಯಗಳನ್ನು ಪಡೆಯಬಹುದಾಗಿದೆ. ಈ ಕಾರಣದಿಂದಾಗಿ ನವದೆಹಲಿಯಲ್ಲಿ ಎಲ್‌ಜಿಬಿಟಿಕ್ವೀರ್+ ಸಮುದಾಯ ತನ್ನ ಸಂಭ್ರಮವನ್ನು ಹಂಚಿಕೊಂಡಿದೆ.

ಮದುವೆ ಎನ್ನುವ ವ್ಯವಸ್ಥೆಯಲ್ಲಿ ಕಾನೂನಾತ್ಮಕವಾಗಿ ಪತಿ ಮತ್ತು ಪತ್ನಿಯರಿಗೆ ಕೆಲವು ಹಕ್ಕುಗಳೂ, ಕೆಲವು ಕರ್ತವ್ಯಗಳನ್ನೂ ಸೂಚಿಸಲಾಗಿದೆ. ಭಾರತೀಯ ಪಾರಂಪರಿಕ ವ್ಯವಸ್ಥೆಯಂತೆ, ಬದಲಾಗುತ್ತಿರುವ ಸಾಮಾಜಿಕ ಚಿತ್ರಣಗಳಲ್ಲಿ 'ಜೀವನ ಸಂಗಾತಿ' ಎಂಬ ಪದವು ಹಲವಾರು ಸುಧಾರಣೆಗಳನ್ನು ತರುತ್ತದೆ. ಈ ಕಾರಣಕ್ಕಾಗಿಯೇ ಪರಿಣತರ, ತಜ್ಞರ ಉನ್ನತ ಸಮಿತಿಯೊಂದನ್ನು ರಚಿಸಲು ಸುಪ್ರೀಂ ಕೋರ್ಟ್ ಕೇಂದ್ರ ಸರ್ಕಾರಕ್ಕೆ ನಿರ್ದೇಶಿಸಿದೆ. ಜೊತೆಗೆ ವಿಶೇಷ ವಿವಾಹ ಕಾಯ್ದೆ–1954ಕ್ಕೆ ಅಗತ್ಯವಾದ ಬದಲಾವಣೆಗಳನ್ನು ತರುವಲ್ಲಿ ಶಿಫಾರಸು ಮಾಡುವಂತೆ ತಿಳಿಸಿದೆ.

ಸಲಿಂಗಿಗಳು ಒಟ್ಟಿಗೆ ಬದುಕುವಾಗ ಅನೇಕ ಅನಾನುಕೂಲಗಳನ್ನು ಎದುರಿಸಬೇಕಾಗಿದೆ. ಗಂಡು–ಹೆಣ್ಣಿನ ವೈವಾಹಿಕ ಬಂಧನದಲ್ಲಿರುವವರಿಗೆ ಸಿಗುವ ಯಾವ ಸೌಲಭ್ಯಗಳೂ ಈ ಜೋಡಿಗಳಿಗೆ ಸಿಗುತ್ತಿರಲಿಲ್ಲ. ಯಾವುದೇ ರೀತಿಯ ವಿಮೆಯ ಸೌಲಭ್ಯಗಳೂ ದಕ್ಕುತ್ತಿರಲಿಲ್ಲ.

'ಭಾರತವು ಸಲಿಂಗ ವಿವಾಹ, ನಾಗರಿಕ ಒಕ್ಕೂಟಗಳು ಅಥವಾ ಇತರ ರೀತಿಯ ಪಾಲುದಾರಿಕೆಗಳನ್ನು ಗುರುತಿಸುವುದಿಲ್ಲ.

1980ರ ದಶಕದ ಉತ್ತರಾರ್ಧದಿಂದ ಹಲವಾರು ಸಲಿಂಗ ದಂಪತಿಗಳು ಸಾಂಪ್ರದಾಯಿಕ ಹಿಂದೂ ಸಮಾರಂಭಗಳಲ್ಲಿ ವಿವಾಹವಾದರು; ಆದರೆ, ಈ ವಿವಾಹಗಳನ್ನು ನೋಂದಾಯಿಸಲಾಗಿಲ್ಲ. ಸುಪ್ರೀಂ ಕೋರ್ಟ್ ಆಗಸ್ಟ್ 2022ರಲ್ಲಿ ಸಲಿಂಗ ಲಿವ್-ಇನ್ ಸಂಬಂಧಗಳಲ್ಲಿ ಇರುವವರಿಗೆ ಸಾಮಾಜಿಕ ಭದ್ರತಾ ಹಕ್ಕುಗಳನ್ನು ಒದಗಿಸಿದೆ ಮತ್ತು ಸಲಿಂಗ ಜೋಡಿಯನ್ನು 'ಕುಟುಂಬ ಘಟಕ'ದ ಭಾಗವಾಗಿ ಗುರುತಿಸಿದೆ.

ಸುಪ್ರೀಂ ಕೋರ್ಟ್ ಅಕ್ಟೋಬರ್ 2023ರಲ್ಲಿ ಸಲಿಂಗ ವಿವಾಹ ಅಥವಾ ನಾಗರಿಕ ಸಂಘಗಳನ್ನು ಕಾನೂನು ಬದ್ಧಗೊಳಿಸಲು ನಿರಾಕರಿಸಿತು ಮತ್ತು ಈ ವಿಷಯವನ್ನು ಸಂಸತ್ತಿಗೆ ಅಥವಾ ರಾಜ್ಯ ಶಾಸಕಾಂಗಗಳಿಗೆ ನಿರ್ಧರಿಸಲು ಬಿಟ್ಟಿತು' ಎಂದು ಈ ವರೆಗಿನ ಬೆಳವಣಿಗೆಗಳನ್ನು ವಿವರಿಸುತ್ತಾರೆ ಹೈಕೋರ್ಟ್ ವಕೀಲೆ ಡಾ. ವಂದನಾ ರೆಡ್ಡಿ.

'ಸಂಗಾತಿ' ಅಥವಾ 'ಜೀವನ ಸಂಗಾತಿ' ಎಂಬ ಪದವಾಗಿ ಬದಲಾದ ತಕ್ಷಣವೇ ಆಗಬಹುದಾದ ಬದಲಾವಣೆಗಳೇನು? ಇವುಗಳನ್ನು ಬದಲಾವಣೆ ಎನ್ನುವ ಬದಲು ಸುಧಾರಣೆ ಎಂದೇ ಕರೆಯಬಹುದು. ವಿಮೆಯ ವ್ಯಾಪ್ತಿಗೆ ಒಳಪಡುತ್ತಾರೆ. 'ನಾಮಿನಿ' ಮಾಡಬಹುದು. ದತ್ತು ಪಡೆಯಬಹುದು, ಮಾನ್ಯತೆ ಪಡೆದ ಬಾಂಧವ್ಯ ಇದಾಗಬಹುದು. ಸಮಬಾಳ್ವೆ ಸಮಗ್ರವಾಗಿ ಸಿಗುವುದು.

ಸಲಿಂಗಿಗಳ ನಡುವಿನ ಮದುವೆಗೆ ಸಂಬಂಧಪಟ್ಟಂತೆ ಯಾವುದೇ ನಿರ್ದಿಷ್ಟ ಕಾನೂನು ನಮ್ಮ ದೇಶದಲ್ಲಿ ಈ ವರೆಗೂ ಜಾರಿಗೆ ಬಂದಿಲ್ಲ. ಸುಪ್ರಿಯೋ ವರ್ಸಸ್ ಯೂನಿಯನ್ ಆಫ್ ಇಂಡಿಯಾ ಪ್ರಕರಣದಲ್ಲಿ, ಸಲಿಂಗಿಗಳ ವಿವಾಹಕ್ಕೆ ಮಾನ್ಯತೆ ನೀಡುವ ಬಗ್ಗೆ ಮಿಶ್ರ ಪ್ರತಿಕ್ರಿಯೆಗಳನ್ನು ಉಲ್ಲೇಖಿಸುತ್ತಾ, 'ಸಲಿಂಗಿಗಳ ವಿವಾಹವನ್ನು ಕಾನೂನಾತ್ಮಕವಾಗಿ ಪರಿಗಣಿಸಲು ಅವಕಾಶ ನೀಡಿದರೆ, ಮದುವೆಯ ಬಾಂಧವ್ಯದಿಂದ ಉಂಟಾಗುವ ಮುಂದಿನ ಸಂಬಂಧಗಳಿಗೂ ತೊಂದರೆಗಳು ಉಂಟಾಗುತ್ತವೆ ಎಂಬ ಆತಂಕದ ಭಾವನೆಯನ್ನು ವ್ಯಕ್ತಪಡಿಸಲಾಗಿದೆ' ಎಂದು ಹೈಕೋರ್ಟ್ ವಕೀಲೆ ಕೆ.ಅಭಿನಯ ವಿವರಿಸುತ್ತಾರೆ.

ಏನಾಗಬೇಕಾಗಿದೆ?: 'ಸುಪ್ರೀಂ ಕೋರ್ಟ್ ಎಲ್‌ಜಿಬಿಟಿಕ್ಯುಐಎ+ ಸಮುದಾಯದವರಿಗೆ ಲೈಂಗಿಕ ಸ್ವಾತಂತ್ರ್ಯ ನೀಡಿದ್ದು, ಕೆಲವು ಹಕ್ಕುಗಳನ್ನು ಕಡಿತಗೊಳಿಸಿ, ಮದುವೆಗೆ ಅಲ್ಪಮಾನ್ಯತೆ ನೀಡಿರುವುದರಿಂದ ಕೋರ್ಟಿನ ಆದೇಶ ಪೂರ್ಣ ಪ್ರಮಾಣದಲ್ಲಿ ರೂಢಿಯಲ್ಲಿ ಇರಿಸುವುದು ಕಷ್ಟವಾಗಿದ್ದು, ಇದರಿಂದ ಎಲ್‌ಜಿಬಿಟಿಕ್ಯುಐಎ+ ಸಮುದಾಯದವರಿಗೆ ಕಾನೂನಿನಡಿಯಲ್ಲಿ ಮಾನ್ಯತೆ ನೀಡುವುದಿಲ್ಲ. ಸಲಿಂಗಿಗಳಲ್ಲಿ, ಪತಿ, ಪತ್ನಿ ಎಂದು ದುಡಿಮೆಯ ಆಧಾರದ ಮೇಲೆ ಗುರುತಿಸಿಕೊಳ್ಳಲು ಸಾಧ್ಯವಿರುತ್ತದೆ. ಇಲ್ಲವೇ ಅವರನ್ನು ಜೊತೆಗಾರ ಅಥವಾ ಜೊತೆಗಾರ್ತಿ ಎಂದು ಕರೆಯಬಹುದು. ಅಂತಿಮವಾಗಿ ಈಗಿರುವ ವಿವಾಹ ಕಾಯ್ದೆಗಳಲ್ಲಿ ಸಲಿಂಗಿಗಳನ್ನೂ ಗುರುತಿಸಿ ತಿದ್ದುಪಡಿ ತರಬಹುದು ಅಥವಾ ಅವರಿಗೆ ಅನ್ವಯಿಸುವಂತೆ ಪ್ರತ್ಯೇಕವಾದ ಕಾಯ್ದೆಯನ್ನು ರೂಪಿಸುವುದು ಸೂಕ್ತ' ಎಂಬುದು ಅಭಿನಯ ಅವರ ಅಭಿಪ್ರಾಯವಾಗಿದೆ.

ಈವರೆಗೂ ಆಗಿದ್ದೇನು?

ಬ್ಯಾಂಕುಗಳ ವಹಿವಾಟಿನಲ್ಲಿ ಪರ್ಯಾಯ ವ್ಯವಸ್ಥೆಯನ್ನು ಸೂಚಿಸಲಾಗಿದೆ. ಖಾತೆ ತೆಗೆಯುವಾಗಲೇ ಜಂಟಿ ಖಾತೆಯನ್ನು ತೆಗೆಯಬಹುದು. ಆಗ ಸಂಗಾತಿಯ ಸಾವಿನ ನಂತರ ಇನ್ನೊಬ್ಬರಿಗೆ ಆ ಖಾತೆಯ ಹಣ ಸಿಗುತ್ತಿತ್ತು. ಪಡಿತರ ಚೀಟಿಯಲ್ಲಿಯೂ ಕುಟುಂಬಕ್ಕೆ ಎಂದು ಮಾತ್ರ ನಮೂದಿಸಲು ತಿಳಿಸಲಾಗಿದೆ.

ಕ್ವೀರ್ ಸಮುದಾಯದವರಿಗೆ ಯಾವುದೇ ರೀತಿಯಲ್ಲಿಯೂ ತರತಮವಾಗಬಾರದು ಎಂದು ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ಸ್ಪಷ್ಟಪಡಿಸಿದೆ.

ಇನ್ನು ಸಾಂಗತ್ಯದಲ್ಲಿರುವ ಎರಡು ಜೀವಗಳಿಗೆ ಲೈಂಗಿಕ ಅಲ್ಪಸಂಖ್ಯಾತರ ದರ್ಜೆಯನ್ನೇ ನೀಡಬೇಕು ಎಂದು ತಮಿಳುನಾಡು ಸರ್ಕಾರವು ಶಿಫಾರಸು ಮಾಡಿದೆ. ಆದರೆ ಅದಿನ್ನೂ ಕಾಯ್ದೆಯಾಗಿ ಜಾರಿಯಾಗಿಲ್ಲ.

ಉನ್ನತ ಸಮಿತಿಯ ಮುಂದಿರುವ ಸವಾಲುಗಳೇನು?

- 'ನಮ್ಮ ಸಂವಿಧಾನ ಪ್ರತಿಯೊಬ್ಬರಿಗೂ ಸಮಾನವಾಗಿ ಬದುಕುವ ಹಕ್ಕನ್ನು ನೀಡುತ್ತಾ, ತಮ್ಮಿಚ್ಛೆಯಂತೆ ಬದುಕುವ ಸ್ವಾತಂತ್ರ್ಯವನ್ನೂ ನೀಡಿದೆ. ಸಲಿಂಗಿಗಳು ಒಟ್ಟಾಗಿ ಜೀವಿಸಲು ಇಚ್ಛಿಸಿದರೆ, ಇರಬಹುದು. ಆದರೆ, ಕಾನೂನು ಅವರನ್ನು ಮದುವೆಯ ಬಂಧನದಡಿಯಲ್ಲಿ ಗುರುತಿಸುವುದಿಲ್ಲ. ಸಲಿಂಗಿಗಳು ಒಟ್ಟಾಗಿ ಜೀವಿಸಲು ಪ್ರಾರಂಭಿಸಿದರೆ, ತನ್ನ ಜೊತೆಗಾರನನ್ನು, ಜೀವನ ಸಂಗಾತಿಯೆಂದು ಗುರುತಿಸಿಕೊಳ್ಳಲು ಇಚ್ಛಿಸಿದರೆ, ಸರ್ಕಾರ ಇಂತಹ ವಿವಾಹ ಹಾಗೂ ವಿವಾಹ ನಂತರದ ಬೆಳವಣಿಗೆಗಳಿಗೆ ಸಂಬಂಧಪಟ್ಟಂತೆ ಹಾಗೂ ಇದರಿಂದ ಮುಂದೆ ಉಂಟಾಗಬಹುದಾದ ಕಾನೂನಿನ ತೊಡಕು ಗಳಿಗೆ ಪ್ರತ್ಯೇಕವಾದ ಕಾಯ್ದೆಯನ್ನು ರೂಪಿಸಬೇಕಾಗಿದೆ' ಎಂಬುದನ್ನು ಅಭಿನಯ ಅವರು ಒತ್ತಿ ಹೇಳುತ್ತಾರೆ.

ವೈವಾಹಿಕ ಸ್ವರೂಪದ ನಿರ್ಧಾರ: ಜಂಟಿ ಖಾತೆಗಳನ್ನು ತೆರೆಯುವುದು, ಕೌಟುಂಬಿಕ ಪಡಿತರ ವ್ಯವಸ್ಥೆಯನ್ನು ತರುವಂಥ ಪರ್ಯಾಯ ಮಾರ್ಗಗಳ ನಂತರವೂ ಕ್ವೀರ್ ಸಮುದಾಯವು ಸಾಂಗತ್ಯದಲ್ಲಿದೆ ಅಥವಾ ಪರಸ್ಪರ ಸಹಚರಿಗಳಾಗಿದ್ದಾರೆ ಎಂಬುದನ್ನು ಗುರುತಿಸುವುದು ಹೇಗೆ? ಈ ಪ್ರಶ್ನೆಗೆ ಸ್ಪಷ್ಟವಾದ ಉತ್ತರ ಬೇಕಿದೆ.

ಸ್ವಯಂ ಘೋಷಣೆಯಿಂದಲೇ ಇದು ಸಾಧ್ಯವೇ? ಅಥವಾ ಯಾವುದಾದರೂ ಸಂಸ್ಥೆಗಳು ಈ ವ್ಯವಸ್ಥೆಯನ್ನು ಮಾನ್ಯ ಮಾಡಬೇಕೆ? ಜಂಟಿ ಖಾತೆದಾರರು ಎಲ್ಲರೂ ಇಂಥ ಬಾಂಧವ್ಯದಲ್ಲಿ ಇರುವುದಿಲ್ಲ. ಬಾಂಧವ್ಯದಲ್ಲಿ ಇರುವ ಕುರಿತು ಅಧಿಕಾರಿ ವರ್ಗ ಪ್ರಮಾಣ ಪತ್ರ ನೀಡಬೇಕೇ? ಬಾಳ್ವೆಯನ್ನು ಒಟ್ಟಿಗೆ ಹಂಚಿಕೊಳ್ಳುತ್ತಿದ್ದಾರೆ ಎಂಬುದನ್ನು ಯಾವ ರೀತಿ ಸ್ಪಷ್ಟಪಡಿಸಬೇಕು ಎನ್ನುವುದು ಇನ್ನೂ ಸ್ಪಷ್ಟವಾಗಿಲ್ಲ. ಇದಕ್ಕೊಂದು ಸಾಂಸ್ಥಿಕ ರೂಪ ಬೇಕಾಗಿದೆ.

ಕಾನೂನುಗಳನ್ನು ಸುಗಮವಾಗಿ ಅನುಷ್ಠಾನಕ್ಕೆ ತರಲು ಈ ಹಂತ ಅತಿ ಮುಖ್ಯವಾಗಿದೆ.

- ಕಾನೂನು ಸ್ಪಷ್ಟವಾಗಿ ಉಲ್ಲೇಖಿಸಬಹುದಾದ ಕೆಲವು ವಿಷಯ: ಇಂಥ ಒಕ್ಕೂಟಗಳಲ್ಲಿ ಯಾರು ಪಾಲುದಾರರಾಗಬಹುದು (18 ವರ್ಷ ಮೀರಿದವರು, ಯಾವುದೇ ಲಿಂಗ ತರತಮವಿಲ್ಲದೆ)
- ಇಂಥ ಒಕ್ಕೂಟಗಳ ಸ್ವರೂಪ (ಒಟ್ಟಿಗೆ ವಾಸವಾಗಿರುವುದು ಅಥವಾ ವಾಸವಾಗಿರುವ ಮನೆಯನ್ನು ಹಂಚಿಕೊಂಡಿರುವುದು, ಆರ್ಥಿಕ ಅಥವಾ ಹಣಕಾಸಿನ ಅವಲಂಬನೆ ಅಥವಾ ಪಾಲುದಾರಿಕೆ ಇವುಗಳನ್ನು ಸ್ಪಷ್ಟಪಡಿಸಬೇಕು.)
- ಇಂಥ ಒಕ್ಕೂಟ ಅಥವಾ ಬಾಂಧವ್ಯಗಳ ನೋಂದಣಿ ಅಥವಾ ಘೋಷಣೆಯ ಪ್ರಕ್ರಿಯೆಯನ್ನು ಸ್ಪಷ್ಟಪಡಿಸಬೇಕು. ಈ ಬಾಂಧವ್ಯದಲ್ಲಿ ಹಕ್ಕುಗಳ ಹರಿವನ್ನು ನಿಖರವಾಗಿ ಉಲ್ಲೇಖಿಸಬೇಕು. ದತ್ತು ಪಡೆಯುವ ಅಥವಾ ಉತ್ತರಾಧಿಕಾರದ ಹಕ್ಕು ಮುಂತಾದವುಗಳ ಕುರಿತು ಸ್ಪಷ್ಟ ನಿರೂಪಣೆ ಬೇಕು.

ಇಂಥ ಸಾಂಗತ್ಯಗಳಿಗೆ ಸಾಂಸ್ಥಿಕ ಮಾನ್ಯತೆ ಸಿಕ್ಕಾಗ ಆಗುವ ಅನುಕೂಲಗಳು: ಬಾಂಧವ್ಯದಲ್ಲಿರುವವರು ತಮ್ಮ ಸಂಗಾತಿಯನ್ನು 'ನಾಮಿನಿ'ಯನ್ನಾಗಿ ಮಾಡಬಹುದು. ಆರೋಗ್ಯದ ಸಮಸ್ಯೆಗಳಿದ್ದಾಗ, ಸಂಕಷ್ಟದ ಸಂದರ್ಭಗಳಲ್ಲಿ ನಿರ್ಧಾರ ತೆಗೆದುಕೊಳ್ಳುವ ಉತ್ತರದಾಯಿತ್ವ ಅವರಿಗೆ ದೊರೆಯುವುದು. ವಿಮೆ ಮಾಡುವಾಗ, ಆರೋಗ್ಯ ಸೇವೆ ಪಡೆಯುವಾಗ ಸಂಗಾತಿಗೆ ನಿರ್ಧಾರ ಕೈಗೊಳ್ಳುವ ಅಧಿಕಾರ ದೊರೆಯುತ್ತದೆ.

ಭಾರತೀಯ ಪಾರಂಪರಿಕ ಮದುವೆ ವ್ಯವಸ್ಥೆಯಲ್ಲಿ ಈಗಲೂ ಗಂಡು–ಗಂಡು ಅಥವಾ ಹೆಣ್ಣು–ಹೆಣ್ಣು ಒಟ್ಟಿಗಿರುವುದು, ಒಟ್ಟಿಗೆ ಬಾಳುವುದು, ಬಾಳನ್ನು ಸವಿಯುವುದು, ಸವೆಸುವುದು ಎರಡೂ ಸಹಜವಾಗಿ ಸ್ವೀಕೃತವಾಗಿಲ್ಲ. ಇದೇ ಕಾರಣಕ್ಕೆ ಕ್ವೀರ್ ಸಮುದಾಯದವರು ಹಲವಾರು ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಇಂಥವರಿಗೆ ಮನೆ ಬಾಡಿಗೆ ಪಡೆಯುವುದು ಸಹ ಕಷ್ಟವಾಗುತ್ತದೆ. ಉನ್ನತ ಶಿಕ್ಷಣ, ಉದ್ಯೋಗ ಅಥವಾ ಉದ್ಯೋಗದಲ್ಲಿ ಬಡ್ತಿ ಸಹಜವಾಗಿ ಸರಳವಾಗಿ ದಕ್ಕುವುದಿಲ್ಲ. ಬಹುತೇಕರಿಗೆ ಇದೊಂದು ವಿಲಕ್ಷಣ ಕುಟುಂಬವೆನಿಸುತ್ತದೆ.

ಸಮಬಾಳ್ವೆ, ಲಿಂಗಸಮನ್ವಯ ಸಾಧಿಸಲು ಈಗಾಗಲೇ ಆಗಿರುವ ಕೆಲವು ಪ್ರಯತ್ನಗಳು ಹೀಗಿವೆ:

ಆರೋಗ್ಯ ಕ್ಷೇತ್ರದಲ್ಲಿ ಕ್ವೀರ್ ಸಮುದಾಯದವರು ಅನುಭವಿಸುತ್ತಿರುವ ತಾರತಮ್ಯ ನೀತಿಯನ್ನು ಗುರುತಿಸಿ, ಸರಿಪಡಿಸಲು ಸುಪ್ರೀಂಕೋರ್ಟ್ ಸೂಚಿಸಿದೆ. ಕ್ವೀರ್ ಸಮುದಾಯದವರು ಎಂಬ ಒಂದೇ ಒಂದು ಕಾರಣಕ್ಕೆ ಆರೋಗ್ಯ ಸೇವೆಗಳನ್ನು ನಿರಾಕರಿಸುವಂತಿಲ್ಲ. ಇದಕ್ಕೆ ಅಗತ್ಯ ಇರುವ ಎಲ್ಲ ಕ್ರಮ ಕೈಗೊಳ್ಳಲು ನಿರ್ದೇಶಿಸಲಾಗಿದೆ.

ಲಿಂಗತ್ವ ಅಲ್ಪಸಂಖ್ಯಾತರು ಅಥವಾ ಟ್ರಾನ್ಸ್‌ಜೆಂಡರ್ ಹಕ್ಕುಗಳ ಕಾಯ್ದೆ: ಇದು 2019ರಲ್ಲಿ ಜಾರಿಗೆ ಬಂದ ಕಾಯ್ದೆಯಾಗಿದೆ. ಈ ಕಾಯ್ದೆ ವ್ಯಾಪ್ತಿ ಅಡಿ, ಸಲಿಂಗಿ ದಂಪತಿ ಅಥವಾ ಜೋಡಿಗಳನ್ನೂ ತರಬೇಕು. ಇದು ಶಿಕ್ಷಣ, ಆರೋಗ್ಯ ಸೇವೆ, ಮನೆ, ಬ್ಯಾಂಕ್, ಉದ್ಯೋಗ ಮುಂತಾದವುಗಳಲ್ಲಿ ತಾರತಮ್ಯ ಆಗುವುದನ್ನು ತಡೆಯುತ್ತದೆ.

ಈ ಮೂಲ ಸೌಲಭ್ಯಗಳು ದೊರೆಯುವಂತೆ ಆಗಿದ್ದರೂ, ಒಂದು ಸಹಜ ಮತ್ತು ಸರಳವಾದ ಬದುಕು ಸಲಿಂಗಿ ಜೋಡಿಗಳಿಗೆ ಸಾಧ್ಯವಾಗುತ್ತಿಲ್ಲ. ಲೈಂಗಿಕತೆ, ಸಾಂಗತ್ಯ ಸಹಚಾರ್ಯಗಳ ಆಯ್ಕೆಯನ್ನು ಗೌರವಿಸುವ ಧಾರಾಳಿತನವಾಗಲಿ, ಔದಾರ್ಯವಾಗಲಿ ಇನ್ನೂ ನಮ್ಮ ಪಾರಂಪರಿಕ ವ್ಯವಸ್ಥೆಯಲ್ಲಿ ಹರಿದುಬರುತ್ತಿಲ್ಲ. ಬದಲಾವಣೆಯನ್ನು ಯಾವತ್ತಿದ್ದರೂ ಸಂಪ್ರದಾಯವಾದಿಗಳು ಒಪ್ಪುವುದಿಲ್ಲ. ಆದರೆ ಬದಲಾವಣೆಯ ಗಾಳಿ, ಸುಧಾರಣೆಯತ್ತ ಸುಳಿಯುತ್ತಿದ್ದಲ್ಲಿ, ನಿಧಾನವಾಗಿಯಾದರೂ ಈ ಬದಲಾವಣೆಯನ್ನು ಒಪ್ಪಲೇಬೇಕಾಗುತ್ತದೆ.

ಸುಪ್ರೀಂ ಕೋರ್ಟ್‌ನ ಈ ನಿರ್ದೇಶನದ ನಂತರ ಆಗಬೇಕಿರುವುದೇನು?

ತಾರತಮ್ಯ ಹೋಗಲಾಡಿಸುವ ಸಮಗ್ರವಾದ ಕಾನೂನು: 'ಟ್ರಾನ್ಸ್‌ಜೆಂಡರ್ ಪ್ರೊಟೆಕ್ಷನ್ ಆ್ಯಕ್ಟ್' ಕೇವಲ ಲೈಂಗಿಕ ಅಲ್ಪಸಂಖ್ಯಾತರನ್ನು ಮಾತ್ರ ಒಳಗೊಳ್ಳುತ್ತದೆ. ಇದರ ವ್ಯಾಪ್ತಿಯನ್ನು ಇನ್ನಷ್ಟು ವಿಸ್ತಾರವಾಗಿಸಿ, ಸಲಿಂಗಿಗಳಿಗೂ ಅನ್ವಯವಾಗುವಂತೆ ಮಾಡಬೇಕು. ವರ್ಣ, ವರ್ಗಗಳ ಆಧಾರದಲ್ಲಿ ಅಷ್ಟೇ ಅಲ್ಲ, ಲಿಂಗಾಧಾರಿತ ತಾರತಮ್ಯವನ್ನೂ ಹೋಗಲಾಡಿಸುವಂತೆ ನೋಡಿಕೊಳ್ಳಬೇಕು.

ಪರಿಣಾಮಕಾರಿ ಪರಿಹಾರಗಳು: ಖಾಸಗಿ ವಲಯದಲ್ಲಿ ಆಗುವ ತರತಮಗಳಿಗೆ ಪರಿಣಾಮಕಾರಿಯಾದ ಪರಿಹಾರಗಳನ್ನು ಟ್ರಾನ್ಸ್‌ಜೆಂಡರ್ ಪ್ರೊಟೆಕ್ಷನ್ ಆ್ಯಕ್ಟ್‌ನಲ್ಲಿ ಸೂಚಿಸಿಲ್ಲ. ದೂರು ಸಲ್ಲಿಸುವ ಕಾರ್ಯವಿಧಾನವನ್ನು ಸ್ಪಷ್ಟವಾಗಿರುವಂತೆ ನೋಡಿಕೊಳ್ಳಬೇಕು. ಸೂಕ್ತ ಪರಿಹಾರ ಒದಗಿಸುವ ಅವಕಾಶಗಳನ್ನು ಸೃಷ್ಟಿಸಬೇಕು.

ಮೀಸಲಾತಿ: ಈ ಸಮುದಾಯದವರಿಗೆ ಮೀಸಲಾತಿಯನ್ನು ಘೋಷಿಸಬೇಕು. ಸಾರ್ವಜನಿಕ ಮತ್ತು ಉದ್ಯೋಗ ರಂಗದಲ್ಲಿ ಟ್ರಾನ್ಸ್ ಜೆಂಡರ್ ಹಾಗೂ ಲಿಂಗತ್ವ ಅಲ್ಪಸಂಖ್ಯಾತರಿಗೆ ಮೀಸಲಾತಿ ಇರಿಸಬೇಕು ಎಂದು ಸುಪ್ರೀಂ ಕೋರ್ಟ್ ಹೇಳುತ್ತದೆ. ಈ ನಿಟ್ಟಿನಲ್ಲಿ ಇನ್ನಷ್ಟು ಜಾಗೃತಿ ಮೂಡಿಸುವ ಕ್ರಮ ಕೈಗೊಳ್ಳಬೇಕು. ಈ ಮೀಸಲಾತಿಯನ್ನು ಸಲಿಂಗಿಗಳಿಗೂ ವಿಸ್ತರಿಸಬೇಕು.

ಶಿಕ್ಷಣ: ವಿದ್ಯಾರ್ಥಿಗಳು ಅಥವಾ ವ್ಯಕ್ತಿಗಳು ತಮ್ಮನ್ನು ತಾವು ಅರಿಯಲು ಮತ್ತು ಮುಕ್ತವಾಗಿ ತಮ್ಮತನವನ್ನು ಹೇಳಿಕೊಳ್ಳಲು ಶಿಕ್ಷಣ ಸಂಸ್ಥೆಗಳು ಸುರಕ್ಷಿತ ತಾಣಗಳಾಗಬೇಕು. ಲಿಂಗ ಸಂವೇದನೆಯ ತರಬೇತಿಗಳ ಮೂಲಕ ಮತ್ತು ಪಠ್ಯಕ್ರಮಗಳನ್ನು ಪರಿಷ್ಕರಿಸುವುದರ ಮೂಲಕ ಇದನ್ನು ಸಾಧಿಸಬಹುದಾಗಿದೆ. ತೀರಾ ಈಚೆಗೆ ಲೈಂಗಿಕತೆಯನ್ನು ಆಧರಿಸಿ ಹೀಗಳೆದ ಕಾರಣಕ್ಕಾಗಿಯೇ ವಿದ್ಯಾರ್ಥಿಯೊಬ್ಬ ಆತ್ಮಹತ್ಯೆ ಮಾಡಿಕೊಂಡ ಎಂಬ ಪ್ರಕರಣ ಕಣ್ಣ ಮುಂದಿದೆ. ಸಮಸಮಾಜದ ಕನಸು ಕಾಣುವ ಮಕ್ಕಳಲ್ಲಿ ಅವರ ವ್ಯಕ್ತಿತ್ವವನ್ನು ಕುಗ್ಗಿಸದೆ, ಸಂಕುಚಿತಗೊಳಿಸದೆ, ಹೀಗಳೆಯದೆ, ಮನುಷ್ಯನಾಗಿ ಸ್ವೀಕರಿಸುವ ಮನೋಭಾವ ಹುಟ್ಟಿಸಲು ಅಗತ್ಯವಿರುವ ಶಿಕ್ಷಣ ಮತ್ತು ಲಿಂಗ ಸಂವೇದನೆಯ ಪಾಠಗಳು ಆಗಬೇಕಿದೆ. ❖

ಸಲಿಂಗ ಮದುವೆಗೆ 36 ದೇಶಗಳಲ್ಲಿ ಮಾನ್ಯತೆ

ಇಂಥ ಬಾಂದವ್ಯಗಳ ಕುರಿತು ಜಗತ್ತಿನಾದ್ಯಂತ ಪ್ರಗತಿ ಪರ ಧೋರಣೆಯನ್ನೇ ಹೊಂದಲಾಗಿದೆ. ಸಲಿಂಗ ಬಾಂಧವ್ಯ ಅಥವಾ ಒಟ್ಟಿಗೆ ಬದುಕಲು ಯುನೈಟೆಡ್ ಕಿಂಗ್ಡಮ್‌ನಲ್ಲಿ (ಯುಕೆ) ಸಲಿಂಗ ದಾಂಪತ್ಯಕ್ಕೆ 2013ರಲ್ಲಿ ಅವಕಾಶ ನೀಡಿದೆ. ಕೆನಡಾದಲ್ಲಿ 2005ರಲ್ಲಿಯೇ ಸಲಿಂಗ ವಿವಾಹಕ್ಕೆ ಮಾನ್ಯತೆ ನೀಡಲಾಗಿದೆ.

ಆಸ್ಟ್ರೇಲಿಯಾ, ಆಸ್ಟ್ರಿಯಾ, ಬ್ರೆಜಿಲ್, ಬೆಲ್ಜಿಯಂ, ಕೆನಡಾ, ಕೊಸ್ಟರಿಕಾ, ಫಿನ್ಲೆಂಡ್, ಕೊಲಂಬಿಯಾ, ಡೆನ್ಮಾರ್ಕ್, ಫ್ರಾನ್ಸ್, ಜರ್ಮನಿ, ಗ್ರೀಕ್, ಐರ್ಲೆಂಡ್, ಮೆಕ್ಸಿಕೊ, ನ್ಯೂಜಿಲೆಂಡ್, ನಾರ್ವೆ, ಪೋರ್ಚುಗಲ್ ಮುಂತಾದ ವಿಶ್ವದಾದ್ಯಂತ ಒಟ್ಟು 36 ರಾಷ್ಟ್ರಗಳಲ್ಲಿ ಕ್ವೀರ್ ಸಮುದಾಯದ ಮದುವೆಗಳಿಗೆ ಮಾನ್ಯತೆ ನೀಡಲಾಗಿದೆ.

ಇದು ಮಾನಸಿಕತೆಗೆ ಸಂಬಂಧಿಸಿದ್ದಲ್ಲ

ಸಲಿಂಗ ಬಾಂಧವ್ಯಗಳಿಗೆ ಮಾನ್ಯತೆ ಸಿಗದು ಎಂಬ ಆತಂಕವೇ ಬಹುತೇಕರಲ್ಲಿ ಉದ್ವೇಗ, ಖಿನ್ನತೆಗೆ ಕಾರಣವಾಗಿರುತ್ತದೆ. ಬಹಳಷ್ಟು ಜನ ಮುಕ್ತವಾಗಿ ತಮ್ಮ ಲೈಂಗಿಕಾಸಕ್ತಿ ಅಥವಾ ಆಕರ್ಷಣೆಗಳ ಕುರಿತು ಮಾತಾಡುವುದೇ ಇಲ್ಲ. ಸಮಾಜದಿಂದ ತಿರಸ್ಕೃತರಾಗುವ ಮತ್ತು ಕುಟುಂಬದವರಿಂದ ಅವಹೇಳನಕ್ಕೆ ಒಳಗಾಗುವ ಆತಂಕ ಹೊಂದಿರುತ್ತಾರೆ.

ಒಬ್ಬ ವ್ಯಕ್ತಿಗೆ ತನ್ನ ಲೈಂಗಿಕತೆಯ ಕುರಿತು ಯಾವ ವಯಸ್ಸಿನಲ್ಲಿಯಾದರೂ ಅರಿವು ಮೂಡಬಹುದು. ಪುರುಷನಿಗೆ ಪುರುಷನತ್ತಲೂ, ಸ್ತ್ರೀಗೆ ಸ್ತ್ರೀಯತ್ತಲೂ ಯಾವ ಕ್ಷಣದಲ್ಲಾದರೂ ಆಕರ್ಷಣೆ ಮೂಡಬಹುದು. ಇದು ಹೀಗೆಯೇ ಎಂದು ಹೇಳಲಾಗುವುದಿಲ್ಲ. ಆದರೆ ಒಂದಂತೂ ಸ್ಪಷ್ಟ, ಇದು ಮಾನಸಿಕ ಅಸ್ವಸ್ಥತೆಗೆ ಸಂಬಂಧಿಸಿದ್ದು ಅಲ್ಲವೇ ಅಲ್ಲ. ಆದರೆ ಸಾಮಾಜಿಕ ಚೌಕಟ್ಟಿನಲ್ಲಿ ಬದುಕುವ ಅನಿವಾರ್ಯದಿಂದಾಗಿ ತಮ್ಮ ಸಲಿಂಗ ಆಕರ್ಷಣೆಯನ್ನು ಮುಚ್ಚಿಟ್ಟಿರಬಹುದು.

ಡಾ. ಅಲೋಕ್ ಕುಲಕರ್ಣಿ, ಮನೋ ಚಿಕಿತ್ಸಕ, ಹುಬ್ಬಳ್ಳಿ

ಸಂಗಾತಿ ಎಂದರೆ ಸಾಕು

ಜಗತ್ತು ಯಾವತ್ತೂ ಬಹುಸಂಖ್ಯಾತರ ಇಚ್ಛೆಯಂತೆ ರೂಢಿಯನ್ನು ಕಟ್ಟಿಕೊಳ್ಳುತ್ತದೆ. ರೂಢಿಗೆ ಹೊಂದಾಣಿಕೆಯಾಗದ ಅಲ್ಪಸಂಖ್ಯಾತರು ಯಾವತ್ತೂ ಉಸಿರು ಬಿಗಿಹಿಡಿದು ಇವರ ಮಧ್ಯೆ ಬಾಳುತ್ತಿರುತ್ತಾರೆ. ಅದೊಂದು ರೀತಿ ಕಣ್ಣಿಗೆ ಕಾಣದ ಎಲೆಮರೆಯ ಶೋಷಣೆ. ಅಂತಹವರಿಗೆ ನ್ಯಾಯವನ್ನು ದಕ್ಕಿಸಿಕೊಡುವುದು ನ್ಯಾಯಾಂಗದ ಕರ್ತವ್ಯ. ಬಹುಸಂಖ್ಯಾತರ ಹಿತವನ್ನು ಕಾಯಲು ಹೇಗೂ ಶಾಸಕಾಂಗ ಇದ್ದೇ ಇರುತ್ತದೆ. ಆ ನಿಟ್ಟಿನಲ್ಲಿ ಸರ್ವೋಚ್ಚ ನ್ಯಾಯಾಲಯದ ಈ ನಿಲುವನ್ನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ.

'ಮದುವೆ' ಎನ್ನುವುದು ಕೇವಲ ಗಂಡು-ಹೆಣ್ಣು ಒಟ್ಟಾಗಿ ಬಾಳಲು ಕಡ್ಡಾಯವಾಗಿ ಇರಬೇಕಾದ ಅಗತ್ಯ ಎಂಬ ಸಾಮಾಜಿಕ ವ್ಯವಸ್ಥೆಯನ್ನು ಬಹುಸಂಖ್ಯಾತರು ಮಾಡಿಕೊಂಡಿದ್ದಾರೆ. ದುರಾದೃಷ್ಟವಶಾತ್ ಈ ವ್ಯವಸ್ಥೆ ಇತ್ತೀಚಿನ ದಿನಗಳಲ್ಲಿ ತನ್ನ ಪ್ರಾಮುಖ್ಯತೆಯನ್ನು ಕಳೆದುಕೊಳ್ಳುತ್ತಿದೆ. ಅದೊಂದು ಯಶಸ್ವೀ ವ್ಯವಸ್ಥೆ ಎಂದೇನೂ ಅನ್ನಿಸುತ್ತಿಲ್ಲ. ಎರಡು ಜೀವಗಳು ಕೂಡಿ ಬಾಳಲು ಲಿಂಗ, ಶಾಸ್ತ್ರ, ವಯೋಮಾನ ನಿರ್ಬಂಧಗಳ ಅವಶ್ಯಕತೆಯಿಲ್ಲ ಎಂದು ಇಂದಿನ ಜನಾಂಗ ಅರ್ಥ ಮಾಡಿಕೊಂಡಿದೆ. ಗಂಡು-ಹೆಣ್ಣು, ಗಂಡು-ಗಂಡು, ಹೆಣ್ಣು-ಹೆಣ್ಣು - ಅಥವಾ ಯಾವುದೋ ಒಂದು ಜೀವ ಮತ್ತೊಂದು ಜೀವದ ಜೊತೆ ಒಟ್ಟಾಗಿ ಬದುಕಲು ಸಾಂಗತ್ಯ ಬಯಸಿದರೆ ಅದನ್ನು ಸಮಾಜ ಗೌರವದಿಂದ ಕಾಣುವ ಅವಶ್ಯಕತೆ ಇದೆ. ಆದ್ದರಿಂದ ಜೊತೆಗಿರುವ ವ್ಯಕ್ತಿಯನ್ನು ಸಂಗಾತಿ ಎಂದು ಕರೆದರೆ ಸಾಕು. ಲಿಂಗ ಅಥವಾ ಸಂಬಂಧದಿಂದ ಗುರುತಿಸುವ ಅವಶ್ಯಕತೆಯಿಲ್ಲ.

ಸಾಂಗತ್ಯವೊಂದು ಮಾನ್ಯಗೊಂಡರೆ ಹಲವು ಅನುಕೂಲಗಳು ದಂಪತಿಗೆ ಲಭ್ಯವಾಗುತ್ತವೆ. ಕರ್ತವ್ಯಗಳ ಉತ್ತರದಾಯಿತ್ವ, ಆಸ್ತಿಯ ಹಂಚಿಕೆ, ಅನಾರೋಗ್ಯದ ಸಮಯದಲ್ಲಿ ಸಂಗಾತಿಯು ತೆಗೆದುಕೊಳ್ಳಬೇಕಾದ ನಿರ್ಧಾರಗಳು, ವಿಮೆಯ ವಿಲೇವಾರಿ - ಎಲ್ಲವೂ ಸುಲಭವಾಗುತ್ತದೆ. ಆದ್ದರಿಂದ ಜೊತೆಗೆ ಬಾಳುವ ವ್ಯಕ್ತಿಯನ್ನು ಸಂಗಾತಿ ಎಂದು ಕರೆಯೋಣ. ಬೇರೆ ವಿಶೇಷಣಗಳು ಬೇಡ.

ವಸುಧೇಂದ್ರ, ಕಥೆಗಾರ, ಆಪ್ತ ಸಮಾಲೋಚಕ

ಪ್ರತ್ಯೇಕ ಕಾನೂನುಗಳ ಅಗತ್ಯ

ಭಾರತದಲ್ಲಿ ಸಮಲಿಂಗಿ ಸಂಬಂಧಗಳ ಕಾನೂನು ಮಾನ್ಯತೆ ಏಕಾಂಕವಾಗಿಯೇ ಉಳಿದಿದ್ದು, ಎಲ್‌ಜಿಬಿಟಿಕ್ಯು+ ಸಮುದಾಯದ ಹಕ್ಕುಗಳನ್ನು ವಿಸ್ತರಿಸುವ ಪ್ರಗತಿಪರ ನ್ಯಾಯಾಂಗ ತೀರ್ಮಾನಗಳಿದ್ದರೂ ಕೂಡಾ ಪರ್ಯಾಪ್ತವಾಗಿಲ್ಲ. 2018ರಲ್ಲಿ ಸುಪ್ರೀಂ ಕೋರ್ಟ್ ನೀಡಿದ ತೀರ್ಮಾನವು ಸಮಲಿಂಗಿ ದಂಪತಿಗಳ ಸಮಾನತೆ, ಲೈಂಗಿಕ ಸ್ವಾಯತ್ತತೆ, ಗೌರವ, ಗೋಪ್ಯತೆಯ ಹಕ್ಕುಗಳನ್ನು ಭಾರತ ಸಂವಿಧಾನದ 14, 15, 16, 19 ಮತ್ತು 21ನೇ ವಿಧಿಗಳ ಅಡಿಯಲ್ಲಿ ಒತ್ತಿ ಹೇಳಿದ್ದಾರೆ. ಎಲ್ಲರಿಗೂ ಸೇರಿದ್ದು ಎಂದು ಪರಿಗಣಿಸಲಾಗಿರುವ 1954ರ ವಿಶೇಷ ವಿವಾಹ ಕಾಯ್ದೆಯು ಸಮಲಿಂಗಿ ಮದುವೆಗಳನ್ನು ಗುರುತಿಸಲು ವಿಫಲವಾಗಿದ್ದು, ಮದುವೆ, ವಿಚ್ಛೇದನೆ, ಪೋಷಣೆ ಮತ್ತು ವಾರಸತ್ವ ಹಕ್ಕುಗಳನ್ನು ಸ್ಪಷ್ಟಪಡಿಸಲು ಸಾಧ್ಯವಾಗಿಲ್ಲ.

ಸಮಾನುಭೂತಿ ಮತ್ತು ವೈಯಕ್ತಿಕ ಸ್ವಾಯತ್ತತೆಯ ಮೇಲಾಗಿರುವ ಭದ್ರತೆಗಾಗಿ ಭಾರತವು ಯುಡಿಎಚ್‌ಆರ್ ಮತ್ತು ಐಸಿಸಿಪಿಆರ್ ಮುಂತಾದ ಅಂತರರಾಷ್ಟ್ರೀಯ ಒಪ್ಪಂದಗಳಿಗೆ ಸಹಿ ಹಾಕಿದೆ. ಆದರೂ, ಈ ತತ್ವಗಳು ಸಮಲಿಂಗಿ ದಂಪತಿಗಳ ಸಂಬಂಧದಲ್ಲಿ ನೈಜ ರೂಪಾಂತರೀಕರಣ ಕಾಣದಿರುವುದು 1997ರ ವಿಶ್ವಕಾ ವರ್ಸಸ್ ರಾಜ್ಯ ಎಂಬ ತೀರ್ಮಾನದಲ್ಲಿ ಹೈಕೋರ್ಟ್ ಅಭಿಪ್ರಾಯಪಟ್ಟಿದೆ.

ನ್ಯಾಯಾಂಗವು ಪ್ರಸ್ತಾಪಿಸಿರುವ ಸಂಸತ್ತಿನ ತಿದ್ದುಪಡಿಯ ಕರೆಗಳು ಸಮಾನ ಹಕ್ಕುಗಳನ್ನು ಒದಗಿಸಲು ಸಮಲಿಂಗಿ ದಂಪತಿಗಳಿಗೆ ನ್ಯಾಯಾಲಯಗಳು ಮತ್ತು ಅಂತರರಾಷ್ಟ್ರೀಯ ಒಪ್ಪಂದಗಳಿಗೆ ಅನುಗುಣವಾದ ಕಾನೂನು ರೂಪುರೇಷೆ ತರುವ ಅಗತ್ಯವನ್ನು ಬಿಂಬಿಸುತ್ತದೆ.

ಎಸ್. ಸುನೀಲ್ ಕುಮಾರ್, ಹೈಕೋರ್ಟ್ ವಕೀಲ

- **ಸಲಿಂಗಿ ಮದುವೆಗೆ ಮಾನ್ಯತೆ ಹೇಗೆ?:** ಸಲಿಂಗ ಜೋಡಿಗಳು ಮದುವೆ ಆಗುವುದಾದರೆ ಮಾನ್ಯತೆ ಮಾಡಬೇಕಿರುವುದು, ಸಲಿಂಗ ಸಮುದಾಯಕ್ಕೆ ಮಾಡುವ ಅತ್ಯಂತ ಮಹತ್ವದ ನ್ಯಾಯ. ಮಾನವ ಸಂಕುಲ ಹುಟ್ಟಿದಾಗಿನಿಂದಲೂ ಸಲಿಂಗ ಜೀವನವನ್ನು ಕಳಂಕ ಎಂದು ಭಾವಿಸಿ ಅವರ ಆಶಾಭಾವನೆ ಮತ್ತು ಹಕ್ಕುಗಳಿಗೆ ಘೋರ ಅನ್ಯಾಯ ಆಗಿದ್ದು, ಈಗ ಮಾನ್ಯತೆ ನೀಡುವ ಮೂಲಕ ನಾವು ಇಲ್ಲಿಯವರೆಗೆ ಮಾಡಿರುವ ಅನ್ಯಾಯವನ್ನು ಸರಿಪಡಿಸಿಕೊಳ್ಳುವ ನಿಟ್ಟಿನಲ್ಲಿ ಇಡುವ ಮೊದಲ ಹೆಜ್ಜೆ ಆಗಿದೆ. ಇಲ್ಲವಾದಲ್ಲಿ, ಸಲಿಂಗ ಜೀವನವನ್ನು ಆಯ್ಕೆ ಮಾಡಿಕೊಳ್ಳುವ ವ್ಯಕ್ತಿಯ ಸ್ವಾತಂತ್ರಕ್ಕೆ ಧಕ್ಕೆ ಉಂಟಾಗಿ ಅದರಿಂದ ಅಡ್ಡಪರಿಣಾಮಗಳೇ ಹೆಚ್ಚಾಗುತ್ತದೆ.
- **ಉತ್ತರಾಧಿಕಾರಿಯಾಗುವ ಅಥವಾ ಉತ್ತರದಾಯಿತ್ವದ ನಿರ್ಧಾರ ಹೇಗೆ?:** ಉತ್ತರಾಧಿಕಾರಿಯ ಆಯ್ಕೆಯನ್ನು ಸದ್ಯಕ್ಕೆ ಆಯಾ ಸಲಿಂಗ ಜೋಡಿಗಳ ನಿರ್ಧಾರಕ್ಕೇ ನೀಡಬೇಕು. ಸಲಿಂಗ ಜೋಡಿಗಳ ವಿವಾಹದಲ್ಲಿ ಮುಂದಾಗುವ ಉತ್ತರಾಧಿಕಾರಿ ಮತ್ತು ಉತ್ತರದಾಯಿತ್ವದ ವಿಷಯಗಳು ಸಂಕೀರ್ಣವಾಗಿದ್ದು, ಈ ಕುರಿತಾದ ನಿರ್ಧಾರದಲ್ಲಿ ನ್ಯಾಯಾಂಗದಲ್ಲಿ ನುರಿತ ಮತ್ತು ಅನುಭವಿಗಳ ಜೊತೆ ಸುಧೀರ್ಘವಾಗಿ ಚರ್ಚಿಸಿ ಆದಷ್ಟು ಬೇಗನೇ ಶಾಸನ ರಚಿಸಬೇಕು.
- ಬೇರ್ಪಡುವ ಅಥವಾ ವಿಚ್ಛೇದನಗಳಂತಹ ಪ್ರಕರಣಗಳಲ್ಲಿ ನಿರ್ವಹಣೆಯ ಕುರಿತ ಮಾನದಂಡಗಳು. ಸದ್ಯಕ್ಕೆ ನಮ್ಮಲ್ಲಿ ಪ್ರಚಲಿತದಲ್ಲಿರುವ ವಿಶೇಷ ವಿವಾಹ ಕಾಯ್ದೆಗೆ ಸೂಕ್ತ ತಿದ್ದುಪಡಿಗಳನ್ನು ಮಾಡಿ, ಆದಷ್ಟು ಬೇಗನೇ ತಿದ್ದುಪಡಿ ಕಾಯ್ದೆಯನ್ನು ಜಾರಿಗೆ ತರಬೇಕು.

ಎ.ಡೆರಿಕ್ ಅನಿಲ್, ಹೈಕೋರ್ಟ್ ವಕೀಲ

ಗುಂಡಣ್ಣ



25 ವರ್ಷಗಳ ಹಿಂದೆ

ಬುಧವಾರ, 10-11-1999

• ಕಲ್ಯಾಣ್ ಸಿಂಗ್ ಪದಚ್ಯುತಿ: ರಾಂಪ್ರಕಾಶ್ ಉತ್ತರಾಧಿಕಾರಿ

ನವದೆಹಲಿ, ನ 9 (ಪಿಟಿಐ) – ಉತ್ತರ ಪ್ರದೇಶ ಮುಖ್ಯಮಂತ್ರಿ ಕಲ್ಯಾಣ್ ಸಿಂಗ್ ಅವರನ್ನು ಬದಲಾವಣೆ ಮಾಡಲು ಬಿಜೆಪಿ ಇಂದು ನಿರ್ಧರಿಸಿತು.

ಮಾಜಿ ಉಪ ಮುಖ್ಯಮಂತ್ರಿ ಹಾಗೂ ರಾಜ್ಯ ಯೋಜನಾ ಆಯೋಗದ ಉಪಾಧ್ಯಕ್ಷ ರಾಂಪ್ರಕಾಶ್ ಗುಪ್ತ ಅವರು ಹೊಸ ಮುಖ್ಯಮಂತ್ರಿ ಆಗಲಿದ್ದಾರೆ.

ಗುಪ್ತ ಅವರು ದಿನಾಂಕ 11ರಂದು ಗುರುವಾರ ಬೆಳಗ್ಗೆ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಲಿದ್ದಾರೆ ಎಂದು ಉತ್ತರ ಪ್ರದೇಶ ರಾಜ್ಯಪಾಲ ಸೂರಜ್ ಭಾನ್ ಅವರು ತಿಳಿಸಿದ್ದಾರೆ.

50 ವರ್ಷಗಳ ಹಿಂದೆ

ಭಾನುವಾರ, 10-11-1974

• ಕೃಷ್ಣಮೆನನ್ ಆಸ್ತಿ ರಾಷ್ಟ್ರಕ್ಕೆ ಕೊಡುಗೆ

ನವದೆಹಲಿ, ನ. 9- ಭಾರತದ ಮಾಜಿ ರಕ್ಷಣಾಮಂತ್ರಿ ದಿವಂಗತ ವಿ.ಕ ಕೃಷ್ಣಮೆನನ್ ಅವರು ತಮ್ಮ ಪೂರ್ವಿಕರ ಆಸ್ತಿ ಹೊರತು ಉಳಿದೆಲ್ಲಾ ತಮ್ಮ ಸ್ವಾರ್ಜಿತ ಆಸ್ತಿ-ಪಾಸ್ತಿಯನ್ನು ರಾಷ್ಟ್ರಕ್ಕೆ ಬಿಟ್ಟು ಹೋಗಿದ್ದಾರೆ. 'ಈ ಆಸ್ತಿ- ಪಾಸ್ತಿಯನ್ನು ಯಾವುದೇ ರೀತಿ ಯಲ್ಲಿ ಬಳಸುವುದಕ್ಕೆ ಅಥವಾ ಯಾವುದೇ ಉದ್ದೇಶಕ್ಕೆ ಉಪಯೋಗಿಸುವುದಕ್ಕೆ ತಮಗೆ ಸರಿಕಂಡ ರೀತಿಯಲ್ಲಿ ನಿರ್ಧಾರ ಕೈಗೊಳ್ಳುವುದನ್ನು ಕೃಷ್ಣಮೆನನ್ ಅವರು ಪ್ರಧಾನಿ ಇಂದಿರಾ ಗಾಂಧಿ ಅವರಿಗೆ ಸಂಪೂರ್ಣವಾಗಿ ಬಿಟ್ಟು ಬಿಟ್ಟಿದ್ದಾರೆ' ಎಂದು ಉಯಿಲಿನಿಂದ ವ್ಯಕ್ತಪಟ್ಟಿದೆ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ — ಭಾನುವಾರ ನವೆಂಬರ್ 10, 2024

ಶ್ರೀ ಕ್ರೋಧಿ ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಕಾರ್ತಿಕ ಶುಕ್ಲ ನವಮಿ ಗಂ. 21-02 ನಕ್ಷತ್ರ: ಧನಿಷ್ಠ ಗಂ. 11-00 ಯೋಗ: ಧ್ರುವ ಗಂ. 25-42 ಕರಣ: ಬಾಲವ ಗಂ. 09-58, ತುಲಾ ಮಾಸದ 24 ನೇ ದಿನ,
ಮಳೆನಕ್ಷತ್ರ: ವಿಶಾಖ 2. ರಾಹುಕಾಲ : ಸಾಯಂಕಾಲ 04-30 – 06-00
ಸೂರ್ಯೋದಯ : 06-31 **ಸೂರ್ಯಾಸ್ತ :** 05-57
ಮುಸ್ಲಿಂ ದಿನಾಂಕ : 07 ಜುಮಾದುಲ್ಲಾವಲ್
ದಿನ ವಿಶೇಷ : ಜಗದ್ಧಾತ್ರಿ ಪೂಜಾ, ಅಕ್ಷಯ ನವಮಿ ಅದೃಷ್ಟ ಸಂಖ್ಯೆ : 5, 10

ಮೇಷ: ನೂತನ ಮನೆ ನಿರ್ಮಾಣ ಅಥವಾ ನಿವೇಶನಗಳ ಖರೀದಿಯ ಆಲೋಚನೆಗಳಿಗೆ ಪೂರಕವಾದ ವಾತಾವರಣ ಸ್ನೇಹಿತರಿಂದ ಸಿಗಲಿದೆ. ಹಳೆಯ ವಿಷಯಗಳನ್ನು ನೆನಪಿಸಿಕೊಂಡು ದುಃಖ ಪಡುವುದು ಸರಿಯಲ್ಲ.

ವೃಷಭ: ನಿಮ್ಮ ಕರ್ತವ್ಯ ಮತ್ತು ಸಮಯ ಪ್ರಜ್ಞೆಯಿಂದಾಗಿ ನೀವು ದುಡಿಯುವ ಸಂಸ್ಥೆಗೆ ನಿಮ್ಮಿಂದ ಲಾಭ ಉಂಟಾಗುವುದು. ಇನ್ನೊಬ್ಬರಿಗೆ ತಿಳಿವಳಿಕೆ ಹೇಳುವ ಕೆಲಸವನ್ನು ಈ ದಿನ ಮಾಡದಿರಿ. ಗೌರವಕ್ಕೆ ಚ್ಯುತಿ ಬಾರದಂತೆ ಕಾಪಾಡಿಕೊಳ್ಳಿ.

ಮಿಥುನ: ನಿಮ್ಮ ತೀರ್ಮಾನಗಳು ಇನ್ನೊಬ್ಬರ ಮನಸ್ಸಿಗೆ ನೋವಾಗದಂತಿರಲಿ. ಜನರಿಗೆ ಮಾರ್ಗದರ್ಶಕ ವ್ಯಕ್ತಿಯಾಗಿ ನೇಮಕಗೊಳ್ಳುವ ಯೋಗವಿದೆ. ವೈದ್ಯಕೀಯ ವಿದ್ಯಾರ್ಥಿಗಳು ಓದಿನಲ್ಲಿ ಹೆಚ್ಚಿನ ಪರಿಶ್ರಮ ವಹಿಸಬೇಕಾಗುತ್ತದೆ.

ಕರ್ಕಾಟಕ: ಪೋಲೀಸ್ ಅಧಿಕಾರಿಗಳಿಗೆ ಸಿಬ್ಬಂದಿ ವರ್ಗ ಮತ್ತು ಸಾರ್ವಜನಿಕರಿಂದ ಸಹಕಾರ ದೊರೆಯಲಿದೆ. ನೆರೆ-ಹೊರೆಯವರ ಜತೆ ಸಂಬಂಧ ಉತ್ತಮಗೊಳ್ಳುವುದು. ನೆಮ್ಮದಿಯುತ ಜೀವನವನ್ನು ಮುಂದುವರಿಸುವಿರಿ.

ಸಿಂಹ: ಮಾನಸಿಕ ಸ್ಥೈರ್ಯವನ್ನು ಹೆಚ್ಚಿಸಿಕೊಂಡು ಸಂಸಾರದ ಜವಾಬ್ದಾರಿಯನ್ನು ಉತ್ತಮವಾಗಿ ನೋಡಿಕೊಳ್ಳುವಂತೆ ಆಗಲಿದೆ. ನಿರ್ಣಯ ಕೈಗೊಳ್ಳುವ ಸಮಯದಲ್ಲಿ ಸಹನೆ ಮುಖ್ಯವಾಗಿ ಕಾಪಾಡಿಕೊಳ್ಳಿರಿ.

ಕನ್ಯಾ: ಸಕಾರಾತ್ಮಕ ಮನೋಭಾವದಿಂದ ಮತ್ತು ಮಾತುಗಾರಿಕೆಯಿಂದ ಎಲ್ಲರ ಮನಸ್ಸು ಗೆಲ್ಲುವಿರಿ. ಪತ್ರಿಕೆಯವರ ಸಹಕಾರದಿಂದ ಹೆಚ್ಚಿನ ಪ್ರಚಾರವನ್ನು ಪಡೆದುಕೊಳ್ಳುವಿರಿ. ಮೂಳೆಗೆ ಸಂಬAಧಿಸಿದ ಸಮಸ್ಯೆಯನ್ನು ನಿರ್ಲಕ್ಷಿಸಬೇಡಿ.

ತುಲಾ: ವೃತ್ತಿ ಬದಲಾಯಿಸುವ ಅಥವಾ ಆಸ್ತಿ ಖರೀದಿಯ ಯೋಚನೆಯನ್ನು ಮುಂದೂಡುವುದು ಉತ್ತಮ. ಆರೋಗ್ಯದಲ್ಲಿ ಜ್ವರ ಅಥವಾ ಅಲರ್ಜಿಯಂತಹ ವ್ಯತ್ಯಾಸಗಳಾಗಬಹುದು. ಅನಿರೀಕ್ಷಿತ ಕೆಲಸಗಳಿಂದ ಸಂತಸ ಹೆಚ್ಚುವುದು.

ವೃಶ್ಚಿಕ: ಇಂದಿನ ನಿಮ್ಮ ಕೆಲಸ ಕಾರ್ಯಗಳಿಗೆ ದೇವತಾ ಅನುಗ್ರಹ ಸ್ವಲ ಕಡಿಮೆ ಇರುವುದರಿಂದ ಕಾರ್ಯ ಸಾಧನೆಗೆ ಹೆಚ್ಚಿನ ಪರಿಶ್ರಮ ಬೇಕಾಗುತ್ತದೆ. ಬಟ್ಟೆ ವ್ಯಾಪಾರಿಗಳಿಗೆ ಇಂದು ಉತ್ತಮ ಉತ್ತಮ ಲಾಭವಾಗುವುದು.

ಧನು: ಎಂತಹ ದುಸ್ಥಿತಿಯಿಂದಲೂ ಹೊರ ಬರುವ ಸಾಮರ್ಥ್ಯ ನಿಮ್ಮಲ್ಲಿದೆ. ಯಾವ ಪರಿಸ್ಥಿತಿಗೂ ಹೆದರುವ ಅವಶ್ಯಕತೆ ಇರುವುದಿಲ್ಲ. ಹೊಸದಾಗಿ ಉದ್ಯೋಗಕ್ಕೆ ಸೇರಲು ಸಿದ್ಧತೆ ನಡೆಸುವಿರಿ. ಕೆಲಸಗಳಲ್ಲಿ ಅಭಿವೃದ್ಧಿ ಕಾಣುವಿರಿ.

ಮಕರ: ರಾಜಕೀಯ ವ್ಯಕ್ತಿತ್ವವನ್ನು ಹೊಂದಿರುವ ನಿಮಗೆ ಜನರ ಭಾವನೆಗಳಿಗೆ ಯಾವ ರೀತಿಯಲ್ಲಿ ಪ್ರತಿಕ್ರಿಯಿಸಬೇಕೆಂಬುದು ನಿಮಗೆ ಚೆನ್ನಾಗಿ ತಿಳಿದಿದೆ, ಅದರಂತೆಯೇ ನಡೆಯಿರಿ. ತಾಳ್ಮೆ ಈ ದಿನದ ಮೂಲ ಮಂತ್ರವಾಗಲಿದೆ.

ಕುಂಭ: ನೀವು ಅಂದುಕೊಂಡಷ್ಟು ಪರಿಸ್ಥಿತಿ ಕೆಟ್ಟದಾಗಿ ಇಲ್ಲದ ಕಾರಣ ಹೆಚ್ಚಿನ ಲಾಭಗಳಿಸುವ ಉದ್ದೇಶವಿದ್ದಲ್ಲಿ ಸ್ವಲ್ಪ ತಾಳ್ಮೆಯಿಂದ ಕಾಯಬೇಕಾಗುವುದು. ಮನಶಾಸ್ತ್ರಜ್ಞರಿಗೆ ಬೇಡಿಕೆ ಹೆಚ್ಚಾಗುವುದು.

ಮೀನ: ವೃತ್ತಿರಂಗದಲ್ಲಿ ಹೊಸ ವಿಚಾರಗಳ ಅನ್ವೇಷಣೆಯ ಕೈಗೂಡುವಿಕೆ ಆರ್ಥಿಕ ತೊಂದರೆ ಕೊಟ್ಟರೂ ಮುಂದೆ ಲಾಭ ತರಲಿದೆ. ಗೃಹ ನಿರ್ಮಾಣ ಕೆಲಸ ಆರಂಭಿಸಲು ಸೂಕ್ತ ಸಮಯ ತಿಳಿದುಕೊಳ್ಳುವಿರಿ.

ಪದಬಂಧ 5857

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1. ನುಡಿಯಬಾರದುದು ವಾರದೊಳಗಿದೆ! (6)
4. ನಮ್ಮ ರಾಷ್ಟ್ರ ಪಕ್ಷಿ (3)
7. ಕೈಯಲ್ಲಿ ತಿರುವುಮುರುವಾಗಿದೆ (2)
9. ಊರ ಮುಂದೆ ಕಾಣಿಸಿದ ಹಾವು (3)
11. ವಿನತಿಯಿಂದ ಮಾಡಿದ ಕೋರಿಕೆ (3)
13. ಆನೆಯ ದಾಡೆ (3)
14. ಕೊನೆಗೆ ಪದವಿದ್ದಾಗ ಐಶ್ವರ್ಯ ಸಿಗುವುದೇ? (3)
16. ಕನಸಲ್ಲಿ ಉಲ್ಟಾ ಆಗಿರುವ ಗಲೀಜು (2)
19. ಪ್ರತಿಯಲ್ಲಿರುವ ಏಳಿಗೆಕಾಣುತ್ತಿದೆಯೇ? (3)
20. ಬಂಡವಾಳದಾರರ ಆಡಳಿತ ಪದ್ಧತಿ (6)

ಮೇಲಿಂದ ಕೆಳಕ್ಕೆ
2. ಮೂಳೆಯಲ್ಲಿರುವ ಮೆದುವಾದ ಕೊಬ್ಬಿನ ಪದಾರ್ಥ (2)
3. ಕೊನೆಗೆ ಬೆಲೆಯಿದ್ದಾಗ ಚಚ್ಚೌಕ ಕಾಣುತ್ತದೆ! (3)
5. ಹೆಂಡತಿಯನ್ನು ಕಳೆದುಕೊಂಡವನು (3)
6. ಮಧುರವಾದ ಸ್ವಪ್ನ (5)
8. ಲಲಿತ ಕಲೆಗಳನ್ನು ಬಲ್ಲವನು (4)
9. ಊಟ ಮಾಡದಿರುವಿಕೆ (4)
10. ಗರ ಬಡಿದವನು ತೋರಿಸಿದ ಚರಂಡಿ (3)
12. ಸಂತನಿಂದಾದ ಪೀಳಿಗೆಯಿಲ್ಲಿ ತಿರುವುಮುರುವಾಗಿದೆ (3)
15. ಹೂವಿನಲ್ಲಿರುವ ಹುಡಿ (3)
17. ಕರದಲ್ಲಿ ಹಿಡಿದಿರುವ ಭರಣಿ (3)
18. ಕೋಲಾಹಲ ಉಂಟುಮಾಡಿದಾಗ ತೊಡಿಸಿರುವ ಬೇಡಿ! (2)

■	■	■	1		2		3	
4	5		■	■		■		■
■		■	■	6	■	■	7	8
9		10	■	11		12	■	
	■		■		■		■	
	■	13			■	14	15	
16	17	■	■		■	■		■
■		■	18	■	■	19		
20						■	■	■

5856ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಅಭಿಮಾನ 3.ವಿಮುಕ್ತ 4.ಗಗನ 6.ಕಾಟಾಚಾರ 8.ಯಥೋಚಿತ 10.ಸುಸ್ವರ 12.ಸಂಕಲ್ಪ 13.ಅಂತರಂಗ

ಮೇಲಿಂದ ಕೆಳಕ್ಕೆ: 15.ಹರಿಗೋಲು 16.ಲಾವಣಿ 17.ತೊಗಟೆ 18.ಗೆಳೆತನ 2.ನಗರ 3.ವಿನಯ 5.ದೂತ 7.ಚಾಕರ 9.ಚಿಲುಕ 11.ಸ್ವಗತ 12.ಸಂಚಾರಿ 13.ಅಂಬು 14.ಗಲಾಟೆ 15.ಹಣಿಗೆ

ಸುಡೊಕು 6242

	6	4			8			
1		3				8	9	4
			5		9			3
	9			7			5	
		5	9		3	4	7	
7				1				9
	7		8		1		4	
4		9					5	7
	3		4		7		1	2

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6241 ಸುಡೊಕು

5	2	6	9	4	1	8	3	7
4	7	8	3	2	6	5	9	1
3	9	1	5	7	8	6	2	4
9	5	4	7	1	2	3	6	8
1	6	7	8	9	3	4	5	2
2	8	3	6	5	4	1	7	9
7	3	9	4	8	5	2	1	6
8	1	5	2	6	9	7	4	3
6	4	2	1	3	7	9	8	5

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಬೆಳಗಾವಿಯಿಂದ ಹೈದರಾಬಾದ್‌ಗೆ ವಿಮಾನಯಾನ ಮಾಡಿದ ಸೋನಟ್ಟಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮಕ್ಕಳು ಹಾಗೂ ಶಿಕ್ಷಕರು

ದಿನವೂ ಶಾಲೆಗೆ ಬಂದವರಿಗೆ ವಿಮಾನಯಾನ!

● ಸಂತೋಷ ಈ. ಚಿನಗುಡಿ

ಬೆಳಗಾವಿ: ಕುಗ್ರಾಮದ ಮಕ್ಕಳ ವಿಮಾನ ಏರುವ ಕನಸನ್ನು ಬೆಳಗಾವಿ ತಾಲ್ಲೂಕು ಸೋನಟ್ಟಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕ ಪ್ರಕಾಶ ದೇಯಣ್ಣವರ ಅವರು ನನಸು ಮಾಡಿದರು. ಶಾಲೆಗೆ ಪ್ರತಿದಿನವೂ ತಪ್ಪದೇ ಬರುವುದಾಗಿ ಹೇಳಿ ಮಾತು ಉಳಿಸಿಕೊಂಡ ಮಕ್ಕಳಿಗೆ ಅವರು ಬೆಳಗಾವಿಯಿಂದ ಹೈದರಾಬಾದ್‌ವರೆಗೆ ವಿಮಾನದ ಪ್ರಯಾಣದ ಕೊಡುಗೆ ನೀಡಿದರು.

ಪ್ರಕಾಶ ದೇಯಣ್ಣವರ ಅವರು ತಮ್ಮ ನಾಲ್ಕು ತಿಂಗಳ ವೇತನದ ಒಟ್ಟು ₹ 2.10 ಲಕ್ಷ ಹಣವನ್ನು ಅವರು ವಿಮಾನ ಪ್ರವಾಸಕ್ಕೆ ವಿನಿಯೋಗಿಸಿದರು. 17 ಮಕ್ಕಳು, ಮೂವರು ಶಿಕ್ಷಕರು ಮತ್ತು ಎಸ್‌ಡಿಎಂಸಿ ಅಧ್ಯಕ್ಷ ಸೇರಿ ಎಲ್ಲ 21 ಜನರ ವಿಮಾನಯಾನ, ಊಟ, ವಸತಿ ವೆಚ್ಚವನ್ನು ಅವರೇ ನಿಭಾಯಿಸಿದರು. ಹೈದರಾಬಾದ್‌ನ ರಾಮೋಜಿರಾವ್ ಫಿಲ್ಮ್ ಸಿಟಿ, ಚಾರ್ ಮಿನಾರ್, ಸ್ನೊ ವರ್ಲ್ಡ್, ಗೋಲ್ಕೊಂಡ ಕೋಟೆ, ಸಲಾರ್ ಜಂಗ್ ವಸ್ತು ಸಂಗ್ರಹಾಲಯ ವೀಕ್ಷಿಸಿ, ಗ್ರಾಮಕ್ಕೆ ಮರಳಿದರು.

'1 ರಿಂದ 7ನೇ ತರಗತಿಯವರೆಗಿನ ಸೋನಟ್ಟಿ ಶಾಲೆಯಲ್ಲಿ ಮಕ್ಕಳ ಹಾಜರಾತಿ ಕಡಿಮೆ ಇತ್ತು. ಎಷ್ಟೇ ಪ್ರಯತ್ನಿಸಿದರೂ ಅವರು ಹಾಜರಾಗುತ್ತಿರಲಿಲ್ಲ. ಅವರನ್ನು ಪಾಲಕರು ತಮ್ಮೊಂದಿಗೆ ಕೆಲಸದ ಸ್ಥಳಗಳಿಗೆ ಕರೆದೊಯ್ಯುತ್ತಿದ್ದರು. ಅದಕ್ಕೆ ನಾನೇ ಒಂದು ಉಪಾಯ ಮಾಡಿದೆ' ಎಂದು ಪ್ರಕಾಶ ದೇಯಣ್ಣವರ 'ಪ್ರಜಾವಾಣಿ'ಗೆ ತಿಳಿಸಿದರು.

'ಶಾಲೆಗೆ ಯಾರು ಹೆಚ್ಚು ಹಾಜರಾತಿ ನೀಡುತ್ತಾರೋ, ಅವರನ್ನು ವಿಮಾನದ ಮೂಲಕ ಪ್ರವಾಸಕ್ಕೆ ಕರೆದೊಯ್ಯುವೆ ಎಂದು ಹೇಳಿದೆ. ಆ ದಿನದಿಂದ ಶಾಲೆಯ ಹಾಜರಾತಿ ಹೆಚ್ಚಾಯಿತು. ಹಾಜರಾತಿ ಹೆಚ್ಚಿರುವ 25 ಮಕ್ಕಳನ್ನು ಪ್ರವಾಸಕ್ಕೆ ಆಯ್ಕೆ ಮಾಡಿದೆ. ಅವರಲ್ಲಿ 17 ಮಕ್ಕಳು ಗುರುವಾರ (ನ.7) ವಿಮಾನದಲ್ಲಿ ಬಂದರು' ಎಂದರು.

ಬೆಳಗಾವಿಯಿಂದ 11 ಕಿ.ಮೀ ದೂರದಲ್ಲಿರುವ ಸೋನಟ್ಟಿಯಲ್ಲಿ ಪರಿಶಿಷ್ಟ ಪಂಗಡದವರು ಮಾತ್ರ ಇದ್ದಾರೆ. ಆ ಗ್ರಾಮದ ಯಾವೊಬ್ಬ ವ್ಯಕ್ತಿಯೂ ವಿಮಾನ ಹತ್ತಿಲ್ಲ. 57 ವರ್ಷ ವಯಸ್ಸಿನ ಪ್ರಕಾಶ ಅವರು ಈ ಗ್ರಾಮ ಶಾಲೆಯನ್ನು ಆದರ್ಶ ಶಾಲೆ ಮಾಡುವಲ್ಲಿ ಶ್ರಮಿಸಿದ್ದಾರೆ. ಸ್ವಂತ ಖರ್ಚಿನಲ್ಲೇ ಸೌಲಭ್ಯ ಒದಗಿಸಿದ್ದಾರೆ.

ಸರ್ಕಾರಿ ಶಾಲೆಗಳು ಮತ್ತು ಮಕ್ಕಳು ಖಾಸಗಿ ಶಾಲೆಗಳಿಗಿಂತ ಕಡಿಮೆ ಇಲ್ಲ ಎಂಬುದನ್ನು ತೋರಿಸಲು ಈ ಪ್ರಯೋಗ ಮಾಡಿರುವೆ. ಮುಂದಿನ ವರ್ಷ ದೆಹಲಿಗೆ ವಿಮಾನಯಾನ ಮಾಡಿಸುವೆ.

ಪ್ರಕಾಶ ದೇಯಣ್ಣವರ, ಶಿಕ್ಷಕ, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಸೋನಟ್ಟಿ

ವಿಮಾನ ಹಾರಾಟ ಶುರು ಮಾಡುವ ಮುನ್ನ ಭಯವಾಗುತ್ತಿತ್ತು. ಒಂದು ನಿಮಿಷದ ಬಳಿಕ ಕಿಟಕಿ ಆಚೆ ನೋಡಿದೆ. ರೋಮಾಂಚನ ಆಯಿತು.

ಶಿವಪ್ರಸಾದ ಕರೇನಕೊಂಪಿ, ವಿದ್ಯಾರ್ಥಿ, ಸೋನಟ್ಟಿ

ನಾನು ವಿಮಾನದಲ್ಲಿ ಹಾರಾಡುತ್ತೇನೆ ಎಂದು ಕನಸಿನಲ್ಲೂ ಭಾವಿಸಿರಲಿಲ್ಲ. ಎಂದೂ ಮರೆಯದ ದಿನ ನಿರ್ಮಿಸಿದ್ದು ನಮ್ಮ ಗುರುಗಳು

ಲಕ್ಷ್ಮಿ ಗಂಗೇನಾಳ, ವಿದ್ಯಾರ್ಥಿನಿ, ಸೋನಟ್ಟಿ

ಎಸ್‌ಡಿಎ ಆತ್ಮಹತ್ಯೆ: ಎಲ್ಲ ಸಿಬ್ಬಂದಿ ವಿಚಾರಣೆ

ಬೆಳಗಾವಿ: ತಹಶೀಲ್ದಾರ್ ಕಚೇರಿಯಲ್ಲೇ ಎಸ್‌ಡಿಎ ರುದ್ರಣ್ಣ ಯಡವಣ್ಣವರ ಆತ್ಮಹತ್ಯೆ ಮಾಡಿಕೊಂಡು ಐದು ದಿನಗಳಾದರೂ ತಲೆಮರೆಸಿಕೊಂಡ ಮೂವರೂ ಆರೋಪಿಗಳನ್ನು ಪೊಲೀಸರು ಇನ್ನೂ ಬಂಧಿಸಿಲ್ಲ. ಇದರ ಮಧ್ಯೆ, ಕಚೇರಿಯ ಎಲ್ಲ ಸಿಬ್ಬಂದಿ ಮತ್ತು ವಾಟ್ಸ್‌ಆ್ಯಪ್ ಗ್ರೂಪ್‌ನ ಅಡ್ಮಿನ್‌ಗಳನ್ನು ಕರೆದ ವಿಚಾರಣೆ ಮಾಡಲಾಗುತ್ತಿದೆ.

'ರುದ್ರಣ್ಣ ಅವರ ಮೊಬೈಲ್‌ನ್ನು ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಕಳಿಸಲಾಗಿದೆ. ಅಲ್ಲಿನ ಕರೆಗಳು, ವಾಟ್ಸ್‌ಆ್ಯಪ್ ಸಂದೇಶ, ವಿಡಿಯೊಗಳು ಸೇರಿ ಪ್ರತಿಯೊಂದನ್ನೂ ತಪಾಸಣೆ ಮಾಡಲಾಗುತ್ತಿದೆ. ಆರೋಪಿಗಳ ಪತ್ತೆಗೆ ಜಾಲ ಬೀಸಲಾಗಿದೆ' ಎಂದು ನಗರ ಪೊಲೀಸ್ ಕಮಿಷನರ್ ಯಡಾ ಮಾರ್ಟಿನ್ ಮಾರ್ಬನ್ಯಾಂಗ್ 'ಪ್ರಜಾವಾಣಿ'ಗೆ ತಿಳಿಸಿದರು.

'ಘಟನೆ ನಡೆದ ದಿನ ಶವವನ್ನು ನೋಡಲು ತಹಶೀಲ್ದಾರ್ ಬಸವರಾಜ ಅವರು ಕಚೇರಿಗೆ ಬಂದಿದ್ದರು. ಆದರೂ ಅವರನ್ನು ಏಕೆ ಬಂಧಿಸಲಿಲ್ಲ ಎಂಬ ಪ್ರಶ್ನೆ ಸಹಜವಾಗಿದೆ. ಆದರೆ, ಆಗ ಮೃತನ ಕುಟುಂಬದವರು ದೂರು ನೀಡಿರಲಿಲ್ಲ. ಬೆಳಿಗ್ಗೆ ಆತ್ಮಹತ್ಯೆಯಾಗಿದ್ದರೂ ಸಂಜೆಗೆ ದೂರು ನೀಡಿದರು. ಮೇಲಾಗಿ, ಇಂಥ ಪ್ರಕರಣಗಳಲ್ಲಿ ಸಾಕ್ಷ್ಯಗಳನ್ನು ಸಿದ್ಧಪಡಿಸಿಕೊಂಡೇ ಆರೋಪಿಗಳನ್ನು ಬಂಧಿಸಲಾಗುತ್ತದೆ' ಎಂದು ಅವರು ತಿಳಿಸಿದರು.

'ತಹಶೀಲ್ದಾರ್ ಬಸವರಾಜ ನಾಗರಾಳ, ಎಫ್‌ಡಿಎ ಅಶೋಕ ಕಬ್ಬಲಿಗೇರ ಮತ್ತು ಸೋಮು ದೊಡವಾಡೆ ಅವರ ಹೆಸರು ಬರೆದಿಟ್ಟು ರುದ್ರಣ್ಣ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಸದ್ಯ ಮೂವರೂ ಪರಾರಿಯಾಗಿದ್ದಾರೆ. ಇವರ ಬೆನ್ನಿಗೆ ಪ್ರಭಾವಿಗಳು ಇದ್ದಾರೆ. ಇದರಿಂದ ಸಾಕ್ಷ್ಯ ನಾಶ ಮಾಡುವ ಆತಂಕ ಇದೆ' ಎಂದು ಬಿಜೆಪಿ ಮುಖಂಡರು ಆರೋಪಿಸಿದ್ದಾರೆ.

ಆಶ್ರಯ ಮನೆ: 'ಇ–ಸ್ವತ್ತು' ತೊಡಕು

3 ವರ್ಷ ಬಳಿಕ ಮಂಜೂರಾದ ಮನೆ, ಸಂಕಷ್ಟಕ್ಕೆ ಸಿಲುಕಿದ ಫಲಾನುಭವಿಗಳು

● ಜಿ.ಬಿ.ನಾಗರಾಜ್

ದಾವಣಗೆರೆ: ವಸತಿ ಯೋಜನೆಗಳಿಗೆ 'ಇ–ಸ್ವತ್ತು' ಹಾಜರುಪಡಿಸಲಾಗದೇ ಮಂಜೂರಾದ ಮನೆಗಳನ್ನು ನಿರ್ಮಿಸಿಕೊಳ್ಳಲು ಗ್ರಾಮೀಣ ಪ್ರದೇಶದ ಫಲಾನುಭವಿಗಳು ಪರದಾಡುತ್ತಿದ್ದಾರೆ. ರಾಜೀವಗಾಂಧಿ ವಸತಿ ನಿಗಮದ ನಿಯಮಗಳಿಗೆ ಅನುಗುಣವಾದ ಭೂದಾಖಲೆ ಒದಗಿಸಲು ಸಾಧ್ಯವಾಗದೇ ಅಸಹಾಯಕತೆಯಲ್ಲಿದ್ದಾರೆ.

ಬಡವರಿಗೆ ಸೂರು ಸೌಲಭ್ಯ ಕಲ್ಪಿಸುವ ಉದ್ದೇಶದಿಂದ ರಾಜ್ಯ ಸರ್ಕಾರ ಬಸವ ವಸತಿ ಯೋಜನೆ, ಅಂಬೇಡ್ಕರ್ ವಸತಿ ಯೋಜನೆ ರೂಪಿಸಿದೆ. ಮೂರು ವರ್ಷಗಳ ಬಳಿಕ ಮನೆಗಳಿಗೆ ಮಂಜೂರಾತಿ ದೊರಕಿದೆ. ವಸತಿ ಸೌಲಭ್ಯ ಪಡೆಯಲು ಬಹುದಿನಗಳಿಂದ ಕಾಯುತ್ತಿದ್ದ ರಾಜ್ಯದ ಜನರಿಗೆ 'ಇ–ಸ್ವತ್ತು' ನಿರಾಸೆಯುಂಟು ಮಾಡಿದೆ.

ಗ್ರಾಮ ಠಾಣಾ ವ್ಯಾಪ್ತಿಯ ಕ್ರಮಬದ್ಧ ಆಸ್ತಿಗಳಿಗೆ ಗ್ರಾಮ ಪಂಚಾಯಿತಿ 'ಇ–ಸ್ವತ್ತು' ನೀಡುತ್ತದೆ. ನಮೂನೆ- 9, ನಮೂನೆ- 11 'ಎ' ಹಾಗೂ 11 'ಬಿ' (ಕ್ರಮಬದ್ಧವಲ್ಲದ ಆಸ್ತಿ) ಖಾತೆಗಳನ್ನು 'ದಿಶಾಂಕ್' ಆ್ಯಪ್ ಮೂಲಕ ಸೃಜಿಸುವ ಅಧಿಕಾರ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗೆ (ಪಿಡಿಒ) ಇದೆ. ಆಸ್ತಿ ದಾಖಲೆಗಳಲ್ಲಿನ ಗೊಂದಲದಿಂದ ಗ್ರಾಮೀಣ ಪ್ರದೇಶದಲ್ಲಿ ಇ–ಸ್ವತ್ತು ಪಡೆಯುವುದು ಸುಲಭವಲ್ಲ ಎಂಬಂತಾಗಿದೆ.

ಗ್ರಾಮ ಠಾಣಾ ವ್ಯಾಪ್ತಿಯ ನಿಗದಿಯಲ್ಲಿ ಕೆಲ ತೊಂದರೆ ಆಗಿದೆ. ಕಂದಾಯ ಇಲಾಖೆ ಜತೆ ಚರ್ಚಿಸಿ ಪರಿಹರಿಸುವ ಪ್ರಯತ್ನ ನಡೆಯುತ್ತಿದೆ

ಸುರೇಶ್ ಬಿ.ಇಟ್ನಾಳ್, ಸಿಇಒ, ಜಿಲ್ಲಾ ಪಂಚಾಯಿತಿ, ದಾವಣಗೆರೆ

ಫಲಾನುಭವಿಯ ಕುಟುಂಬದ ಸದಸ್ಯರ ಹೆಸರಿನಲ್ಲಿ ನಿವೇಶನ ಇದ್ದರೆ ವಸತಿ ನಿರ್ಮಾಣಕ್ಕೆ ಈ ಹಿಂದೆ ಅನುಮೋದನೆ ಸಿಗುತ್ತಿತ್ತು. ಮನೆ ನಿರ್ಮಾಣವಾದ ಬಳಿಕ ಮಾಲೀಕತ್ವದ ವಿಚಾರವಾಗಿ ವ್ಯಾಜ್ಯಗಳು ಶುರುವಾಗುತ್ತಿದ್ದವು. ಹೀಗಾಗಿ, ಫಲಾನುಭವಿ ಅಥವಾ ಅವರ ಪತಿ–ಪತ್ನಿ ಹೆಸರಿಗೆ 'ಇ–ಸ್ವತ್ತು' ಇದ್ದರೆ ಮಾತ್ರ ಮಂಜೂರಾತಿ ಆದೇಶ ನೀಡಲಾಗುತ್ತಿದೆ. ಭೂ ಪರಿವರ್ತನೆ, ಪಾಲು ವಿಭಾಗ, ಪೌತಿ ಖಾತೆಯ ತೊಡಕಿನಿಂದಾಗಿ ಇಂತಹ ಭೂಮಿಗೆ ಇ–ಸ್ವತ್ತು ಸೃಜಿಸಲು ಸಾಧ್ಯವಾಗುತ್ತಿಲ್ಲ.

ವಸತಿ ಸೌಲಭ್ಯ ಕೋರಿ ಅರ್ಜಿ ಸಲ್ಲಿಸಿದ ಬಹುತೇಕರು ಗ್ರಾಮ ಠಾಣಾ ವ್ಯಾಪ್ತಿಯ ಹೊರಗಿದ್ದಾರೆ. ಭೂಪರಿವರ್ತನೆ ಮಾಡದೇ ನಿರ್ಮಾಣಗೊಂಡ ಬಡಾವಣೆಯಲ್ಲಿ ನಿವೇಶನ ಹೊಂದಿದ್ದಾರೆ. ಭೂದಾಖಲೆಯ ಸಮಸ್ಯೆಯಿಂದ ಫಲಾನುಭವಿಯ ಹೆಸರಿನಲ್ಲಿನ 'ಇ–ಸ್ವತ್ತು' ಪಡೆಯಲು ಆಗುತ್ತಿಲ್ಲ. ಕಂದಾಯ ಮತ್ತು ಭೂದಾಖಲೆ ಇಲಾಖೆ ಇಂತಹ ಆಸ್ತಿಗಳ ಸಮಸ್ಯೆಗಳನ್ನು ತ್ವರಿತವಾಗಿ ಪರಿಹರಿಸುತ್ತಿಲ್ಲ. ಇದರಿಂದ 'ಇ–ಸ್ವತ್ತು' ವಿತರಣೆಯಲ್ಲಿ ತೊಂದರೆ ಉಂಟಾಗಿದೆ ಎಂಬುದು ಪಿಡಿಒ ಒಬ್ಬರ ಹೇಳಿಕೆ.

'ಬಸವ ವಸತಿ ಯೋಜನೆ, ಅಂಬೇಡ್ಕರ್ ವಸತಿ ಯೋಜನೆಯಡಿ 245 ಮನೆಗಳು ಮಂಜೂರಾಗಿವೆ. 2021ರ ಬಳಿಕ ಇದೇ ಮೊದಲ ಬಾರಿಗೆ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಇಷ್ಟು ಪ್ರಮಾಣದ ಮನೆ ಸಿಕ್ಕಿರುವುದಕ್ಕೆ ಖುಷಿಯಾಗಿತ್ತು. ಆದರೆ, 'ಇ–ಸ್ವತ್ತು' ಸೇರಿ ಅಗತ್ಯ ದಾಖಲೆಗಳನ್ನು ಒದಗಿಸಲು 88 ಫಲಾನುಭವಿಗಳಿಗೆ ಮಾತ್ರ ಸಾಧ್ಯವಾಗಿದೆ. ವಸತಿ ರಹಿತರು ಸೌಲಭ್ಯದಿಂದ ವಂಚಿತರಾಗುತ್ತಿದ್ದಾರೆ' ಎಂದು ದಾವಣಗೆರೆ ತಾಲ್ಲೂಕಿನ ಮುದಹದಡಿ ಗ್ರಾಮ ಪಂಚಾಯಿತಿ ಸದಸ್ಯ ಪಿ.ಎನ್. ಮಹೇಂದ್ರ ಬೇಸರ ವ್ಯಕ್ತಪಡಿಸಿದರು.

ಮನೆ ತಿರಸ್ಕರಿಸುವ ಫಲಾನುಭವಿ

ಮನೆ ನಿರ್ಮಾಣಕ್ಕೆ ನೀಡುವ ಸಹಾಯಧನದ ಮೊತ್ತ ಕಡಿಮೆ ಎಂಬ ಕಾರಣವನ್ನು ಮುಂದಿಟ್ಟು ಕೇಂದ್ರ ಸರ್ಕಾರದ ಪ್ರಧಾನಮಂತ್ರಿ ಆವಾಸ್ ಯೋಜನೆಯಡಿ (ಪಿಎಂಎವೈ) ಮಂಜೂರಾದ ಮನೆಗಳನ್ನು ಕೆಲ ಫಲಾನುಭವಿಗಳು ತಿರಸ್ಕರಿಸುತ್ತಿದ್ದಾರೆ.

'ಆಯ್ಕೆಯಾದ ಸಾಮಾನ್ಯ ವರ್ಗದ ಫಲಾನುಭವಿಗೆ ₹1.20 ಲಕ್ಷ ಹಾಗೂ ಪರಿಶಿಷ್ಟ ಜಾತಿ, ಪಂಗಡದ ಫಲಾನುಭವಿಗೆ ₹1.70 ಲಕ್ಷ ಸಹಾಯಧನ ಲಭ್ಯವಾಗುತ್ತದೆ. ನರೇಗಾ ಯೋಜನೆಯಡಿ ₹27,000 ವೆಚ್ಚದ ಕಾಮಗಾರಿ ಮಾಡಿಕೊಳ್ಳಲು ಅವಕಾಶವಿದೆ. ಈ ಸಹಾಯಧನ ಕಡಿಮೆ ಎಂಬ ಕೊರಗು ಅನೇಕರಲ್ಲಿದೆ. ನಗರ ವಸತಿ ಯೋಜನೆಯಡಿ ಫಲಾನುಭವಿಗೆ ಲಭ್ಯವಾಗುತ್ತಿರುವ ₹ 3 ಲಕ್ಷ ಸಹಾಯಧನದ ಸೌಲಭ್ಯವನ್ನು ಗ್ರಾಮೀಣ ಪ್ರದೇಶಕ್ಕೂ ವಿಸ್ತರಿಸಲಾಗುತ್ತದೆ ಎಂಬ ವದಂತಿಯಿಂದ ಪ್ರಸಕ್ತ ಸಾಲಿನಲ್ಲಿ ಮನೆ ನಿರ್ಮಾಣಕ್ಕೆ ಜನ ಉತ್ಸುಕತೆ ತೋರುತ್ತಿಲ್ಲ' ಎನ್ನುತ್ತಾರೆ ಅಧಿಕಾರಿಗಳು.

ಸಚಿವ ಚಲುವರಾಯಸ್ವಾಮಿ–ಜಯರಾಮ ವಾಗ್ವಾದ, ತಳ್ಳಾಟ

ಪ್ರಜಾವಾಣಿ ವಾರ್ತೆ

ಮೈಸೂರು: ಇಲ್ಲಿನ ಖಾಸಗಿ ಹೋಟೆಲ್‌ನಲ್ಲಿ ಸಚಿವ ಎನ್. ಚಲುವರಾಯಸ್ವಾಮಿ ಹಾಗೂ ಕಾಂಗ್ರೆಸ್ ಮುಖಂಡ ಕೀಲಾರ ಜಯರಾಮ ಅವರ ನಡುವೆ ಶುಕ್ರವಾರ ರಾತ್ರಿ ಮಾತಿನ ಚಕಮಕಿ, ತಳ್ಳಾಟ ನಡೆದಿದೆ.

ಚಲುವರಾಯ ಸ್ವಾಮಿ

'ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದ ಅಧ್ಯಕ್ಷ ಹಾಗೂ ಶಾಸಕ ರಮೇಶ್ ಬಂಡಿಸಿದ್ದೇಗೌಡರ ಮಗಳ ನಿಶ್ಚಿತಾರ್ಥದಲ್ಲಿ ಇಬ್ಬರೂ ಭಾಗವಹಿಸಿದ್ದರು. ಕಾರ್ಯಕ್ರಮ ಹೋಟೆಲ್‌ನ ಕೆಳಮಹಡಿಯಲ್ಲಿತ್ತು. ಊಟದ ವ್ಯವಸ್ಥೆ ಮಾಡಲಾಗಿದ್ದ ಮೂರನೇ ಮಹಡಿಯಲ್ಲಿ ವಾಗ್ವಾದ ನಡೆದು, ಕೈ, ಕೈ ಮಿಲಾಯಿಸುವ ಹಂತಕ್ಕೆ ಹೋಗಿತ್ತು' ಎಂದು ಮೂಲಗಳು ತಿಳಿಸಿವೆ.

'ಸಚಿವರ ಕುರಿತು ಜಯರಾಮ ಅವರು ನಿಂದನೆಯ ಮಾತುಗಳನ್ನು ಆಡಿದರು. ಅದರಿಂದ ಕೆರಳಿದ ಸಚಿವರ ಬೆಂಬಲಿಗರು ಅವರನ್ನು ತಳ್ಳಾಡಿದರು' ಎಂದೂ ಹೇಳಲಾಗಿದೆ. ಆದರೆ, ಯಾವ ವಿಚಾರಕ್ಕೆ ಘಟನೆ ನಡೆಯಿತು ಎಂಬುದು ಸ್ಪಷ್ಟವಾಗಿಲ್ಲ.

ಕೆಲವು ತಿಂಗಳ ಹಿಂದೆ ನಡೆದಿದ್ದ ದಕ್ಷಿಣ ಶಿಕ್ಷಕರ ಕ್ಷೇತ್ರದ ವಿಧಾನ ಪರಿಷತ್ ಚುನಾವಣೆಯಲ್ಲಿ ಜಯರಾಮ ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿಯಾಗಿದ್ದರು. ಅದಕ್ಕೂ ಮುಂಚೆ ಅವರು ಜೆಡಿಎಸ್‌ನಲ್ಲಿದ್ದರು.

'ನಮ್ಮಿಬ್ಬರ ನಡುವೆ ಯಾವುದೇ ವಾಗ್ವಾದ ನಡೆದಿಲ್ಲ. ನಿಶ್ಚಿತಾರ್ಥಕ್ಕೆ ಬಂದಿದ್ದ ಅವರಿಗೆ ನಮಸ್ಕರಿಸಿ ನಾನು ಹೊರಬಂದೆ ಅಷ್ಟೇ' ಎಂದು ಜಯರಾಮ 'ಪ್ರಜಾವಾಣಿ'ಗೆ ಸ್ಪಷ್ಟಪಡಿಸಿದರು.

'ವಾಗ್ವಾದಕ್ಕೆ ವರ್ಗಾವಣೆ ಹಣದ ಕುರಿತು ಇಬ್ಬರ ನಡುವಿನ ವಿವಾದವೇ ಕಾರಣ' ಎಂಬ ಆರೋಪದ ಕುರಿತು ಪ್ರತಿಕ್ರಿಯಿಸಿ, 'ಅವರಿಗೂ ನಮಗೂ ಯಾವ ವ್ಯವಹಾರ? ನಾವಿಬ್ಬರು ನಲವತ್ತು ವರ್ಷದಿಂದ ಸ್ನೇಹಿತರು. ನಿಶ್ಚಿತಾರ್ಥದಲ್ಲೂ ಅವರನ್ನು ಹುಡುಕಿಕೊಂಡು ಹೋಗಿಲ್ಲ. ಸಿಕ್ಕಿದಾಗ ನಮಸ್ಕರಿಸಿ ಬಂದಿದ್ದೇನೆ' ಎಂದರು.

'ವರ್ಗಾವಣೆ ದಂಧೆ ತಾರಕಕ್ಕೆ: ಮಂತ್ರಿ ಮೇಲೆ ಹಲ್ಲೆ'

ಚನ್ನಪಟ್ಟಣ (ರಾಮನಗರ): 'ಸಚಿವ ಎನ್. ಚಲುವರಾಯಸ್ವಾಮಿ ಸೇರಿದಂತೆ ಕೆಲವರು ವರ್ಗಾವಣೆ ದಂಧೆ ವಿಚಾರವಾಗಿ ಮೈಸೂರಿನಲ್ಲಿ ಹೊಡೆದಾಡಿಕೊಂಡಿದ್ದಾರೆ ಎಂಬ ಮಾಹಿತಿ ಇದೆ. ಇನ್ನೂ ಸ್ಪಷ್ಟವಾಗಿ ಹೇಳುವುದಾದರೆ ಹಣ ಹಂಚಿಕೆ ವಿಚಾರಕ್ಕೆ ಕಿತ್ತಾಡಿಕೊಂಡಿದ್ದಾರೆ' ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಹೇಳಿದ್ದಾರೆ.

ಕುಮಾರಸ್ವಾಮಿ

ಈ ಕುರಿತು ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, 'ರಾಜ್ಯದ ಒಬ್ಬ ಮಂತ್ರಿಯನ್ನು ಬಹಿರಂಗವಾಗಿ ಹೊಡೆಯುತ್ತಾರೆ ಎಂದರೆ ಈ ರಾಜ್ಯ ಎಲ್ಲಿಗೆ ಬಂದಿದೆ ಎಂಬುದನ್ನು ಗಮನಿಸಬೇಕು' ಎಂದರು. ಮೈಸೂರಿನಲ್ಲಿ ತಮ್ಮ ಮೇಲೆ ಹಲ್ಲೆ ನಡೆದಿದೆ ಎನ್ನಲಾದ ವಿಚಾರಕ್ಕೆ ಸಂಬಂಧಿಸಿದಂತೆ ತಾಲ್ಲೂಕಿನ ಕೋಡಂಬಳ್ಳಿಯಲ್ಲಿ ಪ್ರತಿಕ್ರಿಯಿಸಿದ ಚಲುವರಾಯಸ್ವಾಮಿ, 'ಪಕ್ಷದ ಮುಖಂಡ ಕೀಲಾರ ಜಯರಾಂ ಮತ್ತು ನನ್ನ ನಡುವೆ ಯಾವುದೇ ಗಲಾಟೆ ನಡೆದಿಲ್ಲ. ಬೇಕಿದ್ದರೆ ಅವನನ್ನೇ ಹೋಗಿ ಕೇಳಿ. ಮಾತನಾಡಿದ್ದಕ್ಕೆಲ್ಲಾ ಗಲಾಟೆ ಎನ್ನಲಾಗುತ್ತದೆಯೇ. ಜಯರಾಂ ಮತ್ತು ನಾನು ಸ್ನೇಹಿತರು ಬಿಟ್ಹಾಕಿ' ಎಂದರು.

ಚಾಕು ಇರಿದು ಮಗು ಕೊಂದ ತಾಯಿ

ಕಾಗವಾಡ: ತಾಲ್ಲೂಕಿನ ಉಗಾರ ಖುರ್ದ ಪಟ್ಟಣ ಪಂಚಾಯಿತಿ ವ್ಯಾಪ್ತಿಯ ಫರೀದಖಾನ ವಾಡಿಯ ತೋಟದ ಪ್ರದೇಶದಲ್ಲಿ ಶನಿವಾರ ತಾಯಿ ತನ್ನ ಮಗುವನ್ನು ಚಾಕುವಿನಿಂದ ಇರಿದು ಕೊಲೆ ಮಾಡಿ, ತಾವೂ ಆತ್ಮಹತ್ಯೆಗೆ ಯತ್ನಿಸಿದ್ದಾರೆ.

'ಎರಡು ವರ್ಷ 9 ತಿಂಗಳಿನ ಸಾತ್ವಿಕ್ ರಾಹುಲ ಕಟಗೇರಿ ಕೊಲೆಯಾದ ಮಗು. ತಾಯಿ ಭಾಗ್ಯಶ್ರೀ ಕೊಲೆ ಆರೋಪಿ. ಕೌಟುಂಬಿಕ ಕಲವೇ ಘಟನೆಗೆ ಕಾರಣ ಆಗಿರಬಹುದು. ಪ್ರಾಣಾಪಾಯದಿಂದ ಪಾರಾದ ತಾಯಿಯನ್ನು ಬಂಧಿಸಲಾಗಿದೆ. ಮಗವಿನ ತಂದೆ ಪ್ರಕರಣ ದಾಖಲಿಸಿದ್ದಾರೆ'' ಎಂದು ಪೊಲೀಸರು ತಿಳಿಸಿದ್ದಾರೆ.

ಜಾಮೀನಿಗಾಗಿ ಪ್ರಜ್ವಲ್ ಸುಪ್ರೀಂ ಕೋರ್ಟ್‌ಗೆ ಅರ್ಜಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಮಹಿಳೆಯ ಮೇಲೆ ಅತ್ಯಾಚಾರ ಎಸಗಿದ ಪ್ರಕರಣದಲ್ಲಿ ಜಾಮೀನು ನಿರಾಕರಿಸಿರುವ ಹೈಕೋರ್ಟ್ ಆದೇಶ ಪ್ರಶ್ನಿಸಿ ಜೆಡಿಎಸ್‌ನ ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದಾರೆ.

ಅಕ್ಟೋಬರ್ 21ರಂದು ಜಾಮೀನು ಅರ್ಜಿಗಳನ್ನು ಸಾರಾಸಗಟಾಗಿ ತಿರಸ್ಕರಿಸಿದ್ದ ಹೈಕೋರ್ಟ್, 'ಮೇಲ್ನೋಟಕ್ಕೆ ಪ್ರಜ್ವಲ್ ಒಬ್ಬ ಲಂಪಟ ಹಾಗೂ ತನ್ನ ಇಂದ್ರಿಯಗಳ ಮೇಲಿನ ನಿಯಂತ್ರಣ ಕಳೆದುಕೊಂಡು, ಕಾಮಾತುರನಾಗಿ ವರ್ತಿಸಿದ್ದು, ಈ ನೀಚತನದ ಕೃತ್ಯಗಳು ಸ್ವಸ್ಥ ಸಮಾಜದ ಬೆನ್ನುಹುರಿಯಲ್ಲಿ ಚಳಿ ಹುಟ್ಟಿಸುವಂತಿದೆ' ಎಂದು ವ್ಯಕ್ತಪಡಿಸಿತ್ತು.

ವಕೀಲ ಬಾಲಾಜಿ ಶ್ರೀನಿವಾಸನ್ ಮೂಲಕ ಸಲ್ಲಿಸಲಾದ ಅರ್ಜಿಯು ನ್ಯಾಯಮೂರ್ತಿಗಳಾದ ಬೇಲಾ ಎಂ. ತ್ರಿವೇದಿ ಮತ್ತು ಸತೀಶ್ ಚಂದ್ರ ಶರ್ಮಾ ಅವರ ಪೀಠದ ಮುಂದೆ ಸೋಮವಾರ ವಿಚಾರಣೆಗೆ ಬರಲಿದೆ.

ಹಾಸನ ಜಿಲ್ಲೆಯ ಹೊಳೆನರಸೀಪುರ ಟೌನ್ ಠಾಣೆಯಲ್ಲಿ ದಾಖಲಾಗಿರುವ ಪ್ರಕರಣದಲ್ಲಿ ಮನೆ ಕೆಲಸದಾಕೆ ನೀಡಿರುವ ದೂರಿನ ಅನ್ವಯ ಅತ್ಯಾಚಾರದ ಕ್ರಿಮಿನಲ್ ಪ್ರಕರಣ ದಾಖಲಾಗಿದೆ. ಈ ಪ್ರಕರಣದಲ್ಲಿ ಪ್ರಜ್ವಲ್ ನಿಯಮಿತ ಜಾಮೀನು ಕೋರಿದ್ದರು. ಇದರಲ್ಲಿ ಅವರು ಎರಡನೇ ಆರೋಪಿಯಾಗಿದ್ದಾರೆ. ಮೊದಲನೇ ಆರೋಪಿ ಜೆಡಿಎಸ್‌ನ ಶಾಸಕ ಮತ್ತು ಪ್ರಜ್ವಲ್ ಅವರ ತಂದೆಯೂ ಆದ ಎಚ್.ಡಿ.ರೇವಣ್ಣ ಈಗಾಗಲೇ ಜಾಮೀನು ಪಡೆದಿದ್ದಾರೆ.

ಚಿಕ್ಕಬಿದರೆ ಗ್ರಾಮದಲ್ಲಿ ಮಹಾಸತಿ ಶಿಲ್ಪ ಪತ್ತೆ

ಹರಿಹರ (ದಾವಣಗೆರೆ): ಕನ್ನಡ ವಿಶ್ವವಿದ್ಯಾಲಯದ ಕುಲಪತಿ ಡಿ.ವಿ. ಪರಮಶಿವಮೂರ್ತಿ ಅವರು ಹರಿಹರ ತಾಲ್ಲೂಕಿನ ಚಿಕ್ಕಬಿದರೆ ಗ್ರಾಮದಲ್ಲಿ ಶುಕ್ರವಾರ ಕ್ಷೇತ್ರಕಾರ್ಯ ಕೈಗೊಂಡಿದ್ದಾಗ ಅಪರೂಪದ ಮಹಾಸತಿ ಶಿಲ್ಪ ಪತ್ತೆಯಾಗಿದೆ.

ಗ್ರಾಮದ ಹೊರವಲಯದಲ್ಲಿರುವ ಕಲ್ಲೇಶ್ವರ ದೇವಾಲಯದಲ್ಲಿ ಈ ಸತಿಶಿಲ್ಪ ಇರುವ ವೀರಗಲ್ಲು ಕಂಡು ಬಂದಿದೆ.

ಇದುವರೆಗೂ ಮಹಾಸತಿಯ ಶಿಲ್ಪಗಳು ಕರ್ನಾಟಕದಲ್ಲಿ ಹೇರಳವಾಗಿ ದೊರೆತಿವೆ. ಪತಿಯ ಶವದೊಟ್ಟಿಗೆ ಚಿತೆಯೇರಿದ ಉಲ್ಲೇಖಗಳೂ ಇವೆ. ಆದರೆ ಪತಿಯನ್ನು ಅಪ್ಪಿಕೊಂಡು ಒಟ್ಟಿಗೆ ಅಗ್ನಿಕುಂಡ ಪ್ರವೇಶ ಮಾಡಿದ ಮಹಾಸತಿ ಶಿಲ್ಪ ದೊರೆತಿದ್ದು ಇದೇ ಮೊದಲು ಎನ್ನಲಾಗಿದೆ.

ವಾಲ್ಮೀಕಿ ಭವನದ ಮೇಲೆ ಮಸೀದಿ ಕಟ್ಟಡ!

ಸಿಂಧನೂರು (ರಾಯಚೂರು ಜಿಲ್ಲೆ): ತಾಲ್ಲೂಕಿನ ಗೋನವಾರ ಗ್ರಾಮದಲ್ಲಿ ವಾಲ್ಮೀಕಿ ಸಮುದಾಯ ಭವನದ ಮೇಲ್ಭಾಗದಲ್ಲಿ ಅಬ್ಬಾಸ್ ಅಲಿ ದರ್ಗಾದ ಗಫೂರ್‌ಸಾಬ್ ಎಂಬ ವ್ಯಕ್ತಿ ಕೋಣೆಯೊಂದು ನಿರ್ಮಿಸಿ ಅದರಲ್ಲಿ ನಮಾಜ್ ಮಾಡಿದ ಘಟನೆಯಿಂದ ಗೊಂದಲ ಸೃಷ್ಟಿಯಾಗಿದೆ. ಮೇಲ್ಭಾಗದ ಕಟ್ಟಡದಲ್ಲಿ ಮಸೀದಿಯ ಸ್ವರೂಪದ ಕಟ್ಟಡ ನಿರ್ಮಿಸಿ ನಮಾಜ್ ಮಾಡುತ್ತಿರುವುದರಿಂದ ಗ್ರಾಮ ಪಂಚಾಯಿತಿ ಮಾಜಿ ಸದಸ್ಯ ಉರುಕುಂದಪ್ಪ ಮತ್ತು ಸಂಗಡಿಗರು ವಿರೋಧ ವ್ಯಕ್ತಪಡಿಸಿದ್ದಾರೆ. ಈ ಘಟನೆಯಿಂದ ಗ್ರಾಮದಲ್ಲಿ ಬಿಗುವಿನ ವಾತಾವರಣ ಉಂಟಾಗಿದ್ದು, ಬಂದೋಬಸ್ತ್‌ಗಾಗಿ ಜಿಲ್ಲಾ ಮೀಸಲು ಪಡೆ ಬೀಡುಬಿಟ್ಟಿದೆ.

ಮೇಲ್ಭಾಗದ ಕಟ್ಟಡ ತೆರವುಗೊಳಿಸುವಂತೆ ಉರುಕುಂದಪ್ಪ ಮನವಿ ಸಲ್ಲಿಸಿದ ಹಿನ್ನೆಲೆಯಲ್ಲಿ ಗ್ರಾಮ ಪಂಚಾಯಿತಿಯಿಂದ ಗಫೂರಸಾಬ್ ಅವರಿಗೆ ನೋಟಿಸ್ ನೀಡಲಾಗಿದೆ.

ಕರ್ನಾಟಕ ಸರ್ಕಾರ

ಕರ್ನಾಟಕ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ, ಹುಬ್ಬಳ್ಳಿ

Phone No:0836-2373348

ಕ್ರಸಂ.: ಕೆ.ಎಂ.ಸಿ.ಆರ್.ಐ./ಪೂವಿ(4)/14/2024–25 ದಿನಾಂಕ: 8–11–2024

ಇ–ಟೆಂಡರ್ ಪ್ರಕಟಣೆ

ಈ ಮೂಲಕ ಅಧಿಕೃತ ಪೂರೈಕೆದಾರರಿಗೆ ತಿಳಿಸುವುದೇನೆಂದರೆ ಕರ್ನಾಟಕ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ, ಹುಬ್ಬಳ್ಳಿಯ ವಿವಿಧ ವಿಭಾಗಗಳಿಗೆ ವಿವಿಧ ನಮೂನೆಯ ಪ್ರಿಂಟಿಂಗ್ ಸಾಮಗ್ರಿಗಳನ್ನು ಮುದ್ರಿಸಿ ಪೂರೈಸುವುದಕ್ಕಾಗಿ ಇ–ಟೆಂಡರ್ ಕರೆಯಲಾಗಿದೆ. ಈ ಬಗ್ಗೆ ನಿಗದಿಪಡಿಸಿದ ಹೆಚ್ಚಿನ ವಿವರ ಮತ್ತು ಮಾಹಿತಿಯನ್ನು ವೆಬ್‌ಸೈಟ್ www.kppp.karnataka.gov.in ನಲ್ಲಿ ಪಡೆಯಬಹುದು.

ಸಹಿ/– (ನಿರ್ದೇಶಕರು)

ಕರ್ನಾಟಕ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ, ಹುಬ್ಬಳ್ಳಿ

‘ಮಧ್ಯವರ್ತಕರಿಂದ ₹ 700 ಕೋಟಿ ಸುಲಿಗೆ’

ಒಂದನೇ ಪುಟದಿಂದ...

ಕಾಂಗ್ರೆಸ್, ಎನ್‌ಸಿಪಿ (ಶರದ್ ಪವಾರ್ ಬಣ) ಹಾಗೂ ಶಿವಸೇನಾ (ಯುಬಿಟಿ) ಪಕ್ಷಗಳನ್ನು ಒಳಗೊಂಡ 'ಮಹಾ ವಿಕಾಸ ಅಘಾಡಿ' (ಎಂವಿಎ) ವಿರುದ್ಧ ವಾಗ್ದಾಳಿ ನಡೆಸಿದ ಮೋದಿ, 'ಮಹಾ ವಿಕಾಸ ಅಘಾಡಿಯ ಮತ್ತೊಂದು ಹೆಸರೇ ಭ್ರಷ್ಟಾಚಾರ ಮತ್ತು ಕೋಟ್ಯಂತರ ರೂಪಾಯಿಗಳ ಹಗರಣ ಹಾಗೂ ಸುಲಿಗೆ ಎನ್ನುವುದು ಇಡೀ ದೇಶಕ್ಕೆ ಗೊತ್ತು' ಎಂದು ಹೇಳಿದರು.

'ಆಡಳಿತಾರೂಢ 'ಮಹಾಯುತಿ' ಪ್ರಣಾಳಿಕೆಯು ಮಹಿಳೆಯರ ಸುರಕ್ಷತೆ, ಉದ್ಯೋಗ ಸೃಷ್ಟಿ, ಲಡ್ಕಿ ಬಹೆನ್ ಯೋಜನೆಯಂತಹ ಕಾರ್ಯಕ್ರಮಗಳಿಗೆ ಪ್ರಾಮುಖ್ಯ ನೀಡಿದೆ. ಮಹಾ ವಿಕಾಸ ಅಘಾಡಿಯು 'ಹಗರಣಗಳ ಪತ್ರ' ಮುಂದಿಟ್ಟುಕೊಂಡು ಮತ ಕೇಳುತ್ತಿದೆ' ಎಂದು ಟೀಕಿಸಿದರು.

ಮಹಾರಾಷ್ಟ್ರದ ನಾಂದೇಡ್‌ನಲ್ಲಿ ಶನಿವಾರ ನಡೆದ ಪ್ರಚಾರ ಸಭೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರನ್ನು ಬಿಜೆಪಿ ಮುಖಂಡರು ಸನ್ಮಾನಿಸಿದರು. –ಪಿಟಿಐ ಚಿತ್ರ

'ಪಂಚತೀರ್ಥಕ್ಕೆ ಕಾಂಗ್ರೆಸ್‌ನವರು ಭೇಟಿ ನೀಡಿಲ್ಲ'

'ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಜೀವನ–ಸಾಧನೆಯೊಂದಿಗೆ ಬೆಸೆದುಕೊಂಡ ಸ್ಥಳಗಳನ್ನು ಒಳಗೊಂಡ 'ಪಂಚತೀರ್ಥ'ಕ್ಕೆ ಪಕ್ಷದ ನಾಯಕರು ಭೇಟಿ ನೀಡಿಲ್ಲ. ಭೇಟಿ ನೀಡಿದ್ದಲ್ಲಿ ಅದನ್ನು ಸಾಬೀತುಪಡಿಸಲಿ' ಎಂದು ಪ್ರಧಾನಿ ಮೋದಿ ಇದೇ ವೇಳೆ ಕಾಂಗ್ರೆಸ್‌ಗೆ ಸವಾಲು ಹಾಕಿದರು.

'ಅಂಬೇಡ್ಕರ್ ಅವರು ದಲಿತರಾಗಿದ್ದರು ಹಾಗೂ ಸಂವಿಧಾನ ರಚನೆಯ ಶ್ರೇಯಸ್ಸು ಅವರಿಗೆ ಸಂದಿತ್ತು ಎಂಬ ಕಾರಣಕ್ಕೆ ಕಾಂಗ್ರೆಸ್ ಅವರನ್ನು ದ್ವೇಷಿಸುತ್ತದೆ. ಆದರೆ, ಬಾಬಾ ಸಾಹೇಬ್ ಅಂಬೇಡ್ಕರ್ ನನಗೆ, ಬಿಜೆಪಿ ಪಕ್ಷಕ್ಕೆ ಹಾಗೂ ನನ್ನ ಸರ್ಕಾರಕ್ಕೆ ಪ್ರೇರಣೆ' ಎಂದು ಹೇಳಿದರು.

'ಸೋಲಿನಿಂದ ಹೊರಬರದ ಮೋದಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕರ್ನಾಟಕ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಅನುಭವಿಸಿದ ಸೋಲಿನ ದುಃಸ್ವಪ್ನದಿಂದ ಪ್ರಧಾನಿ ನರೇಂದ್ರ ಮೋದಿಯವರು ಇನ್ನೂ ಹೊರಬಂದಿಲ್ಲ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಕುಟುಕಿದ್ದಾರೆ.

'ಕರ್ನಾಟಕದಲ್ಲಿ ಮದ್ಯ ಮಾರಾಟಗಾರರಿಂದ ₹700 ಕೋಟಿ ಲೂಟಿ ಮಾಡಲಾಗಿದೆ' ಎಂಬ ಪ್ರಧಾನಿ ಮೋದಿಯವರ ಹೇಳಿಕೆಗೆ ಪ್ರತಿಕ್ರಿಯೆ ನೀಡಿರುವ ಸಿದ್ದರಾಮಯ್ಯ, 'ಮದ್ಯ ಮಾರಾಟಗಾರರು ನೀಡಿದ ರಾಜಕೀಯ ಪ್ರೇರಿತ ದೂರು ಇಷ್ಟು ಬೇಗ ಮೋದಿ ಅವರನ್ನು ತಲುಪಿಬಿಟ್ಟಿದೆ. ಆದರೆ, ಯಡಿಯೂರಪ್ಪ ಮತ್ತು ಶ್ರೀರಾಮುಲು ವಿರುದ್ಧ ಅಪರಾಧ ಪ್ರಕರಣ ದಾಖಲಿಸುವಂತೆ ತನಿಖಾ ಸಮಿತಿ ಮಾಡಿರುವ ಶಿಫಾರಸು ಇನ್ನೂ ಮೋದಿ ಅವರ ಕಿವಿಗೆ ಬಿದ್ದಿಲ್ಲವೇ' ಎಂದು ಪ್ರಶ್ನಿಸಿದ್ದಾರೆ.

'ಕೋವಿಡ್ ಕಾಲದಲ್ಲಿ ಅಸಹಾಯಕ ಜನರು ಸಾಯುತ್ತಿರುವಾಗ ಅಧಿಕಾರದಲ್ಲಿದ್ದ ನಿಮ್ಮ ಪಕ್ಷ ಸಾವಿನ ವ್ಯಾಪಾರ ಮಾಡುತ್ತಿದ್ದದ್ದು ನಿಮ್ಮ ಗಮನಕ್ಕೆ ಬಂದಿರಲಿಲ್ಲವೇ? ಬಿಜೆಪಿ ಸರ್ಕಾರ ಶೇ 40ರಷ್ಟು ಕಮಿಷನ್ ಸುಲಿಗೆ ಮಾಡುತ್ತಿದೆ ಎಂದು ಗುತ್ತಿಗೆದಾರರ ಸಂಘದ ಅಧ್ಯಕ್ಷ ನಿಮಗೆ ಖುದ್ದಾಗಿ ದೂರು ನೀಡಿದರೂ ನೀವೇಕೆ ತುಟಿಬಿಚ್ಚಲಿಲ್ಲ' ಎಂದು ಪ್ರಶ್ನಿಸಿದ್ದಾರೆ.

'ಬೇಟಿ ಬಚಾವೊ–ಬೇಟಿ ಪಡಾವೊ' ಎನ್ನುವ ಮೋದಿ, ನಿಮ್ಮದೇ ಪಕ್ಷದ ಮಾಜಿ ಸಿ.ಎಂ ಒಬ್ಬರು ಮನೆಗೆ ಬಂದಿದ್ದ ಬಾಲಕಿ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದು, ಅವರ ವಿರುದ್ಧ ಪೋಕ್ಸೊ ಪ್ರಕರಣ ದಾಖಲಾಗಿದ್ದರ ಬಗ್ಗೆ ಏಕೆ ಮಾತನಾಡುವುದಿಲ್ಲ' ಎಂದು ಕೇಳಿದ್ದಾರೆ.

ಸಣ್ಣ ನೀರಾವರಿ ಇಲಾಖೆ

ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ ಕಛೇರಿ, ಶಿವಮೊಗ್ಗ

ಐ.ಎಫ್.ಟಿ. ಸಂ: 11/2024–25 ದಿನಾಂಕ: 07.11.2024

ಸೆಕ್ಷನ್ 1: ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್)–ಕೆ.ಡಬ್ಲ್ಯೂ–4

ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ವಿಭಾಗ, ಶಿವಮೊಗ್ಗ ರವರ ಕಛೇರಿಯಿಂದ ಸ್ಟ್ಯಾಂಡರ್ಡ್ ಟೆಂಡರ್ ಕೆಡಬ್ಲ್ಯೂ –4 ರ ಅನ್ವಯ 01 ಸಂಖ್ಯೆ ತರೀಕೆರೆ ಉಪವಿಭಾಗ ವ್ಯಾಪ್ತಿಯಲ್ಲಿನ ಕಾಮಗಾರಿಯ ಟೆಂಡರ್ ಪ್ರಕಟಣೆಯನ್ನು ಹೊರಡಿಸಲಾಗಿರುತ್ತದೆ. ಟೆಂಡರ್‌ಗೆ ಇಡಲಾದ ಮೊತ್ತ ರೂ.161.20 ಲಕ್ಷಗಳು ಸದರಿ ಟೆಂಡರಿನಲ್ಲಿ ಭಾಗವಹಿಸಲು ಇಚ್ಛಿಸುವ ಗುತ್ತಿಗೆದಾರರು ಟೆಂಡರ್‌ನ್ನು ಒಪ್ಪಿಕೊಳ್ಳುವ ಕನಿಷ್ಠ ಅರ್ಹತಾ ಪ್ರಮಾಣಗಳನ್ನು ಹಾಗೂ ಇತರೆ ಹೆಚ್ಚಿನ ವಿವರಗಳನ್ನು ಇ–ಪ್ರೊಕ್ಯೂರ್‌ಮೆಂಟ್‌ನ ವೆಬ್‌ಸೈಟ್ ವಿಳಾಸ: http://kppp.karnataka.gov.in ನಲ್ಲಿ ದಿನಾಂಕ:08.11.2024ರಿಂದ ಲಾಗಿನ್ ಆಗುವ ಮೂಲಕ ಪಡೆದುಕೊಳ್ಳಬಹುದು. ಟೆಂಡರ್‌ಗಳನ್ನು ಸಲ್ಲಿಸುವ ಕಡೆಯ ದಿನಾಂಕ:19.11.2024. 17:00 ಘಂಟೆ. ಇನ್ನುಳಿದಂತೆ ವೆಬ್ ಸೈಟ್‌ನಲ್ಲಿರುವ ವಿವರಗಳೇ ಅಂತಿಮ.

ಸಹಿ/– ಕಾರ್ಯಪಾಲಕ ಇಂಜಿನಿಯರ್,

ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ ಕಛೇರಿ, ಶಿವಮೊಗ್ಗ

ವಾ.ಸಾ.ಸಂ.ಇ/ಕೆಸ್ ಎಂಸಿಎ/ಶಿ/24–25/32/11/995

ಬಿಜೆಪಿ ನಾಯಕರ ಆರೋಪಕ್ಕೆ ಡಿಸಿಎಂ ಡಿ.ಕೆ.ಶಿವಕುಮಾರ್ ಪ್ರತಿಕ್ರಿಯೆ

‘ಗ್ಯಾರಂಟಿ ಬಗ್ಗೆ ತಿಳಿಯಲು ಕರ್ನಾಟಕಕ್ಕೆ ಬನ್ನಿ’

ಮುಂಬೈ(ಪಿಟಿಐ): 'ಜನರ ಕಲ್ಯಾಣಕ್ಕಾಗಿ ಜಾರಿಗೊಳಿಸಿರುವ ಗ್ಯಾರಂಟಿ ಯೋಜನೆಗಳು ಜನರಿಗೆ ಹೇಗೆ ಪ್ರಯೋಜನವಾಗಿವೆ ಎಂಬುದನ್ನು ತಿಳಿದುಕೊಳ್ಳಲು ಮಹಾರಾಷ್ಟ್ರದ ಆಡಳಿತಾರೂಢ 'ಮಹಾಯುತಿ' ಮೈತ್ರಿಕೂಟದ ನಾಯಕರು ಕರ್ನಾಟಕಕ್ಕೆ ಭೇಟಿ ನೀಡಲಿ' ಎಂದು ಕರ್ನಾಟಕ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಶನಿವಾರ ಹೇಳಿದರು.

ಡಿ.ಕೆ. ಶಿವಕುಮಾರ್

'ಕಾಂಗ್ರೆಸ್ ಅಧಿಕಾರಕ್ಕೆ ಬಂದ ಸಂದರ್ಭಗಳಲ್ಲೆಲ್ಲಾ ಸಮಾಜದ ಪ್ರತಿಯೊಂದು ವರ್ಗದ ಕಲ್ಯಾಣ ದೃಷ್ಟಿಯಲ್ಲಿಟ್ಟುಕೊಂಡು ಯೋಜನೆಗಳನ್ನು ಜಾರಿಗೊಳಿಸಿದೆ' ಎಂದರು.

ಹಿಮಾಚಲ ಪ್ರದೇಶ ಮುಖ್ಯಮಂತ್ರಿ ಸುಖ್ವಿಂದರ್ ಸಿಂಗ್ ಸುಖು, ತೆಲಂಗಾಣ ಮುಖ್ಯಮಂತ್ರಿ ಎ.ರೇವಂತ ರೆಡ್ಡಿ ಅವರೊಂದಿಗೆ ಜಂಟಿ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿದರು.

ಹಿಮಾಚಲ ಪ್ರದೇಶ, ತೆಲಂಗಾಣ ಹಾಗೂ ಕರ್ನಾಟಕದಲ್ಲಿ ಚುನಾವಣೆ ಪೂರ್ವದಲ್ಲಿ ನೀಡಿದ್ದ ಭರವಸೆಗಳನ್ನು ಕಾಂಗ್ರೆಸ್ ಪಕ್ಷ ಈಡೇರಿಸಿಲ್ಲ ಎಂಬ ಬಿಜೆಪಿಯ ಆರೋಪಗಳಿಗೆ ಈ ಮೂವರು ನಾಯಕರು ತಿರುಗೇಟು ನೀಡಿದರು.

'ಮತಗಳಿಗಾಗಿ ನಾವು ಕಾರ್ಯಕ್ರಮ ರೂಪಿಸುತ್ತಿಲ್ಲ. ರಾಜ್ಯದ ಅಭಿವೃದ್ಧಿಗಾಗಿ ಯೋಜನೆಗಳನ್ನು ಜಾರಿಗೊಳಿಸುತ್ತೇವೆ. ಮಾಜಿ ಪ್ರಧಾನಿಗಳಾದ ಜವಾಹರಲಾಲ್ ನೆಹರೂ ಅವರಿಂದ ಹಿಡಿದು ಮನಮೋಹನ್ ಸಿಂಗ್ ವರೆಗಿನ ಅವಧಿಯಲ್ಲಿ ಜಾರಿಗೊಳಿಸಿರುವ ಯಾವ ಯೋಜನೆಗಳನ್ನೂ ಸ್ಥಗಿತಗೊಳಿಸಿಲ್ಲ' ಎಂದು ಡಿ.ಕೆ.ಶಿವಕುಮಾರ್ ಹೇಳಿದರು.

'ತೆಲಂಗಾಣದಲ್ಲಿ ಜಾರಿಗೊಳಿಸಿರುವ ಯೋಜನೆಗಳ ಕುರಿತು ಪ್ರಧಾನಿ ನರೇಂದ್ರ ಮೋದಿ ಸುಳ್ಳು ಹೇಳುತ್ತಿದ್ದಾರೆ. ನಮ್ಮ ಸರ್ಕಾರ 22 ಲಕ್ಷಕ್ಕೂ ಅಧಿಕ ರೈತರ ₹17,869 ಕೋಟಿಯಷ್ಟು ಕೃಷಿ ಸಾಲ ಮನ್ನಾ ಮಾಡಿದೆ' ಎಂದು ತೆಲಂಗಾಣ ಮುಖ್ಯಮಂತ್ರಿ ರೇವಂತ ರೆಡ್ಡಿ ಹೇಳಿದರು.

'ರಾಜ್ಯದಲ್ಲಿ ಜಾರಿಗೊಳಿಸಿರುವ ಹಳೆ ಪಿಂಚಣಿ ಯೋಜನೆಯಿಂದ ಜನರಿಗೆ ಭಾರಿ ಪ್ರಯೋಜನವಾಗಿದೆ. ಹೊಸ ಪಿಂಚಣಿ ಯೋಜನೆಯಡಿ ಈ ಮೊದಲು ತಿಂಗಳಿಗೆ ₹5 ಸಾವಿರ ಪಡೆಯುತ್ತಿದ್ದ ವ್ಯಕ್ತಿ, ಹಳೆ ಪಿಂಚಣಿ ಯೋಜನೆಯಡಿ ₹50 ಸಾವಿರ ಪಡೆಯುತ್ತಿದ್ದಾನೆ' ಎಂದು ಹಿಮಾಚಲ ಪ್ರದೇಶ ಮುಖ್ಯಮಂತ್ರಿ ಸುಖ್ವಿಂದರ್ ಸಿಂಗ್ ಸುಖು ಹೇಳಿದರು.

'ಪ್ರಚೋದನಾಕಾರಿ ಭಾಷಣದಿಂದ ದಾರಿ ತಪ್ಪಿಸುತ್ತಿರುವ ಬಿಜೆಪಿ'

ಮುಂಬೈ: ಕರ್ನಾಟಕದಲ್ಲಿನ ಕಾಂಗ್ರೆಸ್ ಸರ್ಕಾರದ ಗ್ಯಾರಂಟಿ ಯೋಜನೆಗಳನ್ನು ಸಮರ್ಥಿಸಿಕೊಂಡಿರುವ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು, 'ನಮ್ಮ ಪಕ್ಷವು ಯಾವಾಗಲೂ ಜನರ ಕಲ್ಯಾಣಕ್ಕಾಗಿ ಕೆಲಸ ಮಾಡುತ್ತದೆ. ಹೀಗಾಗಿ, ಜನರಿಗೆ ನೀಡಿರುವ ಭರವಸೆಗಳನ್ನು ಈಡೇರಿಸುತ್ತದೆ' ಎಂದು ಹೇಳಿದರು.

ಕಾಂಗ್ರೆಸ್ ಆಡಳಿತ ಇರುವ ರಾಜ್ಯಗಳಲ್ಲಿ ಚುನಾವಣಾ ಪೂರ್ವ ಘೋಷಿಸಿರುವ ಗ್ಯಾರಂಟಿಗಳನ್ನು ಪೂರೈಸಲು ಕಾಂಗ್ರೆಸ್ ವಿಫಲವಾಗಿದೆ ಎಂಬ ಬಿಜೆಪಿ ಆರೋಪಕ್ಕೆ ಖರ್ಗೆ ಅವರು ನಾಗ್ಪುರದಲ್ಲಿ ಶನಿವಾರ ನಡೆದ ಸುದ್ದಿಗೋಷ್ಠಿಯಲ್ಲಿ ತಿರುಗೇಟು ನೀಡಿದ್ದಾರೆ.

ಪ್ರಚೋದನಕಾರಿ ಭಾಷಣ ಮತ್ತು ಸುಳ್ಳುಗಳ ಮೂಲಕ ಬಿಜೆಪಿ ನಾಯಕರು ಜನರ ಗಮನವನ್ನು ಬೇರೆಡೆ ಸೆಳೆಯುತ್ತಿದ್ದಾರೆ. ಮಹಾರಾಷ್ಟ್ರವನ್ನು ಅಭಿವೃದ್ಧಿಯ ಪಥದತ್ತ ಕೊಂಡೊಯ್ಯುವ ಉತ್ತಮ ಸರ್ಕಾರದ ಅಗತ್ಯವಿದೆ. ಈ ಬಾರಿಯ ಚುನಾವಣೆಯಲ್ಲಿ ಮಹಾ ವಿಕಾಸ್ ಅಘಾಡಿ (ಎಂವಿಎ) ಗೆಲುವು ದಾಖಲಿಸಲಿದೆ' ಎಂದು ಖರ್ಗೆ ವಿಶ್ವಾಸ ವ್ಯಕ್ತಪಡಿಸಿದರು.

'ಬಿಜೆಪಿಯು ಕಾಂಗ್ರೆಸ್ ಜತೆ ವಾಗ್ವಾದ ನಡೆಸುವುದರಲ್ಲಿ ನಿರತವಾಗಿದೆ. ಕಳೆದ 11 ವರ್ಷಗಳಲ್ಲಿ ಬಿಜೆಪಿ ಸರ್ಕಾರ ಏನು ಮಾಡಿದೆ ಎಂದು ಅವರು ಹೇಳಲಿ, 55 ವರ್ಷಗಳಲ್ಲಿ ಕಾಂಗ್ರೆಸ್ ಯಾವ ಕೆಲಸ ಮಾಡಿದೆ ಎಂದು ನಾವು ಹೇಳುತ್ತೇವೆ' ಎಂದು ಖರ್ಗೆ ಸವಾಲು ಹಾಕಿದರು.

ಮಲ್ಲಿಕಾರ್ಜುನ ಖರ್ಗೆ

'ವಿಭಜನೆಯಾದರೆ ನಾವು ನಾಶವಾಗುತ್ತೇವೆ ಎಂದು ಉತ್ತರಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಹೇಳುತ್ತಾರೆ. ಒಗ್ಗಟ್ಟಾಗಿದ್ದರೆ ನಾವು ಸುರಕ್ಷಿತರಾಗಿರುತ್ತೇವೆ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಹೇಳುತ್ತಾರೆ. ಮೊದಲು ನೀವು ನಿರ್ಧಾರ ಮಾಡಿ ಯಾರ ಘೋಷಣೆಯನ್ನು ಜನ ಅನುಸರಿಸಬೇಕು' ಎಂದು ಖರ್ಗೆ ಪ್ರಶ್ನಿಸಿದ್ದಾರೆ.

ಪುಳಿತ್ತಡಿ ಧರ್ಮನಿಂದನೆಯ ಭಿತ್ತಿಪತ್ರ ಪತ್ತೆ

ಪುತ್ತೂರು (ದಕ್ಷಿಣ ಕನ್ನಡ): ತಾಲ್ಲೂಕಿನ ನೆಟ್ಟಣಿಗೆ ಮುಡ್ನೂರು ಗ್ರಾಮದ ಈಶ್ವರಮಂಗಲ ಸಮೀಪದ ಪುಳಿತ್ತಡಿ ಎಂಬಲ್ಲಿ ಪ್ರಯಾಣಿಕರ ತಂಗುದಾಣದ ಗೋಡೆಯಲ್ಲಿ, ಮುಸ್ಲಿಂ ಧರ್ಮದ ಕುರಿತು ಅವಹೇಳನಕಾರಿ ಬರಹಗಳನ್ನು ಎರಡು ಹಾಳೆಗಳಲ್ಲಿ ಬರೆದು ಅಂಟಿಸಿರುವುದು ಶುಕ್ರವಾರ ಪತ್ತೆಯಾಗಿದೆ.

'ಒಂದು ಹಾಳೆಯಲ್ಲಿ ಪ್ರವಾದಿಯ ಬಗ್ಗೆ ಮತ್ತು ಮುಸ್ಲಿಂ ಧರ್ಮದ ಬಗ್ಗೆ ಅಹೇಳನಕಾರಿ ಬರಹವಿದೆ. ಮತ್ತೊಂದು ಹಾಳೆಯಲ್ಲಿ ಅಶ್ಲೀಲ ಚಿತ್ರ ಬಿಡಿಸಿ, ಅಶ್ಲೀಲ ಪದಗಳನ್ನು ಬರೆಯಲಾಗಿದೆ. ಈಶ್ವರಮಂಗಲ ಹೊರ ಠಾಣೆಯ ಪೊಲೀಸರು ಈ ಹಾಳೆಗಳನ್ನು ವಶಪಡಿಸಿಕೊಂಡಿದ್ದಾರೆ. ರಫೀಕ್ ಎಂಬುವರು ದೂರು ನೀಡಿದ್ದು, ಸಂಪ್ಯ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಈ ಕೃತ್ಯ ನಡೆಸಿದ ಕಿಡಿಗೇಡಿಗಳ ಪತ್ತೆಗೆ ಕ್ರಮ ಕೈಗೊಂಡಿದ್ದೇವೆ' ಎಂದು ದಕ್ಷಿಣ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎನ್.ಯತೀಶ್ ತಿಳಿಸಿದರು.

ಕರ್ನಾಟಕ ಸರ್ಕಾರ

ತಾಲ್ಲೂಕು ಪಂಚಾಯಿತಿ ಕಾರ್ಯಾಲಯ, ಮಳವಳ್ಳಿ

ಪಿನ್‌ಕೋಡ್:571430. ದೂರವಾಣಿ ಸಂ:08231–242078

ಇ–ಮೇಲ್:eotpmalavalli@gmail.com

ಸಂ:ತಾಪಂಮ:ಲೆಶಾ:ಅನಿಅನು:ಸಿಆರ್11:2024–25

ದಿನಾಂಕ:–04–11–2024

ಟೆಂಡರ್ ಪ್ರಕಟಣೆ:–(ದ್ವಿ–ಲಕೋಟೆ ಪದ್ಧತಿ)

ತಾಲ್ಲೂಕು ಪಂಚಾಯತ್,ಮಳವಳ್ಳಿ ಕಚೇರಿಯ 2024–25ನೇ ಸಾಲಿನ ರಾಜ್ಯ ಹಣಕಾಸು ಆಯೋಗದ ಅನಿರ್ಬಂಧಿತ ಅನುದಾನದಡಿ ಡಿಜಿಟಲ್ ಗ್ರಂಥಾಲಯ ಸಾಮಾಗ್ರಿ ಮತ್ತು ಪೀಠೋಪಕರಣಗಳನ್ನು ಪೂರೈಸಲು ನೋಂದಾಯಿತ ಸಂಸ್ಥೆಗಳಿಂದ ಟೆಂಡರನ್ನು ಆಹ್ವಾನಿಸಲಾಗಿದೆ.

ವಿವರ:–1. ಟೆಂಡರ್‌ಗೆ ಇಡಲಾದ ಮೊತ್ತ:– 16.00/– ಲಕ್ಷ, ಇ.ಎಂ.ಡಿ ಮೊತ್ತ :32000/–, ಇ–ಪೋರ್ಟಲ್‌ನಲ್ಲಿ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ:19.11.2024, ತಾಂತ್ರಿಕ ಬಿಡ್ ತೆರೆಯುವ ದಿನಾಂಕ:–20–11–2024, ಆರ್ಥಿಕ ಬಿಡ್ ತೆರೆಯುವ ದಿನಾಂಕ:22.11.2024.ಸದರಿ ಟೆಂಡರ್ ಮತ್ತು ಇತರೆ ಷರತ್ತುಗಳನ್ನು ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್ https://kppp.karnataka.gov.in ಮೂಲಕ ಹಾಗೂ ಹೆಚ್ಚಿನ ಮಾಹಿತಿ ಬೇಕಾದ್ದಲ್ಲಿ ತಾಲ್ಲೂಕು ಪಂಚಾಯಿತಿ,ಮಳವಳ್ಳಿ ಕಛೇರಿಯಿಂದ ಪಡೆದುಕೊಳ್ಳಬಹುದಾಗಿದೆ.

ಸಹಿ/–ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್, ಮಳವಳ್ಳಿ.

DIPR/ADMDY-424/2024-25

ಮುದ್ರೆಮನೆ ಕಾಫಿ (50 ಕೆಜಿಗೆ)

ಎಪಿ	₹17500
ಎಸಿ	₹10530
ಆರ್‌ಪಿ	₹17500
ಆರ್‌ಸಿ	₹10270

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4	₹179
ಆರ್‌ಎಸ್‌ಎಸ್-5	₹173
ಗುಡ್ ಲಾಟ್	₹169

(ಪ್ರತಿ ಕೆಜಿಗೆ)

ಕೇಂದ್ರೀಕೃತ ಪಿಂಚಣಿ ಪಾವತಿ: ಜ. 1ರಿಂದ ಜಾರಿ

ನವದೆಹಲಿ (ಪಿಟಿಐ): ಕೇಂದ್ರೀಕೃತ ಪಿಂಚಣಿ ಪಾವತಿ ವ್ಯವಸ್ಥೆ (ಸಿಪಿಪಿಎಸ್) ಜಾರಿಗೆ ಸಂಬಂಧಿಸಿದಂತೆ ಉದ್ಯೋಗಿ ಪಿಂಚಣಿ ಯೋಜನೆ (ಇಪಿಎಸ್)–1995ರ ಅಡಿ ಅನುಷ್ಠಾನಗೊಳಿಸಿದ್ದ ಪ್ರಾಯೋಗಿಕ ಯೋಜನೆಯು ಯಶಸ್ವಿಯಾಗಿದೆ ಎಂದು ಕೇಂದ್ರ ಕಾರ್ಮಿಕ ಸಚಿವ ಮನ್ಸುಖ್ ಮಾಂಡವೀಯ ತಿಳಿಸಿದ್ದಾರೆ.

ಸಿಪಿಪಿಎಸ್‌ನಡಿ ದೇಶದ ಯಾವುದೇ ಭಾಗದಲ್ಲಿ ಪಿಂಚಣಿದಾರರು, ಬ್ಯಾಂಕ್ ಅಥವಾ ಶಾಖೆಯಿಂದ ಪಿಂಚಣಿ ಪಡೆಯಲು ಅವಕಾಶ ಸಿಗಲಿದೆ. ಇದು ತಡೆರಹಿತ ಪಾವತಿ ವ್ಯವಸ್ಥೆಯಾಗಿದೆ. ಇದರಿಂದ 78 ಲಕ್ಷ ಇಪಿಎಸ್ ಪಿಂಚಣಿದಾರರಿಗೆ ಅನುಕೂಲವಾಗಲಿದೆ.

ಮುಂದಿನ ವರ್ಷದ ಜನವರಿ 1ರಿಂದ ಅಧಿಕೃತವಾಗಿ ಈ ವ್ಯವಸ್ಥೆಯು ಜಾರಿಗೆ ಬರಲಿದೆ.

'ಮೂರರಿಂದ ನಾಲ್ಕು ಬ್ಯಾಂಕ್‌ಗಳ ಜೊತೆಗೆ ನೌಕರರ ಭವಿಷ್ಯ ನಿಧಿ ಸಂಘಟನೆಯು (ಇಪಿಎಫ್‌ಒ) ವಿಭಾಗ ಮಟ್ಟದ ಪ್ರಾದೇಶಿಕ ಕಚೇರಿಗಳು ಈ ಹೊಸ ಪಿಂಚಣಿ ಪಾವತಿ ಸಂಬಂಧ ಒಪ್ಪಂದ ಮಾಡಿಕೊಳ್ಳಲಿವೆ' ಎಂದು ಮಾಂಡವೀಯ ತಿಳಿಸಿದ್ದಾರೆ.

'ಅಕ್ಟೋಬರ್ 29ರಿಂದ 30ರ ವರೆಗೆ ಸಿಪಿಪಿಎಸ್ ಪ್ರಾಯೋಗಿಕ ಯೋಜನೆಯಡಿ ಜಮ್ಮು, ಕಾಶ್ಮೀರ ಮತ್ತು ಕರ್ನಾಲ್ ಭಾಗದ 49 ಸಾವಿರ ಪಿಂಚಣಿದಾರರಿಗೆ ₹11 ಕೋಟಿ ಪಿಂಚಣಿ ಪಾವತಿಸಲಾಗಿದೆ' ಎಂದು ತಿಳಿಸಿದ್ದಾರೆ.

ಅಭಿಪ್ರಾಯ ತಿಳಿಸಲು ರಾಜ್ಯಗಳಿಗೆ ಸಚಿವೆ ನಿರ್ಮಲಾ ಸೂಚನೆ

ಆರ್‌ಆರ್‌ಬಿ ವಿಲೀನ ಪ್ರಸ್ತಾವ

ಪ್ರಜಾವಾಣಿ ವಾರ್ತೆ

ನಿರ್ಮಲಾ ಸೀತಾರಾಮನ್

ಬೆಂಗಳೂರು: 'ಪ್ರಾದೇಶಿಕ ಗ್ರಾಮೀಣ ಬ್ಯಾಂಕ್‌ಗಳ (ಆರ್‌ಆರ್‌ಬಿ) ವಿಲೀನಕ್ಕೆ ಸಂಬಂಧಿಸಿದಂತೆ ರಾಜ್ಯಗಳು ಅಭಿಪ್ರಾಯ ತಿಳಿಸಬೇಕಿದೆ' ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದ್ದಾರೆ.

ನಗರದಲ್ಲಿ ಶನಿವಾರ ನಡೆದ ದಕ್ಷಿಣ ವಲಯದ 10 ಪ್ರಾದೇಶಿಕ ಗ್ರಾಮೀಣ ಬ್ಯಾಂಕ್‌ಗಳ ಪ್ರಗತಿ ಪರಿಶೀಲನಾ ಸಭೆಯಲ್ಲಿ ಅವರು ಮಾತನಾಡಿದರು.

'ಒಂದು ರಾಜ್ಯ, ಒಂದು ಆರ್‌ಆರ್‌ಬಿ' ಎಂಬುದು ಸರ್ಕಾರದ ತತ್ವವಾಗಿದೆ. ಹಾಗಾಗಿ, ವಿಲೀನ ಪ್ರಸ್ತಾವ ಕುರಿತು ಅಭಿಪ್ರಾಯ ಮಂಡಿಸಬೇಕಿದೆ' ಎಂದು ಸೂಚಿಸಿದರು.

ಗ್ರಾಮೀಣ ಪ್ರದೇಶದ ಆರ್ಥಿಕ ಬೆಳವಣಿಗೆಯಲ್ಲಿ ಗ್ರಾಮೀಣ ಬ್ಯಾಂಕ್‌ಗಳ ಪಾತ್ರ ನಿರ್ಣಾಯಕವಾಗಿದೆ. ಸರ್ಕಾರದ ಮುದ್ರಾ, ಪಿ.ಎಂ–ವಿಶ್ವಕರ್ಮ ಸೇರಿ ಇತರೆ ಯೋಜನೆಯಡಿ ಅರ್ಹರಿಗೆ ಸೌಲಭ್ಯ ಒದಗಿಸಲು ಮುಂದಾಗಬೇಕಿದೆ ಎಂದು ಸೂಚಿಸಿದರು.

ಅಲ್ಲದೆ ಹೈನುಗಾರಿಕೆ, ಪಶುಪಾಲನೆ, ಮೀನುಗಾರಿಕೆಗೆ ಸಾಲ ಸೌಲಭ್ಯ ನೀಡಬೇಕು. ಪ್ರಾದೇಶಿಕ ವಿಭಾಗದ ವ್ಯಾಪ್ತಿಯಲ್ಲಿ ಕೃಷಿ ಅಭಿವೃದ್ಧಿ ಚಟುವಟಿಕೆಗಳಿಗೆ ಹೆಚ್ಚಿನ ಒತ್ತು ನೀಡಬೇಕು ಎಂದು ನಿರ್ದೇಶನ ನೀಡಿದರು.

'ಪ್ರಧಾನ ಮಂತ್ರಿ ಜನಧನ ಯೋಜನೆ, ಪ್ರಧಾನ ಮಂತ್ರಿ ಜೀವನ್ ಜ್ಯೋತಿ ಯೋಜನೆ, ಪ್ರಧಾನ ಮಂತ್ರಿ ಸುರಕ್ಷಾ ಬಿಮಾ ಯೋಜನೆ, ಅಟಲ್ ಪಿಂಚಣಿ ಯೋಜನೆಯಡಿ ಇನ್ನೂ ಹೆಚ್ಚಿನ ಗುರಿ ಸಾಧನೆ ಮಾಡಬೇಕು' ಎಂದು ಸೂಚಿಸಿದರು.

ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಪ್ರಮಾಣದ ಉದ್ದಿಮೆಗಳಿಗೆ (ಎಂಎಸ್‌ಎಂಇ) ಹೆಚ್ಚಿನ ಸಾಲ ಸೌಲಭ್ಯ ಕಲ್ಪಿಸಬೇಕು. ಗ್ರಾಹಕರಿಗೆ ಡಿಜಿಟಲ್ ಸೇವೆ ಒದಗಿಸಬೇಕು ಎಂದು ಹೇಳಿದರು.

ಬ್ಯಾಂಕ್‌ಗಳ ಮೈಕ್ರೊ ಎಟಿಎಂ, ಕಾಲ್ ಸೆಂಟರ್, ನೆಟ್ ಬ್ಯಾಂಕಿಂಗ್, ವಿಡಿಯೊ ಕೆವೈಸಿ, ಆರ್‌ಟಿಜಿಎಸ್ ಸೇರಿ ಡಿಜಿಟಲ್ ತಂತ್ರಜ್ಞಾನವನ್ನು ಮೇಲ್ದರ್ಜೆಗೇರಿಸುವ ಬಗ್ಗೆ ನಿರ್ಮಲಾ ಮೆಚ್ಚುಗೆ ವ್ಯಕ್ತಪಡಿಸಿದರು.

ಕೇಂದ್ರ ಹಣಕಾಸು ಖಾತೆಯ ರಾಜ್ಯ ಸಚಿವ ಪಂಕಜ್ ಚೌಧರಿ ಇದ್ದರು.

₹3,816 ಕೋಟಿ ನಿವ್ವಳ ಲಾಭ

'2023–24ನೇ ಆರ್ಥಿಕ ವರ್ಷದಲ್ಲಿ ದಕ್ಷಿಣ ವಲಯದ ಗ್ರಾಮೀಣ ಬ್ಯಾಂಕ್‌ಗಳು ಉತ್ತಮ ಗುರಿ ಸಾಧನೆ ಮಾಡಿವೆ. ಬ್ಯಾಂಕ್‌ಗಳ ಸುರಕ್ಷತೆಯ ಮಾನದಂಡವಾದ ಬಂಡವಾಳ ಪರ್ಯಾಪ್ತತಾ ಅನುಪಾತ (ಸಿಆರ್‌ಎಆರ್) ಶೇ 17.6ರಷ್ಟಿದೆ. ವಸೂಲಾಗದ ಸಾಲದ ಸರಾಸರಿ ಪ್ರಮಾಣ (ಜಿಎನ್‌ಪಿಎ) ಶೇ 3.94ರಷ್ಟಿದೆ' ಎಂದು ಸಚಿವೆ ನಿರ್ಮಲಾ ಹೇಳಿದರು.

ಆಂಧ್ರಪ್ರದೇಶ, ಕರ್ನಾಟಕ, ಕೇರಳ, ತಮಿಳುನಾಡು, ತೆಲಂಗಾಣ ಮತ್ತು ಪುದುಚೇರಿಯಲ್ಲಿರುವ ಬ್ಯಾಂಕ್‌ಗಳು ₹3,816 ಕೋಟಿ ನಿವ್ವಳ ಲಾಭಗಳಿಸಿವೆ. ಇದು ದೇಶದಲ್ಲಿರುವ ಉಳಿದ ಎಲ್ಲಾ ಪ್ರಾದೇಶಿಕ ಗ್ರಾಮೀಣ ಬ್ಯಾಂಕ್‌ಗಳ ಲಾಭದ ಅರ್ಧದಷ್ಟು ಎಂದು ವಿವರಿಸಿದರು.

ಬ್ಯಾಂಕ್‌ಗಳಲ್ಲಿ ಇರುವ ಚಾಲ್ತಿ ಮತ್ತು ಉಳಿತಾಯ ಖಾತೆಗಳ ಠೇವಣಿ ಮೊತ್ತದ ಹೆಚ್ಚಳಕ್ಕೆ ಒತ್ತು ನೀಡಬೇಕು. ಇದು ಸಾಲ ನೀಡಿಕೆ ಪ್ರಮಾಣ ಹೆಚ್ಚಳಕ್ಕೆ ನೆರವಾಗಲಿದೆ ಎಂದು ಹೇಳಿದರು.

ಸುದ್ದಿ 2 ನಿಮಿಷ

ಆರೋಗ್ಯ ವಿಮೆ: ಈ ವರ್ಷವೇ ಖಾಸಗಿ ಕಂಪನಿಯ ಷೇರು ಖರೀದಿ– ಎಲ್‌ಐಸಿ

ನವದೆಹಲಿ (ಪಿಟಿಐ): 'ಆರೋಗ್ಯ ವಿಮಾ ಕ್ಷೇತ್ರ ಪ್ರವೇಶಿಸುವ ಸಂಬಂಧ ಪ್ರಸಕ್ತ ಆರ್ಥಿಕ ವರ್ಷದಲ್ಲಿಯೇ ಖಾಸಗಿ ಆರೋಗ್ಯ ವಿಮಾ ಕಂಪನಿಯೊಂದರ ಷೇರುಗಳನ್ನು ಖರೀದಿಸಲು ನಿರ್ಧರಿಸಲಾಗಿದೆ' ಎಂದು ಭಾರತೀಯ ಜೀವ ವಿಮಾ ನಿಗಮದ (ಎಲ್‌ಐಸಿ) ವ್ಯವಸ್ಥಾಪಕ ನಿರ್ದೇಶಕ ಮತ್ತು ಸಿಇಒ ಸಿದ್ಧಾರ್ಥ ಮೊಹಂತಿ ತಿಳಿಸಿದ್ದಾರೆ.

'ಎಲ್‌ಐಸಿಯು ಆರೋಗ್ಯ ವಿಮಾ ವಲಯಕ್ಕೆ ಪ್ರವೇಶ ಪಡೆಯಲು ಸಿದ್ಧವಿದೆ. ಇದಕ್ಕೆ ಪೂರಕವಾದ ಕೆಲಸಗಳು ನಡೆಯುತ್ತಿವೆ. ಸೂಕ್ತವಾದ ಕಂಪನಿಯ ಹುಡುಕಾಟ ನಡೆದಿದೆ. ಆ ಕಂಪನಿಯ ಮಾರುಕಟ್ಟೆ ಮೌಲ್ಯ ಸೇರಿ ಇತರೆ ವಿಷಯಗಳ ಮೇಲೆ ಎಷ್ಟು ಷೇರುಗಳನ್ನು ಖರೀದಿಸಬೇಕು ಎಂಬುದು ನಿರ್ಧಾರವಾಗಲಿದೆ' ಎಂದು ತಿಳಿಸಿದ್ದಾರೆ.

'ಷೇರುಗಳ ಖರೀದಿಗೆ ಸಂಬಂಧಿಸಿದ ಎಲ್ಲಾ ಪ್ರಕ್ರಿಯೆಗಳು ಪೂರ್ಣಗೊಂಡ ಬಳಿಕ ಆಡಳಿತ ಮಂಡಳಿಯ ಅನುಮೋದನೆ ಪಡೆದು ಆರೋಗ್ಯ ವಿಮಾ ಕ್ಷೇತ್ರವನ್ನು ಪ್ರವೇಶಿಸಲಾಗುವುದು' ಎಂದು ತಿಳಿಸಿದ್ದಾರೆ.

ದೇಶದಲ್ಲಿ ವಿಮಾ ಸೌಲಭ್ಯವನ್ನು ಹೆಚ್ಚಿಸಬೇಕಿದೆ. ಈ ನಿಟ್ಟಿನಲ್ಲಿ ಒಂದು ಕಂಪನಿಗೆ ಜೀವ ವಿಮೆ, ಸಾಮಾನ್ಯ ಅಥವಾ ಆರೋಗ್ಯ ವಿಮೆ ಸೌಲಭ್ಯ ನೀಡುವುದಕ್ಕೆ ಸಂಯೋಜಿತ ಪರವಾನಗಿ ನೀಡಬೇಕು ಎಂದು ಸಂಸದೀಯ ಸಮಿತಿಯು ಶಿಫಾರಸು ಮಾಡಿದೆ.

ಜೊಮಾಟೊ, ಸ್ವಿಗ್ಗಿಯಿಂದ ಸಿಸಿಐ ನಿಯಮ ಉಲ್ಲಂಘನೆ

ನವದೆಹಲಿ (ಪಿಟಿಐ): ಆನ್‌ಲೈನ್ ಮೂಲಕ ಆಹಾರ ಪದಾರ್ಥ ಪೂರೈಸುವ ಜೊಮಾಟೊ ಮತ್ತು ಸ್ವಿಗ್ಗಿ ಕಂಪನಿಗಳು ಭಾರತೀಯ ಸ್ಪರ್ಧಾತ್ಮಕ ಆಯೋಗದ (ಸಿಸಿಐ) ನಿಯಮಾವಳಿಗಳನ್ನು ಉಲ್ಲಂಘಿಸಿರುವುದು ತನಿಖೆಯಿಂದ ಬಯಲಿಗೆ ಬಂದಿದೆ ಎಂದು ಮೂಲಗಳು ತಿಳಿಸಿವೆ.

ಈ ಎರಡು ಕಂಪನಿಗಳು ನ್ಯಾಯಸಮ್ಮತವಲ್ಲದ ವಹಿವಾಟು ನಡೆಸುತ್ತಿವೆ. ಕೆಲವು ರೆಸ್ಟೋರೆಂಟ್ ಪಾಲುದಾರರಿಗೆ ಹೆಚ್ಚಿನ ಆದ್ಯತೆ ನೀಡುತ್ತಿವೆ ಎಂದು ದೂರಿದ್ದ ನ್ಯಾಷನಲ್ ರೆಸ್ಟೋರೆಂಟ್ ಅಸೋಸಿಯೇಷನ್ ಆಫ್ ಇಂಡಿಯಾವು (ಎನ್‌ಆರ್‌ಎಐ) ಈ ಕುರಿತು ಪರಿಶೀಲಿಸುವಂತೆ ಸಿಸಿಐಗೆ ಅರ್ಜಿ ಸಲ್ಲಿಸಿತ್ತು.

ಆಯೋಗವು 2022ರ ಏಪ್ರಿಲ್‌ನಲ್ಲಿ ಈ ಆರೋಪ ಕುರಿತು ಸಮಗ್ರ ತನಿಖೆಗೆ ಆದೇಶಿಸಿತ್ತು. ಪ್ರಸಕ್ತ ವರ್ಷದ ಆರಂಭದಲ್ಲಿ ಆಯೋಗಕ್ಕೆ ಈ ತನಿಖಾ ವರದಿ ಸಲ್ಲಿಕೆಯಾಗಿದೆ ಎಂದು ಮೂಲಗಳು ಹೇಳಿವೆ.

ನಿಯಮಾವಳಿಗಳ ಪ್ರಕಾರ ಆಯೋಗದ ಮಹಾನಿರ್ದೇಶಕರು, ಎರಡು ಕಂಪನಿಗಳಿಗೆ ವರದಿಯ ಪ್ರತಿ ನೀಡಿ ವಿಚಾರಣೆ ನಡೆಸಲಿದ್ದಾರೆ. ಕಂಪನಿಗಳಿಂದ ವಿವರಣೆ ಕೇಳಿದ ಬಳಿಕ ಅಂತಿಮ ಆದೇಶ ನೀಡಲಿದ್ದಾರೆ ಎಂದು ತಿಳಿಸಿವೆ.

'ಮಾರ್ಚ್‌ನಲ್ಲಿ ಈ ತನಿಖಾ ವರದಿಯನ್ನು ಪರಾಮರ್ಶೆ ನಡೆಸಲಾಗಿದೆ' ಎಂದು ಎನ್‌ಆರ್‌ಎಐ ತಿಳಿಸಿದೆ.

'ಕಂಪನಿಗಳ ವಿರುದ್ಧ ಕೇಳಿಬಂದಿರುವ ಆರೋಪದ ಬಗ್ಗೆ ತ್ವರಿತವಾಗಿ ವಿಚಾರಣೆಯನ್ನು ಕೈಗೆತ್ತಿಗೊಳ್ಳುವ ನಿರೀಕ್ಷೆಯಿದೆ' ಎಂದು ಎನ್‌ಆರ್‌ಎಐ ಅಧ್ಯಕ್ಷ ಸಾಗರ್ ದರಿಯಾನಿ ತಿಳಿಸಿದ್ದಾರೆ.

ಟ್ರಂಪ್ ಹತ್ಯೆಗೆ ಇರಾನ್ ಸಂಚು: ಅಮೆರಿಕ

ಡೊನಾಲ್ಡ್ ಟ್ರಂಪ್

ನ್ಯೂಯಾರ್ಕ್/ ವಾಷಿಂಗ್ಟನ್ (ಎಪಿ): ಅಮೆರಿಕದ ಅಧ್ಯಕ್ಷೀಯ ಚುನಾವಣೆಗೂ ಮುನ್ನ ಇರಾನ್‌ನ ಸಂಚುಕೋರರು ಡೊನಾಲ್ಡ್ ಟ್ರಂಪ್ ಅವರನ್ನು ಹತ್ಯೆ ಮಾಡಲು ಯೋಜಿಸಿದ್ದರು ಎಂದು ಮ್ಯಾನ್‌ಹಟನ್‌ನ ಫೆಡರಲ್ ಪ್ರಾಸಿಕ್ಯೂಟರ್‌ಗಳು ಶುಕ್ರವಾರ ಹೇಳಿದ್ದಾರೆ.

ಸಂಚು ಕಾರ್ಯಗತಗೊಳಿಸಲು ಇರಾನ್‌ನ ರೆವಲ್ಯೂಷನರಿ ಗಾರ್ಡ್, ಫರ್ಹಾದ್ ಶಾಕಿರಿ ಎಂಬ ಬಾಡಿಗೆ ಹಂತಕರನ್ನು ನಿಯೋಜಿಸಿತ್ತು ಎಂದು ಸಂಚುಗಾರರಲ್ಲಿ ಒಬ್ಬ ಹೇಳಿರುವುದಾಗಿ ಪ್ರಾಸಿಕ್ಯೂಟರ್‌ಗಳು ನ್ಯಾಯಾಲಯಕ್ಕೆ ಸಲ್ಲಿಸಿರುವ ದಾಖಲೆಯಲ್ಲಿ ಆರೋಪಿಸಿದ್ದಾರೆ.

ಮ್ಯಾನ್‌ಹಟನ್‌ನ ಫೆಡರಲ್ ಕೋರ್ಟ್‌ನಲ್ಲಿ ದಾಖಲಾಗಿರುವ ದೂರಿನ ಪ್ರಕಾರ, ಟ್ರಂಪ್ ಮೇಲೆ ನಿಗಾ ಇಡುವಂತೆ ಮತ್ತು ಅಂತಿಮವಾಗಿ ಅವರನ್ನು ಕೊಲ್ಲುವಂತೆ ಇರಾನ್ ರೆವಲ್ಯೂಷನರಿ ಗಾರ್ಡ್ ಸೆಪ್ಟೆಂಬರ್ ತಿಂಗಳಲ್ಲಿ ಸೂಚನೆ ನೀಡಿತ್ತು ಎಂದು ಬಾಡಿಗೆ ಹಂತಕರಲ್ಲಿ ಒಬ್ಬಾತ ಎಫ್‌ಬಿಐಗೆ ಮಾಹಿತಿ ನೀಡಿದ್ದಾನೆ.

ಅಫ್ಗಾನಿಸ್ತಾನ ಪ್ರಜೆಯಾಗಿರುವ ಶಾಕಿರಿ, ದರೋಡೆ ಪ್ರಕರಣದಲ್ಲಿ ನ್ಯೂಯಾರ್ಕ್‌ನ ಜೈಲುಗಳಲ್ಲಿ 14 ವರ್ಷ ಕಳೆದಿದ್ದಾನೆ. ಈತ ತನ್ನ ಬಾಲ್ಯದಲ್ಲೇ ಅಮೆರಿಕಕ್ಕೆ ವಲಸೆ ಬಂದಿದ್ದ. ಜೈಲು ಶಿಕ್ಷೆ ಅನುಭವಿಸಿದ ನಂತರ ಈತನನ್ನು 2008ರಲ್ಲಿ ಗಡೀಪಾರು ಮಾಡಲಾಗಿತ್ತು. ಶಾಕಿರಿ ಸದ್ಯ ತಲೆಮರೆಸಿಕೊಂಡಿದ್ದು, ಇರಾನ್‌ನಲ್ಲಿ ನೆಲಸಿದ್ದಾನೆಂದು ನಂಬಲಾಗಿದೆ ಎಂದು ಪ್ರಾಸಿಕ್ಯೂಟರ್‌ಗಳು ಹೇಳಿದ್ದಾರೆ.

ಇರಾನ್ ವಿದೇಶಾಂಗ ಸಚಿವಾಲಯ ಈ ಆರೋಪ ನಿರಾಕರಿಸಿದೆ. ಟ್ರಂಪ್ ಹತ್ಯೆಯ ಸಂಚು 'ಸಂಪೂರ್ಣವಾಗಿ ಆಧಾರರಹಿತ' ಎಂದು ಇರಾನ್ ವಿದೇಶಾಂಗ ಸಚಿವಾಲಯ ಹೇಳಿದೆ.

ನೆವಾಡದಲ್ಲೂ ಟ್ರಂಪ್ ಗೆಲುವು

ಅಧ್ಯಕ್ಷೀಯ ಚುನಾವಣೆಯಲ್ಲಿ ಫಲಿತಾಂಶ ನಿರ್ಣಯಿಸುವ ಪ್ರಮುಖ ರಾಜ್ಯಗಳಲ್ಲಿ ಒಂದೆನಿಸಿದ್ದ ನೆವಾಡದ ಫಲಿತಾಂಶವು ಪ್ರಕಟವಾಗಿದ್ದು, ಡೆಮಾಕ್ರಟ್ ಪಕ್ಷದ ಭದ್ರಕೋಟೆ ಎನಿಸಿದ್ದ ಈ ರಾಜ್ಯದಲ್ಲೂ ಟ್ರಂಪ್ ಗೆಲುವಿನ ನಗೆ ಬೀರಿದ್ದಾರೆ.

2004ರಿಂದಲೂ ಈ ರಾಜ್ಯದ ಮತದಾರರ ಮನ ಗೆಲ್ಲಲು ರಿಪಬ್ಲಿಕನ್ ಅಭ್ಯರ್ಥಿಗಳಿಗೆ ಸಾಧ್ಯವಾಗಿರಲಿಲ್ಲ. 2020ರ ಚುನಾವಣೆಯಲ್ಲಿ ಅಧ್ಯಕ್ಷ ಜೋ ಬೈಡನ್ ಅವರು ನೆವಾಡದಲ್ಲಿ ಗೆಲುವು ಸಾಧಿಸಿದ್ದರು.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ವೈಕುಂಠ ಸಮಾರಾಧನೆ
ದಿ|| ಎಸ್.ಯು. ಕೃಷ್ಣಪ್ಪನವರು ದಿನಾಂಕ 02.11.2024 ಶನಿವಾರ ಬೆಳಿಗ್ಗೆ 7.15 ಗಂಟೆಗೆ ದೈವಾಧೀನರಾದರೆಂದು ತಿಳಿಸಲು ವಿಷಾಧಿಸುತ್ತೇವೆ. ತತ್ಸಂಬಂಧವಾದ ಇವರ "ವೈಕುಂಠ ಸಮಾರಾಧನೆ"ಯನ್ನು ದಿನಾಂಕ : 12.11.2024ರ ಮಂಗಳವಾರ ಬೆಳಿಗ್ಗೆ 10.30 ರಿಂದ 12.00 ಗಂಟೆಯೊಳಗೆ ಮೃತರ ಹುಟ್ಟೂರಾದ ಸುಲ್ತಾನ್‌ಪೇಟೆ ಗ್ರಾಮ, ನಂದಿ ಪೋಸ್ಟ್, ಚಿಕ್ಕಬಳ್ಳಾಪುರ ತಾಲ್ಲೂಕು ಮತ್ತು ಜಿಲ್ಲೆಯ ಗೃಹದಲ್ಲಿ ನಡೆಯುವುದು. ತಾವುಗಳು ಅಗಮಿಸಿ ಮೃತರ ಆತ್ಮಕ್ಕೆ ಶಾಂತಿಯನ್ನು ಕೋರಬೇಕಾಗಿ ವಿನಂತಿ.
ದುಃಖತಪ್ತರು: ಪತ್ನಿ ಡಾ|| ಅನುಸೂಯಮ್ಮ, ಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು, ಹಾಗೂ ಬಂಧು–ಮಿತ್ರರು
ಮೊ : 9448293705 / 9483099911
ದಿ|| ಎಸ್. ಯು. ಕೃಷ್ಣಪ್ಪ
ನಿವೃತ್ತ ಇಂಜಿನಿಯರ್, B E L, ಬೆಂಗಳೂರು
ಜನನ: 20.09.1942 ನಿಧನ: 02.11.2024

ರಸ್ತೆ ಅಪಘಾತ: ದೇಶದಲ್ಲಿ ವಾರ್ಷಿಕ 1.68 ಲಕ್ಷ ಸಾವು

ರಾಯಪುರ (ಪಿಟಿಐ): 'ದೇಶದಲ್ಲಿ ರಸ್ತೆ ಅಪಘಾತಗಳಿಂದ ಪ್ರತಿ ವರ್ಷ 1.50 ಲಕ್ಷ ಜನರು ಮೃತಪಡುತ್ತಿದ್ದರು. ಪ್ರಸ್ತುತ ಈ ಸಂಖ್ಯೆ 1.68 ಲಕ್ಷಕ್ಕೆ ಏರಿಕೆಯಾಗಿದೆ' ಎಂದು ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವ ನಿತಿನ್ ಗಡ್ಕರಿ ತಿಳಿಸಿದ್ದಾರೆ.

ಶುಕ್ರವಾರ ಇಲ್ಲಿ ನಡೆದ ಇಂಡಿಯನ್ ರೋಡ್ ಕಾಂಗ್ರೆಸ್‌ನ 83ನೇ ವಾರ್ಷಿಕ ಸಭೆಯಲ್ಲಿ ಅವರು ಮಾತನಾಡಿದರು.

ಸುರಕ್ಷತೆಗೆ ಸಂಬಂಧಿಸಿದಂತೆ ರಸ್ತೆ ಮತ್ತು ಆಟೊಮೊಬೈಲ್ ಎಂಜಿನಿಯರ್‌ಗಳ ನ್ಯೂನತೆಯಲ್ಲಿ ಸಾಕಷ್ಟು ಸುಧಾರಣೆಯಾಗಿದೆ. ಆದರೆ, ಅವೈಜ್ಞಾನಿಕವಾಗಿ ವಿಸ್ತೃತ ಯೋಜನಾ ವರದಿ (ಡಿಪಿಆರ್) ತಯಾರಿಸಲಾಗುತ್ತಿದೆ ಎಂದರು.

'ಸರ್ಕಾರಿ ಎಂಜಿನಿಯರ್‌ಗಳು ಹುದ್ದೆ ತೊರೆದು ಹೆದ್ದಾರಿಗಳ ನಿರ್ಮಾಣ ಸಂಬಂಧ ಉತ್ತಮ ಡಿಪಿಆರ್ ತಯಾರಿಸುವ ಕಂಪನಿ ತೆರೆದರೆ, ಅಂತಹವರಿಗೆ ಆದ್ಯತೆ ಮೇರೆಗೆ ಕೆಲಸ ನೀಡುತ್ತೇನೆ' ಎಂದರು. ರಸ್ತೆ ಅಪಘಾತಗಳಲ್ಲಿ ಮೃತಪಡುವವರ ಪೈಕಿ ಶೇ 60ರಷ್ಟು ಮಂದಿಯ ವಯಸ್ಸು 18ರಿಂದ 40 ವರ್ಷ ಇದೆ' ಎಂದು ಹೇಳಿದರು.

ಭತ್ತದ ಹುಲ್ಲು ಬಳಸಿ ಜೈವಿಕ ಡಾಂಬರು ತಯಾರಿಕೆ: ಗಡ್ಕರಿ

'ಭತ್ತದ ಹುಲ್ಲಿನಿಂದ ಸಾಂದ್ರಿಕೃತ ನೈಸರ್ಗಿಕ ಅನಿಲ (ಸಿಎನ್‌ಜಿ) ಮತ್ತು ಜೈವಿಕ ಡಾಂಬರು (ಬಯೊ ಬಿಟುಮೆನ್) ತಯಾರಿಸಬಹುದಾಗಿದೆ. ಹಾಗಾಗಿ, ಛತ್ತೀಸಗಢದ ಸರ್ಕಾರವು ಈ ನಿಟ್ಟನಲ್ಲಿ ಗಮನಹರಿಸಬೇಕಿದೆ' ಎಂದು ಗಡ್ಕರಿ ಹೇಳಿದರು.

ಕೇಂದ್ರ ರಸ್ತೆ ಸಂಶೋಧನಾ ಸಂಸ್ಥೆ (ಸಿಆರ್‌ಆರ್‌ಐ) ಮತ್ತು ಡೆಹ್ರಾಡೂನ್‌ನ ಭಾರತೀಯ ಪೆಟ್ರೋಲಿಯಂ ಸಂಸ್ಥೆಯಿಂದ ಭತ್ತದ ಹುಲ್ಲು ಬಳಸಿ ಜೈವಿಕ ಡಾಂಬರು ತಯಾರಿಸಲಾಗಿದೆ. ಮೇಘಾಲಯದಲ್ಲಿ ಇದನ್ನು ಬಳಸಲಾಗಿದೆ ಎಂದರು. ಡಾಂಬರು ತಯಾರಿಕೆಯಲ್ಲಿ ಶೇ 35ರಷ್ಟು ಹುಲ್ಲನ್ನು ಬಳಸಬಹುದಾಗಿದೆ. ದೇಶದ ಒಟ್ಟು ಡಾಂಬರು ಬೇಡಿಕೆಯು 90 ಲಕ್ಷ ಟನ್ ಆಗಿದೆ. ಡಾಂಬರು ಸಂಸ್ಕರಣೆಯ ಸಾಮರ್ಥ್ಯ 40 ಲಕ್ಷದಿಂದ 50 ಲಕ್ಷ ಟನ್ ಇದೆ. ಉಳಿದ 50 ಲಕ್ಷ ಟನ್ ಡಾಂಬರನ್ನು ಆಮದು ಮಾಡಿಕೊಳ್ಳಲಾಗುತ್ತಿದೆ ಎಂದು ತಿಳಿಸಿದರು.

ಈಗಾಗಲೇ, ಪಂಜಾಬ್ ಮತ್ತು ಹರಿಯಾಣದಲ್ಲಿ ಭತ್ತದ ಹುಲ್ಲು ಬಳಸಿಕೊಂಡು ಜೈವಿಕ ಸಿಎನ್‌ಜಿ ಮತ್ತು ಜೈವಿಕ ದ್ರವೀಕೃತ ನೈಸರ್ಗಿಕ ಅನಿಲ (ಎಲ್‌ಎನ್‌ಜಿ) ತಯಾರಿಸಲಾಗುತ್ತಿದೆ ಎಂದರು.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	100ಕ್ಕೆ	₹585
	12 ಕ್ಕೆ	₹75
ಮೈಸೂರು	100ಕ್ಕೆ	₹587

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹341-560
ದ್ವಿತಳಿ (ಬಿ.ವಿ)	₹339-718

ಪಾಕಿಸ್ತಾನದ ಕ್ವೆಟ್ಟಾ ನಗರದ ರೈಲು ನಿಲ್ದಾಣದಲ್ಲಿ ಘಟನೆ

ಆತ್ಮಾಹುತಿ ಬಾಂಬ್ ದಾಳಿ: 26 ಸಾವು

ಕ್ವೆಟ್ಟಾ (ಪಿಟಿಐ/ ಎಎಫ್‌ಪಿ): ಪಾಕಿಸ್ತಾನದ ಕ್ವೆಟ್ಟಾ ನಗರದ ರೈಲು ನಿಲ್ದಾಣದಲ್ಲಿ ಶನಿವಾರ ನಡೆದ ಆತ್ಮಾಹುತಿ ಬಾಂಬ್ ದಾಳಿಯಲ್ಲಿ 14 ಸೈನಿಕರು ಸೇರಿದಂತೆ 26 ಜನರು ಸಾವಿಗೀಡಾಗಿದ್ದಾರೆ. ಘಟನೆಯಲ್ಲಿ 60 ಮಂದಿ ಗಾಯಗೊಂಡಿದ್ದಾರೆ.

ದಾಳಿಯ ಹೊಣೆ ಹೊತ್ತುಕೊಂಡಿರುವ 'ಬಲೂಚ್ ಲಿಬರೇಶನ್ ಆರ್ಮಿ' (ಬಿಎಲ್‌ಎ) ಪ್ರತ್ಯೇಕತಾವಾದಿ ಸಂಘಟನೆಯು, ಪಾಕಿಸ್ತಾನದ ಸೇನೆಯನ್ನು ಗುರಿಯಾಗಿಸಿ ದಾಳಿ ನಡೆಸಿರುವುದಾಗಿ ಹೇಳಿದೆ.

ಬೆಳಿಗ್ಗೆ 9ಕ್ಕೆ ಕ್ವೆಟ್ಟಾದಿಂದ ಪೆಶಾವರಕ್ಕೆ ಹೊರಡಬೇಕಿದ್ದ ಜಾಫರ್ ಎಕ್ಸ್‌ಪ್ರೆಸ್ ರೈಲು ಏರಲು ಪ್ಲಾಟ್‌ಫಾರ್ಮ್‌ನಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಪ್ರಯಾಣಿಕರು ಜಮಾಯಿಸಿದ್ದರು. ಕ್ವೆಟ್ಟಾದ ಆರ್ಮಿ ಸ್ಕೂಲ್‌ನಲ್ಲಿ ತರಬೇತಿ ಪೂರೈಸಿ ರೈಲಿನಲ್ಲಿ ತೆರಳಬೇಕಿದ್ದ ಸೈನಿಕರೂ ಅಲ್ಲಿದ್ದರು. ಬೆಳಿಗ್ಗೆ 8.45ರ ಸುಮಾರಿಗೆ ಬಾಂಬ್ ಸ್ಫೋಟಗೊಂಡಿದೆ.

ಸ್ಫೋಟದ ಪರಿಣಾಮ ರೈಲು ನಿಲ್ದಾಣದ ಚಾವಣಿ ಹಾನಿಗೊಳಗಾಗಿದೆ. 'ಘಟನಾ ಸ್ಥಳಕ್ಕೆ ತೆರಳಿದಾಗ ಅಲ್ಲಿ ರಕ್ತದ ಹೊಳೆಯೇ ಹರಿದಂತಿತ್ತು. ದೇಹದ ಅಂಗಗಳು ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದವು' ಎಂದು ವರದಿಗಾರರು ಸ್ಫೋಟದ ತೀವ್ರತೆಯನ್ನು ಬಿಚ್ಚಿಟ್ಟಿದ್ದಾರೆ.

'ದಾಳಿಕೋರನು ಲಗೇಜ್‌ನೊಂದಿಗೆ ನಿಲ್ದಾಣ ಪ್ರವೇಶಿಸಿದ್ದ. ಆರಂಭದಲ್ಲಿ ಲಗೇಜ್‌ನಲ್ಲಿ ಬಾಂಬ್ ತಂದು ಸ್ಫೋಟಿಸಲಾಗಿದೆ ಎಂದು ಭಾವಿಸಲಾಗಿತ್ತು. ಬಳಿಕ ಇದೊಂದು ಆತ್ಮಾಹುತಿ ಬಾಂಬ್ ದಾಳಿ ಎಂಬುದು ತಿಳಿದು ಬಂದಿದೆ. ಈ ಕುರಿತು ತನಿಖೆ ಆರಂಭಿಸಲಾಗಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

ಬಾಂಬ್ ದಾಳಿಯನ್ನು ಖಂಡಿಸಿರುವ ಪಾಕಿಸ್ತಾನ ಪ್ರಧಾನಿ ಶೆಹಬಾಜ್ ಶರೀಫ್ 'ದಾಳಿಕೋರರು ಭಾರಿ ಬೆಲೆ ತೆರಬೇಕಾಗುತ್ತದೆ' ಎಂದು ಎಚ್ಚರಿಕೆ ಕೊಟ್ಟಿದ್ದಾರೆ. ಸರ್ಕಾರವು ಅಭಿವೃದ್ಧಿ ಮಾಡದೆ ಕೇವಲ ಭ್ರಷ್ಟಾಚಾರದಲ್ಲಿ ತೊಡಗಿದೆ ಎಂದು ಬಲೂಚ್ ಲಿಬರೇಶನ್ ಆರ್ಮಿ ಆರೋಪಿಸಿದೆ. ಇದನ್ನು ಸರ್ಕಾರ ತಳ್ಳಿ ಹಾಕಿದೆ.

ಬಾಂಬ್ ಸ್ಫೋಟ ನಡೆದ ಕ್ವೆಟ್ಟಾ ನಗರದ ರೈಲು ನಿಲ್ದಾಣದಲ್ಲಿ ಪ್ರಯಾಣಿಕರ ವಸ್ತುಗಳು ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದವು. ನಿಲ್ದಾಣದ ಚಾವಣಿ ಹಾನಿಗೊಂಡಿದೆ – ಎಎಫ್‌ಪಿ ಚಿತ್ರ

> **ಅಮಾಯಕ ನಾಗರಿಕರನ್ನು ಗುರಿಯಾಗಿಸಿ ನಡೆಸಿರುವ ಈ ಭಯಾನಕ ದಾಳಿಯನ್ನು ಖಂಡಿಸುತ್ತೇನೆ. ಘಟನೆ ಬಗ್ಗೆ ತನಿಖೆಗೆ ಆದೇಶಿಸಲಾಗಿದೆ**
> **ಸರ್ಫ್‌ರಾಜ್ ಬುಗ್ಟಿ,** ಬಲೂಚಿಸ್ತಾನ ಮುಖ್ಯಮಂತ್ರಿ

ಹಿಂಸಾಚಾರ ಪ್ರಕರಣ ಹೆಚ್ಚಳ

ಈ ವರ್ಷದ ಮೂರನೇ ತ್ರೈಮಾಸಿಕದಲ್ಲಿ ಪಾಕಿಸ್ತಾನದಲ್ಲಿ ಹಿಂಸಾಚಾರ ಪ್ರಕರಣಗಳು ಶೇ 90ರಷ್ಟು ಏರಿಕೆಯಾಗಿವೆ ಎಂದು 'ಸಂಶೋಧನೆ ಮತ್ತು ಭದ್ರತಾ ಅಧ್ಯಯನ ಕೇಂದ್ರ' ತಿಳಿಸಿದೆ ಎಂದು ಜಿಯೋ ನ್ಯೂಸ್ ವರದಿ ಮಾಡಿದೆ.

328 ಘಟನೆಗಳಲ್ಲಿ ನಾಗರಿಕರು, ಭದ್ರತಾ ಪಡೆ ಸಿಬ್ಬಂದಿ ಹಾಗೂ ಉಗ್ರರು ಸೇರಿದಂತೆ ಒಟ್ಟು 722 ಜನರು ಸಾವಿಗೀಡಾಗಿದ್ದಾರೆ. ಈ ಪೈಕಿ ಶೇ 97ರಷ್ಟು ಘಟನೆಗಳು ಬಲೂಚಿಸ್ತಾನ ಹಾಗೂ ಖೈಬರ್ ಪಖ್ತುಂಖ್ವಾ ಪ್ರಾಂತ್ಯಗಳಲ್ಲಿ ನಡೆದಿವೆ.

ಖಾಲಿಸ್ತಾನಿ ಬೆಂಬಲಿಗರ ಉಪಸ್ಥಿತಿ ಒಪ್ಪಿಕೊಂಡ ಟ್ರುಡೊ

ಒಟ್ಟಾವ (ಪಿಟಿಐ): ಕೆನಡಾದಲ್ಲಿ ಖಾಲಿಸ್ತಾನಿ ಪರ ಹೋರಾಟಗಾರರ ಉಪಸ್ಥಿತಿಯನ್ನು ಕೆನಡಾ ಪ್ರಧಾನಿ ಜಸ್ಟಿನ್ ಟ್ರುಡೊ ಒಪ್ಪಿಕೊಂಡಿದ್ದಾರೆ. ಆದರೆ ಅವರು ಇಡೀ ಸಿಖ್ ಸಮುದಾಯವನ್ನು ಪ್ರತಿನಿಧಿಸುವುದಿಲ್ಲ ಎಂದೂ ಹೇಳಿದ್ದಾರೆ.

ಭಾರತ ಮತ್ತು ಕೆನಡಾ ನಡುವೆ ರಾಜತಾಂತ್ರಿಕ ಬಿಕ್ಕಟ್ಟು ಏರ್ಪಟ್ಟಿರುವ ಸಮಯದಲ್ಲೇ ಟ್ರುಡೊ ಅವರ ಹೇಳಿಕೆ ಹೊರಬಿದ್ದಿದೆ.

'ಕೆನಡಾದಲ್ಲಿ ಖಾಲಿಸ್ತಾನಿ ಪರ ಹೋರಾಟಗಾರರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಆದರೆ ಅವರು ಒಟ್ಟಾರೆಯಾಗಿ ಸಿಖ್ ಸಮುದಾಯವನ್ನು ಪ್ರತಿನಿಧಿಸುವುದಿಲ್ಲ. ಅದೇ ರೀತಿ, ಕೆನಡಾದಲ್ಲಿ ಭಾರತದ ಪ್ರಧಾನಿ ನರೇಂದ್ರ ಮೋದಿ ಅವರ ಸರ್ಕಾರದ ಬೆಂಬಲಿಗರೂ ಇದ್ದಾರೆ. ಆದರೆ, ಅವರು ಕೆನಡಾದಲ್ಲಿ ನೆಲೆಸಿರುವ ಎಲ್ಲ ಹಿಂದೂಗಳನ್ನು ಪ್ರತಿನಿಧಿಸುವುದಿಲ್ಲ' ಎಂದು ಹೇಳಿದ್ದಾರೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Engg/ Production Technical
VEECONS REQUIRE Civil, Mechanical Engineers for Field Work. Minimum experience 5 years. Apply to: srkveecons@gmail.com

Part-Time Jobs
ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

Wanted
ತೋಟದಲ್ಲಿ ಕೆಲಸ ಮಾಡಲು ರೈತ ಕುಟುಂಬ ಬೇಕಾಗಿದ್ದಾರೆ ವಸತಿ ವ್ಯವಸ್ಥೆ ಇದೆ ಸ್ಥಳ: ದೊಡ್ಡಬಳ್ಳಾಪುರ ಮತ್ತು ಗಾರ್ಡ್ನರ್ ಬೇಕಾಗಿದ್ದಾರೆ ವೈಟ್ ಫೀಲ್ಡ್ ಸಂಪರ್ಕಿಸಿ: 9845202274

ವ್ಯಾಪಾರ

Business Offers

General
OFFERING DINING Section for rent in Maharashtra Call: 9890928481

Business to Business

Business
HIGH RETURNS franchise business opportunity in Karnataka from established Company for unique healthcare business Contact 9731172980.

ರಿಯಲ್ ಎಸ್ಟೇಟ್ ಸೆಲ್ಲಿಂಗ್

Commercial Building

Mysore
COMMERCIAL BUILDING for Sale - 20ft x 15ft, 201/D4, Jaganmohana Palace Road, Santhepet, Mysore. 9448665581

House

Vishweshwariah Layout
BUILDING SALE G+3 Residential 30x40 BDA Fully Furnished Rental Income SMV Layout 1st Block Kengeri Owner: 9886880271

Sites

Mangaluru
SITES FOR SALE- MANGALORE KAVOOR MALLI LAYOUT 15 Cents 10.25/ Cent, Hosabettu Near Nilgiris 15 Cents 8.30/ Cent. Call: 70222-66660

ಸಮಾಜಸೇವೆ

Old Age Home
ಆಶೀರ್ವಾದ ಹಿರಿಯರ ಹಾರೈಕೆ ಕೇಂದ್ರ ಜನತಾ ಕಾಲೋನಿ 3ನೇ ಕ್ರಾಸ್ ಗಣಪತಿಹಳ್ಳಿ ದೊಡ್ಡಆಲದಮರ ರೋಡ್ ಬೆಂಗಳೂರು 9945202179 / 9945782935

ಇತರೆ

Furniture & Furnishings
ಮನೆ ಮತ್ತು ಕಚೇರಿ ಮರಗೆಲಸಕ್ಕೆ ಬಡಗಿಗಳು (Carpenter) ಲಭ್ಯವಿರುತ್ತಾರೆ 7829229366 ಪ್ಲೈವುಡ್ ಗಾಜು ಲ್ಯಾಮಿನೇಟ್ ಕನ್ನಡಿ

ವೈವಾಹಿಕ

Brides Wanted

Marathi
ವಿಚ್ಛೇದಿತ ಕ್ಷತ್ರಿಯ ಮರಾಠ,ಒಂದೇ ಗಂಡು ಹುಡುಗನಿರುವ,ವರನಿಗೆ ವಿದ್ಯಾವಂತ,ಕುಲೀನ ಮನೆತನದ ಅವಿವಾಹಿತೆ/ವಿಚ್ಛೇದಿತ/ವಿಧವೆ ಕ್ಷತ್ರಿಯ ಮರಾಠ ವಧು,ಎರಡನೇ ಮದುವೆಗೆ ಬೇಕಾಗಿದ್ದಾರೆ. ಸಂಪರ್ಕಿಸಿ:9483597809.

Grooms Wanted

Kannada
ಈಡಿಗ ವಧು, 38 ವಯಸ್ಸು, 5'6', B.E(CSE), ಬೆಂಗಳೂರು, IT ಸಂಸ್ಥೆಯಲ್ಲಿ ಉದ್ಯೋಗದಲ್ಲಿರುವ ವಧು. ಸೂಕ್ತ ವರ ಸರಿ ಹೊಂದುವಂತಹ ಹಿನ್ನೆಲೆ, ಜಾತಿ ನಿರ್ಬಂಧವಿಲ್ಲ. ಸಂಪರ್ಕಿಸಿ: 9916600748

ಭವಿಷ್ಯ

Astrology
★ಭಾರತದ ಪ್ರಖ್ಯಾತ★ ಬುಡಬುಡಕಿ ಜನಾಂಗದ 12ನೇ ತಲೆಮಾರಿನ 50ವರ್ಷ ಅನುಭವದ 35,000ಕ್ಕೂ ಹೆಚ್ಚು ಸಂತುಷ್ಟ ಗ್ರಾಹಕರ ಪರಮಶ್ರೇಷ್ಠ ಶ್ರೀ.ದೇವಾನಂದ್.ನಿಮ್ಮೆಲ್ಲಾ ಕಷ್ಟಗಳಿಗೆ ಎಲ್ಲಿಲ್ಲದ_ಮುಕ್ತಿ, ಕಾಮಾಕ್ಯ_ಮೋಡಿವಶೀಕರಣ ಯಂತ್ರಕ್ಕೆ ರೂ.2300.ಪ್ರಾಚೀನ ಆಯುರ್ವೇದ ತೂಕ ಇಳಿಕೆ,ಹಸಿವು,ಲೈಂಗಿಕತೆ. 9353143216

★||ಇಷ್ಟಪಟ್ಟವರು||★ ನಿಮ್ಮಂತೆ ಆಗಲು. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ನಿಗೂಢ. ಗುಪ್ತ ಸಮಸ್ಯೆಗಳಿಗೆ. 1 ದಿನದಲ್ಲಿ. ಶಾಶ್ವತ ಪರಿಹಾರ. 9611968471

ಪ್ರವಾಸ

Travel
★ಶ್ರೇಯಸ್ ಟೂರ್ಸ್* 25.11.2024 10ದಿನಗಳು ಅಖಂಡ ರಾಜಸ್ಥಾನ ರಾಜ್ಯಪ್ರವಾಸ.21.12.2024 12ದಿನಗಳು ಅಖಂಡ ಗುಜರಾತ್ (ಕಚ್‌ಬುಜ್ ಸಹಿತ). 12.12.2024,23.12.2024 7ದಿನಗಳು ನೈಮಿಷ್ಯಾರಣ್ಯ,ಕಾಶಿ ಪ್ರಯಾಗ,ದೇವಘರ್. 20.11.2024 12/14/21ದಿನಗಳು ಈಶಾನ್ಯ ರಾಜ್ಯಗಳ(ಸೆವೆನ್ ಸಿಸ್ಟರ್ಸ್)ಪ್ರವಾಸ. 21.11.2024 6ದಿನಗಳು ಸಂಪೂರ್ಣ ಅಹೋಬಲಂ, ನವನಾರಸಿಂಹ,ನವನಂದಿ ಶ್ರೀಶೈಲಂ,ಮಂತ್ರಾಲಯ ಯಾಗಂಟಿ,ಬೇಲಂಗುಹೆ. 28.11.2024 10/7ದಿನಗಳು ಅಖಂಡ ಕೇರಳ ರಾಜ್ಯ ಪ್ರವಾಸ.8073824856/ 9743351212, 9206979202

ರಿಯಾಯತಿ ದರದಲ್ಲಿ ವಿದೇಶಿ ಪ್ರವಾಸ 6 ದಿನಗಳ ದುಬೈ, 6 ದಿನಗಳ ಬಾಲಿ, 6 ದಿನಗಳ ಶ್ರೀ ಲಂಕಾ, 7/11 ದಿನಗಳ ಸಿಂಗಪುರ್, ಮಲೇಷ್ಯಾ, ಥೈಲ್ಯಾಂಡ್, 7 ದಿನಗಳ ಜಪಾನ್ ಭಟ್ ಟ್ರಾವೆಲ್ & ಟೂರ್ಸ್ 9844037295 9844166555

ಭಾರತಪರಂಪರ ದರ್ಶನ: 20.12.2024, 5 ದಿನ ಅಹೋಬಿಲಂ ಶ್ರೀಶೈಲಂ ಜ್ಯೋತಿರ್ಲಿಂಗ, ಮಂತ್ರಾಲಯ. 15.12.2024 ಪುರಿಜಗನ್ನಾಥ ಕಲ್ಕತ್ತ 6 ದಿನ. 9448792891.

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
ಶಿಕ್ಷಣ
ಶಿಕ್ಷಣಕ್ಕೆ ಸಂಬಂಧಿತ ಎಲ್ಲಾ ಜಾಹೀರಾತುಗಳ ಪ್ರಕಟಣೆಗಾಗಿ
www.dhclassifieds.com
ಬುಕ್ ಮಾಡಿ
*Conditions apply
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9731810277 | +91 9845114560 | +91 9900428036

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ
ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಟ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036

ಕೇಂದ್ರ ಮತ್ತು ಗುಜರಾತ್ ಸರ್ಕಾರಕ್ಕೆ ಹೈಕೋರ್ಟ್ ಸೂಚನೆ; ಜಂಟಿಯಾಗಿ ನೀತಿ ರೂಪಿಸಲು ನಿರ್ದೇಶನ

‘ಸರ್ಕಾರಿ ನೌಕರರಾಗಿ ಅಂಗನವಾಡಿ ಸಿಬ್ಬಂದಿ’

ಅಹಮದಾಬಾದ್ (ಪಿಟಿಐ): ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಸಹಾಯಕಿಯರನ್ನು ಕಾಯಂ ಹುದ್ದೆಯಲ್ಲಿ ಇರುವ ಸರ್ಕಾರಿ ನೌಕರರಿಗೆ ಸಮಾನವಾಗಿ ಪರಿಗಣಿಸಬೇಕು ಎಂದು ಗುಜರಾತ್ ಹೈಕೋರ್ಟ್, ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರಕ್ಕೆ ಸೂಚನೆ ನೀಡಿದೆ.

ಈ ಆದೇಶವು ದೇಶದಾದ್ಯಂತ ಇರುವ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರಿಗೆ ನೆರವಾಗಲಿದೆ ಎಂದು ವಿಶ್ಲೇಷಿಸಲಾಗಿದೆ.

ಸರ್ಕಾರಿ ನೌಕರರ ಜೊತೆ ಹೋಲಿಸಿದಾಗ ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಸಹಾಯಕಿಯರಿಗೆ ತಾರತಮ್ಯ ಆಗುತ್ತಿದೆ ಎಂಬುದು ಬಹಳ ಸ್ಪಷ್ಟ ಎಂದು ನ್ಯಾಯಮೂರ್ತಿ ನಿಖಿಲ್ ಎಸ್. ಕರಿಯೆಲ್ ಅವರು ಆದೇಶದಲ್ಲಿ ಹೇಳಿದ್ದಾರೆ. ಈ ಎರಡು ಹುದ್ದೆಗಳನ್ನು ಸರ್ಕಾರಿ ಸೇವೆಯಲ್ಲಿ ಸೇರಿಸಲು ರಾಜ್ಯ ಸರ್ಕಾರ ಹಾಗೂ ಕೇಂದ್ರ ಸರ್ಕಾರ ಜಂಟಿಯಾಗಿ ನೀತಿಯೊಂದನ್ನು ರೂಪಿಸಬೇಕು, ಅದರ ಪರಿಣಾಮವಾಗಿ ಸಿಗುವ ಪ್ರಯೋಜನಗಳನ್ನು ಅವರಿಗೆ ನೀಡಬೇಕು ಎಂದು ಅವರು ಸೂಚಿಸಿದ್ದಾರೆ.

ಕೇಂದ್ರ ಸರ್ಕಾರದ ಸಮಗ್ರ ಶಿಶು ಅಭಿವೃದ್ಧಿ ಯೋಜನೆಯ (ಐಸಿಡಿಎಸ್) ಅಡಿಯಲ್ಲಿ 1983ರಿಂದ 2010ರ ನಡುವೆ ನೇಮಕ ಆದ ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಸಹಾಯಕಿಯರು ಸಲ್ಲಿಸಿದ್ದ ಅರ್ಜಿಗಳ ವಿಚಾರಣೆ ನಡೆಸಿದ ಹೈಕೋರ್ಟ್ ಈ ಆದೇಶ ನೀಡಿದೆ.

ಹತ್ತು ವರ್ಷಗಳಿಗೂ ಹೆಚ್ಚಿನ ಅವಧಿಯಿಂದ, ದಿನಕ್ಕೆ ಆರು ಗಂಟೆಗಳಿಗಿಂತ ಹೆಚ್ಚು ಕೆಲಸ ಮಾಡುತ್ತಿದ್ದರೂ ಇವರಿಗೆ ಕಡಿಮೆ ಗೌರವಧನ ನೀಡಲಾಗುತ್ತಿದೆ. ರಾಜ್ಯ ಸರ್ಕಾರದ ನೌಕರರಿಗೆ ಸಿಗುವ ಯಾವ ಪ್ರಯೋಜನಗಳೂ ಇವರಿಗೆ ಸಿಗುತ್ತಿಲ್ಲ ಎಂದು ಅರ್ಜಿಯಲ್ಲಿ ದೂರಲಾಗಿತ್ತು. ಆದೇಶದ ಪ್ರತಿಯನ್ನು ಅಕ್ಟೋಬರ್ 30ರಂದು ವೆಬ್‌ಸೈಟ್‌ನಲ್ಲಿ ಪ್ರಕಟ ಮಾಡಲಾಗಿದೆ.

ಅಂಗನವಾಡಿ ಕಾರ್ಯಕರ್ತೆಯರಿಗೆ ತಿಂಗಳಿಗೆ ₹10,000 ಹಾಗೂ ಸಹಾಯಕಿಯರಿಗೆ ₹5,000 ಗೌರವಧನ ನೀಡುತ್ತಿರುವುದು ಸರ್ಕಾರದ ಇತರ ನಾಗರಿಕ ಹುದ್ದೆಗಳಲ್ಲಿ ಇರುವವರಿಗೆ ನೀಡುವ ವೇತನಕ್ಕೆ ಹೋಲಿಸಿದರೆ ತಾರತಮ್ಯದ ನಡೆ ಎಂಬುದು ಸ್ಪಷ್ಟ ಎಂದು ಕೋರ್ಟ್ ಹೇಳಿದೆ.

ತಾರತಮ್ಯದ ವಿಚಾರವನ್ನು ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರು ನಿಭಾಯಿಸಬೇಕಿರುವ ಕರ್ತವ್ಯಗಳು ಹಾಗೂ ಅವರು ಹೊರಬೇಕಿರುವ ಹೊಣೆಯನ್ನು ಸರ್ಕಾರದ ನಾಗರಿಕ ಹುದ್ದೆಗಳಲ್ಲಿ ಇರುವ ನೌಕರನ ಕರ್ತವ್ಯ, ಹೊಣೆಗಳ ಜೊತೆ ಹೋಲಿಸಿ ನೋಡಬೇಕು ಎಂದು ಪೀಠ ವಿವರಿಸಿದೆ.

ಅಂಗನವಾಡಿ ಕಾರ್ಯಕರ್ತೆಯರು, ಸಹಾಯಕಿಯರ ಹೊಣೆ ಬಹಳ ದೊಡ್ಡದು. ಹೀಗಿದ್ದರೂ ಅವರಿಗೆ ಬಹಳ ಕಡಿಮೆ ಗೌರವಧನ ನೀಡಲಾಗುತ್ತಿದೆ. ಗುಜರಾತ್ ರಾಜ್ಯದಲ್ಲಿ ನಾಗರಿಕ ಹುದ್ದೆಗಳಲ್ಲಿ ಇರುವ ಸರ್ಕಾರಿ ನೌಕರರಿಗೆ ನೀಡುವ ಯಾವುದೇ ಸೌಲಭ್ಯಗಳು ಇವರಿಗೆ ಸಿಗುತ್ತಿಲ್ಲ ಎಂದು ಹೇಳಿದೆ.

‘ರಾಜ್ಯ ಸರ್ಕಾರವು ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರನ್ನು ತಾತ್ಕಾಲಿಕ ಹುದ್ದೆಯಲ್ಲಿರುವ ನಾಲ್ಕನೆಯ ದರ್ಜೆಯ ನೌಕರನಿಗಿಂತಲೂ ಕಡೆಯಾಗಿಸಿದೆ. ಈ ಹುದ್ದೆಯಲ್ಲಿ ಇರುವವರಿಗೆ ಕನಿಷ್ಠ ₹15 ಸಾವಿರ ಸಿಗುತ್ತದೆ. ಆದರೆ, ಹೆಚ್ಚಿನ ಮೊತ್ತ ಕೇಳುವ ಸ್ಥಿತಿ ಇಲ್ಲದಿರುವುದು, ತನ್ನನ್ನು ಮತ್ತು ತನ್ನ ಕುಟುಂಬವನ್ನು ಸಲಹಬೇಕಿರುವ ಅನಿವಾರ್ಯದ ಸ್ಥಿತಿಯನ್ನು ಹೊರತುಪಡಿಸಿದರೆ ಆತ್ಮಗೌರವ ಇರುವ ಯಾವುದೇ ವ್ಯಕ್ತಿಯು ಕನಿಷ್ಠ ವೇತನಕ್ಕಿಂತ ಕಡಿಮೆ ಮೊತ್ತಕ್ಕೆ ಕೆಲಸ ಮಾಡಲು ಸಿದ್ಧರಿರುವುದಿಲ್ಲ. ಅದರಲ್ಲೂ, ಸರ್ಕಾರವೇ ನೌಕರದಾತ ಆಗಿರುವಾಗ ಕನಿಷ್ಠ ವೇತನಕ್ಕಿಂತ ಕಡಿಮೆ ಮೊತ್ತಕ್ಕೆ ಕೆಲಸ ಮಾಡಲು ಯಾರೂ ಒಪ್ಪರು’ ಎಂದು ಪೀಠವು ಹೇಳಿದೆ.

ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಸಹಾಯಕಿಯರ ಹುದ್ದೆಗಳನ್ನು ಸರ್ಕಾರಿ ಸೇವೆಗಳಿಗೆ ಸೇರಿಸಿಕೊಳ್ಳಲು ಮತ್ತು ಅವರಿಗೆ ತತ್ಪರಿಣಾಮದ ಕಾಯಮಾತಿ ಸೌಲಭ್ಯಗಳನ್ನು ನೀಡಲು ರಾಜ್ಯ ಸರ್ಕಾರ ಹಾಗೂ ಕೇಂದ್ರ ಸರ್ಕಾರವು, ಕೋರ್ಟ್ ಆದೇಶವು ಗುಜರಾತ್ ಹೈಕೋರ್ಟ್‌ನ ಪೋರ್ಟಲ್‌ನಲ್ಲಿ ಪ್ರಕಟವಾದ ಆರು ತಿಂಗಳಲ್ಲಿ ಜಂಟಿಯಾಗಿ ನೀತಿಯೊಂದನ್ನು ರೂಪಿಸಬೇಕು ಎಂದು ಸೂಚನೆ ನೀಡಲಾಗಿದೆ.

ನೀತಿ ರೂಪಿಸುವುದು ಪೂರ್ಣಗೊಳ್ಳುವವರೆಗೆ, ಅರ್ಜಿದಾರ ಅಂಗನವಾಡಿ ಕಾರ್ಯಕರ್ತೆಯರಿಗೆ, ತೃತೀಯ ವರ್ಗದ ಹುದ್ದೆಗಳಿಗೆ ನೀಡುವ ಕನಿಷ್ಠ ವೇತನ ಶ್ರೇಣಿಯನ್ನು ನಿಗದಿ ಮಾಡಬೇಕು, ಸಹಾಯಕಿಯರಿಗೆ ನಾಲ್ಕನೆಯ ವರ್ಗದ ಹುದ್ದೆಗಳಿಗೆ ನೀಡುವ ಕನಿಷ್ಠ ವೇತನ ಶ್ರೇಣಿಯನ್ನು ನಿಗದಿ ಮಾಡಬೇಕು ಎಂದು ಪೀಠವು ಹೇಳಿದೆ.

ಜಾಮೀನು ಅರ್ಜಿ ಇತ್ಯರ್ಥಕ್ಕೆ ವಿಳಂಬ ಸಲ್ಲ: ‘ಸುಪ್ರೀಂ’

ನವದೆಹಲಿ (ಪಿಟಿಐ): ನ್ಯಾಯಾಲಯಗಳು ಜಾಮೀನು ಅರ್ಜಿಗಳನ್ನು ವರ್ಷಗಳ ಕಾಲ ಬಾಕಿ ಇರಿಸುತ್ತಿರುವ ಬಗ್ಗೆ ತೀವ್ರ ಅಸಮಾಧಾನ ದಾಖಲಿಸಿರುವ ಸುಪ್ರೀಂ ಕೋರ್ಟ್, ಇಂತಹ ಅರ್ಜಿಗಳನ್ನು ಇತ್ಯರ್ಥಪಡಿಸುವಲ್ಲಿ ಒಂದು ದಿನ ವಿಳಂಬವಾದರೂ ಅದು ಪ್ರಜೆಗಳ ಮೂಲಭೂತ ಹಕ್ಕುಗಳ ಮೇಲೆ ಕೆಟ್ಟ ಪರಿಣಾಮ ಉಂಟುಮಾಡುತ್ತದೆ ಎಂದು ಹೇಳಿದೆ.

ವೈಯಕ್ತಿಕ ಸ್ವಾತಂತ್ರ್ಯದ ಮಹತ್ವವನ್ನು ಸುಪ್ರೀಂ ಕೋರ್ಟ್ ಕಾಲಕಾಲಕ್ಕೆ ಹೇಳುತ್ತ ಬಂದಿದೆ ಎಂಬುದನ್ನು ನ್ಯಾಯಮೂರ್ತಿಗಳಾದ ಬಿ.ಆರ್. ಗವಾಯಿ ಮತ್ತು ಕೆ.ವಿ. ವಿಶ್ವನಾಥನ್ ಅವರು ಇರುವ ವಿಭಾಗೀಯ ಪೀಠವು ಶುಕ್ರವಾರ ನೀಡಿರುವ ತೀರ್ಪಿನಲ್ಲಿ ಹೇಳಿದೆ.

‘ಜಾಮೀನು ಅರ್ಜಿಗಳನ್ನು ವರ್ಷಗಳ ಕಾಲ ಹಾಗೇ ಇರಿಸಿಕೊಳ್ಳುವುದನ್ನು ನಾವು ಮೆಚ್ಚುವುದಿಲ್ಲ’ ಎಂದು ಪೀಠವು ಎಚ್ಚರಿಸಿದೆ.

ತಾನು ಸಲ್ಲಿಸಿರುವ ಜಾಮೀನು ಅರ್ಜಿಯು ಅಲಹಾಬಾದ್ ಹೈಕೋರ್ಟ್‌ನಲ್ಲಿ ಕಳೆದ ವರ್ಷದ ಆಗಸ್ಟ್‌ನಿಂದಲೂ ಬಾಕಿ ಇದೆ. ಆ ಅರ್ಜಿಯ ವಿಚಾರವಾಗಿ ಯಾವುದೇ ಪ್ರಗತಿ ಕಂಡುಬಂದಿಲ್ಲ ಎಂದು ದೂರಿ ವ್ಯಕ್ತಿಯೊಬ್ಬರು ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ಪೀಠವು ಈ ಮಾತು ಹೇಳಿದೆ.

ಜಾಮೀನು ಅರ್ಜಿಯ ವಿಚಾರವಾಗಿ ವಾದ ಆಲಿಸದೆ, ವಿಚಾರಣೆಯನ್ನು ಪದೇ ಪದೇ ಮುಂದಕ್ಕೆ ಹಾಕಲಾಗಿತ್ತು ಎಂದು ಅರ್ಜಿದಾರರು ದೂರಿದ್ದರು. ಈ ಅರ್ಜಿಯು ನವೆಂಬರ್ 11ರಂದು ವಿಚಾರಣೆಗೆ ನಿಗದಿಯಾಗಿದ್ದು, ಎರಡು ವಾರಗಳಲ್ಲಿ ತೀರ್ಮಾನ ತೆಗೆದುಕೊಳ್ಳಬೇಕು ಎಂದು ಪೀಠವು ಸೂಚಿಸಿದೆ.

‘ನೀಟ್’ ಆಕಾಂಕ್ಷಿ ಮೇಲೆ ಅತ್ಯಾಚಾರ: ಶಿಕ್ಷಕರ ಬಂಧನ

ಕಾನ್ಪುರ(ಉತ್ತರ ಪ್ರದೇಶ)(ಪಿಟಿಐ): ‘ನೀಟ್’ ತರಬೇತಿಗಾಗಿ ಇಲ್ಲಿನ ಪ್ರಮುಖ ಸಂಸ್ಥೆಯಲ್ಲಿದ್ದ ಬಾಲಕಿಯನ್ನು ಸಂಸ್ಥೆಯ ಇಬ್ಬರು ಶಿಕ್ಷಕರು ಆರು ತಿಂಗಳಿಗೂ ಹೆಚ್ಚು ಒತ್ತೆಯಾಳಾಗಿ ಇರಿಸಿಕೊಂಡು, ಆಕೆ ಮೇಲೆ ಅತ್ಯಾಚಾರ ಎಸಗಿದ್ದಾರೆ ಎಂದು ಆರೋಪಿಸಲಾಗಿದೆ.

ಪ್ರಕರಣಕ್ಕೆ ಸಂಬಂಧಿಸಿ ಜೀವವಿಜ್ಞಾನ ಬೋಧಕ ಸಾಹಿಲ್ ಸಿದ್ದೀಕಿ ಹಾಗೂ ರಸಾಯನವಿಜ್ಞಾನ ಬೋಧಕ ವಿಕಾಸ್ ಪೋರ್ವಾಲ್ ಎಂಬುವವರನ್ನು ಬಂಧಿಸಲಾಗಿದೆ.

‘ಫತೇಹ್‌ಪುರ ಮೂಲದ ಬಾಲಕಿಗೆ 2022ರ ಡಿಸೆಂಬರ್‌ನಿಂದ ತೊಂದರೆ ಶುರುವಾಯಿತು. ಈ ಕುರಿತು ಬಾಲಕಿ ಠಾಣೆಗೆ ದೂರು ನೀಡಿದ ನಂತರ, ಶುಕ್ರವಾರ ಪ್ರಕರಣ ದಾಖಲಿಸಲಾಗಿದೆ’ ಎಂದು ಇಲ್ಲಿನ ಕಲ್ಯಾಣಪುರ ಠಾಣೆ ಎಸಿಪಿ ಅಭಿಷೇಕ್ ಪಾಂಡೆ ಶನಿವಾರ ತಿಳಿಸಿದ್ದಾರೆ.

‘ಈ ತೊಂದರೆ ಆರಂಭವಾದ ವೇಳೆ ವಿದ್ಯಾರ್ಥಿನಿ 17 ವರ್ಷ ವಯೋಮಾನದವಳಾಗಿದ್ದಳು. ಹೀಗಾಗಿ ಬಂಧಿತರ ವಿರುದ್ಧ ಪೋಕ್ಸೊ ಕಾಯ್ದೆಯ ವಿವಿಧ ಅವಕಾಶಗಳಡಿ ಪ್ರಕರಣ ದಾಖಲಿಸಲಾಗಿದೆ’ ಎಂದು ತಿಳಿಸಿದ್ದಾರೆ.

‘ತರಬೇತಿ ಕೇಂದ್ರದಲ್ಲಿ, ಮತ್ತೊಬ್ಬ ವಿದ್ಯಾರ್ಥಿನಿಯೊಂದಿಗೆ ಅಸಭ್ಯವಾಗಿ ವರ್ತಿಸಿದ ಆರೋಪದ ಮೇಲೆ ಎರಡು ತಿಂಗಳ ಹಿಂದೆ ಸಿದ್ದೀಕಿಯನ್ನು ಬಂಧಿಸಲಾಗಿತ್ತು. ಇತ್ತೀಚೆಗಷ್ಟೆ ಆತ ಜಾಮೀನಿನ ಮೇಲೆ ಬಿಡುಗಡೆಯಾಗಿದ್ದ’ ಎಂದು ತಿಳಿಸಿದ್ದಾರೆ.

‘2022ರ ಡಿಸೆಂಬರ್‌ನಲ್ಲಿ ಹೊಸ ವರ್ಷಾಚರಣೆಗಾಗಿ ಕಲ್ಯಾಣಪುರದಲ್ಲಿರುವ ತನ್ನ ಸ್ನೇಹಿತನ ಫ್ಲ್ಯಾಟ್‌ಗೆ ಸಿದ್ದೀಕಿ ನನ್ನನ್ನು ಕರೆದಿದ್ದರು. ಇತರ ವಿದ್ಯಾರ್ಥಿಗಳು ಕೂಡ ಪಾಲ್ಗೊಳ್ಳುತ್ತಾರೆ ಎಂದು ತಿಳಿಸಿದ್ದ. ಸ್ಥಳಕ್ಕೆ ಹೋದಾಗ ಸಿದ್ದೀಕಿ ಮಾತ್ರ ಇದ್ದರು’ ಎಂದು ವಿದ್ಯಾರ್ಥಿನಿ ದೂರಿನಲ್ಲಿ ತಿಳಿಸಿದ್ದಾರೆ.

‘ಮತ್ತು ಬರುವ ಪದಾರ್ಥಗಳನ್ನು ಬೆರೆಸಿದ್ದ ತಂಪು ಪಾನೀಯ ಕುಡಿಸಿ, ನಂತರ ನನ್ನ ಮೇಲೆ ಅತ್ಯಾಚಾರ ಎಸಗಲಾಯಿತು. ಆ ಕೃತ್ಯದ ವಿಡಿಯೊ ಚಿತ್ರೀಕರಣವನ್ನೂ ಮಾಡಲಾಯಿತು’ ಎಂದು ಆರೋಪಿಸಿದ್ದಾರೆ.

‘ಇದಾದ ನಂತರ, ವಿಕಾಸ್ ಪೋರ್ವಾಲ್ ಹಲವು ತಿಂಗಳ ಕಾಲ ನನ್ನ ಮೇಲೆ ಅತ್ಯಾಚಾರ ಎಸಗಿದ. ನನ್ನ ಕುಟುಂಬಕ್ಕೆ ತೊಂದರೆಯಾಗಬಹುದು ಎಂಬ ಕಾರಣಕ್ಕೆ ಪೊಲೀಸರಿಗೆ ದೂರು ನೀಡಿರಲಿಲ್ಲ. ಆರು ತಿಂಗಳ ನಂತರ ಕಾನ್ಪುರಕ್ಕೆ ಬಂದ ತಾಯಿ ನನ್ನನ್ನು ಕರೆದುಕೊಂಡು ಹೋದರು’ ಎಂದೂ ದೂರಿನಲ್ಲಿ ವಿವರಿಸಿದ್ದಾರೆ.

‘ತರಬೇತಿ ಕೇಂದ್ರದ ಮತ್ತೊಬ್ಬ ವಿದ್ಯಾರ್ಥಿನಿಗೆ ಸಿದ್ದೀಕಿ ಲೈಂಗಿಕ ಕಿರುಕುಳ ನೀಡುತ್ತಿದ್ದ ವಿಡಿಯೊ ನೋಡಿದೆ. ಆಗ, ಪೊಲೀಸರಿಗೆ ದೂರು ನೀಡುವ ಧೈರ್ಯ ಮಾಡಿದೆ’ ಎಂದು ಹೇಳಿದ್ದಾರೆ.

ಉತ್ಸವ... ಕೇರಳದ ತಿರುವನಂತಪುರದಲ್ಲಿರುವ ಶ್ರೀ ಅನಂತ ಪದ್ಮನಾಭ ದೇವಾಲಯದಲ್ಲಿ ಶನಿವಾರ ಅಲ್ಪಶಿ ಜಾತ್ರೆ ಅಂಗವಾಗಿ ‘ಆರಾಟ್ಟು’ ಮೆರವಣಿಗೆಯಲ್ಲಿ ಸಾವಿರಾರು ಭಕ್ತರು ಪಾಲ್ಗೊಂಡಿದ್ದರು –ಪಿಟಿಐ ಚಿತ್ರ

ಪರಿಶಿಷ್ಟರು, ಒಬಿಸಿಗಳಿಗೂ ಮೀಸಲಾತಿ ಸಿಗಬೇಕು: ಯೋಗಿ ಆದಿತ್ಯನಾಥ

‘ಅಲಿಗಢ ವಿ.ವಿ ಮುಸ್ಲಿಮರಿಗಷ್ಟೇ ಸೇರಿದ್ದಲ್ಲ’

ಪ್ರಜಾವಾಣಿ ವಾರ್ತೆ

ಲಖನೌ: ಅಲಿಗಢ ಮುಸ್ಲಿಂ ವಿಶ್ವವಿದ್ಯಾಲಯ (ಎಎಂಯು) ಮುಸ್ಲಿಮರಿಗೆ ಮಾತ್ರ ಸೇರಿದ್ದಲ್ಲ ಎಂದು ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಶನಿವಾರ ಹೇಳಿದ್ದಾರೆ.

ಎಎಂಯುನ ಅಲ್ಪಸಂಖ್ಯಾತ ಸ್ಥಾನಮಾನ ಕುರಿತು ಸುಪ್ರೀಂ ಕೋರ್ಟ್ ತೀರ್ಪು ನೀಡಿದ ನಂತರ ಇದೇ ಮೊದಲ ಬಾರಿಗೆ ಮುಖ್ಯಮಂತ್ರಿ ಆದಿತ್ಯನಾಥ ಅವರಿಂದ ಈ ಪ್ರತಿಕ್ರಿಯೆ ಹೊರಬಿದ್ದಿದೆ.

ಅಜೀಜ್ ಬಾಷಾ ವರ್ಸಸ್ ಕೇಂದ್ರ ಸರ್ಕಾರ ಪ್ರಕರಣದಲ್ಲಿ 1967ರಲ್ಲಿ ಸುಪ್ರೀಂ ಕೋರ್ಟ್ ನೀಡಿದ್ದ ತೀರ್ಪನ್ನು ರದ್ದುಪಡಿಸಿ ಏಳು ಸದಸ್ಯರಿದ್ದ ಪೀಠವು ಶುಕ್ರವಾರ ತೀರ್ಪು ನೀಡಿದೆ. ಅಲ್ಲದೇ, ಎಎಂಯುಗೆ ನೀಡಲಾಗಿರುವ ಅಲ್ಪಸಂಖ್ಯಾತ ಸ್ಥಾನಮಾನ ಮುಂದುವರಿಸುವ ಕುರಿತು ಹೊಸ ಪೀಠ ನಿರ್ಣಯಿಸಲಿದೆ ಎಂದೂ ಹೇಳಿದೆ.

ಯೋಗಿ ಆದಿತ್ಯನಾಥ

ಅಲಿಗಢ ಜಿಲ್ಲೆಯ ಖೈರ್ ಪಟ್ಟಣದಲ್ಲಿ ನಡೆದ ಚುನಾವಣಾ ರ‍್ಯಾಲಿಯಲ್ಲಿ ಮಾತನಾಡಿದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ, ‘ಎಎಂಯು ಮುಸ್ಲಿಮರಿಗೆ ಮಾತ್ರ ಸೇರಿದ್ದಲ್ಲ. ಕೇಂದ್ರ ಸರ್ಕಾರ ವಿಶ್ವವಿದ್ಯಾಲಯಕ್ಕೆ ಅನುದಾನ ನೀಡುತ್ತದೆ. ಆದರೆ, ಅಲ್ಪಸಂಖ್ಯಾತರಿಗೆ ಶೇ 50ರಷ್ಟು ಮೀಸಲಾತಿ ನೀಡಲು ಅಲ್ಲಿ (ಎಎಂಯು) ಸಿದ್ಧತೆ ನಡೆಯುತ್ತಿದೆ. ಇದು ಹೇಗೆ ಸಾಧ್ಯ’ ಎಂದು ಪ್ರಶ್ನಿಸಿದರು.

‘ಅಲಿಗಢ ಮುಸ್ಲಿಂ ವಿಶ್ವವಿದ್ಯಾಲಯದಲ್ಲಿ ಎಸ್‌ಸಿ, ಎಸ್‌ಟಿ ಹಾಗೂ ಒಬಿಸಿಗಳಿಗೂ ಮೀಸಲಾತಿ ಸಿಗಬೇಕು’ ಎಂದರು.

‘ಸಮಾಜವಾದಿ ಪಕ್ಷ, ಬಿಎಸ್‌ಪಿ ಹಾಗೂ ಕಾಂಗ್ರೆಸ್ ಪಕ್ಷಗಳಿಂದಾಗಿ ಅಲಿಗಢ ಮುಸ್ಲಿಂ ವಿ.ವಿಯಲ್ಲಿ ಎಸ್‌ಸಿ, ಎಸ್‌ಟಿ ಹಾಗೂ ಒಬಿಸಿಗಳಿಗೆ ಮೀಸಲಾತಿ ಸಿಗುತ್ತಿಲ್ಲ. ಈ ಪಕ್ಷಗಳು ಅನುಸರಿಸಿಕೊಂಡು ಬರುತ್ತಿರುವ ಮತ ಬ್ಯಾಂಕ್ ರಾಜಕೀಯವೇ ಇದಕ್ಕೆ ಕಾರಣ’ ಎಂದು ಆರೋಪಿಸಿದರು.

‘ವಿರೋಧ ಪಕ್ಷಗಳು ನಿಮ್ಮ ಭಾವನೆಗಳ ಜೊತೆ ಚೆಲ್ಲಾಟವಾಡುತ್ತಿವೆ. ಈ ವಿಷಯದಲ್ಲಿ ಕುರುಡರಂತೆ ವರ್ತಿಸಬೇಡಿ. ನಾವು ಒಗ್ಗಟ್ಟಾಗಿ ಉಳಿಯದಿದ್ದರೆ ನಮ್ಮನ್ನು ಹತ್ಯೆ ಮಾಡಲಾಗುತ್ತದೆ’ ಎಂದರು.

ಶ್ರೀಕೃಷ್ಣ ಜನ್ಮಭೂಮಿ–ಈದ್ಗಾ ಮಸೀದಿ, ಕಾಶಿ ವಿಶ್ವನಾಥ ದೇವಸ್ಥಾನ–ಜ್ಞಾನವಾಪಿ ಮಸೀದಿ ವಿವಾದಗಳನ್ನು ಪ್ರಸ್ತಾಪಿಸಿದ ಯೋಗಿ, ‘ನಾವು ಒಗ್ಗಟ್ಟಾಗದ ಕಾರಣದಿಂದಲೇ ಈ ಎರಡು ವಿಚಾರಗಳಲ್ಲಿ ನಾವು ಅವಮಾನ ಅನುಭವಿಸಿದ್ದೇವೆ’ ಎಂದರು.

‘ಬಡವರ ಲೂಟಿ ಮಾಡುವ ತೆರಿಗೆ ವ್ಯವಸ್ಥೆ’

ಬಾಘ್ಮಾರಾ (ಧನಬಾದ್) (ಪಿಟಿಐ): ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರವು ರೂಪಿಸಿರುವ ತೆರಿಗೆ ವ್ಯವಸ್ಥೆಯು ಬಡವರನ್ನು ಲೂಟಿ ಮಾಡಲು ವಿನ್ಯಾಸಗೊಳಿಸಿರುವುದಾಗಿದೆ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಶನಿವಾರ ವಾಗ್ದಾಳಿ ನಡೆಸಿದ್ದಾರೆ.

ಜಾರ್ಖಂಡ್‌ನ ಧನಬಾದ್‌ನಲ್ಲಿ ಚುನಾವಣಾ ರ‍್ಯಾಲಿಯಲ್ಲಿ ಮಾತನಾಡಿದ ರಾಹುಲ್, ‘ಭಾರತೀಯ ತೆರಿಗೆ ವ್ಯವಸ್ಥೆಯು ಬಡವರನ್ನು ಲೂಟಿ ಮಾಡುವುದಾಗಿದೆ. ಅದಾನಿಯೂ ನಿಮ್ಮಷ್ಟೇ ತೆರಿಗೆಯನ್ನು ಪಾವತಿಸುತ್ತಾರೆ. ಸುಮಾರು ₹1 ಲಕ್ಷ ಕೋಟಿ ಬೆಲೆ ಬಾಳುವ ಧಾರಾವಿಯ ಭೂಮಿಯನ್ನು ಅದಾನಿಗೆ ಹಸ್ತಾಂತರಿಸಲಾಗುತ್ತಿದೆ’ ಎಂದು ಆರೋಪಿಸಿದರು.

ರಾಹುಲ್ ಗಾಂಧಿ

ಪ್ರಧಾನಿ ನರೇಂದ್ರ ಮೋದಿಯವರ ವಿರುದ್ಧವೂ ವಾಗ್ದಾಳಿ ನಡೆಸಿದ ರಾಹುಲ್, ‘ಪ್ರಧಾನಿ ಮೋದಿಯವರು ಸೀಪ್ಲೇನ್‌ನಲ್ಲಿ ಪ್ರಯಾಣಿಸುತ್ತಾರೆ. ಸಮುದ್ರದೊಳಗೂ ಹೋಗುತ್ತಾರೆ. ಆದರೆ, ಬೆಲೆ ಏರಿಕೆಯ ಭಾರವನ್ನು ಬಡವರು ಮತ್ತು ಮಹಿಳೆಯರು ಅನುಭವಿಸುತ್ತಾರೆ’ ಎಂದು ಆರೋಪಿಸಿದರು.

ಪರಿಶಿಷ್ಟ ಪಂಗಡಗಳು (ಎಸ್‌ಟಿಗಳು), ಪರಿಶಿಷ್ಟ ಜಾತಿಗಳು (ಎಸ್‌ಸಿಗಳು) ಮತ್ತು ಇತರ ಹಿಂದುಳಿದ ವರ್ಗಗಳು (ಒಬಿಸಿ) ದೇಶದ ಜನಸಂಖ್ಯೆಯ ಶೇ 90ರಷ್ಟಿದ್ದಾರೆ. ಆದರೆ ಅವರಿಗೆ ಸರ್ಕಾರಿ ಸಂಸ್ಥೆಗಳಲ್ಲಿ ಪ್ರಾತಿನಿಧ್ಯವಿಲ್ಲ ಎಂದು ಅವರು ಆರೋಪಿಸಿದರು.

‘ಮೋದಿ ಅವರು ಮನ್ನಾ ಮಾಡಿದ ಬಂಡವಾಳಶಾಹಿಗಳ ಸಾಲಕ್ಕೆ ಸಮನಾದ ಹಣವನ್ನು ಬಡವರಿಗೆ ನೀಡುತ್ತೇವೆ’ ಎಂದು ಗಾಂಧಿ ಹೇಳಿದರು.

ಜಾರ್ಖಂಡ್‌ನ ಪಲಾಮುನಲ್ಲಿ ನಡೆದ ಚುನಾವಣಾ ರ‍್ಯಾಲಿಯಲ್ಲಿ ಗೃಹ ಸಚಿವ ಶಾ ಆರೋಪ

‘ಸಂವಿಧಾನದ ನಕಲಿ ಪ್ರತಿ ಪ್ರದರ್ಶಿಸುವ ರಾಹುಲ್’

ಪಲಾಮು, ಜಾರ್ಖಂಡ್ (ಪಿಟಿಐ): ‘ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಸಂವಿಧಾನದ ನಕಲಿ ಪ್ರತಿ ಪ್ರದರ್ಶಿಸುವ ಮೂಲಕ ಸಂವಿಧಾನಕ್ಕೆ ಅವಮಾನವೆಸಗಿ, ಅಪಹಾಸ್ಯ ಮಾಡಿದ್ದಾರೆ’ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಆರೋಪಿಸಿದ್ದಾರೆ.

‘ಅಲ್ಪಸಂಖ್ಯಾತರಿಗೆ ಕಾಂಗ್ರೆಸ್ ಮೀಸಲಾತಿ ಜಾರಿಗೆ ತರಲು ಮುಂದಾಗುತ್ತಿದ್ದು, ಯಾವುದೇ ಕಾರಣಕ್ಕೂ ಬಿಜೆಪಿ ಅವಕಾಶ ನೀಡುವುದಿಲ್ಲ’ ಎಂದು ಅವರು ಹೇಳಿದ್ದಾರೆ.

ಜಾರ್ಖಂಡ್‌ನ ಪಲಾಮುನಲ್ಲಿ ಶನಿವಾರ ಪಕ್ಷದ ಪರ ಚುನಾವಣಾ ರ‍್ಯಾಲಿಯಲ್ಲಿ ಭಾಗವಹಿಸಿ ಮಾತನಾಡಿದ ಅವರು, ‘ರಾಹುಲ್ ಗಾಂಧಿ ಸಂವಿಧಾನದ ಪ್ರತಿಗಳನ್ನು ಪ್ರದರ್ಶಿಸುತ್ತಿದ್ದಾರೆ. ಎರಡು ದಿನಗಳ ಹಿಂದೆ ಇದರ ಗುಟ್ಟು ರಟ್ಟಾಗಿದೆ. ಅವರು ಪ್ರದರ್ಶಿಸುತ್ತಿದ್ದ ಸಂವಿಧಾನದ ಪ್ರತಿಯು ವ್ಯಕ್ತಿಯೊಬ್ಬರಿಗೆ ಸಿಕ್ಕಿದ್ದು, ಮುಖಪುಟದಲ್ಲಿ ‘ಭಾರತದ ಸಂವಿಧಾನ’ ಎಂದು ಪ್ರದರ್ಶಿಸಲಾಗಿದ್ದ ಪುಸ್ತಕದ ಒಳಭಾಗದಲ್ಲಿ ಖಾಲಿ ಹಾಳೆಗಳಿವೆ. ಸಂವಿಧಾನವನ್ನು ಅಪಹಾಸ್ಯ ಮಾಡಬೇಡಿ. ಇದು ನಂಬಿಕೆಯ ಪ್ರಶ್ನೆಯಾಗಿದೆ. ಸಾರ್ವಜನಿಕವಾಗಿ ಸಂವಿಧಾನದ ನಕಲಿ ಪ್ರತಿ ಪ್ರದರ್ಶಿಸಿ, ಡಾ.ಬಿ.ಆರ್.ಅಂಬೇಡ್ಕರ್ ಹಾಗೂ ಸಂವಿಧಾನ ಸಮಿತಿಗೆ ಅವಮಾನ ಮಾಡಿದ್ದೀರಿ. ಕಾಂಗ್ರೆಸ್ ಪಕ್ಷವು ಸಂವಿಧಾನವನ್ನು ಅಪಹಾಸ್ಯ ಮಾಡುತ್ತಿದೆ’ ಎಂದು ಹೇಳಿದ್ದಾರೆ.

ಜಾರ್ಖಂಡ್‌ನ ಹಜಾರೀಬಾಗ್‌ನಲ್ಲಿ ಶನಿವಾರ ಆಯೋಜಿಸಿದ್ದ ‘ವಿಜಯ ಸಂಕಲ್ಪ’ ರ‍್ಯಾಲಿಯಲ್ಲಿ ಗೃಹ ಸಚಿವ ಅಮಿತ್ ಶಾ ಮಾತನಾಡಿದರು–ಪಿಟಿಐ ಚಿತ್ರ

‘ಪ್ರಧಾನಿ ನರೇಂದ್ರ ಮೋದಿ ಅವರು ನ.26ರಂದು ಸಂವಿಧಾನ ದಿನ ಎಂದು ಆಚರಿಸಲು ನಿರ್ಧರಿಸಿದ್ದಾರೆ’ ಎಂದು ಶಾ ತಿಳಿಸಿದ್ದಾರೆ.

‘ಬೆಂಬಲ ಕಳೆದುಕೊಳ್ಳುತ್ತಿರುವ ಕಾಂಗ್ರೆಸ್’

ನಾಂದೇಡ್, ಮಹಾರಾಷ್ಟ್ರ (ಪಿಟಿಐ): ‘ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ದಲಿತರು, ಆದಿವಾಸಿಗಳು ಇತ್ತೀಚಿನ ವರ್ಷಗಳಿಂದ ಒಗ್ಗಟ್ಟಿನಿಂದ ಇದ್ದು, ಕಾಂಗ್ರೆಸ್ ತನ್ನ ಬೆಂಬಲವನ್ನು ಕಳೆದುಕೊಳ್ಳುತ್ತಿದೆ’ ಎಂದು ಪ್ರಧಾನಿ ನರೇಂದ್ರ ಮೋದಿ ಆರೋಪಿಸಿದರು.

> ಕಾಂಗ್ರೆಸ್ ಮುಖಂಡರು ಪ್ರದರ್ಶಿಸುತ್ತಿರುವ ಕೆಂಪು ಬಣ್ಣ ಹೊಂದಿದ ’ಭಾರತದ ಸಂವಿಧಾನದ’ ಪ್ರತಿಯ ಒಳಭಾಗವು ಪೂರ್ತಿ ಖಾಲಿಯಾಗಿದೆ
>
> **ನರೇಂದ್ರ ಮೋದಿ,** ಪ್ರಧಾನಿ

ಮಹಾರಾಷ್ಟ್ರದ ನಾಂದೇಡ್‌ನಲ್ಲಿ ಪಕ್ಷದ ಪರ ರ‍್ಯಾಲಿಯಲ್ಲಿ ಭಾಗವಹಿಸಿ ಅವರು ಮಾತನಾಡಿದರು.

‘ಖಾಲಿ ಹಾಳೆಗಳನ್ನು ಹೊಂದಿದ ಸಂವಿಧಾನ ಪ್ರತಿ ಪ್ರದರ್ಶಿಸಿದ ಕಾಂಗ್ರೆಸ್ ರಾಜಕಾರಣದಿಂದ ಇಡೀ ದೇಶದ ಜನರು ಆಘಾತಕ್ಕೊಳಗಾಗಿದ್ದಾರೆ ಎಂದ ಅವರು, ಅಂಬೇಡ್ಕರ್ ಅವರಿಗೆ ಅವಮಾನವೆಸಗಿದೆ’ ಎಂದರು.

‘ಹಿಂದುಳಿದ ವರ್ಗಗಳ ಮೀಸಲಾತಿಗೆ ಕಾಂಗ್ರೆಸ್ ವಿರುದ್ಧವಾಗಿದೆ. ಮಹಾರಾಷ್ಟ್ರದಲ್ಲಿ ಉಲೇಮಾಗಳ ನಿಯೋಗವು ಇತ್ತೀಚಿಗೆ ಕಾಂಗ್ರೆಸ್ ಮುಖಂಡರನ್ನು ಭೇಟಿಯಾಗಿದ್ದ ವೇಳೆ ಅಲ್ಪಸಂಖ್ಯಾತರಿಗಾಗಿ ಶೇಕಡ 10 ರಷ್ಟು ಮೀಸಲಾತಿ ನೀಡುವುದಾಗಿ ಭರವಸೆ ನೀಡಿದೆ. ಪ್ರಧಾನಿ ಮೋದಿ ನಾಯಕತ್ವದಲ್ಲಿ ಧರ್ಮದ ಆಧಾರದಲ್ಲಿ ಮೀಸಲಾತಿ ನೀಡಲು ಬಿಜೆಪಿ ಎಂದಿಗೂ ಅವಕಾಶ ನೀಡುವುದಿಲ್ಲ’ ಎಂದು ಶಾ ಅವರು ತಿಳಿಸಿದರು.

ಮಣಿಪುರ: ಗುಂಡಿಕ್ಕಿ ಮಹಿಳೆ ಹತ್ಯೆ

ಇಂಫಾಲ್ (ಪಿಟಿಐ): ಮಣಿಪುರದ ಬಿಷ್ಣುಪುರ ಜಿಲ್ಲೆಯಲ್ಲಿ ಶನಿವಾರ ಭತ್ತದ ಜಮೀನಿನಲ್ಲಿ ಕೆಲಸ ಮಾಡುತ್ತಿದ್ದ ಮಹಿಳೆಯೊಬ್ಬರನ್ನು ಉಗ್ರರು ಗುಂಡಿಕ್ಕಿ ಹತ್ಯೆ ಮಾಡಿದ್ದಾರೆ.

'ಸೈಟಾನ್ ಪ್ರದೇಶದಲ್ಲಿ ಮಹಿಳೆಯು ಇತರ ರೈತರೊಂದಿಗೆ ಕೆಲಸ ಮಾಡುತ್ತಿದ್ದಾಗ ಉಗ್ರರು ಗುಡ್ಡ ಪ್ರದೇಶದಿಂದ ಗುಂಡಿನ ದಾಳಿ ನಡೆಸಿದ್ದಾರೆ. ಮಹಿಳೆ ಸ್ಥಳದಲ್ಲೇ ಮೃತಪಟ್ಟಿದ್ದಾರೆ' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಈ ಘಟನೆಯಿಂದ ಗ್ರಾಮದಲ್ಲಿ ಪರಿಸ್ಥಿತಿ ಉದ್ವಿಗ್ನಗೊಂಡಿದ್ದು, ಹೆಚ್ಚುವರಿ ಭದ್ರತಾ ಪಡೆಗಳನ್ನು ನಿಯೋಜಿಸಲಾಗಿದೆ.

'ಗ್ರಾಮದಲ್ಲಿ ನಿಯೋಜನೆಗೊಂಡಿರುವ ಭದ್ರತಾ ಪಡೆಗಳು ಇಂತಹ ದಾಳಿಗಳ ವಿರುದ್ಧ ಯಾವುದೇ ಕ್ರಮ ಕೈಗೊಳ್ಳುತ್ತಿಲ್ಲ' ಎಂದು ಗ್ರಾಮಸ್ಥರು ಆರೋಪಿಸಿದ್ದಾರೆ.

ಗುರುವಾರ ಜಿರೀಬಾಮ್ ಜಿಲ್ಲೆಯಲ್ಲಿ ಮಹಿಳೆಯೊಬ್ಬರನ್ನು ಗುಂಡಿಕ್ಕಿ ಹತ್ಯೆ ಮಾಡಲಾಗಿತ್ತು. ಈ ಘಟನೆಯಲ್ಲಿ ಆರು ಮನೆಗಳು ಬೆಂಕಿಗಾಹುತಿಯಾಗಿದ್ದವು. ಶುಕ್ರವಾರ ಮಧ್ಯಾಹ್ನದ ಬಳಿಕ ಮಹಿಳೆಯ ಶವವು ಸುಟ್ಟು ಕರಕಲಾಗಿರುವ ಸ್ಥಿತಿಯಲ್ಲಿ ಪತ್ತೆಯಾಗಿತ್ತು.

ಆಧ್ಯಾತ್ಮಿಕ ಗುರು ಕೋಟೇಶ್ವರರಾವ್ ಆಂಧ್ರ ಪ್ರದೇಶ ಸರ್ಕಾರದ ಸಲಹೆಗಾರ

ಪ್ರಜಾವಾಣಿ ವಾರ್ತೆ

ಹೈದರಾಬಾದ್: ಖ್ಯಾತ ಆಧ್ಯಾತ್ಮಿಕ ಗುರು ಚಾಗಂಟಿ ಕೋಟೇಶ್ವರ ರಾವ್ ಅವರನ್ನು ಸರ್ಕಾರದ ಸಲಹೆಗಾರರನ್ನಾಗಿ ಆಂಧ್ರ ಪ್ರದೇಶದ ಟಿಡಿಪಿ ನೇತೃತ್ವದ ಸರ್ಕಾರ ಶನಿವಾರ ನೇಮಕ ಮಾಡಿದೆ.

ಕೋಟೇಶ್ವರ ರಾವ್

ಅವರಿಗೆ ಕ್ಯಾಬಿನೆಟ್ ದರ್ಜೆ ಸ್ಥಾನಮಾನ ನೀಡಲಾಗಿದೆ. ಅವರನ್ನು ‘ವಿದ್ಯಾರ್ಥಿಗಳು, ನೈತಿಕತೆ ಹಾಗೂ ಮೌಲ್ಯಗಳ’ ಸಲಹೆಗಾರರನ್ನಾಗಿ ನೇಮಕ ಮಾಡಲಾಗಿದೆ.

ಸನಾತನ ಧರ್ಮ ಕುರಿತ ಉಪನ್ಯಾಸಗಳಿಂದಾಗಿ ಕೋಟೇಶ್ವರ ರಾವ್ ಪ್ರಸಿದ್ಧರಾಗಿದ್ದಾರೆ. ರಾಮಾಯಣ, ಭಾಗವತ, ಮಹಾಭಾರತ ಹಾಗೂ ಭಗವದ್ಗೀತೆ ಕುರಿತು ಅವರು ತೆಲುಗು ಭಾಷೆಯಲ್ಲಿ ನೀಡುವ ಪ್ರವಚನಗಳಿಂದ ವಿಶ್ವದಾದ್ಯಂತ ಇರುವ ತೆಲುಗು ಭಾಷಿಕರಲ್ಲಿ ಜನಪ್ರಿಯತೆ ಪಡೆದಿದ್ದಾರೆ. ತೆಲುಗು ಭಾಷಿಕ ಹಿಂದೂಗಳು ದೊಡ್ಡಸಂಖ್ಯೆಯಲ್ಲಿ ಅವರ ಅನುಯಾಯಿಗಳಾಗಿದ್ದಾರೆ.

ರಾಜ್ಯದಲ್ಲಿ ಯಾವುದೇ ಪಕ್ಷದ ಸರ್ಕಾರವಿದ್ದರೂ ಕೋಟೇಶ್ವರ ರಾವ್ ಸಲಹೆಗಾರರಾಗಿ ಇರುತ್ತಿದ್ದರು ಎಂಬುದು ವಿಶೇಷ. 2016ರಲ್ಲಿ ಎನ್.ಚಂದ್ರಬಾಬು ನಾಯ್ಡು ಅವರ ಮೊದಲ ಅವಧಿಗೆ ಮುಖ್ಯಮಂತ್ರಿಯಾಗಿದ್ದಾಗ ಕೋಟೇಶ್ವರ ರಾವ್ ಅವರನ್ನು ಸಾಂಸ್ಕೃತಿಕ ಸಲಹೆಗಾರರನ್ನಾಗಿ ನೇಮಕ ಮಾಡಲಾಗಿತ್ತು.

2023ರಲ್ಲಿ, ವೈ.ಎಸ್. ಜಗನ್‌ಮೋಹನ್ ರೆಡ್ಡಿ ನೇತೃತ್ವದ ಸರ್ಕಾರವು ಅವನ್ನು ಟಿಟಿಡಿಯ ಧಾರ್ಮಿಕ ಸಲಹೆಗಾರರಾಗಿ ನೇಮಕ ಮಾಡಿತ್ತು. ಈಗ ಮತ್ತೊಮ್ಮೆ ಅವರು ರಾಜ್ಯ ಸರ್ಕಾರದ ಸಲಹೆಗಾರ ಹುದ್ದೆಗೆ ನೇಮಕಗೊಂಡಿದ್ದಾರೆ.

ನಿಗಮಗಳು, ಮಂಡಳಿಗಳು ಸೇರಿದಂತೆ ಹಲವು ಸ್ಥಾನಗಳಿಗೆ ಒಟ್ಟು 59 ಜನರನ್ನು ಆಂಧ್ರಪ್ರದೇಶ ಸರ್ಕಾರ ನೇಮಕ ಮಾಡಿದ್ದು, ಮುಖ್ಯಮಂತ್ರಿ ನಾಯ್ಡು ಅವರು ಪಟ್ಟಿಯನ್ನು ಶನಿವಾರ ಬಿಡುಗಡೆ ಮಾಡಿದ್ದಾರೆ. ಈ ಪೈಕಿ, ಅಂಗಪಕ್ಷವಾದ ಜನಸೇನಾದ 9 ನಾಯಕರು ಹಾಗೂ ಬಿಜೆಪಿಯ ಒಬ್ಬರು ನೇಮಕಗೊಂಡಿದ್ದಾರೆ.

‘ವಾವರ್ ಕೇಳಿದರೆ ಶಬರಿಮಲೆಯೂ ವಕ್ಫ್ ಆಗುತ್ತದೆ’

ವಯನಾಡ್ (ಪಿಟಿಐ): ಶಬರಿಮಲೆಯು ವಕ್ಫ್‌ಗೆ ಸೇರಿದ್ದು ಎಂದು ವಾವರ್ ಸ್ವಾಮಿ ಪ್ರತಿಪಾದಿಸಿದರೆ, ಅಯ್ಯಪ್ಪ ಸ್ವಾಮಿ ಆ ಪವಿತ್ರ ಬೆಟ್ಟದಿಂದ ಬಲವಂತವಾಗಿ ಜಾಗ ಖಾಲಿ ಮಾಡಬೇಕಾಗುತ್ತದೆ ಎಂದು ಬಿಜೆಪಿಯ ಹಿರಿಯ ಮುಖಂಡ ಕೆ. ಗೋಪಾಲಕೃಷ್ಣನ್ ಅವರು ಶನಿವಾರ ವಿವಾದಾತ್ಮಕ ಹೇಳಿಕೆ ನೀಡಿದ್ದಾರೆ.

ಸ್ಥಳೀಯ ನಂಬಿಕೆಗಳ ಪ್ರಕಾರ ವಾವರ್ ಸ್ವಾಮಿಯು ಅಯ್ಯಪ್ಪ ಸ್ವಾಮಿಯ ಮುಸ್ಲಿಂ ಜೊತೆಗಾರ. ಶಬರಿಮಲೆಯಲ್ಲಿ ವಾವರ್ ಸ್ವಾಮಿಗೆ ಸೇರಿದ ಸ್ಥಳವೊಂದು ಇದೆ.

ಬಿಜೆಪಿ ಅಭ್ಯರ್ಥಿ ನವ್ಯಾ ಹರಿದಾಸ್ ಅವರ ಚುನಾವಣಾ ಪ್ರಚಾರದಲ್ಲಿ ಭಾಗಿಯಾದ ಗೋಪಾಲಕೃಷ್ಣನ್ ಅವರು, ವಕ್ಫ್ (ತಿದ್ದುಪಡಿ) ಮಸೂದೆ – 2024ಕ್ಕೆ ಸಂಬಂಧಿಸಿದ ವಿವಾದಗಳ ಬಗ್ಗೆ ಪ್ರಸ್ತಾಪಿಸಿದರು.

ಶಬರಿಮಲೆಯು ಅಯ್ಯಪ್ಪ ಸ್ವಾಮಿಯ ಜಾಗ. ಅದನ್ನು ಮುಂದೊಂದು ದಿನ ವಕ್ಫ್ ಆಸ್ತಿ ಎನ್ನಬಹುದೇ ಎಂದು ಪ್ರಶ್ನಿಸಿದರು. ‘ಅಯ್ಯಪ್ಪ ಸ್ವಾಮಿಯ ಕೆಳಗೆ ಒಬ್ಬ ಇದ್ದಾನೆ. ಪವಿತ್ರವಾದ 18 ಮೆಟ್ಟಿಲುಗಳ ಕೆಳಗೆ... ವಾವರ್... ಈ ವಾವರ್ ತಾನು ಜಾಗವನ್ನು ವಕ್ಫ್‌ಗೆ ನೀಡಿದ್ದೇನೆ ಎಂದು ನಾಳೆ ಹೇಳಿದರೆ ಶಬರಿಮಲೆಯು ವಕ್ಫ್‌ಗೆ ಹೋಗುತ್ತದೆ. ಆಗ ಅಯ್ಯಪ್ಪ ಸ್ವಾಮಿಯು ಶಬರಿಮಲೆಯನ್ನು ಬಲವಂತದಿಂದ ತೊರೆಯಬೇಕಾಗುತ್ತದೆ... ಇದಕ್ಕೆ ನಾವು ಅವಕಾಶ ಮಾಡಿಕೊಡಬೇಕೇ’ ಎಂದು ಪ್ರಶ್ನಿಸಿದರು.

ವಯನಾಡ್‌ನ ಕ್ರೈಸ್ತ ಸಮುದಾಯದ ಮತಗಳನ್ನು ಸೆಳೆಯುವ ಉದ್ದೇಶದಿಂದ ಗೋಪಾಲಕೃಷ್ಣನ್ ಅವರು, ‘ತಮಿಳುನಾಡಿನಲ್ಲಿ ವೆಲಂಕಣ್ಣಿಯು ಕ್ರೈಸ್ತರಿಗೆ ಪ್ರಮುಖವಾದ ಯಾತ್ರಾಸ್ಥಳ. ಅದನ್ನು ವಕ್ಫ್‌ಗೆ ಸೇರಿದ್ದು ಎಂದು ಯಾರಾದರೂ ಹೇಳಿದರೆ, ಹಾಗಾಗುವುದಕ್ಕೆ ಅವಕಾಶ ಕೊಡಬೇಕೇ’ ಎಂದೂ ಪ್ರಶ್ನಿಸಿದರು. ಇಂಥದ್ದನ್ನು ತಡೆಯುವ ಉದ್ದೇಶದಿಂದ ತಿದ್ದುಪಡಿಯನ್ನು ತರಲಾಗುತ್ತಿದೆ ಎಂದರು.

ದಲಿತನಿಗೆ ಕಿರುಕುಳ: ಅಧಿಕಾರಿ ಬಂಧನ

ಹಿಸಾರ್, ಹರಿಯಾಣ (ಪಿಟಿಐ): ಗುತ್ತಿಗೆ ಆಧಾರದಲ್ಲಿ ಕಾರ್ಯನಿರ್ವಹಿಸುತ್ತಿದ್ದ ದಲಿತ ಕಾರ್ಮಿಕನಿಗೆ ಬಂದೂಕು ತೋರಿಸಿ ಲೈಂಗಿಕ ಕಿರುಕುಳ ನೀಡಿದ ಆರೋಪದ ಮೇಲೆ ಹರಿಯಾಣದ ಹಿರಿಯ ಅಧಿಕಾರಿ ಕುಲ್‌ಭೂಷಣ್ ಬನ್ಸಾಲ್ ಎಂಬುವವರನ್ನು ಶನಿವಾರ ಬಂಧಿಸಲಾಗಿದೆ.

‘ಕಿರುಕುಳ ನೀಡಿದ ಕುರಿತು ನೊಂದ ಕಾರ್ಮಿಕ, ದೂರು ನೀಡಿದ ಬೆನ್ನಲ್ಲೇ ಪೊಲೀಸರು ಪ್ರಕರಣ ದಾಖಲಿಸಿ ಬಂಧಿಸಿದ್ದಾರೆ’ ಎಂದು ಹೆಚ್ಚುವರಿ ಎಸ್ಪಿ ರಾಜೇಶ್ ಕುಮಾರ್ ಮೋಹನ್ ತಿಳಿಸಿದ್ದಾರೆ.

ಬನ್ಸಾಲ್ ಅವರು ಹನ್ಸಿ ಉಪವಿಭಾಗದ ಮ್ಯಾಜಿಸ್ಟ್ರೇಟ್ ಆಗಿ ಕೆಲಸ ಮಾಡುತ್ತಿದ್ದು, ದಲಿತ ಕಾರ್ಮಿಕನನ್ನು ಗುತ್ತಿಗೆ ಆಧಾರದಲ್ಲಿ ಕೆಲಸಕ್ಕೆ ನೇಮಿಸಿಕೊಂಡಿದ್ದರು.

‘ಅವರ ಮನೆಗೆ ಕರೆಸಿ, ನನಗೆ ಕಿರುಕುಳ ನೀಡಿದ್ದರು. ಅವರ ಕೃತ್ಯಗಳನ್ನು ಸಾಕ್ಷಿಯಾಗಿ ಮೊಬೈಲ್‌ನಲ್ಲಿ ಚಿತ್ರೀಕರಿಸಿಕೊಂಡಿದ್ದೆನು. ಇದಕ್ಕೆ ವಿರೋಧ ವ್ಯಕ್ತಪಡಿಸಿದ ವೇಳೆ ಬಂದೂಕಿನಿಂದ ಬೆದರಿಸಿ, ಕೆಲಸದಿಂದ ಕಿತ್ತುಹಾಕಿದ್ದರು’ ಎಂದು ಕಾರ್ಮಿಕ ದೂರಿನಲ್ಲಿ ತಿಳಿಸಿದ್ದಾರೆ.

ಬನ್ಸಾಲ್ ವಿರುದ್ಧ ಪರಿಶಿಷ್ಟ ಜಾತಿ ಹಾಗೂ ಪಂಗಡ ದೌರ್ಜನ್ಯ ತಡೆ ಕಾಯ್ದೆ ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದೆ.

ಸಿ.ಎಂ ಸೊರೇನ್ ಆಪ್ತನಿಗೆ ಸೇರಿದ ಸ್ಥಳಗಳ ಮೇಲೆಯೂ ದಾಳಿ

ಜಾರ್ಖಂಡ್: ಹಲವೆಡೆ ಐ.ಟಿ ಶೋಧ

ರಾಂಚಿ (ಪಿಟಿಐ): ತೆರಿಗೆ ವಂಚನೆ ಪ್ರಕರಣಕ್ಕೆ ಸಂಬಂಧಿಸಿದಂತೆ ಜಾರ್ಖಂಡ್ ಮುಖ್ಯಮಂತ್ರಿ ಹೇಮಂತ್ ಸೊರೇನ್ ಆಪ್ತರಿಗೆ ಸೇರಿದ ಆಸ್ತಿ ಸೇರಿದಂತೆ ಹಲವು ಸ್ಥಳಗಳಲ್ಲಿ ಆದಾಯ ತೆರಿಗೆ ಇಲಾಖೆಯು(ಐ.ಟಿ.) ಶನಿವಾರ ಶೋಧ ನಡೆಸಿದೆ.

ರಾಜಧಾನಿ ರಾಂಚಿ ಮತ್ತು ಜೆಮ್‌ಶೆಡ್‌ಪುರದಲ್ಲಿನ ಒಂಬತ್ತು ಸ್ಥಳಗಳಲ್ಲಿ ಶನಿವಾರ ಮುಂಜಾನೆಯಿಂದ ಆದಾಯ ತೆರಿಗೆ ಇಲಾಖೆ ಅಧಿಕಾರಿಗಳು ಕಾರ್ಯಾಚರಣೆ ನಡೆಸಿದರು ಎಂದು ಮೂಲಗಳು ತಿಳಿಸಿವೆ.

ಮುಖ್ಯಮಂತ್ರಿ ಸೊರೇನ್ ಆಪ್ತರಾಗಿರುವ ಸುನಿಲ್ ಶ್ರೀವಾಸ್ತವ ಅವರಿಗೆ ಸಂಬಂಧಿಸಿದ ಆಸ್ತಿಗಳ ಮೇಲೂ ಐ.ಟಿ ಇಲಾಖೆ ದಾಳಿ ನಡೆಸಿದೆ.

ಮದ್ಯ ವಹಿವಾಟು ಮತ್ತು ಗಣಿಗಾರಿಕೆಯಲ್ಲಿ ನಡೆದಿದೆ ಎನ್ನಲಾದ ಅಕ್ರಮಗಳ ಆರೋಪದ ಕುರಿತು ಜಾರಿ ನಿರ್ದೇಶನಾಲಯ(ಇ.ಡಿ) ಮತ್ತು ಸಿಬಿಐ ಇತ್ತೀಚೆಗೆ ಆರಂಭಿಸಿರುವ ತನಿಖೆಗೆ ಸಂಬಂಧಿಸಿ ಐ.ಟಿ. ಶೋಧ ನಡೆಸಿದೆ.

ಚುನಾವಣೆ ಸಮೀಪಿಸುತ್ತಿರುವಾಗಲೇ ಐ.ಟಿ ಇಲಾಖೆ ದಾಳಿ ನಡೆದಿರುವುದರಿಂದ ಈ ವಿಚಾರ ರಾಜಕೀಯ ಚರ್ಚೆಗೆ ಕಾರಣವಾಗಿದೆ. ಐ.ಟಿ. ದಾಳಿಯ ಬಗ್ಗೆ ಪ್ರತಿಕ್ರಿಯಿಸಿದ ಕಾಂಗ್ರೆಸ್‌ನ ಜಾರ್ಖಂಡ್ ರಾಜ್ಯ ಘಟಕ, ‘ಜಾರ್ಖಂಡ್‌ಗೆ ಇದು ಹೊಸತಲ್ಲ’ ಎಂದು ಹೇಳಿದೆ.

‘ವಿರೋಧ ಪಕ್ಷದ ನಾಯಕರು ಮತ್ತು ಅವರ ಆಪ್ತರಿಗೆ ಸಂಬಂಧಿಸಿದ ಸ್ಥಳಗಳಲ್ಲಿ ಹೆಚ್ಚಾಗಿ ಐ.ಟಿ. ಶೋಧ ನಡೆಯುತ್ತಿದೆ. ಚುನಾವಣೆಯ ಕಾರಣ ಐ.ಟಿ. ಮತ್ತು ಇ.ಡಿ. ದಾಳಿಗಳನ್ನು ನಡೆಸುವ ಮೂಲಕ ಬಿಜೆಪಿ ರಾಜ್ಯದಲ್ಲಿ ನೆಲೆ ಕಂಡುಕೊಳ್ಳಲು ಪ್ರಯತ್ನಿಸುತ್ತಿದೆ. ಇಂತಹ ನಡೆಗಳ ಮೂಲಕ ವಿರೋಧಪಕ್ಷದ ನಾಯಕರನ್ನು ಒತ್ತಡಕ್ಕೆ ಸಿಲುಕುವಂತೆ ಮಾಡಲಾಗುತ್ತಿದೆ’ ಎಂದು ಕಾಂಗ್ರೆಸ್ ನಾಯಕ ರಾಕೇಶ್ ಸಿನ್ಹಾ ಅವರು ಹೇಳಿದ್ದಾರೆ.

ಹಿಮಾಚಲ ಪ್ರದೇಶದಲ್ಲಿ ‘ಸಮೋಸ ರಾಜಕೀಯ’ದ ಸದ್ದು

ಸಿ.ಎಂ.ಗೆ 11 ಸಮೋಸ ಕಳುಹಿಸಿದ ಬಿಜೆಪಿ ಶಾಸಕ

ಹಮೀರ್‌ಪುರ/ಶಿಮ್ಲಾ (ಪಿಟಿಐ): ಹಿಮಾಚಲ ಪ್ರದೇಶದಲ್ಲಿ ಈಗ ‘ಸಮೋಸ ರಾಜಕೀಯ’ದ ಕಾವು ಏರುತ್ತಿದೆ. ಮುಖ್ಯಮಂತ್ರಿ ಸುಖ್ವಿಂದರ್ ಸಿಂಗ್ ಸುಖು ಅವರಿಗಾಗಿ ತರಿಸಿ ಇಟ್ಟಿದ್ದ ಸಮೋಸಗಳನ್ನು ಅವರ ಭದ್ರತಾ ಸಿಬ್ಬಂದಿಗೆ ನೀಡಲಾಗಿದೆ ಎಂಬ ವಿಷಯವೇ ಇಡೀ ವಿವಾದದ ಕೇಂದ್ರ ಬಿಂದು.

ಮುಖ್ಯಮಂತ್ರಿಯವರಿಗಾಗಿ ತರಿಸಲಾಗಿದ್ದ ಸಮೋಸಗಳನ್ನು ಭದ್ರತಾ ಸಿಬ್ಬಂದಿಗೆ ಹೇಗೆ ನೀಡಲಾಗಿತ್ತು ಎಂಬ ಕುರಿತು ರಾಜ್ಯ ಸರ್ಕಾರ ಸಿಐಡಿ ತನಿಖೆಗೆ ಆದೇಶಿಸಿದ್ದರೆ, ವಿರೋಧ ಪಕ್ಷ ಬಿಜೆಪಿ ಇದೇ ವಿಚಾರವನ್ನು ಮುಂದಿಟ್ಟುಕೊಂಡು ಸರ್ಕಾರದ ವಿರುದ್ಧ ಪ್ರತಿಭಟನೆ ನಡೆಸಿದೆ.

ಬಿಜೆಪಿ ಯುವ ಮೋರ್ಚಾ ಶಿಮ್ಲಾದಲ್ಲಿ ಸಮೋಸಗಳನ್ನು ಹಂಚಿ, ಸರ್ಕಾರದ ವಿರುದ್ಧ ಪ್ರತಿಭಟಿಸಿದೆ. ಕಾರ್ಯಕರ್ತರು ಶಿಮ್ಲಾದ ಕೆಲ ಪ್ರದೇಶಗಳಲ್ಲಿ ಅಂಗಡಿಗಳನ್ನು ಸ್ಥಾಪಿಸಿ, ಜನರಿಗೆ ಉಚಿತವಾಗಿ ಸಮೋಸಗಳನ್ನು ವಿತರಿಸಿದ್ದಾರೆ.

‘ಸಮೋಸ’ ವಿವಾದಕ್ಕೆ ಸಂಬಂಧಿಸಿ ಬಿಜೆಪಿ ಯುವ ಘಟಕ ಬಿಜೆವೈಎಂ ಕಾರ್ಯಕರ್ತರು ಶಿಮ್ಲಾದಲ್ಲಿ ಶನಿವಾರ ಪ್ರತಿಭಟಿಸಿದರು ಪಿಟಿಐ ಚಿತ್ರ

ಮುಖ್ಯಮಂತ್ರಿ ಸುಖು ಅವರ ಚಿತ್ರವಿದ್ದ ಪೋಸ್ಟರ್‌ವೊಂದಕ್ಕೂ ಸಮೋಸ ತಿನಿಸುವ ಮೂಲಕ ಪ್ರತಿಭಟಿಸಿದ್ದಾರೆ.

ಹಮೀರ್‌ಪುರ ಕ್ಷೇತ್ರದ ಬಿಜೆಪಿ ಶಾಸಕ ಆಶಿಶ್ ಶರ್ಮಾ ಅವರು ಮುಖ್ಯಮಂತ್ರಿ ಸುಖು ಅವರಿಗಾಗಿ 11 ಸಮೋಸಗಳನ್ನು ಆರ್ಡರ್ ಮಾಡಿದ್ದಾರೆ. ಸ್ವತಃ ಶರ್ಮಾ ಅವರೇ ಈ ವಿಷಯವನ್ನು ಸಾಮಾಜಿಕ ಜಾಲತಾಣಗಳಲ್ಲಿ ಶನಿವಾರ ಹಂಚಿಕೊಂಡಿದ್ದಾರೆ.

‘ಈ ವಿಚಾರವಾಗಿ ತನಿಖೆಗೆ ಆದೇಶಿಸಿಲ್ಲ’ ಎಂದು ಸಿಐಡಿಯ ಹಿರಿಯ ಅಧಿಕಾರಿಯೊಬ್ಬರು ಹೇಳಿದ್ದಾರೆ. ಕಾಂಗ್ರೆಸ್ ನಾಯಕರು ಕೂಡ ಇದೇ ಮಾತನ್ನು ಹೇಳಿದ್ದಾರೆ.

‘ನಿರುದ್ಯೋಗ, ಹಣಕಾಸು ಬಿಕ್ಕಟ್ಟು, ನೌಕರರಿಗೆ ಪಿಂಚಣಿ ಮತ್ತು ಡಿ.ಎ ಬಾಕಿ ವಿತರಣೆಯಲ್ಲಿ ವಿಳಂಬದಂತಹ ಸಮಸ್ಯೆಗಳಿಂದ ರಾಜ್ಯ ತತ್ತರಿಸಿದೆ. ಇಂತಹ ಸಂದರ್ಭದಲ್ಲಿ, ಮುಖ್ಯಮಂತ್ರಿಗಳಿಗೆ ತರಿಸಲಾಗಿದ್ದ ಸಮೋಸಗಳ ವಿಚಾರವಾಗಿ ಸಿಐಡಿ ತನಿಖೆಗೆ ಆದೇಶಿಸಿರುವುದು ನಿರಾಸೆ ಮೂಡಿಸುವಂಥದ್ದು’ ಎಂದು ಬಿಜೆಪಿ ಶಾಸಕ ಶರ್ಮಾ ಅವರು ಫೇಸ್‌ಬುಕ್‌ನಲ್ಲಿ ಪೋಸ್ಟ್ ಮಾಡಿದ್ದಾರೆ.

‘ಸಮೋಸಗಳಿಗಿಂತ ಜನರ ಸಮಸ್ಯೆಗಳನ್ನು ಬಗೆಹರಿಸುವುದು ಮುಖ್ಯ. ಇದನ್ನು ಜ್ಞಾಪಿಸುವ ಸಲುವಾಗಿಯೇ ಹಾಗೂ ಸರ್ಕಾರದ ಧೋರಣೆ ಪ್ರತಿಭಟಿಸಿ ನಾನು ಮುಖ್ಯಮಂತ್ರಿಗೆ 11 ಸಮೋಸಗಳನ್ನು ಕಳುಹಿಸಿದ್ದೇನೆ’ ಎಂದು ಹೇಳಿದ್ದಾರೆ.

> ಈ ವಿಚಾರಕ್ಕೆ ಸಂಬಂಧಿಸಿ ಸರ್ಕಾರ ಯಾವುದೇ ತನಿಖೆಗೆ ಆದೇಶಿಸಿಲ್ಲ. ಏನಾದರೂ ವಿಚಾರಣೆ ನಡೆಯುತ್ತಿದ್ದಲ್ಲಿ, ಅದು ಸಿಐಡಿಯ ಆಂತರಿಕ ವಿಚಾರವಷ್ಟೆ
>
> **ನರೇಶ್ ಚೌಹಾಣ್**
> ಮುಖ್ಯಮಂತ್ರಿ ಸುಖು ಮಾಧ್ಯಮ ಸಲಹೆಗಾರ

> ಈ ವಿಚಾರವಾಗಿ ಸರ್ಕಾರ ತನಿಖೆಗೆ ಆದೇಶಿಸಲು ಮುಂದಾಗುವಂತೆ ಮಾಡಲು ಡಬ್ಬದಲ್ಲಿ ಸಮೋಸಗಳೊಂದಿಗೆ ಬೇರೆ ಏನಿದ್ದವು ಎಂಬುದು ಗೊತ್ತಾಗಬೇಕು
>
> **ರಾಜೀವ್ ಭಾರದ್ವಾಜ್**
> ರಾಜ್ಯ ಬಿಜೆಪಿ ಉಪಾಧ್ಯಕ್ಷ

ಶಿಮ್ಲಾದಲ್ಲಿರುವ ಸಿಐಡಿ ಕೇಂದ್ರ ಕಚೇರಿಯಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮವೊಂದರಲ್ಲಿ ಪಾಲ್ಗೊಳ್ಳುವುದಕ್ಕಾಗಿ ಮುಖ್ಯಮಂತ್ರಿ ಸುಖು ಅವರು ಅಕ್ಟೋಬರ್ 21ರಂದು ತೆರಳಿದ್ದರು. ಈ ವೇಳೆ ಅವರಿಗಾಗಿ ತರಿಸಿದ್ದ ಸಮೋಸ ಹಾಗೂ ಕೇಕ್‌ಗಳನ್ನು ಅವರ ಭದ್ರತಾ ಸಿಬ್ಬಂದಿಗೆ ವಿತರಿಸಲಾಗಿತ್ತು ಎನ್ನಲಾಗಿದೆ.

ನಂತರ, ಈ ವಿಚಾರವಾಗಿ ಸಿಐಡಿ ಅಧಿಕಾರಿಗಳು ತನಿಖೆಗೆ ಆದೇಶಿಸಿದ್ದರು.

‘ಸಮೋಸಗಳನ್ನು ಸಿಬ್ಬಂದಿಗೆ ವಿತರಿಸಿದ್ದು ಸರ್ಕಾರ ವಿರೋಧಿ ಹಾಗೂ ಸಿಐಡಿ ವಿರೋಧಿ ನಡೆ’ ಎಂಬುದಾಗಿ ಹಿರಿಯ ಅಧಿಕಾರಿಯೊಬ್ಬರು ತನಿಖಾ ವರದಿಯಲ್ಲಿ ಟಿಪ್ಪಣಿ ಬರೆದಿದ್ದಾರೆ.

ಹಾಲು ಹಳ್ಳವಾಗಲಿ, ಬೆಣ್ಣೆ ಬೆಟ್ಟವಾಗಲಿ

ಮುದ್ದು ಮರಿಗಳಿಗೊಂದು ಪ್ರೀತಿಯ ಪತ್ರ

ನವೆಂಬರ್ 14 ಪುಟಾಣಿಗಳಿಗೆ ಸಂಭ್ರಮ ದಿನ. ಈ ನೆಪದಲ್ಲಿ ಸಾಧನೆ ಮಾಡಿದ ಪುಟಾಣಿಗಳ ಯಶಸ್ಸಿನ ಕಥೆಗಳು, ಸಾಧಕರ ಬಾಲ್ಯದ ಸವಿ ಸವಿ ನೆನಪುಗಳ ನವಿಲುಗರಿ ಹಾಗೂ ಅಜ್ಜನ ಅಕ್ಕರೆಯ ಪತ್ರ ವಿಶೇಷ ಇಲ್ಲಿದೆ...

ಪ್ರೊ.ಎಂ.ಕೃಷ್ಣೇಗೌಡ

ಮುದ್ದು ಕಂದಮ್ಮಗಳೇ,

ಹೇಗಿದ್ದೀರಾ? ಎಲ್ಲಿದ್ದೀರಾ? ಏನು ಮಾಡುತ್ತಿದ್ದೀರಾ?

ಅಪ್ಪನ ತೋಳಲ್ಲೋ, ಅಮ್ಮನ ಸೆರಗಲ್ಲೋ, ಹಚ್ಚ ಬೆಚ್ಚಗೆ ಅವುಚಿಕೊಂಡು ಕಣ್ತುಂಬಾ ಕನಸುಗಳನ್ನು ನೇಯುತ್ತಿದ್ದೀರಾ? ಅಜ್ಜಿ ತಾತರ ಕೊರಳಿಗೆ ಜೋತುಕೊಂಡು ಜೋಕಾಲಿ ಆಡುತ್ತಿದ್ದೀರಾ? ನಿಮ್ಮಂಥವೇ ಇನ್ನಷ್ಟು ಹಕ್ಕಿಮರಿಗಳನ್ನು ಕೂಡಿಕೊಂಡು, ಅಂಗಳದ ತುಂಬಾ ಕಿಚಪಿಚ ಹಾಡಿಕೊಂಡು ಗದ್ದಲ ಎಬ್ಬಿಸಿದ್ದೀರಾ? ನಿಮ್ಮ ಪುಟಾಣಿ ಟೇಬಲ್ ಮೇಲೆ ಇರೋ ಬರೋ ಪುಸ್ತಕ ಎಲ್ಲಾ ಹರಡಿಕೊಂಡು ಹೋಂ ವರ್ಕ್ ಮಾಡ್ತಾ ಇದ್ದೀರಾ? ಯಾರಿಗೂ ಕಾಣದ ಹಾಗೆ, ಅಪ್ಪನ ಸೆಲ್ ಫೋನ್ ತಕ್ಕೊಂಡು ಟಾಮ್ ಅಂಡ್ ಜೆರ್ರಿ, ಕಾರ್ ರೇಸ್, ಬೈಕ್ ರೇಸ್ ನೋಡ್ತಾ ಇದ್ದೀರಾ? ಮತ್ತೆ ನಿಮ್ ಮ್ಯಾಮ್ ಸ್ಕೂಲ್‌ನಲ್ಲಿ ತುಂಬಾ ಬಯ್ತಾರ? ಅಥವಾ ನಿಮಗೇನೇ ಹೆದರಕೋತಾರ? ಕಾಲಲ್ಲಿ ತರಚಿ ಗಾಯ ಆಗಿತ್ತಲ್ಲ, ಅದೆಲ್ಲ ವಾಸಿ ಆಗಿದೇಯಾ? ಸಾಕು ಬಿಡಿ. ತುಂಬಾ ಕ್ವೆಶ್ಚನ್ ಕೇಳಬಾರದು. ಈ ದೊಡ್ಡವರಿಗೆಲ್ಲ ಚಿಕ್ಕವರಿಗೆ ಏನೇನಾದ್ರೂ ಬರೀ ಕ್ವೆಶ್ಚನ್ಸ್ ಕೇಳೋದೇ ಕೆಲಸ ಅಂತ ಬಯ್ಕೋಬೇಡಿ.

ನಿಮ್ಮನ್ನು ನೋಡಿದ್ರೆ ನಮಗೆ ಎಷ್ಟ್ ಖುಷಿ ಆಗುತ್ತೆ ಗೊತ್ತಾ? ನಾವೆಲ್ಲಾ ಆಗ ನಿಮ್ಮ ಹಾಗಿರಲಿಲ್ಲ. ಈಗ ನಿಮಗೆ ಸಿಕ್ಕಿದ್ದೆಲ್ಲಾ ನಮಗೆ ಸಿಕ್ಕಿರ್ಲಿಲ್ಲ. ನಾವೆಲ್ಲಾ ಸ್ಲೇಟು ಬಳಪದಲ್ಲಿ ಬರೆಯೋಕೆ ಶುರು ಮಾಡಿದ್ದು. ಕಲ್ಲಿನ ಸ್ಲೇಟು ಬೇಗ ಒಡೆದುಹೋಗೋವು. ಡಬ್ಬದ ಸ್ಲೇಟ್ ಆದರೆ ಅಕ್ಷರಗಳೇ ಹತ್ತುತ್ತಾ ಇರ್ಲಿಲ್ಲ. ಆಮೇಲೆ ಸ್ಕೂಲ್ ಶುರು ಆಗಿ ಮೂರು ತಿಂಗಳಾದ್ರೂ ಅಪ್ಪ ಪುಸ್ತಕಾನೇ ಕೊಡಿಸ್ತಾ ಇರಲಿಲ್ಲ. ನಮಗೆ ಈ ಬಾಲ್ ಪೆನ್ ಅನ್ನೋದು ಇರಲಿಲ್ಲ, ಇಂಕ್ ಪೆನ್ನು. ವರ್ಷಕ್ಕೆ ಒಂದ್ ಪೆನ್ ಕೊಡಿಸಿದ್ರೆ ಹೆಚ್ಚು. ಅದೂ ಲೀಕ್ ಆಗಿ ಕೈಯೆಲ್ಲಾ ಇಂಕ್ ಆಗೋದು. ಪೆನ್ನಿನ ಮುಳ್ಳು ನಾಲಗೆ ಮುರಿದು ಹೋದ್ರೆ ಅದು ಇನ್ನೊಂದ್ ಪಂಚಾಯ್ತಿ. ಹಾಳೆ ಮೇಲೇ ಇಂಕು ಧುಮುಕಿ ಬಿಡೋದು.

ಆಗ ಯಾರಾದ್ರೂ ಮಕ್ಕಳು ಬೀದಿಗೆ ಹೆಚ್ಚಿಗೆ ಬರದೇ ಇದ್ರೆ ಅಂಥವರನ್ನ ಕಾವಿ ಕೋಳಿಗಳು ಅಂತಲೂ, ಬೀದೀಲೆ ಇರೋರನ್ನ ತೊಂಡು ದನಗಳು ಅಂತಲೂ ಅನ್ನೋರು. ಕೋಣೆ ಮಕ್ಕಳು ಕೊಳೆತೋ, ಬೀದಿ ಮಕ್ಕಳು ಬೆಳೆದೋ ಅಂತ ಒಂದು ಗಾದೆಯಿತ್ತು ಆವಾಗ. ನಾವೆಲ್ಲಾ ಧೂಳಲ್ಲಿ ಬಿದ್ದದ್ದನ್ನ ತಿಂತಿದ್ದೋ, ಹಳ್ಳಕೊಳ್ಳದ ನೀರು ಕುಡೀತಿದ್ದೋ. ಒಂದು ದಿನಾನೂ ನೆಗಡಿ ಕೆಮ್ಮು ಅಂತ ಇರಲಿಲ್ಲ. ಬೆಳಗ್ಗೆ ಮನೇಲಿ ಬ್ರೇಕ್ ಫಾಸ್ಟ್ ಮಾಡೋ ಅಭ್ಯಾಸ ಇರಲಿಲ್ಲ. ಮಾಡಿದ್ರೂ ರೊಟ್ಟಿ, ದ್ವಾಸೆ ಅಷ್ಟೆ. ತಂಗಳು ಉಂಡು ಸ್ಕೂಲ್‌ಗೆ ಹೋಗ್ತಾ ಇದ್ದದ್ದೇ ಜಾಸ್ತಿ.

ಎಲ್ ಕೇ ಜಿಗೇ ಬೂಟ್ ಹಾಕೊಂಡು ಸ್ಕೂಲಿಗೆ ಹೋಗತೀರಿ ನೀವು. ನಾವೆಲ್ಲ ಕಾಲಿಗೆ ಚಪ್ಪಲಿ ಅಂತ ಹಾಕಿದ್ದೇ ಹೈಸ್ಕೂಲ್‌ಗೆ ಬಂದಾಗ. ಕೆಲವರಿಗೆ ಹೈಸ್ಕೂಲ್ ಮುಗಿದ ಮೇಲೂ ಕಾಲಿಗೆ ಚಪ್ಪಲಿ ಇರಲಿಲ್ಲ ಅಂದರೆ ನೀವು ನಂಬುತ್ತೀರೋ ಇಲ್ಲವೋ!

ಮತ್ತೆ ಚಿನ್ನು ಬಂಗಾರಗಳಾ, ಈಗ ನೀವು ಅಂಗಡಿಯಿಂದ ತರುವಾಗಲೇ ಹರಕಲಾಗಿರೋ ಜೀನ್ಸ್ ಹಾಕ್ಕೋತೀರಿ. ಆಗ ನಾವು ಹಾಕ್ಕೊಂಡ ಮೇಲೆ ನಮ್ ಚಡ್ಡಿ, ಅಂಗಿ ಹರಿದೋಗುತ್ತಿದ್ದೋ. ಅದರಲ್ಲೂ ಚಡ್ಡಿ, ಕುಂಡೆ ಹತ್ತಿರವೇ ಹರಿದು ಹೋಗೋದು ಹಾಳಾದ್ದು! ನಮ್ ಮೇಷ್ಟ್ರುಗಳೋ, ಆ ಹರಿದ ಜಾಗದಲ್ಲೇ ಬಿದಿರು ಕೋಲಿಂದ ಬಾಸುಂಡೆ ಬರೋ ಹಂಗೆ ಬಾರಿಸೋರು.

ನೀವೀಗ ಆಟ ಆಡಬೇಕು ಅಂದ್ರೆ ನಿಮಗೇನು ಬೇಕು ಅದನ್ನೆಲ್ಲಾ ಅಪ್ಪ ಅಮ್ಮ ನೀವು ಕೇಳೋಕ್ ಮುಂಚೆನೇ ತಂದು ಕೊಡ್ತಾರೆ. ನಾವು ಕೇಳಿದ್ರೆ ಮೈ ತುಂಬಾ 'ಪ್ರಸಾದ' ಬೀಳ್ತಿದ್ದೋ. ಅದಕ್ಕೆ ನಾವು ನಮಗೆ ಬೇಕಾದ ಆಟದ ಸಾಮಾನುಗಳನ್ನೆಲ್ಲ ನಾವೇ ಮಾಡ್ಕೊಳ್ತಿದ್ದೋ. ಗೊಬ್ಬಳಿ ಗೂಟದಲ್ಲಿ ಬುಗುರಿ, ತೆಂಗಿನ ಗುದಮಟ್ಟೆಯಲ್ಲಿ ಬ್ಯಾಟು, ಹಳೆ ಬಟ್ಟೆ ಸುತ್ತಿ ಬಾಲು, ಹೀಗೆ.... ನೀವು swimming ಕಲಿಯೋಕೆ Poolಗೆ ಹೋಗ್ತೀರಿ. ನಾವು ಕೆರೆ, ಕಟ್ಟೆ, ಕಾಲುವೆ,ಕಪಿಲೆ ಬಾವಿಯಲ್ಲಿ ಈಜು ಕಲಿತದ್ದು. ನೀವು ನಿಮ್ಮ ಫ್ರೀ ಟೈಮ್‌ನಲ್ಲಿ ಈಗ online gameಗಳನ್ನ ಆಡ್ತೀರಿ. ನಾವು ನಮ್ಮ ಫ್ರೀ ಟೈಮ್‌ನಲ್ಲಿ ಚಿಟ್ಟೆ ಹಿಡಿಯೋದು, ಜೀರುಂಬೆ ಹಿಡಿದು ಕಡ್ಡಿ ಪೊಟ್ಟಣದೊಳಗೆ ಕೂಡಿಟ್ಟು ಸಾಕೋದು, ದುಂಬಿ ಹಿಡಿದು ಅದರ ಸೊಂಟಕ್ಕೆ ದಾರ ಕಟ್ಟಿ ಹಾರಿಸೋದು ಇಂಥಾದ್ದೆಲ್ಲ ಮಾಡ್ತಿದ್ದೋ. ನಿಮಗೆ ಆಟ ಆಡಬೇಕು ಅಂದ್ರೆ ಏನೇನೋ ಎಲೆಕ್ಟ್ರಾನಿಕ್ ಗ್ಯಾಜೆಟ್‌ಗಳೆಲ್ಲಾ ಇವೆ. ನಮಗೆ ಅವೆಲ್ಲಾ ಇರಲಿಲ್ಲ.

ನಮ್ಮ ಕಾಲ ಚೆನ್ನಾಗಿತ್ತು, ನಿಮ್ಮದು ಚೆನ್ನಾಗಿಲ್ಲ ಅಂತಾಗಲೀ, ನಿಮ್ಮ ಕಾಲವೇ ಚೆನ್ನಾಗಿದೆ ನಮ್ಮದು ಚೆನ್ನಾಗಿರಲಿಲ್ಲ ಅಂತೇನೂ ನಾನು ಹೇಳಲ್ಲ. ಸರಿ ತಪ್ಪು, ಒಳ್ಳೆಯದು ಕೆಟ್ಟದ್ದು, ಮಾಡಬೇಕಾದ್ದು, ಮಾಡಬಾರದ್ದು ಅನ್ನೋದು ಎಲ್ಲಾ ಕಾಲದಲ್ಲೂ ಇರುತ್ತೆ. ನಾವು ಅಟ್ಟ ಹತ್ತೋಕೇ ಕಷ್ಟ ಪಡುತಿದ್ದೋ. ನೀವೀಗ ಬೆಟ್ಟ ಹಾರೋಕೆ ಆಸೆ ಪಡತೀರಿ. ನಾವು ಹಳ್ಳ ಹಾರೋಕೇ ಹೆದರತಿದ್ದೋ, ನೀವೀಗ ಸಮುದ್ರ ಹಾರುತೀರಿ. ನಮಗೆ ನಮ್ಮೂರೇ ಪ್ರಪಂಚ ಆಗಿತ್ತು, ಈಗ ನಿಮಗೆ ಪ್ರಪಂಚವೇ ನಮ್ಮೂರು ಅನ್ನಿಸ್ತಿದೆ.

ನಿಮ್ಮ ಬದುಕಿನಲ್ಲಿ ಹಾಲು ಹಳ್ಳವಾಗಲಿ. ಬೆಣ್ಣೆ ಬೆಟ್ಟವಾಗಲಿ. ಎಲ್ಲಾ ಒಳ್ಳೆಯದಾಗಲಿ. ಮತ್ತೆ ಯಾವಾಗಲಾದರೂ ಸಿಕ್ತೀನಿ. ಈಗ ಹೋಗಿ ಬರಲಾ.

ಬಾಯ್!!

ಹಾಡಿಗೂ ಸೈ, ನೃತ್ಯಕ್ಕೂ ಜೈ

ಕೃಷ್ಣಿ ಶಿರೂರ

ದಿಯಾ ಹೆಗಡೆ ಎಂಟರ ಹರೆಯದಲ್ಲೇ ಸಂಗೀತ ಕ್ಷೇತ್ರದ ದಿಗ್ಗಜರೆದರು ಹಾಡಿ ಭೇಷ್ ಎನಿಸಿಕೊಂಡ ಬಾಲೆ. ಶಿವಮೊಗ್ಗ ಜಿಲ್ಲೆ ಸಾಗರ ತಾಲ್ಲೂಕಿನ ಬಂದಗದ್ದೆ ಎಂಬ ಅಪ್ಪಟ ಹಳ್ಳಿ ಪ್ರತಿಭೆ ರಾಷ್ಟ್ರ ಮಟ್ಟದಲ್ಲಿ ಗುರುತಿಸಬಲ್ಲ ಸೆಲೆಬ್ರಿಟಿ.

ಜೀ ಕನ್ನಡದ ಸರಿಗಮಪ ಲಿಟಲ್ ಚಾಂಪ್ ಸೀಸನ್ -19 ರಿಯಾಲಿಟಿ ಶೋದಲ್ಲಿ ಬೆಸ್ಟ್ ಎಂಟರ್‌ಟೇನರ್ ಟ್ರೋಫಿ ಗೆದ್ದ ದಿಯಾ ಕನ್ನಡ ನಾಡಿನ ಮನೆಮಾತಾಗಿದ್ದಾಳೆ. ಸೋನಿ ಎಂಟರ್‌ಟೈನ್ಮೆಂಟ್ ಟೆಲಿವಿಷನ್‌ನ ಜನಪ್ರಿಯ ಕಾರ್ಯಕ್ರಮ 'ಸೂಪರ್ ಸ್ಟಾರ್ ಸಿಂಗರ್' ಸ್ಪರ್ಧೆಗೆ ಆಯ್ಕೆಯಾಗಿ ಟಾಪ್-15ರಲ್ಲಿ ಹಾಡಿ ರಾಷ್ಟ್ರ ಮಟ್ಟದಲ್ಲೂ ಮನಗೆದ್ದವಳು. ರಿಯಾಲಿಟಿ ಷೋನಲ್ಲಿ ತನ್ನ ಪ್ರಬುದ್ಧ ಗಾಯನವನ್ನು ಹೆಜ್ಜೆಸಮೇತ ಪ್ರಸ್ತುತಪಡಿಸುತ್ತಿದ್ದರೆ ಅತ್ತ ಜಡ್ಜ್ ಸೀಟ್‌ನಲ್ಲಿ ಕೂತವರು ಫಿದಾ ಆಗಿದ್ದರು. ಮುಂದೆ ಇಂಡಿಯನ್ ಐಡಲ್ ಸೀಸನ್ -14 ಗ್ರಾಂಡ್ ಫಿನಾಲೆಯಲ್ಲಿ ಹಾಡು-ನೃತ್ಯ-ಅಭಿನಯನದ ಮೂಲಕ ಸಂಗೀತದ ದಿಗ್ಗಜರ ಮನಗೆದ್ದಿದ್ದು ಹೆಮ್ಮೆಯ ಕ್ಷಣ. ದಿಯಾ ನೃತ್ಯ, ಕವಿತೆ ರಚನೆ, ಭಾಷಣ ಕಲೆಯಲ್ಲೂ ಸೈ ಎನಿಸಿಕೊಂಡಿದ್ದಾರೆ. ಬಂದಗದ್ದೆಯ ಬಾಲಭಾರತಿ ಶಾಲೆಯಲ್ಲಿ 7ನೇ ತರಗತಿಯಲ್ಲಿ ಓದುತ್ತಿದ್ದು, ಕಲಿಕೆಯಲ್ಲೂ ಈಕೆ ಮೊದಲ ರ‍್ಯಾಂಕ್ ಬಿಟ್ಟುಕೊಡದವಳು. ಮಗಳ ಪ್ರತಿಭೆ ಗುರುತಿಸಿ ಸಾಧನೆಗೆ ಪ್ರೋತ್ಸಾಹಿಸಿದ ಶ್ರೇಯಸ್ಸು ಅಮ್ಮ ಅಪರ್ಣಾ ಹಾಗೂ ತಂದೆ ಬಿ.ಎಂ. ವೆಂಕಟೇಶ ಅವರಿಗೆ ಸಲ್ಲುತ್ತದೆ.

ದಿಯಾಳ ಅಕ್ಕ ದಿಶಾ ಶಾಸ್ತ್ರೀಯ ಸಂಗೀತದ ತರಗತಿಗೆ ಹೋಗಿ ಪ್ರಾಕ್ಟೀಸ್ ಮಾಡುವ ವೇಳೆ ದಿಯಾ ಇನ್ನೂ ಸಣ್ಣಾಕಿ. ತೊದಲು ನುಡಿಯಲ್ಲೇ ಈಕೆಯೂ ಹಾಡಲು ಶುರು ಮಾಡಿದಳು. ದಿಯಾಳಿಗೆ ಸಂಗೀತ, ನೃತ್ಯದ ಮೇಲಿನ ಆಸಕ್ತಿ ಕಂಡು ಪ್ರೋತ್ಸಾಹಿಸಿದರು. ಕೋವಿಡ್ ಸಮಯದಲ್ಲಿ 'Flairs of DishaDiya Sisters' ಎಂಬ ಯುಟ್ಯೂಬ್ ಚಾನೆಲ್ ಆರಂಭಿಸಿ, ಅಕ್ಕ-ತಂಗಿ ಹಾಡಿದ ಹಾಡುಗಳನ್ನು ಅಪ್‌ಲೋಡ್ ಮಾಡಿದಾಗ ಕೇಳುಗರು ಮೆಚ್ಚಿದರು. 2022ರಲ್ಲಿ ಜೀ ಕನ್ನಡ ಸರಿಗಮಪ ಆಡಿಷನ್ ಹಾಗೂ ಡ್ರಾಮಾ ಜೂನಿಯರ್ ಆಡಿಷನ್‌ನಲ್ಲಿ ಆಯ್ಕೆಯಾದರೂ ಸರಿಗಮಪ ಸೀಸನ್ ಲಿಟಲ್ ಚಾಂಪ್ -19ರಲ್ಲಿ ಮುಂದುವರಿಯಬೇಕಾಯಿತು. ಯುವ ನಕ್ಷತ್ರ, ಮಗ್ಗಿ ಪುಸ್ತಕ, ಹ್ಯಾಷ್‌ಟ್ಯಾಗ್ ಪಾರು-ಪಾರ್ವತಿ ಸಿನಿಮಾಗಳಿಗೆ ಹಾಡಿದ್ದಾಳೆ.

ಕಠಿಣ ಸವಾಲು ಮೀರಿದ ಗೋಲ್‌ಕೀಪರ್ ತೇಜಸ್

ಗಿರೀಶ ದೊಡ್ಡಮನಿ



ಶಿಕಾರಿಪುರದ ಚನ್ನಮಲ್ಲಿಕಾರ್ಜುನ ಶಾಲೆಯಲ್ಲಿ ಅವತ್ತು ತರಗತಿ ಕೋಣೆಗೆ ಬಂದ ದೈಹಿಕ ಶಿಕ್ಷಕರೊಬ್ಬರು 'ಶಿವಮೊಗ್ಗದ ಕ್ರೀಡಾ ಶಾಲೆಗೆ ಆಯ್ಕೆ ನಡೀತಾ ಇದೆ. ಆಸಕ್ತಿ ಇದ್ದವರು ಹೆಸರು ಕೊಡ್ರಿ' ಎಂದರು.

ಒಂದಿಷ್ಟು ಹುಡುಗರು ಕೈ ಎತ್ತಿ ಸಮ್ಮತಿ ಸೂಚಿಸಿದರು. ಅದರಲ್ಲೊಬ್ಬನಾಗಿದ್ದ ತೇಜಸ್ ರಾಜಶೇಖರ್ ಪವಾರ್ ಜೀವನಕ್ಕೆ ಆ ದಿನ ಪ್ರಮುಖ ತಿರುವು ಲಭಿಸಿತು. ಆಯ್ಕೆ ಟ್ರಯಲ್ಸ್‌ಗೆ ಹೋದಾಗ ಓಟದ ವಿಭಾಗಕ್ಕೆ ಆಯ್ಕೆಯಾಗಿದ್ದರು. ಆದರೆ ತಮಗೆ ಅಸ್ತಮಾ ಸಮಸ್ಯೆ ಇದ್ದ ಕಾರಣ ಓಟದ ಬದಲಿಗೆ ಹಾಕಿ ಕ್ರೀಡೆಯಲ್ಲಿ ಆಡಲು ಅವಕಾಶ ಕೊಡುವಂತೆ ವಸತಿ ಶಾಲೆಯ ಅಧಿಕಾರಿಗಳಿಗೆ ಮನವಿಪತ್ರ ನೀಡಿದರು. ತೇಜಸ್‌ಗೆ ಅವಕಾಶ ದೊರೆಯಿತು. ಆದರೆ ಹಾಕಿ ತಂಡದಲ್ಲಿದ್ದವರಿಗಿಂತ ಭಿನ್ನವಾಗಿ ಸಾಧಿಸಬೇಕೆಂದುಕೊಂಡ ತೇಜಸ್, ಗೋಲ್‌ಕೀಪರ್ ಆಗಲು ನಿರ್ಧರಿಸಿದರು.

ಈಗ; ತೇಜಸ್‌ಗೆ 16 ವರ್ಷ. ಈಚೆಗೆ ನಡೆದ ಸಬ್ ಜೂನಿಯರ್ ರಾಷ್ಟ್ರೀಯ ಹಾಕಿ ಕೂಟದಲ್ಲಿ ಕರ್ನಾಟಕದ ನಾಯಕತ್ವ ವಹಿಸಿದ್ದರು. ಶಿಕಾರಿಪುರ ತಾಲ್ಲೂಕಿನ ಸಾಲೂರು ಗ್ರಾಮದ ರಾಜಶೇಖರ್ ಮತ್ತು ಮಾಯಾ ದಂಪತಿಯ ಮಗ ತೇಜಸ್ ಸದ್ಯ ಬೆಂಗಳೂರಿನ ಡಿವೈಎಸ್‌ಎಸ್ ಕ್ರೀಡಾ ವಸತಿ ಶಾಲೆಯಲ್ಲಿದ್ದಾರೆ. ಪ್ರಥಮ ಪಿಯು ವಿದ್ಯಾರ್ಥಿ ಕೂಡ ಹೌದು.

'ನಮ್ಮದು ಕೃಷಿಕರ ಕುಟುಂಬ. ನಮಗಿರುವ ಸಣ್ಣ ಪ್ರಮಾಣದ ಜಮೀನು ಮತ್ತು ಕೂಲಿ ಕೆಲಸದಿಂದ ಸಿಗುವ ಆದಾಯದಲ್ಲಿ ಅಪ್ಪ ಕುಟುಂಬವನ್ನು ನೋಡಿಕೊಳ್ಳುತ್ತಾರೆ. ಅಮ್ಮ ಮತ್ತು ತಂಗಿ ಇದ್ದಾರೆ. ಶಿವಮೊಗ್ಗದಲ್ಲಿ ಶ್ರೀಕಾಂತ್ ಮತ್ತು ಈಗ ಬೆಂಗಳೂರಿನಲ್ಲಿ ವಿಜಯಕೃಷ್ಣ ಅವರು ತರಬೇತಿ ನೀಡುತ್ತಿದ್ದಾರೆ' ಎಂದು ತೇಜಸ್ ಹೇಳುತ್ತಾರೆ.

ಭಾರತ ತಂಡದ ದಿಗ್ಗಜ ಗೋಲ್‌ಕೀಪರ್ ಪಿ.ಆರ್. ಶ್ರೀಜೇಶ್ ಅವರೇ ತಮ್ಮ ಆದರ್ಶ ಎಂದು ತೇಜಸ್ ಹೇಳುತ್ತಾರೆ. ಈಚೆಗೆ ದಕ್ಷಿಣ ಭಾರತ ಹಾಕಿಯಲ್ಲಿ ಚಿನ್ನ ಗೆದ್ದ ಕರ್ನಾಟಕ ಜೂನಿಯರ್ ತಂಡದಲ್ಲಿ ತೇಜಸ್ ಗೋಲ್‌ಕೀಪರ್ ಆಗಿದ್ದರು. 5 ಎ ಸೈಡ್ ಸೇರಿದಂತೆ ಹಲವು ಪ್ರಮುಖ ಟೂರ್ನಿಗಳಲ್ಲಿ ಆಡಿದ್ದಾರೆ. ಭಾರತ ಜೂನಿಯರ್ ತಂಡದಲ್ಲಿ ಆಡುವ ಅವಕಾಶಕ್ಕಾಗಿ ಕಾಯುತ್ತಿದ್ದಾರೆ.

ನೃತ್ಯ ಕುವರಿ; ಹುಲಿ ಕುಣಿತದ ಪೋರಿ

ವಿಕ್ರಂ ಕಾಂತಿಕೆರೆ

ಕಳೆದ ಬಾರಿಯ ಅಷ್ಟಮಿ ಸಂದರ್ಭ. ಉಡುಪಿ ಕೃಷ್ಣಮಠದ ರಾಜಾಂಗಣದಲ್ಲಿ ಹುಲಿವೇಷಧಾರಿಗಳ ಕುಣಿತ ರಂಗೇರಿತ್ತು. ದರ್ಪಣ ನೃತ್ಯಶಾಲೆಯ ಮಹಿಳಾ ತಂಡ ಪ್ರದರ್ಶಿಸಿದ ಕುಣಿತದಲ್ಲಿ ಪಿರಮಿಡ್ ರಚನೆ ಮಾಡಿದಾಗ ತುತ್ತತುದಿಗೆ ಪುಟ್ಟ ಬಾಲೆಯೊಬ್ಬಳು ಸರಸರನೆ ಏರಿ ಹೋದಳು. ಅಕ್ಕಂದಿರ ತೋಳು ಹಿಡಿದು, ಹೆಗಲ ಮೇಲೆ ಕಾಲಿರಿಸಿ ಮೇಲೆ ಸಾಗಿ ನೃತ್ಯ ಮಾಡಿದ ಆಕೆ ನಂತರ ಸಾಮಾಜಿಕ ತಾಣಗಳಲ್ಲಿ ಮಿನುಗಿದಳು.

ಹುಲಿ ಕುಣಿತದ ತರಬೇತಿಗೆ ಸೇರಿ ಎರಡೇ ವರ್ಷಗಳಲ್ಲಿ ತಾಸೆ ಪೆಟ್ಟಿನ ಲಯವನ್ನೂ ನೃತ್ಯದ ಪಟ್ಟುಗಳನ್ನೂ ಕರಗತ ಮಾಡಿಕೊಂಡ ಉಡುಪಿಯ ಸನ್ನಿಧಿಗೆ ಕೇವಲ 10 ವರ್ಷ. ತಂದೆ ಸುಧೀಂದ್ರ, ತಾಯಿ ಸ್ವಾತಿ.

ಪಿಲಿನಲಿಕೆ (ಹುಲಿ ಕುಣಿತ) ನೋಡುತ್ತಲೇ ಬೆಳೆದ ಸನ್ನಿಧಿಯ ಪಾದಗಳು ಸಣ್ಣವಯಸ್ಸಿನಲ್ಲೇ ಹೆಜ್ಜೆ ಹಾಕತೊಡಗಿದ್ದವು. ಅದನ್ನರಿತ ಪೋಷಕರು ದರ್ಪಣ ನೃತ್ಯಶಾಲೆಗೆ ಸೇರಿಸಿದರು. ಶಾಸ್ತ್ರೀಯ ನೃತ್ಯ ಕಲಿಸುವ ಆ ಶಾಲೆಯಲ್ಲಿ ಮಹಿಳೆಯರ ಹುಲಿ ಕುಣಿತದ ತಂಡವೇ ಇದೆ. ಆ ತಂಡ ಸನ್ನಿಧಿಯ ಆಕಾಂಕ್ಷೆಗೆ ಬೆಂಬಲವಾಗಿ ನಿಂತಿತು.

ಗುಂಡಿಬೈಲ್ ವಿಜಯಧ್ವಜ ಶಾಲೆಯ ಐದನೇ ತರಗತಿ ವಿದ್ಯಾರ್ಥಿನಿ ಸನ್ನಿಧಿ, ಕಳೆದ ವರ್ಷ ಉಡುಪಿ ಪರ್ಯಾಯ ಉತ್ಸವದ ಸಂದರ್ಭದಲ್ಲಿ ಪ್ರದರ್ಶಿಸಿದ ಹುಲಿ ಕುಣಿತವೂ ಗಮನ ಸೆಳೆದಿತ್ತು. ಇನ್‌ಸ್ಟಾಗ್ರಾಂ ಮತ್ತು ಫೇಸ್‌ಬುಕ್‌ನಲ್ಲಿ ವಿಡಿಯೊಗಳು ಹರಿದಾಡತೊಡಗಿದ್ದವು.

'ಸಣ್ಣವಳಿದ್ದಾಗಲೇ ಹುಲಿ ಕುಣಿತ ತುಂಬ ಇಷ್ಟ ಆಗುತ್ತಿತ್ತು. ವೇಷಧಾರಿಗಳು ಮನೆಯ ಹತ್ತಿರ ಬಂದು ಕುಣಿಯುವುದು ನೋಡಿದಾಗ ನನಗೂ ಆಸೆ ಆಗುತ್ತಿತ್ತು. ಈಗ ನಾನೇ ಕುಣಿಯುತ್ತಿದ್ದೇನೆ. ಹುಲಿವೇಷದ ಖುಷಿಯನ್ನು ಸಂಪೂರ್ಣವಾಗಿ ಅನುಭವಿಸುತ್ತಿದ್ದೇನೆ' ಎಂದು ಸನ್ನಿಧಿ ಹೇಳಿದರು. ದೇಹವಿಡೀ ಕಂಪಿಸುತ್ತ ತಾಸೆಯ ಪೆಟ್ಟಿನ ಝೇಂಕಾರ ಮತ್ತು ಲಯಕ್ಕೆ ಸರಿಯಾಗಿ ಸನ್ನಿಧಿ ಹೆಜ್ಜೆ ಹಾಕುತ್ತಿದ್ದರೆ ಅನುಭವಿ ಕಲಾವಿದರ ಕುಣಿತಕ್ಕೆ ಸರಿಸಮವಾದ ಲಾಸ್ಯ ಕಂಡುಬರುತ್ತದೆ. ಹುಲಿ ಹೆಜ್ಜೆಯಂತೆ ಕಾಲುಗಳನ್ನು ಎತ್ತಿ ಗಂಭೀರವಾಗಿ ಮುಂದೆ ಇರಿಸುತ್ತ ಗತಿಯನ್ನು ಹೆಚ್ಚಿಸುತ್ತ ಸಾಗುವ ಕುಣಿತಕ್ಕೆ ಕಲಾಶಾಲೆಯಲ್ಲಿ ಕಲಿತ ನೃತ್ಯದ ಸೂಕ್ಷ್ಮ ಅಂಶಗಳು ಕಸುವು ತುಂಬುತ್ತದೆ. ಹೀಗಾಗಿ ನೋಡುಗರಿಗೆ ಮುದ ನೀಡುತ್ತದೆ.

ಮಕ್ಕಳ ರಾಜ್ಯದಲ್ಲಿ ಎಷ್ಟೊಂದು ಸೊಗಸು

ನವ್ಯ ಆರ್. ಕತ್ತಿ

ನಾನು ಒಮ್ಮೊಮ್ಮೆ ಮಕ್ಕಳ ರಾಜ್ಯದ ಕಲ್ಪನೆ ಮಾಡಿಕೊಳ್ಳುತ್ತ, ಅದು ಯಾವಾಗ ನಮ್ಮ ಕಣ್ಣ ಮುಂದಿನ ಜಗತ್ತಾಗುತ್ತದೆ ಎಂದು ಧ್ಯಾನಿಸುತ್ತಿರುತ್ತೇನೆ. ಈಗಿನ ರಾಜ್ಯದಲ್ಲಿ ಮಕ್ಕಳಿಗೆ ಮುಕ್ತ ಅವಕಾಶಗಳಿಲ್ಲ ಎನ್ನುವುದಕ್ಕಿಂತ ಒತ್ತಡದ ಹೇರಿಕೆ, ಶೋಷಣೆಗಳ ಭಾರದ ಬೀಗವಿದೆ ಎಂಬ ಕೊರಗಿದೆ.

ಶಾಲೆಯಲ್ಲಿ ಮಕ್ಕಳ ವಿಧಾನಸಭೆ ಅಣುಕು ಪ್ರದರ್ಶನ ನಿಜವಾಗಿಯೂ ಮಕ್ಕಳನ್ನು ಅಣಕಿಸಲು ಮಾಡಿದಂತೆ ನನಗೆ ತೋರಿದೆ. ಮಕ್ಕಳ ದಿನಾಚರಣೆ ಸಂಭ್ರಮದ ಹೊತ್ತಲ್ಲಿ ಮಕ್ಕಳ ರಾಜ್ಯ ಸ್ಥಾಪನೆಯಾಗಿ ಮಕ್ಕಳ ವಿಧಾನಸಭೆ ಹೇಗೆ ಇರುತ್ತದೆ, ಏನೆಲ್ಲ ಬಯಸುತ್ತೇವೆ ಎಂಬುದನ್ನು ತಿಳಿಸಿ ಬಿಡುತ್ತೇನೆ.

ಮಕ್ಕಳ ರಾಜ್ಯದಲ್ಲಿ ನಾನು ಮುಖ್ಯಮಂತ್ರಿಯಾದ ಮೊದಲ ದಿನವೇ ವಿಶೇಷ ಆಟ-ಪಾಠ ಕಲಿಕಾ ಶಾಲೆಗಳು ತೆರೆದು ಮಕ್ಕಳ ಅಭಿರುಚಿಗೆ ತಕ್ಕ ಪಾಠಗಳು, ಜೊತೆಗೆ ಆಟಗಳು ಅವುಗಳು ಬೇಕೆಂದಾಗ ಸಿಗಲು ಅನುಕೂಲ ಇರುತ್ತದೆ. ಶಾಲೆಗಳು ಆಡಿಕಲಿ ನೋಡಿಕಲಿ ಪರಿಕಲ್ಪನೆಯಲ್ಲಿ ದಿನದ ಚಟುವಟಿಕೆಗಳು ಸದಾ ನಡೆಯುತ್ತಿರುತ್ತವೆ. ಸುಂದರವಾದ ಆಟದ ಮೈದಾನದಲ್ಲಿ ಆಟ ಆಡುತ್ತಾ, ಉದ್ಯಾನದಲ್ಲಿನ ಪ್ರಾಣಿಪಕ್ಷಿಗಳ ಜೊತೆಗೆ ಬೆರೆತು ಪ್ರಕೃತಿ ಬಗ್ಗೆ ತಿಳಿದುಕೊಳ್ಳುವ ಗಿಡಮರಗಳಿಂದ ಕಂಗೊಳಿಸುವ ಹಸಿರುಮಯ ವಾತಾವರಣದಲ್ಲಿ ಬೇಕೆನ್ನುವ ಪಾಠ, ಹೊರೆಯಿಲ್ಲದ ಹೋಂವರ್ಕ್, ಸರಳವಾದ ಬದುಕಿನ ಪಾಠಗಳು, ಮಕ್ಕಳ ಮನಸ್ಸನ್ನು ಸದಾ ಅರಳಿಸುವ ಶಿಕ್ಷಣ ಇಲ್ಲಿ ಇರುತ್ತದೆ.



ಕಲೆ: ಸಂತೋಷ್ ಸಸಿಹಿತ್ಲು

ಮಕ್ಕಳ ರಾಜ್ಯದಲ್ಲಿ ಉಚಿತವಾಗಿ ಆರೋಗ್ಯ, ಶಿಕ್ಷಣ ಮತ್ತು ರೈತರಿಗೆ ಬೀಜ, ಗೊಬ್ಬರ, ವಿದ್ಯುತ್, ಅಗತ್ಯವಿರುವ ಎಲ್ಲವುಗಳನ್ನು ನೀಡಲಾಗುವುದು. ಇವುಗಳನ್ನು ಹೊರತುಪಡಿಸಿದರೆ ಇಲ್ಲಿ ಯಾವುದೂ ಪುಕ್ಕಟೆ ಸಿಗುವುದಿಲ್ಲ. ವೃದ್ಧರು ಮತ್ತು ಅನಾಥರನ್ನು ಸಾಕುವ ಹೊಣೆ ಸರ್ಕಾರದ್ದೇ ಆಗಿರುತ್ತದೆ. ಪರಿಸರ ದಿನಾಚರಣೆಯಂದು ಪ್ರತಿ ಮನೆಗೂ ಒಂದೊಂದು ಗಿಡ ಕೊಡುವ ಸಂಪ್ರದಾಯವಿರುತ್ತದೆ. ಅದನ್ನು ಬೆಳೆಸಿ ಪೋಷಣೆ ಮಾಡಲು ಸರ್ಕಾರವೇ ವಿಶೇಷ ಗಮನ ಕೊಡುತ್ತದೆ.

ಹೆಣ್ಣುಮಕ್ಕಳ ರಕ್ಷಣೆಯ ಜವಾಬ್ದಾರಿ ಸಂಪೂರ್ಣ ಸರ್ಕಾರದ್ದು. ದೌರ್ಜನ್ಯ ಹಾಗೂ ಅತ್ಯಾಚಾರ ನಡೆದರೆ ಅಪರಾಧಿಗೆ ಎರಡು ದಿನದಲ್ಲಿ ಗಲ್ಲುಶಿಕ್ಷೆ ನೀಡಲಾಗುವುದು. ಮಹಿಳೆ ಮತ್ತು ಮಕ್ಕಳಿಗೆ ವಿಶೇಷ ಕಾನೂನು ಇರುತ್ತದೆ. ಹೆಣ್ಣು ಗಂಡು ಎಂಬ ಭೇದವಿಲ್ಲ, ಇಲ್ಲಿ ಎಲ್ಲರೂ ಸಮಾನರೇ.

'ಬೆಳಕಿಲ್ಲದ ದಾರಿಯಲ್ಲಿ ನಡೆಯಬಹುದು; ಕನಸುಗಳೇ ಇಲ್ಲದ ದಾರಿಯಲ್ಲಿ ಹೇಗೆ ನಡೆಯಲಿ' ಎನ್ನುವ ಗಿರೀಶ ಕಾರ್ನಾಡ ಅಜ್ಜರ ಮಾತು ಪದೇಪದೇ ನೆನಪಾಗುತ್ತದೆ...

ನವ್ಯ, ವಿಜಯಪುರ ಜಿಲ್ಲೆಯ ಅಲಮೇಲ ತಾಲ್ಲೂಕಿನ ಕಡಣಿ ಗ್ರಾಮದವರು. ಧಾರವಾಡದ ಜೆ.ಎಸ್.ಎಸ್. ಕಾಲೇಜಿನಲ್ಲಿ ದ್ವಿತೀಯ ಪಿಯುಸಿ ಕಲಾ ವಿಭಾಗದಲ್ಲಿ ಓದುತ್ತಿದ್ದಾರೆ. 6ನೇ ತರಗತಿಯಲ್ಲಿದ್ದಾಗಲೇ ಇಂಗ್ಲಿಷ್‌ನಲ್ಲಿ 'ನವ್ಯ ಸ್ಟೋರೀಸ್', ಬಳಿಕ 'ದಿ ಮ್ಯಾಜಿಕ್ ಕೇವ್ ಅಂಡ್ ಅದರ್ ಸ್ಟೋರೀಸ್' ಮಕ್ಕಳ ಕಥಾಸಂಕಲನ, ಈ ವರ್ಷ 'ಮಾಯಾ ಗುಹೆ' ಕನ್ನಡದಲ್ಲಿ ಪ್ರಕಟವಾಗಿದೆ.

ಸಾಹಿತ್ಯವಲ್ಲ, ಕ್ರಿಕೆಟ್ ಹುಚ್ಚು ಹೆಚ್ಚೇ ಇತ್ತು

ಕವಿರಾಜ್, ಗೀತಸಾಹಿತಿ, ನಿರ್ದೇಶಕ

ಬಾಲ್ಯದಲ್ಲಿ ನನಗೆ ಕ್ರಿಕೆಟ್ ಹುಚ್ಚು ಹೆಚ್ಚಾಗಿತ್ತು. ಎಲ್ಲರೂ ಬ್ಯಾಟಿಂಗ್, ಬೌಲಿಂಗ್‌ಗೆ ಕಾದರೆ ನಾನು ಫೀಲ್ಡಿಂಗ್ ಹುಚ್ಚು ಇಟ್ಟುಕೊಂಡಿದ್ದವ. ಅದೂ ಬ್ಯಾಟ್ಸ್‌ಮ್ಯಾನ್‌ಗೆ ಬಹಳ ಹತ್ತಿರದಲ್ಲಿ ಅಂದರೆ ಕವರ್, ಗಲ್ಲಿ, ಸ್ಲಿಪ್‌ನಲ್ಲಿ ಫೀಲ್ಡಿಂಗ್ ಮಾಡಲು ಹಾತೊರೆಯುತ್ತಿದ್ದೆ. ಡೈವ್ ಮಾಡಿ ಕ್ಯಾಚ್ ಹಿಡಿಯುವುದು ಬಹಳ ಇಷ್ಟವಾಗಿತ್ತು. ಇದರಿಂದ ಮಾಡಿಕೊಂಡ ಗಾಯಗಳೇ ನನಗೆ ಪದಕಗಳಂತೆ ಅನಿಸುತ್ತಿದ್ದವು. ಈ ರೀತಿ ಕ್ಯಾಚ್ ಹಿಡಿಯುವುದರಿಂದ ಬಹಳ ರೋಮಾಂಚನವಾಗುತ್ತಿತ್ತು. ಬಾಲ್ಯದ ನೆನಪುಗಳನ್ನು ಮೆಲುಕು ಹಾಕಿ ಎಂದರೆ ನನಗೆ ಕ್ರಿಕೆಟ್ ಹಾಗೂ ನಾನು ಹಿಡಿದ ಡೈವ್ ಕ್ಯಾಚ್‌ಗಳೇ ನನಗೆ ಮೊದಲಿಗೆ ನೆನಪಿಗೆ ಬರುತ್ತವೆ.

ಈ ಮಟ್ಟಿಗೆ ಕ್ರಿಕೆಟ್ ಹುಚ್ಚಿಗೆ ಕಾರಣ ಏನು ಎಂದು ಈಗಲೂ ತಿಳಿದಿಲ್ಲ. ಈ ನೆನಪುಗಳು ಮರುಪ್ರಸಾರದಂತೆ ಮನಸ್ಸಿನಲ್ಲಿ ಮೇಳೈಸುತ್ತವೆ. ನಮ್ಮ ಶಾಲೆಯ ವಾತಾವರಣ ಈಗಲೂ ನನ್ನ ಮನಸ್ಸಿನಲ್ಲಿ ಅಚ್ಚೊತ್ತಿದೆ. ಬಾಲ್ಯದಲ್ಲೇ ಓದಿನ ಮೇಲೆ ಆಸಕ್ತಿ ಇತ್ತು. ನಮ್ಮ ಊರಿನಲ್ಲಿ ಎರಡು ಅಂಗಡಿಯಿತ್ತು. ಒಬ್ಬರು ಯೋಗೀಶ್ ಶೆಣೈ ಹಾಗೂ ಇನ್ನೊಬ್ಬರು ರೆಹಮಾನ್ ಅವರ ಅಂಗಡಿ. ಇವರ ಅಂಗಡಿಗೆ ಪ್ರಜಾವಾಣಿ, ಮತ್ತೊಂದು ದಿನಪತ್ರಿಕೆ ಬರುತ್ತಿತ್ತು. ಬಸ್ ಕಂಡಕ್ಟರ್ ಎಸೆದ ದಿನಪತ್ರಿಕೆಯನ್ನು ಕ್ಯಾಚ್ ಹಿಡಿದು ಓದುತ್ತಿದ್ದವನಲ್ಲಿ ನಾನೇ ಮೊದಲಿಗ. ಜೊತೆಗೆ ಅಂಗಡಿಯಿಂದ ತರುವ ವಸ್ತುಗಳನ್ನು ಪೇಪರ್ ಪೊಟ್ಟಣಗಳಲ್ಲಿ ಕಟ್ಟಿಕೊಡುತ್ತಿದ್ದರು. ಅವುಗಳನ್ನು ಮನೆಗೆ ತಂದ ಮೇಲೆ ವಸ್ತುಗಳನ್ನು ತೆಗೆದಿಟ್ಟು, ಆ ಪೇಪರ್‌ನಲ್ಲಿರುವ ಪ್ರತಿ ಪದಗಳನ್ನು ಓದುತ್ತಿದ್ದೆ. ಶ್ರದ್ಧಾಂಜಲಿ ಕಾಲಂ ಅನ್ನೂ ನಿಯತ್ತಾಗಿ ಓದುತ್ತಿದ್ದೆ! ದಾರಿಯಲ್ಲಿ ಪೇಪರ್ ತುಂಡುಗಳು ಸಿಕ್ಕಿದರೂ, ಅದನ್ನು ಮನೆಗೆ ತೆಗೆದುಕೊಂಡು ಹೋಗಿ ಓದುತ್ತಿದ್ದೆ. ಇದಕ್ಕೆ ಅಮ್ಮನಿಂದ ಬೈಸಿಕೊಂಡದ್ದೂ ಇದೆ.

ಸಾಹಿತ್ಯದ ಆಸಕ್ತಿ ಎನ್ನುವುದಕ್ಕಿಂತ ಓದುವ ಆಸಕ್ತಿ ಹುಟ್ಟಿಕೊಂಡಿದ್ದೇ ಇಲ್ಲಿಂದ ಎನ್ನಬಹುದು. ಬಾಲಮಂಗಳದಲ್ಲಿನ ಡಿಂಗ ಹಾಗೂ ಇತರೆ ಕಥೆಗಳನ್ನು ಓದುತ್ತಿದ್ದೆ. ಅಮ್ಮ ಹೆಚ್ಚಿನ ವಿದ್ಯಾಭ್ಯಾಸ ಪಡೆಯದೇ ಇದ್ದರೂ ಸುಧಾ ತರಿಸಿಕೊಂಡು ಧಾರಾವಾಹಿ ಓದುತ್ತಿದ್ದರು. ಇವುಗಳನ್ನು ನಾನೂ ಗಮನಿಸುತ್ತಿದ್ದೆ. ಹೀಗೆ ಸಾಹಿತ್ಯದ ಬಗ್ಗೆ ಒಲವು ಮೂಡಿತು ಎನ್ನಬಹುದು.

ನಿರೂಪಣೆ: **ಅಭಿಲಾಷ್ ಪಿ.ಎಸ್.**

ಬಾಲ್ಯವೆಂಬ ಬದುಕಿನ ರಂಗಭೂಮಿ...

ಅನನ್ಯಾ ಭಟ್, ಗಾಯಕಿ

ಬಾಲ್ಯವೆಂದರೆ ಈಗ ನಡೆದು ಬಂದ ದಾರಿಯನ್ನು ತಿರುಗಿ ನೋಡುತ್ತಾ, ನೆನಪುಗಳನು ಬೆನ್ನತ್ತುವ ಯಾನ. ಮೈಸೂರಿನ ಅಗ್ರಹಾರದ ಮನೆಯಲ್ಲಿ ಕರೆಂಟ್ ಹೋದಾಗ ಕತ್ತಲಲ್ಲಿ ತಂದೆಗೆ ಒಪ್ಪಿಸಿದ ಹಾಡುಗಳು, ಸಂಸ್ಕೃತ ಶ್ಲೋಕಗಳು ಈಗಲೂ ಒಂದು ಪದ ಆಚೀಚೆಯಾಗದು. ಬಾಲ್ಯದ ಕಲಿಕೆಯೇ ಅಚ್ಚುಕಟ್ಟು, ಶಿಸ್ತು!

'ನಟನ' ರಂಗಶಾಲೆಯಲ್ಲಿ ವೇದಿಕೆಯೇರಿ ಅಭಿನಯಿಸಿದ 'ಮಣ್ಣಿನ ಮನೆ' ನಾಟಕದ ಸಂಭಾಷಣೆಯ ದನಿ ಈಗಲೂ ಅನುರಣಿಸುತ್ತದೆ. 'ರಜಾ ಮಜಾ' ಬೇಸಿಗೆ ಶಿಬಿರದಲ್ಲಿ ಕಟ್ಟಿದ ಆಟಗಳು, ಹಾಡು, ನಾಟಕಗಳು ನೆನಪಾಗುತ್ತವೆ. ಎಲ್ಲರಂತೆ ನನ್ನ ಬಾಲ್ಯವೂ ಸಮೃದ್ಧ. ತಾಯಿ ರೇವತಿ ಬಟ್ಟೆ ಅಂಗಡಿ ಇಟ್ಟಿದ್ದರು. ಟೇಲರಿಂಗ್ ಮಿಷಿನ್ ಪೆಡಲ್ ತುಳಿಯುತ್ತಾ, ಸೂಜಿ-ದಾರದಲ್ಲಿ ನಮ್ಮ ಬದುಕನ್ನೂ ಹೊಲಿದರು. ನಾನೂ ಅವರಿಗೆ ಸಹಾಯ ಮಾಡುತ್ತಿದ್ದೆ. ನನ್ನ ಬೊಂಬೆಗಳಿಗೆ ಮಿಡಿ, ಫ್ರಾಕೂ ಹೊಲಿದುಕೊಳ್ಳುತ್ತಿದ್ದೆ. ಕಲಿತದ್ದೆಲ್ಲವೂ ಕಲೆ. ಅದಕ್ಕೆ ಒಪ್ಪಿಸಿಕೊಳ್ಳುತ್ತ ಹೋಗುವುದು ನಮ್ಮ ಅಭಿವ್ಯಕ್ತಿ.

ತಂದೆ ವಿಶ್ವನಾಥ ಭಟ್ ಸಂಸ್ಕೃತ ಶಾಲೆಯ ಮುಖ್ಯ ಶಿಕ್ಷಕರಾಗಿದ್ದರು. ಪೋಷಕರು ಅವರ ಕೆಲಸಗಳಲ್ಲಿ ಬ್ಯುಸಿ. ನನ್ನ ಬಾಲ್ಯ ಕಳೆದದ್ದೆಲ್ಲ ನಾಟಕ, ನೃತ್ಯ, ಸಂಗೀತ, ಹಾಡುಗಾರಿಕೆಯಲ್ಲೇ. ಬೆಳಿಗ್ಗೆ ಶಾಲೆಗೆ ಹೋದರೆ ಸಂಜೆ ನೃತ್ಯ- ಸಂಗೀತ ತರಗತಿಗಳನ್ನು ಮುಗಿಸಿಕೊಂಡು ರಾತ್ರಿ ವಾಪಾಸಾಗುತ್ತಿದ್ದೆ.

ಈಗ ಪ್ರತಿ ಹಾಡು, ಕಾರ್ಯಕ್ರಮಕ್ಕೂ ಸಿಗುವ ಚಪ್ಪಾಳೆ ಕೇಳಿದಾಗ ಪೂರ್ಣಿಮಾ ಅವರ ನಿರ್ದೇಶನದಲ್ಲಿ ನಾನು ಮೊದಲು ಅಭಿನಯಿಸಿದ್ದ 'ಮಣ್ಣಿನ ಮನೆ' ನಾಟಕ ಮುಗಿದಾಗ ಹೊಮ್ಮಿದ ಪ್ರೇಕ್ಷಕರ ಕರತಾಡನವೇ ನೆನಪಾಗುತ್ತದೆ. ರಾಜು ಅನಂತಸ್ವಾಮಿ, ಶಿವಾಜಿರಾವ್ ಜಾಧವ್, ನಾಗೇಶ್ ಕಂದೇಗಾಲ, ಮಹಾಲಿಂಗ, ದೇವಾನಂದ ವರಪ್ರಸಾದ್ ಹಾಡುಗಳನ್ನು ಹೇಳಿಕೊಟ್ಟವರು. ಅವರಿಂದ ಹಾಡಷ್ಟೇ ಅಲ್ಲ ಕಂಸಾಳೆ, ಪೂಜಾ ಕುಣಿತ, ನಂದಿಧ್ವಜ ಕುಣಿತ, ವೀರಗಾಸೆ ಸೇರಿದಂತೆ ಹಲವು ಜಾನಪದ ಕಲೆಗಳನ್ನೂ ಕಲಿತೆ. ಈ ರಂಗಭೂಮಿ ಎಲ್ಲವನ್ನು ಕಲಿಸುತ್ತದೆ. ಅದು ನನ್ನ ಸ್ಟೇಜ್ ಫಿಯರ್ ಅನ್ನು ಮಾಯಮಾಡಿಬಿಟ್ಟಿತು. ಇಲ್ಲಿ ಎಲ್ಲರೂ ಸಮಾನರು. ಶ್ರೇಣಿ, ಜಾತಿ ಭೇದವೆಂಬುದಿಲ್ಲ. ನಾವು ಕಲೆಯ ಮಕ್ಕಳು.

ನಿರೂಪಣೆ: **ಮೋಹನ್ ಕುಮಾರ ಸಿ.**

ಡಾನ್ಸ್ ಮಾಡುವ ಉತ್ಸಾಹ ಹೆಚ್ಚಿತ್ತು

ವಿಜಯ್ ಸೂರ್ಯ, ಕಿರುತೆರೆ ನಟ

ಬೆಂಗಳೂರಿನಲ್ಲಿ ಹುಟ್ಟಿ ಬೆಳೆದ ನನಗೆ ಬಾಲ್ಯ ಅಂದರೆ, ಜಯನಗರ 9ನೇ ಬ್ಲಾಕ್ ನೆನಪಾಗುತ್ತದೆ. ಸುಮಾರು 10ವರ್ಷ ನಮ್ಮ ಮನೆ ಅಲ್ಲಿತ್ತು. ನಂತರ ಜೆ.ಪಿ. ನಗರಕ್ಕೆ ಬದಲಿಸಿದೆವು. ಅಪ್ಪನ ಕೆಲಸದ ಅನುಕೂಲಕ್ಕೆ ಮನೆ ಬದಲಿಸಿದ್ದು ಮುಖ್ಯ ಕಾರಣ. ಆದರೂ ಶಾಲೆಗೆ ರಜೆ ಇದ್ದಾಗೆಲ್ಲ ಗೆಳೆಯರ ಜೊತೆ ಕ್ರಿಕೆಟ್‌ನಲ್ಲೇ ಮುಳುಗಿರುತ್ತಿದ್ದೆ. ಅದಕ್ಕೆ 'ಇಲ್ಲೇ ಬಿಟ್ಟರೆ ನನ್ನ ಮಗ ಬೀದಿಯಲ್ಲೇ ಇರ್ತಾನೆ' ಎನ್ನುವ ಕಾರಣಕ್ಕೇ ಮನೆ ಬದಲಿಸಿದ್ದು ಎಂಬ ಮತ್ತೊಂದು ಕಾರಣವನ್ನು ಅಮ್ಮ ನೀಡುತ್ತಾರೆ.

ಪೋಷಕರು ಯಾವುದಕ್ಕೂ ಕೊರತೆ ಮಾಡಲಿಲ್ಲ. ಹಾಗೆಂದು ನಾವು ಕೇಳಿದ್ದೆಲ್ಲ ಕೊಡಿಸಲಿಲ್ಲ. ಯಾವುದು ಮುಖ್ಯ ಯಾವುದು ಅಮುಖ್ಯ ಎನ್ನುವ ಸ್ಪಷ್ಟತೆ ಅವರಿಗಿತ್ತು. ಈಗ ನಾನು ಒಬ್ಬ ತಂದೆಯಾಗಿ ಆ ವಿಚಾರದಲ್ಲಿ ಗೊಂದಲವಿದೆ. ಮನೆ ಬದಲಾದ ಮೇಲೆ ಸ್ನೇಹಿತರು ಕಡಿಮೆಯಾದರು. ಆಡಲು ಹೊರಗೆ ಹೋಗುತ್ತಿರಲ್ಲ. ಅಮ್ಮ ತಮ್ಮ ಕಣ್ಣಳತೆಯಲ್ಲೇ ಇಟ್ಟುಕೊಳ್ಳಲು ಬಯಸುತ್ತಿದ್ದರು. ಸ್ನೇಹಿತರು ಎಂದರೆ ತಾಯಿ ಮತ್ತು ಅಣ್ಣ, ಮನೆಯ ಕಾಂಪೌಂಡ್ ಒಳಗೆ ಅಣ್ಣ ರವಿ ಸೂರ್ಯನ ಜೊತೆ ಆಡುತ್ತಿದ್ದೆ. ಡ್ರಾಯಿಂಗ್ ಮಾಡುವ ಹವ್ಯಾಸ ಆಗಿತ್ತು.

1995ರ ಸುಮಾರು ನಮ್ಮ ಮನೆಗೆ ಮೊದಲ ಕಲರ್ ಟಿ.ವಿ. ಬಂತು. ಆಗ ನಮ್ಮ ಬಡಾವಣೆಯ ಅನೇಕ ಮಕ್ಕಳು ಟೀವಿ ನೋಡಲು ಬರುತ್ತಿದ್ದರು. ಅದು ತುಂಬ ಖುಷಿ ಕೊಡುತ್ತಿತ್ತು. ಲ್ಯಾಂಡ್ ಲೈನ್ ಫೋನ್ ಬಂದಾಗ, ಫೋನ್ ಪಕ್ಕದಲ್ಲೇ ಕೂತಿರುತ್ತಿದ್ದೆ.

ಶಾಲೆ ಅಂದ ತಕ್ಷಣ ವಾರ್ಷಿಕೋತ್ಸವ ನೆನಪಾಗುತ್ತದೆ. ಏಕೆಂದರೆ ನನಗೆ ಡಾನ್ಸ್ ಮಾಡುವುದು ಖುಷಿ ಕೊಡುತ್ತಿತ್ತು. ವರ್ಷವಿಡೀ ಆ ಒಂದು ದಿನಕ್ಕಾಗಿ ಕಾಯುತ್ತಿದ್ದೆ. ಐಸಿಎಸ್‌ಇ ಪಠ್ಯ ಓದಿದ್ದರಿಂದ ಪರೀಕ್ಷಾ ಭಯವೂ ಇರುತ್ತಿತ್ತು. ಆದರೆ ಓದುವುದು ನನಗೆ ಹೊರೆ ಅನ್ನಿಸುತ್ತಿರಲಿಲ್ಲ. ಯಾವತ್ತೂ ಓದಿನಲ್ಲಿ ಹಿಂದೆ ಬೀಳಲೂ ಇಲ್ಲ. ತರಗತಿಯಲ್ಲಿ ಗಮನ ಇಟ್ಟು ಪಾಠ ಕೇಳುತ್ತಿದ್ದೆ ಮನೆಗೆ ಬಂದು ಓದುತ್ತಿದ್ದೆ. ಒಳ್ಳೆಯ ಅಂಕವನ್ನೂ ತೆಗೆದುಕೊಳ್ಳುತ್ತಿದ್ದೆ. ಎಂದೂ ತರ್ಲೆ ಮಾಡಿದವನಲ್ಲ. ಜಾಸ್ತಿ ಮಾತನಾಡುತ್ತಿದ್ದೆ ಎಂದು ಹುಡುಗಿಯರ ಮಧ್ಯೆ ಕೆಲವೊಮ್ಮೆ ಕೂರಿಸುತ್ತಿದ್ದರು. ಅದು ಮುಜುಗರ ಅನ್ನಿಸುತ್ತಿತ್ತು. ಅದೇ ಆಗ ನನಗೆ ಕೊಡುತ್ತಿದ್ದ ಶಿಕ್ಷೆ.

ನಿರೂಪಣೆ: **ರಾಘವೇಂದ್ರ ಕೆ. ತೊಗರ್ಸಿ**

ಕಷ್ಟಗಳಿಗೆ ರಾಜೀ ಆಗದ ರಾಜೇಶ್ವರಿ

ರಾಜೇಶ್ವರಿ ಗಾಯಕವಾಡ, ಕ್ರಿಕೆಟ್ ಆಟಗಾರ್ತಿ

ನಮ್ಮದು ಮಧ್ಯಮವರ್ಗದ ಕುಟುಂಬ. ಅಪ್ಪ, ಅಮ್ಮನಿಗೆ ನಾನು ಸೇರಿ ಒಟ್ಟು ಐದು ಜನ ಮಕ್ಕಳು. ಅಪ್ಪ ಶಿಕ್ಷಕರಾಗಿದ್ದರು. ಅವರ ಪಗಾರದಲ್ಲಿಯೇ ಕುಟುಂಬ ನಡೆಯಬೇಕಿತ್ತು. ಎಲ್ಲ ಮಕ್ಕಳ ಶಾಲಾ ಶುಲ್ಕ, ಮನೆಯ ಖರ್ಚುಗಳನ್ನು ನಿಭಾಯಿಸಲು ಕಷ್ಟವಾಗುತ್ತಿತ್ತು. ಬಹಳಷ್ಟು ಸವಾಲುಗಳನ್ನು ಎದುರಿಸಬೇಕಾಯಿತು. ನನಗೆ ಶಾಲೆಯಲ್ಲಿದ್ದಾಗಿನಿಂದಲೂ ಕ್ರೀಡೆ ಮೇಲೆ ಪ್ರೀತಿ ಹೆಚ್ಚು. ಎಲ್ಲ ಆಟಗಳ ಸ್ಪರ್ಧೆಗಳಲ್ಲಿಯೂ ಭಾಗವಹಿಸುತ್ತಿದ್ದೆ. ಆಗ ನಮ್ಮ ಊರಲ್ಲಿ ಹುಡುಗಿಯರಿಗೆ ಕ್ರಿಕೆಟ್ ಕೋಚಿಂಗ್ ಕ್ಯಾಂಪ್ ಶುರುವಾಯಿತು. ಈ ಆಟವನ್ನು ಕಲಿಯಬೇಕು ಎಂಬ ಆಸಕ್ತಿಯಿಂದ ಸೇರಿದೆ. ದೊಡ್ಡ ಕ್ರಿಕೆಟಿಗಳಾಗಬೇಕೆಂಬ ಯೋಚನೆಯೇ ಇರಲಿಲ್ಲ. ಖುಷಿಗಾಗಿ ಆಡುತ್ತಿದ್ದೆ. ಭಾರತ ತಂಡದ ಬೌಲರ್ ಜಹೀರ್ ಖಾನ್ ಅವರ ಬೌಲಿಂಗ್ ಶೈಲಿ ಇಷ್ಟವಾಗಿತ್ತು. ನಾನೂ ಅವರಂತೆಯೇ ವೇಗದ ಬೌಲಿಂಗ್ ಮಾಡುವ ಪ್ರಯತ್ನ ಮಾಡುತ್ತಿದ್ದೆ. ಸಣ್ಣ ವಯಸ್ಸಿನ ಕಾರಣ ರಟ್ಟೆಗಳಲ್ಲಿ ಶಕ್ತಿ ಕಡಿಮೆಯಿತ್ತು. ಸ್ಪಿನ್ನರ್ ಆಗು, ವೇಗದ ಬೌಲರ್ ಬೇಡ ಎಂದು ತರಬೇತುದಾರರು ಸಲಹೆ ಮಾಡಿದರು. ನಾನು ಒಪ್ಪಲಿಲ್ಲ. ಆದರೆ ಅಪ್ಪಾಜಿ ನನ್ನ ಮನವೊಲಿಸಿದರು. ಆಗ ಸ್ಪಿನ್ ಬೌಲಿಂಗ್ ಆರಂಭಿಸಿದೆ.

ನನ್ನ ತಂಗಿ ರಾಮೇಶ್ವರಿ ಕೂಡ ಆಡುತ್ತಿದ್ದಳು. ನಮ್ಮಿಬ್ಬರನ್ನೂ ಕ್ರಿಕೆಟ್ ತರಬೇತಿಗೆ ಕರೆದುಕೊಂಡು ಹೋಗಿಬರುವುದು ಅಪ್ಪನ ಕೆಲಸವಾಗಿತ್ತು. ಅಪ್ಪನೇ ನಾನು ಕ್ರಿಕೆಟಿಗಳಾಗಲು ಕಾರಣ. ಅಮ್ಮ ನನ್ನ ಊಟ, ತಿಂಡಿಯ ಬಗ್ಗೆ ಕಾಳಜಿ ವಹಿಸುತ್ತಿದ್ದರು. ನಮ್ಮೂರು ಬಿಜಾಪುರ (ವಿಜಯಪುರ)ದಲ್ಲಿ ಒಳ್ಳೆಯ ಮೈದಾನಗಳು ಇರಲಿಲ್ಲ. ಬಿಸಿಲು, ಮಳೆ ಏನೂ ಲೆಕ್ಕಿಸದೆ ಆಡುತ್ತಿದ್ದೆ. ಬಿದ್ದು, ಎದ್ದು ಮೈಕೈ ಗಾಯವಾದರೂ ಆಟದ ಪ್ರೀತಿಗಾಗಿ ಸಹಿಸಿಕೊಳ್ಳುತ್ತಿದ್ದೆ. ಅದರಿಂದಾಗಿಯೇ ಕಷ್ಟಗಳನ್ನು ಸಹಿಸಿಕೊಂಡು ಗೆಲ್ಲುವ ಮನೋಭಾವ ಬೆಳೆಯಿತು. ಇವತ್ತು ಅಂತರರಾಷ್ಟ್ರೀಯ ಮೈದಾನಗಳಲ್ಲಿ ಆಡುವಾಗ ಏನೂ ಕಷ್ಟವಾಗುವುದಿಲ್ಲ. ಬದಲಿಗೆ ಆ ಕ್ಷಣಗಳನ್ನು ಮನತುಂಬಿ ಆನಂದಿಸುತ್ತೇನೆ. ಬಾಲ್ಯ ಅಥವಾ ಕಲಿಕೆ ಹಂತದಲ್ಲಿ ಯಾವುದೇ ಸಮಸ್ಯೆ ಬಂದರೂ ಎದೆಗುಂದದೇ ಮುನ್ನುಗ್ಗಬೇಕು. ಅಪ್ಪ ತೀರಿಹೋದ ಮೇಲೆ ಮನೆಯ ಹೊಣೆಯನ್ನು ನಾನು ನಿಭಾಯಿಸಿದೆ. ಇದರಿಂದಾಗಿ ಸದ್ಯ ಕುಟುಂಬವು ಸುಸ್ಥಿರವಾಗಿದೆ.

ನಿರೂಪಣೆ: **ಗಿರೀಶ ದೊಡ್ಡಮನಿ**

ಹವ್ಯಾಸಿ ರಂಗಭೂಮಿಗೆ ನೆಲ-ನೆಲೆ ರಂಗ ಶಂಕರ

ಬೆಂಗಳೂರಿನ 'ರಂಗ ಶಂಕರ' ಹವ್ಯಾಸಿ ರಂಗಭೂಮಿಗೆ ನೆಲೆಯನ್ನು ಒದಗಿಸಿದೆ. ತನ್ನ ರಚನಾತ್ಮಕ ಮತ್ತು ಸೃಜನಶೀಲ ಕೆಲಸಗಳ ಮೂಲಕ ಈಗಾಗಲೇ ಇಪ್ಪತ್ತು ವರ್ಷಗಳನ್ನು ಪೂರೈಸಿದೆ. ಹೀಗೆ ಭಾರತೀಯ ರಂಗಭೂಮಿಯಲ್ಲಿ ವಿಶಿಷ್ಟ ಸ್ಥಾನವನ್ನೂ ಪಡೆದುಕೊಂಡಿದೆ.

ರಂಗ ಶಂಕರದ ಮುಂಭಾಗದಲ್ಲಿ ಅರುಂಧತಿ ನಾಗ್

ದೇವು ಪತ್ತಾರ

ಭಾರತೀಯ ರಂಗಭೂಮಿಗೆ ಬೆಂಗಳೂರಿನ ಮಹತ್ವದ ಕೊಡುಗೆ 'ರಂಗ ಶಂಕರ'. ತನ್ನ ಕಟ್ಟುವಿಕೆ ಮತ್ತು ರಚನಾತ್ಮಕ ಕೆಲಸಗಳ ಮೂಲಕ ಇದು ರಂಗಾಸಕ್ತರ ಗಮನ ಸೆಳೆದಿದೆ.

ಕನ್ನಡ ಸಿನಿಮಾ ಮಾತ್ರವಲ್ಲದೆ, ಕರ್ನಾಟಕದ ಹಲವೆಡೆ ವಿನೂತನ ಯೋಜನೆಗಳನ್ನು ಜಾರಿಗೆ ತರುವ ಕನಸು ಕಂಡವರು ನಟ ಶಂಕರನಾಗ್. 'ರಂಗ ಶಂಕರ' ಶಂಕರನಾಗ್ ಅವರ ಹತ್ತು ಹಲವು ಕನಸುಗಳಲ್ಲಿ ಒಂದು. ಕನಸು ಕಾಣುವುದು ಸಹಜ. ಆದರೆ ಕಂಡ ಕನಸನ್ನು ನನಸು ಮಾಡುವುದು ಸುಲಭವಲ್ಲ. ಹವ್ಯಾಸಿ ರಂಗಭೂಮಿಗೆ ಕಾಯಕಲ್ಪ ಉದ್ದೇಶದಿಂದ ಶಂಕರನಾಗ್ ಕಂಡ ಕನಸು ಅದು. ಆಪ್ತ ಗೆಳೆಯ, ಸಂಗಾತಿ ಶಂಕರ್ ಜೊತೆ ಕಂಡ ಕನಸನ್ನು ನನಸಾಗಿಸಿದವರು ಅರುಂಧತಿ ನಾಗ್.

ಕಾರ್ನಾಡರ 'ಅಂಜುಮಲ್ಲಿಗೆ' ಮೂಲಕ ಕನ್ನಡ ರಂಗಭೂಮಿಗೆ ಬಂದ ಅರುಂಧತಿ, ಅದಕ್ಕೂ ಮುನ್ನ ಗುಜರಾತಿ ಮತ್ತು ಮರಾಠಿ ರಂಗದ ಮೇಲೆ ಕಾಣಿಸಿಕೊಂಡು ಅಭಿನಯಿಸಿದ್ದರು. ದೆಹಲಿಯಲ್ಲಿ ಹುಟ್ಟಿ ಮುಂಬೈನಲ್ಲಿ ಬೆಳೆದ ಅರುಂಧತಿ ಅವರು ಕಾಲೇಜು ವಿದ್ಯಾರ್ಥಿಯಾಗಿದ್ದಾಗಲೇ ರಂಗಭೂಮಿ ಪ್ರವೇಶಿಸಿದ್ದರು. ತಿಂಗಳಿಗೆ ನಲವತ್ತಕ್ಕೂ ಹೆಚ್ಚು ರಂಗಪ್ರದರ್ಶನಗಳಲ್ಲಿ ನಟಿಸುವಷ್ಟು ಬಿಜಿಯಾಗಿದ್ದರು. ಅರುಂಧತಿ ಇಪ್ಟಾ (ಇಂಡಿಯನ್ ಪೀಪಲ್ಸ್ ಥಿಯೇಟರ್ ಅಸೋಸಿಯೇಷನ್)ದಲ್ಲಿ ಸಕ್ರಿಯವಾಗಿದ್ದ ದಿನಗಳಲ್ಲಿಯೇ ಶಂಕರ್‌ನಾಗ್ ಪರಿಚಯವಾಯಿತು. ರಂಗ ಚಟುವಟಿಕೆ ನಡೆಸಲು ಶಂಕರ್‌ನಾಗ್ ಆರಂಭಿಸಿದ 'ಸಂಕೇತ್'ದ ನಾಟಕಗಳಲ್ಲಿ ನಟಿಸುವ ಕಾರಣಕ್ಕಾಗಿ ಅರುಂಧತಿ ಬೆಂಗಳೂರಿಗೆ ಬಂದರು. ನಂತರ ಶಂಕರ್‌ನಾಗ್ ಜೊತೆಯಲ್ಲಿಯೇ ನೆಲೆ ನಿಂತರು. ಅರುಂಧತಿ ಕೇವಲ ನಟಿ ಮತ್ತು ಕಲಾವಿದೆ ಮಾತ್ರ ಅಲ್ಲ, ಅವರೊಬ್ಬ ರಂಗತಜ್ಞೆ.

'ರಂಗ ಶಂಕರ'ದ ಬಗ್ಗೆ ಬರೆಯಲು ಹೊರಟಾಗ 'ಸಂಕೇತ್' ಬಗ್ಗೆ ಬರೆಯದೇ ಇರಲು ಸಾಧ್ಯವೇ ಇಲ್ಲ. ಮುಂಬೈನಲ್ಲಿ ರಂಗಚಟುವಟಿಕೆಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದ ಶಂಕರನಾಗ್, ಸಿನಿಮಾಕ್ಕಾಗಿ ಬೆಂಗಳೂರಿಗೆ ಬಂದರು. ಬೆಂಗಳೂರಿನಲ್ಲಿಯೂ ರಂಗಚಟುವಟಿಕೆ ನಡೆಸುವ ಉದ್ದೇಶದಿಂದ 'ಸಂಕೇತ್' ಆರಂಭಿಸಿದರು. ಗಿರೀಶ ಕಾರ್ನಾಡರ 'ಅಂಜುಮಲ್ಲಿಗೆ' ಸಂಕೇತ್ ಆಡಿದ ಮೊದಲ ನಾಟಕವಾದರೆ, ಶಂಕರನಾಗ್ ನಿರ್ದೇಶನದ 'ನಾಗಮಂಡಲ' ಕೊನೆಯ ನಾಟಕವಾಯಿತು. ಇವೆರಡರ ನಡುವೆ 'ನೋಡಿ ಸ್ವಾಮಿ ನಾವಿರೋದು ಹೀಗೆ', 'ಸಂಧ್ಯಾಛಾಯಾ' ಸೇರಿದಂತೆ ಹಲವು ಪ್ರಯೋಗಗಳನ್ನು'ಸಂಕೇತ್' ನೀಡಿತು. ಶಂಕರ್‌ನಾಗ್ ನಿಧನದ ನಂತರ ಅರುಂಧತಿ ಮತ್ತು ಸುರೇಂದ್ರನಾಥ್ ಅವರು ಹಳೆಯ ನಾಟಕಗಳ ಗೊಡವೆಗೆ ಹೋಗದೆ ಹೊಸ ನಾಟಕಗಳನ್ನು ಆಡುವ ಪರಿಪಾಠ ಆರಂಭಿಸಿದರು. 'ಶಂಕರ್ ಬದುಕಿದ್ದ ಸಂದರ್ಭದಲ್ಲಿಯೇ ಚರ್ಚಿಸಿದ್ದ ಇಬ್ಸೆನ್‌ನ 'ಎನಿಮಿ ಆಫ್ ದ ಪೀಪಲ್' ಮತ್ತು 'ಹುಲಗೂರಿನ ಹುಲಿಯವ್ವ' ಮಾತ್ರ ರಂಗದ ಮೇಲೆ ತರಲಾಯಿತು' ಎನ್ನುತ್ತಾರೆ ಅರುಂಧತಿ.

'ನಾಗಮಂಡಲ'ದ ಪ್ರದರ್ಶನ ಚಿತ್ರಕಲಾ ಪರಿಷತ್ತಿನಲ್ಲಿ ಏರ್ಪಾಡಾಗಿತ್ತು. ಅಲ್ಲಿಯೇ ಹವ್ಯಾಸಿ ರಂಗತಂಡಗಳಿಗೆ ಅನುಕೂಲ ಆಗುವ ರೀತಿಯಲ್ಲಿ ಶಾಶ್ವತ ಲೈಟಿಂಗ್ ವ್ಯವಸ್ಥೆಗೆ ಶಂಕರ್‌ನಾಗ್ ಕೋರಿದ್ದರು. ಅದಕ್ಕೆ ಅನುಮತಿ ದೊರೆಯದ್ದರಿಂದ ಶಂಕರ್‌ನಾಗ್ ಸುಚಿತ್ರ ಫಿಲಂ ಸೊಸೈಟಿಯಲ್ಲಿಯ ಪೀರ್ ರಂಗಮಂದಿರ ಇರುವ ಕಡೆಯಲ್ಲಿ ರಂಗಚಟುವಟಿಕೆಗೆ ಮಾಡಿದ ಮನವಿಗೂ ಸಕಾರಾತ್ಮಕ ಪ್ರತಿಕ್ರಿಯೆ ಬಂದಿರಲಿಲ್ಲ. ಈ ದಿನಗಳಲ್ಲಿಯೇ ಶಂಕರ್‌ನಾಗ್ ಹವ್ಯಾಸಿ ತಂಡಗಳಿಗಾಗಿಯೇ ರಂಗಭೂಮಿಯನ್ನು ರೂಪಿಸುವ ಕನಸನ್ನು ಕಂಡಿದ್ದರು. ಅದನ್ನವರು ತನ್ನ ಸಂಗಾತಿಯ ಜೊತೆಗೆ ಹಂಚಿಕೊಂಡಿದ್ದರು. 'ಜೋಕುಮಾರಸ್ವಾಮಿ' ಚಿತ್ರದ ಮುಹೂರ್ತಕ್ಕಾಗಿ ತೆರಳುವ ಸಂದರ್ಭದಲ್ಲಿ ನಡೆದ ರಸ್ತೆ ಅಪಘಾತದ ದುರಂತದಲ್ಲಿ ಶಂಕರ್ ಹಠಾತ್ ನಿರ್ಗಮಿಸಿದರು.

ರಂಗ ಶಂಕರದ ಒಳನೋಟ

ಮುಂಬೈನಲ್ಲಿ ಇರುವ 'ಪೃಥ್ವಿ ಥಿಯೇಟರ್' ಮಾದರಿಯಲ್ಲಿ ಬೆಂಗಳೂರಿನಲ್ಲಿಯೂ ನಾಟಕಕ್ಕೇ ಮೀಸಲಾದ ರಂಗಮಂದಿರ ಇರಬೇಕು ಎಂಬುದು ಶಂಕರ್‌ನಾಗ್ ಕಂಡ ಕನಸು. ಆ ಕನಸು ಅರುಂಧತಿ ಅವರದ್ದೂ ಆಗಿತ್ತು. ಈ ಕನಸಿನ ಹಾದಿಗುಂಟ ನಡೆದ ಅರುಂಧತಿ ಅದಕ್ಕಾಗಿ ಹತ್ತಾರು ವರ್ಷ ಕಷ್ಟ ಪಡಬೇಕಾಯಿತು. ಅರುಂಧತಿ ಅವರು 'ರಂಗ ಶಂಕರ'ದ ಯೋಜನೆಯನ್ನು ಹಂಚಿಕೊಂಡಾಗ ಬಹುತೇಕರು 'ಇದಾಗುವ ಮಾತಲ್ಲ' ಎಂದೇ ಪ್ರತಿಕ್ರಿಯಿಸಿದ್ದರು. ಆದರೆ, ಅರುಂಧತಿ ಅವರು ಛಲ ಬಿಡದ ಸತತ ಪ್ರಯತ್ನದಿಂದ ಕನಸನ್ನ ನನಸಾಗಿಸಿದರು. ಈಗ ಅದೊಂದು 'ಪವಾಡ'ದಂತೆ ಕಾಣಿಸುತ್ತದೆ.

ನಲವತ್ತೈದು ದಿನಗಳ ನಾಟಕೋತ್ಸವ ಮೂಲಕ ಆರಂಭವಾದ ರಂಗಪ್ರದರ್ಶನವು ಕಳೆದ ಇಪ್ಪತ್ತು ವರ್ಷಗಳ ಅವಧಿಯಲ್ಲಿ ಅವಿರತವಾಗಿ ನಡೆದು ಬರುತ್ತಿದೆ. ಎಂಟು ಸಾವಿರ ನಾಟಕ ಪ್ರದರ್ಶನ ನಡೆದಿರುವುದು ಅಚ್ಚರಿಯ ಸಂಗತಿ ಮಾತ್ರವಲ್ಲ, ಅದೊಂದು ದಾಖಲೆ ಕೂಡ. ಹೌದು 'ರಂಗ ಶಂಕರ' ಕಳೆದ ಇಪ್ಪತ್ತು ವರ್ಷಗಳ ಅವಧಿಯಲ್ಲಿ ಈ ಸಾಧನೆ ಮಾಡಿದೆ. ದಿನಕ್ಕೆ ಕನಿಷ್ಠ ಒಂದರಂತೆ ವರ್ಷಕ್ಕೆ 400 ಪ್ರದರ್ಶನ ನಡೆಸಿರುವುದು ವಿಶೇಷವೇ ಸರಿ. ನಿಯಮಿತವಾಗಿ ಪ್ರತಿದಿನ ಸಂಜೆ 7.30ಕ್ಕೆ ಒಂದು ಪ್ರದರ್ಶನ ನೀಡಲಾಗುತ್ತದೆ. ಶನಿವಾರ ಮತ್ತು ಭಾನುವಾರಗಳಂದು ಹೆಚ್ಚುವರಿ ಮ್ಯಾಟನಿ ಶೋ 3.30ಕ್ಕೆ. ಈ ಪೈಕಿ ಕನ್ನಡ ನಾಟಕಗಳ ಪ್ರಯೋಗಗಳೇ ಹೆಚ್ಚು.

ಆಧುನಿಕ ತಂತ್ರಜ್ಞಾನ ಬಳಸಿ ರೂಪಿಸಲಾಗಿರುವ ಧ್ವನಿ ವ್ಯವಸ್ಥೆ 'ರಂಗ ಶಂಕರ'ದ ವಿಶೇಷಗಳಲ್ಲಿ ಒಂದು. ಹಾಗೆಯೇ ಸಮಯ ಪ್ರಜ್ಞೆ 'ರಂಗ ಶಂಕರ'ದ ಮತ್ತೊಂದು ವಿಶೇಷ. ನಿಗದಿತ ಸಮಯಕ್ಕೆ ಸರಿಯಾಗಿ ಪ್ರದರ್ಶನ ಆರಂಭಿಸುವುದು. ಶೋ ಆರಂಭವಾದ ನಂತರ ಬಂದವರು ಯಾರೇ ಆಗಿದ್ದರೂ ಒಳಹೋಗಲು ಬಿಡುವುದಿಲ್ಲ.

ಕೋಟಿಗಟ್ಟಲೆ ಖರ್ಚು ಮಾಡಿ ನಿರ್ಮಾಣವಾಗುವ ರಂಗಮಂದಿರದ ಬಾಡಿಗೆ ಕೂಡ ಸಾವಿರಾರು ರೂಪಾಯಿಗಳಲ್ಲಿರುತ್ತದೆ ಎಂದು ಭಾವಿಸಲಾಗಿತ್ತು. ಉನ್ನತ ಮಟ್ಟದವರೂ ಮಾತ್ರ ಇಂತಹ ಕಡೆಗಳಲ್ಲಿ ಪ್ರದರ್ಶನ ನೀಡಲು ಅನುಕೂಲ ಆಗುತ್ತದೆ ಎಂದು ಭಾವಿಸಲಾಗಿತ್ತು. ಅತ್ಯಂತ ಕಡಿಮೆ ಹಣ ಪಡೆಯುವ ಮೂಲಕ 'ರಂಗ ಶಂಕರ' ಅದನ್ನು ಹುಸಿಯಾಗಿಸಿದೆ. ಪ್ರತಿ ಪ್ರಯೋಗಕ್ಕೆ 2500 ರೂಪಾಯಿ ಶುಲ್ಕ ವಿಧಿಸುವುದರ ಜೊತೆಗೆ ಟಿಕೆಟ್‌ನ ಹಣದಲ್ಲಿ ಶೇಕಡ 10ರಷ್ಟು ಮಾತ್ರ ತಂಡಗಳಿಂದ ಪಡೆಯುತ್ತದೆ.

ನಾಸಿರುದ್ದೀನ್ ಷಾ ಮತ್ತು ಶಬಾನಾ ಅಜ್ಮಿಯಂತಹ ಹೆಸರಾಂತ ಕಲಾವಿದರು ಸೇರಿದಂತೆ ಭಾರತದ ಪ್ರಮುಖ ರಂಗತಂಡಗಳು 'ರಂಗ ಶಂಕರ'ದಲ್ಲಿ ತಮ್ಮ ಪ್ರದರ್ಶನ ನೀಡಿವೆ. ಅದು ಕೇವಲ ಭಾರತೀಯ ರಂಗಭೂಮಿಗೆ ಮಾತ್ರ ಸೀಮಿತವಾಗದೆ ಜಗತ್ತಿನ ವಿವಿಧ ದೇಶಗಳ ತಂಡಗಳು ಕೂಡ ಭಾರತಕ್ಕೆ ಬಂದಾಗ 'ರಂಗ ಶಂಕರ'ಕ್ಕೆ ಬಂದು ಪ್ರದರ್ಶನ ನೀಡದೇ ಇರಲಾರವು. ಇಂತಹ ಮಹತ್ವದ ಸಾಧನೆ ಮಾಡಿದ 'ರಂಗ ಶಂಕರ'ದ ಯಶಸ್ಸು ಅಪರೂಪದ್ದು.

ಕುವೆಂಪು ಪದ ಸೃಷ್ಟಿ

ಜಿ.ಕೃಷ್ಣಪ್ಪ

ಪ್ರೇತವೃಕ್ಷ

ಕುವೆಂಪು ಅವರು ಒಂಟಿಯಾಗಿ ದೂರದಲ್ಲಿ ಕಳೆಗುಂದಿದ, ಶೂನ್ಯ, ದೀರ್ಘ, ನಗ್ನ, ಆಡಂಬರ ರಹಿತ, ಬರಿದಾದ ಗಗನಕ್ಕೆದುರು ಮಸಿಯ ಚಿತ್ತಿನ ರೀತಿ ನಿಂತಿರುವ ಮರವನ್ನು 'ಪ್ರೇತವೃಕ್ಷ' ಎಂಬ ಪದದಿಂದ ಬಣ್ಣಿಸಿದ್ದಾರೆ.

ಆಳ್ಗೇಡಿ

ಆಳ್ಗೇಡಿ (ಗು). ನಿರ್ಜನವಾದ; ನಿರ್ಮಾನುಷವಾದ

ರಾವಣನು ಸೀತೆಯನ್ನು ಅಪಹರಿಸಿಕೊಂಡು ಹೋದನಂತರ ಅವಳನ್ನು ನಿರ್ಜನವಾದ ಕಾಡಿನಲ್ಲಿ ರಾಮಲಕ್ಷ್ಮಣರು ಹುಡುಕಿದರು. ಆ ಸಂದರ್ಭದ ಆ ನಿರ್ಮಾನುಷ ಅರಣ್ಯದಲ್ಲಿಯ ಚಿತ್ರಣವನ್ನು ನೀಡುವಾಗ ಕುವೆಂಪು ಅವರು 'ಆಳ್ಗೇಡಿ' ಎಂಬ ಪದವನ್ನು ಹೀಗೆ ಪ್ರಯೋಗಿಸಿದ್ದಾರೆ:

'ಇಳಿವಗಲ್
ಸುಡುವಿಸಿಲ್; ಆಳ್ಗೇಡಿ ಕಾಡೊಳಲೆದಿರ್ವರುಂ
ಕರೆಕರೆದು ಹುಡುಕಿದರು ಸೀತೆಯಂ.'

ಮತಿಗೌರವ

ಮತಿ (ನಾ). 1. ತಿಳಿಯುವಶಕ್ತಿ; ಜ್ಞಾನ; ತಿಳುವಳಿಕೆ
2. ಅಭಿಪ್ರಾಯ : ಆಶಯ
ಗೌರವ (ಗು). ಪ್ರಾಮುಖ್ಯತೆ; ಶ್ರೇಷ್ಠತೆ; ಘನತೆ

ನಮ್ಮಲ್ಲಿರುವ ಮತಿಯನ್ನು ಕುವೆಂಪು ಅವರು ಹೀಗೆ ಸರಳವೂ ಸ್ಪಷ್ಟವೂ ಆಗಿ ತಿಳಿಸಿದ್ದಾರೆ:

'ಈಶ್ವರನು ನಮ್ಮಲ್ಲಿಯೂ ಇದ್ದಾನೆ. ಆತನ ಮಹಾಜ್ಯೋತಿಯ ಕಿರಣಗಳು ನಮ್ಮ ಬುದ್ಧಿಯಲ್ಲಿಯೂ ಪ್ರಕಾಶಿಸುತ್ತವೆ. ಆ ಪ್ರಕಾಶವೇ ಮತಿ.' (ಸ.ಗ.2.ಪು.67) ಅದರ ಘನತೆಯನ್ನು 'ಗೌರವ' ಪದದೊಡನೆ ಸಮೀಕರಿಸಿ 'ಮತಿಗೌರವ' ಎಂಬ ಪದ ಸೃಷ್ಟಿಸಿದ್ದಾರೆ. ಆ 'ಮತಿಗೌರವ' ವಿದ್ಯಾರ್ಥಿಗಳ ಅವಿಭಾಜ್ಯ ಅಂಗವಾಗಿರಬೇಕೆಂದು ಹೀಗೆ ಸ್ಪಷ್ಟಪಡಿಸಿದ್ದಾರೆ: 'ಗುರಿಯ ಹಿರಿಮೆ, ಉದ್ದೇಶದ ಶ್ರೇಷ್ಠತೆ, ಪ್ರಯತ್ನದ ಪರಿಶುದ್ಧತೆ, ಸಾಧನದ ಸಾಹಸ, ಇಷ್ಟಸಿದ್ಧಿಗಾಗಿ ಮಾಡುವ ತ್ಯಾಗ ಮತ್ತು ಕೈಕೊಳ್ಳುವ ತಪಸ್ಸು, ಶ್ರೇಯಃಪೂರ್ಣವಾದ ಚಿರಕಾಲಿಕಕ್ಕಾಗಿ ರುಚಿಕರವಾದ ತಾತ್ಕಾಲಿಕವನ್ನು ವಿಸರ್ಜಿಸುವ ವಿಚಾರಶಕ್ತಿ ಮತ್ತು ವಜ್ರದೃಢತೆ ಇತ್ಯಾದಿ ಗುಣಗಳೆಲ್ಲ ಧ್ವನಿತವಾಗುವಂತೆ 'ಮತಿಗೌರವ' ಎಂಬ ಪದವನ್ನು ಪ್ರಯೋಗಿಸಿದ್ದೇನೆ.' (ಸ.ಗ.2.ಪು.89)

'ಉತ್ತಮ ಸಾಹಿತ್ಯ ನಮ್ಮನ್ನು ಎಷ್ಟು ಅಂತರ್ಮುಖಿಗಳನ್ನಾಗಿ ಮಾಡುತ್ತದೆಯೊ ಅಷ್ಟೆ ಬಹಿರ್ಮುಖಿಗಳನ್ನಾಗಿಯೂ ಮಾಡುತ್ತದೆ. ಅವುಗಳೆರಡರ ಸಮತೂಕ ಮತ್ತು ಸಮನ್ವಯದಿಂದಲೇ 'ಮತಿಗೌರವ' ಸಾಧ್ಯ.

2ನೇ ಸಂಪುಟ
ಇದೀಗ ಲಭ್ಯ
ಪ್ರಜಾವಾಣಿ ದೀಪಾವಳಿ ಕಥಾಸ್ಪರ್ಧೆಯಲ್ಲಿ ಬಹುಮಾನ ಪಡೆದ ಸಣ್ಣ ಕಥೆಗಳ ಸಂಕಲನ
ಹೊನ್ನ ಕಣಜ
ಪ್ರತಿಗಳಿಗಾಗಿ ಸಂಪರ್ಕಿಸಿ
ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೇಟ್ ಲಿಮಿಟೆಡ್
ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ, ಬೆಂಗಳೂರು - 560001
ದೂರವಾಣಿ : 080 22161900/ 901/913/914
Shop Online www.navakarnataka.com

'ಗುರುಗಳಿಗೆ ದೊರೆತ ಪ್ರಶಸ್ತಿಯೇ ಸಿಕ್ಕಿದ ಖುಷಿ'

ಉಮಾ ಅನಂತ್


ಜಿ.ಎಸ್. ರಾಮಾನುಜನ್

ಕರ್ನಾಟಕ ಶಾಸ್ತ್ರೀಯ ಸಂಗೀತ ಕಲಾವಿದರೇ ಸೇರಿ ಕಟ್ಟಿದ್ದು 'ಕರ್ನಾಟಕ ಗಾನಕಲಾ ಪರಿಷತ್' ಸಂಗೀತ ಸಂಸ್ಥೆ. ರಾಜ್ಯದ ದೊಡ್ಡ ಹಾಗೂ ಪ್ರತಿಷ್ಠಿತ ಸಂಗೀತ ಸಂಸ್ಥೆಯಾಗಿದ್ದು, ಪ್ರತಿ ವರ್ಷ ರಾಜ್ಯಮಟ್ಟದ ಸಂಗೀತ ಸಮ್ಮೇಳನ ಆಯೋಜಿಸಿ ನಾಡಿನ ಹೆಸರಾಂತ ಸಾಧಕರಿಗೆ ಗಾನಕಲಾಭೂಷಣ ಹಾಗೂ ಹಾಗೂ ಯುವ ಕಲಾವಿದರಿಗೆ ಗಾನಕಲಾಶ್ರೀ ಬಿರುದು ನೀಡಿ ಸನ್ಮಾನಿಸುತ್ತದೆ. ಈ ಬಾರಿ 53ನೇ ಸಮ್ಮೇಳನವಾಗಿದ್ದು, ಗಾನಕಲಾಭೂಷಣ ಪ್ರಶಸ್ತಿ ಮೈಸೂರಿನ ಮೃದಂಗ ವಾದಕ ಜಿ.ಎಸ್. ರಾಮಾನುಜನ್ ಅವರಿಗೆ ಒಲಿದಿದೆ. ಗಾನಕಲಾಶ್ರೀ ಬಿರುದು ಗಾಯಕ ಹಾಗೂ ಪಿಟೀಲು ವಾದಕ ಉದಯ ಕಿರಣ್ ಕೆ.ಟಿ. ಅವರಿಗೆ ಲಭಿಸಿದೆ. ಬೆಂಗಳೂರಿನ ಎನ್. ಆರ್. ಕಾಲೊನಿ ರಾಮಮಂದಿರದಲ್ಲಿ ಭಾನುವಾರ (ನ. 10) ಈ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ.

ಗಾನಕಲಾಭೂಷಣ ಬಿರುದಿಗೆ ಭಾಜನರಾಗುತ್ತಿರುವ ಮೈಸೂರಿನ ವಿದ್ವಾನ್ ರಾಮಾನುಜನ್ ಜಿ.ಎಸ್. ಅವರು ಸುದೀರ್ಘ ಸಂಗೀತ ಬದುಕಿನ ತಮ್ಮ ಅನುಭವವನ್ನು ಬಿಚ್ಚಿಟ್ಟರು.

ಸಂಗೀತದಲ್ಲಿ ಅದರಲ್ಲೂ ತಾಳವಾದ್ಯದಲ್ಲಿ ಸಾಧಿಸಲು ಅಪಾರ ಪರಿಶ್ರಮಪಟ್ಟೆ. ಚಿಕ್ಕ ವಯಸ್ಸಿನಿಂದಲೇ ಲಯವಾದ್ಯದ ಕಡೆ ಆಸಕ್ತಿ ಇರುವುದನ್ನು ಗಮನಿಸಿ ನನ್ನ ಪಾಲಕರು, ಅಕ್ಕಂದಿರು ನನ್ನನ್ನು ಮೃದಂಗದಲ್ಲಿ ತರಬೇತಿ ನೀಡಲಾರಂಭಿಸಿದರು. ಮೃದಂಗ ನುಡಿಸಬೇಕಾದರೆ ಸಂಗೀತದ ಜ್ಞಾನ ಬೇಕೇ ಬೇಕು. ಅಕ್ಕಂದಿರು ಹಾಡುತ್ತಿದ್ದರು. ನಾನು ಪಕ್ಕವಾದ್ಯ ನುಡಿಸುತ್ತಿದ್ದೆ. ಇದನ್ನೇ ಮುಂದುವರಿಸಿಕೊಂಡು ಹೋದೆ.

ಏಪ್ರಿಲ್ 24, 1958ರಂದು ಮೈಸೂರಿನಲ್ಲಿ ಪದ್ಮ ಹಾಗೂ ಜಿ.ವಿ. ಶ್ರೀನಿವಾಸ್ ಅಯ್ಯಂಗಾರ್ ಅವರ ಪುತ್ರನಾಗಿ ಜನಿಸಿ ಸಂಗೀತದಲ್ಲೇ ಬದುಕನ್ನು ಕಂಡುಕೊಂಡವನು ನಾನು. ಸಹೋದರಿಯರಾದ ಕಮಲಾ ಹಾಗೂ ರಾಜಲಕ್ಷ್ಮಿ ಇಬ್ಬರೂ ಗಾಯಕಿಯರು. ಏಳನೇ ವಯಸ್ಸಿನಲ್ಲಿ ಲಯಕಲಾ ನಿಪುಣ ಪಿ.ಜಿ. ಲಕ್ಷ್ಮೀನಾರಾಯಣ್ ಅವರಲ್ಲಿ ಮೃದಂಗ ಕಲಿಯಲಾರಂಭಿಸಿದೆ. ಮೃದಂಗದ ಜೊತೆಗೆ ಘನವಾದ್ಯ ಘಟಂ ಅನ್ನೂ ಕಲಿತೆ. ಎರಡೂ ಲಯವಾದ್ಯಗಳಲ್ಲಿ ನೈಪುಣ್ಯ ಮೆರೆದು ಅಪರೂಪದ ಕಲಾವಿದನಾಗಿ ರೂಪುಗೊಂಡೆ ಎಂಬುದನ್ನು ಸಂಗೀತಪ್ರಿಯರೇ ಹೇಳುತ್ತಿರುವುದು ನನಗೆ ಸಮಾಧಾನದ ಸಂಗತಿ.

ಗಾನಕಲಾಶ್ರೀ ಉದಯ ಕಿರಣ್ ಕೆ.ಟಿ.



ಇದೇ ಕಾರ್ಯಕ್ರಮದ ಯುವ ಸಂಗೀತ ಸಮ್ಮೇಳನದ ಅಧ್ಯಕ್ಷತೆ ಹಾಗೂ ಗಾನಕಲಾಶ್ರೀ ಬಿರುದು ವಿದ್ವಾನ್ ಉದಯ ಕಿರಣ್ ಕೆ.ಟಿ. ಅವರಿಗೆ ಈ ಬಾರಿ ಒಲಿದಿದೆ. ಮೈಸೂರಿನವರಾದ ಉದಯ ಕಿರಣ್ ಅವರು, ಮೈಸೂರು ವಿಶ್ವವಿದ್ಯಾಲಯದ ಲಲಿತ ಕಲಾ ಕಾಲೇಜಿನಲ್ಲಿ ಎಂ ಮ್ಯೂಸಿಕ್‌ನಲ್ಲಿ ಚಿನ್ನದ ಪದಕ ಪಡೆದವರು. ಕರ್ನಾಟಕ ಶಾಸ್ತ್ರೀಯ ಗಾಯನ ಹಾಗೂ ಪಿಟೀಲು ವಾದನ ಎರಡರಲ್ಲೂ ಉನ್ನತ ಸಾಧನೆ ಮಾಡಿರುವ ಇವರು. ಗಾಯನ, ಪಿಟೀಲು, ಪಾಶ್ಚಾತ್ಯ ಸಂಗೀತ, ಫ್ಯೂಷನ್ ಸಂಗೀತ, ಕೀಬೋರ್ಡ್ ನುಡಿಸಾಣಿಕೆಯಲ್ಲೂ ಪಳಗಿದವರು. ಆಕಾಶವಾಣಿ ದೂರದರ್ಶನ ಮಾತ್ರವಲ್ಲದೆ ನಾಡಿನಾದ್ಯಂತ, ದೇಶ ವಿದೇಶಗಳಲ್ಲಿ ಹಲವಾರು ಸಂಗೀತ ಕಛೇರಿ ನೀಡಿ ಸಂಗೀತಪ್ರಿಯರ ಮನತಣಿಸಿದವರು.

ಅನನ್ಯ ಯುವ ಪುರಸ್ಕಾರ, ಬೆಂಗಳೂರು ಗಾಯನ ಸಮಾಜದಿಂದ ಪ್ರಶಸ್ತಿ, ಸ್ವರಾಲಯ ರತ್ನ ಪ್ರಶಸ್ತಿ, ಮದ್ರಾಸ್ ಮ್ಯೂಸಿಕ್ ಅಕಾಡೆಮಿಯಿಂದ ಪ್ರಶಸ್ತಿ ಪಡೆದಿರುವ ಉದಯ್ ಅವರು ಇದೀಗ ಪ್ರತಿಷ್ಠಿತ ಗಾನಕಲಾಶ್ರೀ ಬಿರುದು ಮುಡಿಗೇರಿಸಿಕೊಂಡಿದ್ದಾರೆ.

ಕರ್ನಾಟಕ ಶಾಸ್ತ್ರೀಯ ಗಾಯನದಲ್ಲಿ ಪಕ್ಕವಾದ್ಯವಿರದೇ ಇದ್ದರೆ ಕಛೇರಿಯೇ ಅಪೂರ್ಣ. ನನ್ನ ನುಡಿಸಾಣಿಕೆಯನ್ನು ಗಮನಿಸಿದ ಅನೇಕ ದಿಗ್ಗಜರು ತಮ್ಮ ಕಛೇರಿಗೆ ಪಕ್ಕವಾದ್ಯ ಸಹಕಾರಕ್ಕೆ ಆಹ್ವಾನಿಸಿದ್ದರು. ನಾಡಿನ ಅನೇಕ ದಿಗ್ಗಜರಿಗೆ ಮೃದಂಗ ನುಡಿಸಿದ್ದು, ಬಾಲಮುರಳಿಕೃಷ್ಣ ಅವರ ಸಂಗೀತ ಕಛೇರಿಗಳಿಗೆ ಮೃದಂಗ ಸಹಕಾರ ನೀಡಿದ್ದು ಇಂದಿಗೂ ನನಗೆ ಸ್ಮರಣೀಯ ಕ್ಷಣ ಎನಿಸಿದೆ. ನುರಿತ ಗಾಯಕರಾದ ತಂಜಾವೂರು ಎಸ್.ಕಲ್ಯಾಣರಾಮನ್, ವಯೊಲಿನ್ ವಾದಕ ಲಾಲ್ಗುಡಿ ಜಯರಾಮನ್, ಕೊಳಲು ವಾದಕ ಎನ್.ರಮಣಿ, ಗಾಯಕಿಯರಾದ ಬಾಂಬೆ ಸಹೋದರಿಯರು ಮುಂತಾದವರಿಗೆ ಮೃದಂಗ ನುಡಿಸಿದರೆ, ಸಂಗೀತ ದಿಗ್ಗಜ ಶೆಮ್ಮಂಗುಡಿ ಅವರಿಗೆ ಘಟಂನಲ್ಲಿ ಸಹಕಾರ ನೀಡಿದ್ದೆ. ಕರ್ನಾಟಕ ಸಂಗೀತ ಕಲಾವಿದರಾದ ಆರ್.ಕೆ. ಶ್ರೀಕಂಠನ್, ಆರ್.ಕೆ. ಪದ್ಮನಾಭ, ಎಂ.ಎಸ್. ಶೀಲಾ, ಸತ್ಯವತಿ, ಸುಕನ್ಯಾ ಪ್ರಭಾಕರ್, ಶ್ರೀಲತಾ ಎಲ್ಲರಿಗೂ ಮೃದಂಗ ಸಹಕಾರ ನೀಡಲು ಅವಕಾಶ ದೊರೆತದ್ದು ನನ್ನ ಅದೃಷ್ಟ. ಫ್ರಾನ್ಸ್ ಮತ್ತು ಸ್ವಿಟ್ಜರ್ಲೆಂಡ್, ಯುರೋಪಿನಲ್ಲಿ ಕಛೇರಿ ನೀಡಿದ್ದು ಖುಷಿ ತಂದಿದೆ.

ಮನೋಧರ್ಮ ಸಂಗೀತದ ಬಗ್ಗೆ ಈ ಸಂದರ್ಭದಲ್ಲಿ ಹೇಳಲೇಬೇಕು. ಮೃದಂಗ ಕಲಾವಿದನ ಜವಾಬ್ದಾರಿ ಎಂದರೆ ಮುಖ್ಯ ಕಲಾವಿದರ ಮನೋಧರ್ಮ ಅರಿತು ನುಡಿಸಿಕೊಂಡು ಹೋಗುವುದು. ತನಿಯಾವರ್ತನದಲ್ಲಿ ಮೃದಂಗ ಕಲಾವಿದರ ಮನೋಧರ್ಮ ವ್ಯಕ್ತಪಡಿಸುವ ಅವಕಾಶ ಇದೆ. ಇಲ್ಲೂ ಸಹ ಕಲಾವಿದನ ಮುಖ್ಯ ಕೃತಿ ಏನಿದೆ, ಯಾವ ಲಯದಲ್ಲಿ ಹಾಡುತ್ತಿದ್ದಾರೆ ಎಂಬುದನ್ನು ಅರಿತು ಅದರಂತೆ ಮುಂದುವರಿಸಿಕೊಂಡು ಹೋಗುವ ಜವಾಬ್ದಾರಿ ಲಯ ಕಲಾವಿದರಿಗೆ ಇರಬೇಕು.

ಗಾನಕಲಾಭೂಷಣ ಬಿರುದಿನ ಭಾಜನರಾದದ್ದು ನನ್ನ ಸಂಗೀತ ಬದುಕಿನ ಮತ್ತೊಂದು ಅವಿಸ್ಮರಣೀಯ ಗಳಿಗೆ. ಏಕೆಂದರೆ 2002ರಲ್ಲಿ ನನ್ನ ಗುರುವಿಗೆ ಇದೇ ಪ್ರಶಸ್ತಿ ಒಲಿದಿತ್ತು. ಈಗ ಅದೇ ಬಿರುದು ನನ್ನ ಮಡಿಲಿಗೆ. ಒಬ್ಬ ಕಲಾವಿದನ ಜೀವನದಲ್ಲಿ ಇಂಥ ಪ್ರತಿಷ್ಠಿತ ಪ್ರಶಸ್ತಿಯನ್ನು ಸ್ವೀಕರಿಸುವುದು ಹೆಮ್ಮೆ, ಅಭಿಮಾನದ ಸಂಗತಿ.

ಮುನ್ನೋಟ 10-11-2024 ರಿಂದ 16-11-2024

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1
ನಿರೀಕ್ಷೆಯಷ್ಟು ಆದಾಯ ಇರುತ್ತದೆ. ಬಂಧುಗಳ ಜೊತೆ ವ್ಯವಹಾರ ಮಾಡಲು ಆಹ್ವಾನ ಬರಬಹುದು. ಹೊಸ ರೀತಿಯ ಕೃಷಿಗಳಲ್ಲಿ ಆಸಕ್ತಿ ತಾಳುವಿರಿ. ಅಧ್ಯಯನಶೀಲರಿಗೆ ಮತ್ತು ವಿದ್ಯಾರ್ಥಿಗಳಿಗೆ ಉತ್ತಮ ಫಲಿತಾಂಶ ಪಡೆಯುವ ಯೋಗವಿದೆ. ಜೀರ್ಣಕ್ರಿಯೆ ಸಂಬಂಧಿಸಿದ ಸಮಸ್ಯೆಗಳು ಕಾಣಿಸಬಹುದು. ನಿಮ್ಮ ಸಂಗಾತಿಯು ನಿಮಗೆ ಬೆಂಗಾವಲಾಗಿ ನಿಲ್ಲುವರು.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2
ನಿಮ್ಮ ಕೆಲವು ಕೆಲಸಗಳಿಗೆ ಸಮಾಜದಿಂದ ಹೆಚ್ಚು ಗೌರವ ದೊರೆಯುತ್ತದೆ. ಆದಾಯವು ನಿಮ್ಮ ನಿರೀಕ್ಷೆಯ ಹತ್ತಿರ ಬರಬಹುದು. ಧರ್ಮವಿದ್ಯೆಯನ್ನು ಕಲಿಯುತ್ತಿರುವವರಿಗೆ ಹೆಚ್ಚು ಅಭಿವೃದ್ಧಿ ಇರುತ್ತದೆ. ಪದೇ ಪದೇ ತಲೆ ನೋವು ಬರುತ್ತಿದ್ದಲ್ಲಿ ಚಿಕಿತ್ಸೆ ಪಡೆಯಿರಿ. ನಿಮ್ಮ ಸಂಗಾತಿ ವ್ಯವಹಾರಗಳಲ್ಲಿ ಹೆಚ್ಚು ಲಾಭವಿರುತ್ತದೆ. ಕೃಷಿಯಿಂದ ಆದಾಯ ಕಡಿಮೆಯಾಗಬಹುದು.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3
ನಿಮ್ಮ ನಿರ್ಧಾರಗಳಿಂದ ಆಗುವ ವ್ಯತ್ಯಾಸಗಳು ನಿಮ್ಮ ಆದಾಯದ ಮೇಲೆ ಪರಿಣಾಮ ಬೀರುತ್ತವೆ. ಆದಾಯವು ಸಾಮಾನ್ಯ ಗತಿಯಲ್ಲಿರುತ್ತದೆ. ನಿಮ್ಮ ಹಿರಿಯರು ನಿಮಗೆ ಸಾಕಷ್ಟು ಸಹಕಾರ ನೀಡುತ್ತಾರೆ. ಆಸ್ತಿ ವ್ಯವಹಾರಗಳಲ್ಲಿ ಸಲ್ಪ ಚೇತರಿಕೆಯನ್ನು ಕಾಣಬಹುದು. ಆಡಳಿತಾತ್ಮಕ ಪರೀಕ್ಷೆ ಬರೆಯುವವರಿಗೆ ಉತ್ತಮ ಯಶಸ್ಸು ಇರುತ್ತದೆ. ನರದೌರ್ಬಲ್ಯ ಇರುವವರು ಎಚ್ಚರ ವಹಿಸಿ.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ
ಆದಾಯವು ನಿರೀಕ್ಷಿತ ಮಟ್ಟದಲ್ಲಿರುತ್ತದೆ. ಸರ್ಕಾರದಿಂದ ಬರಬೇಕಾಗಿದ್ದ ಬಾಕಿ ಹಣ ಬರುತ್ತದೆ. ಬಂಧುಗಳ ಜೊತೆ ಮುಸುಕಿನ ಗುದ್ದಾಟವಿರುತ್ತದೆ. ಗಣಿತ ವಿದ್ಯಾರ್ಥಿಗಳಿಗೆ ಮತ್ತು ತೆರಿಗೆ ವಿಷಯ ಅಧ್ಯಯನ ಮಾಡುತ್ತಿರುವವರಿಗೆ ಸಾಕಷ್ಟು ಯಶಸ್ಸು ಇರುತ್ತದೆ. ಮೂತ್ರ ಸಂಬಂಧಿ ಕಾಯಿಲೆಗಳಿರುವವರು ಎಚ್ಚರ ವಹಿಸಿ. ಸಂಗಾತಿಯು ನಿಮ್ಮ ಮೇಲೆ ಕೋಪಗೊಂಡರು ಕೂಡ ನಂತರ ಸಮಾಧಾನಗೊಳ್ಳುವರು.

ಸಿಂಹ — ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1
ಗೌರವದ ಜೊತೆ ನಿಮ್ಮ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಲು ಪ್ರಯತ್ನಪಡುವಿರಿ. ಆದಾಯ ಕಡಿಮೆ ಇರುತ್ತದೆ. ಧಾರ್ಮಿಕ ಕೆಲಸಗಳನ್ನು ಮಾಡುವವರಿಗೆ ಆದಾಯ ಹೆಚ್ಚುತ್ತದೆ. ಸ್ಥಿರಾಸ್ತಿಯ ವ್ಯವಹಾರ ಮಾಡುವವರಿಗೆ ಲಾಭವಿರುತ್ತದೆ. ವಿದ್ಯಾರ್ಥಿಗಳಿಗೆ ಯಶಸ್ಸು ಸಿಗುತ್ತದೆ. ಮಹಿಳಾ ವ್ಯಾಪಾರಿಗಳಿಗೆ ಹೆಚ್ಚಿನ ಯಶಸ್ಸು ಇರುತ್ತದೆ. ಶೀತಬಾಧೆಯಿಂದ ಶ್ವಾಸಕೋಶದ ತೊಂದರೆ ಕಾಣಿಸಬಹುದು.

ಕನ್ಯಾ — ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2
ಧರ್ಮದ ಸೋಗಿನಲ್ಲಿ ನಿಮ್ಮ ಕೆಲಸ ಕಾರ್ಯಗಳನ್ನು ಮಾಡಿಕೊಳ್ಳುವಿರಿ. ಆದಾಯ ಉತ್ತಮಗೊಳ್ಳುತ್ತದೆ. ಸ್ತ್ರೀಯರು ಮಾಡುವ ವ್ಯವಹಾರಗಳಲ್ಲಿ ಲಾಭವಿರುತ್ತದೆ. ಸಂಸಾರದ ಸುಖಕ್ಕಾಗಿ ಸ್ವಲ್ಪ ಹಣ ಖರ್ಚು ಮಾಡುವಿರಿ. ಮಕ್ಕಳ ವಿದ್ಯಾಭ್ಯಾಸದಲ್ಲಿ ಅಲ್ಪ ಪ್ರಗತಿಯನ್ನು ಕಾಣಬಹುದು. ಶ್ವಾಸಕೋಶದ ತೊಂದರೆ ಇರುವವರು ಎಚ್ಚರ ವಹಿಸಿ. ಸಂಗಾತಿ ಮಾಡುವ ವ್ಯವಹಾರಗಳಿಂದ ಆದಾಯ ಬರುವ ಸಾಧ್ಯತೆ ಇದೆ.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖಾ 1,2,3
ಆತ್ಮವಿಶ್ವಾಸ ಅತಿಯಾಗಿರುತ್ತದೆ. ಆದಾಯವು ನಿಧಾನವಾಗಿ ಚೇತರಿಕೆ ಆಗುತ್ತದೆ. ಮಹಿಳೆಯರ ಜೊತೆ ಮಾಡಿದ ವ್ಯವಹಾರಗಳಲ್ಲಿ ಯಶಸ್ಸು ಇರುತ್ತದೆ. ಭೂಮಿ ವ್ಯವಹಾರಗಳಲ್ಲಿ ನಿರೀಕ್ಷಿತ ಲಾಭವಿರುವುದಿಲ್ಲ. ವಿದ್ಯಾರ್ಥಿಗಳಿಗೆ ಸಾಮಾನ್ಯ ಫಲಿತಾಂಶವಿರುತ್ತದೆ. ಕೆಲವರಿಗೆ ಚರ್ಮರೋಗಗಳು ಹಾಗೂ ಕೀಲುನೋವುಗಳು ಕಾಣಿಸಿಕೊಳ್ಳಬಹುದು. ನಿಮ್ಮ ಕೆಲಸಗಳಿಗೆ ಸಂಗಾತಿಯ ಸಹಕಾರ ದೊರೆಯುತ್ತದೆ.

ವೃಶ್ಚಿಕ — ವಿಶಾಖಾ 4 ಅನೂರಾಧ, ಜ್ಯೇಷ್ಠ
ಆದಾಯವು ನಿರೀಕ್ಷೆಯ ಹತ್ತಿರ ಬರುತ್ತದೆ. ನಿಮ್ಮ ಶತ್ರುಗಳನ್ನು ಪತ್ತೆ ಮಾಡಿ ಅವರನ್ನು ಹತ್ತಿಕ್ಕುವಿರಿ. ವಿದೇಶದಲ್ಲಿ ಓದುತ್ತಿರುವವರಿಗೆ ಹೆಚ್ಚಿನ ಅಭಿವೃದ್ಧಿ ಇರುತ್ತದೆ. ಬಂಧುಗಳ ಜೊತೆ ಮಾಡಿದ ವ್ಯವಹಾರಗಳಲ್ಲಿ ಅಭಿವೃದ್ಧಿ ಇರುವುದಿಲ್ಲ. ನಿಮ್ಮ ಸಂಗಾತಿಯಿಂದ ನಿಮ್ಮ ವ್ಯವಹಾರಗಳಿಗೆ ಧನ ಸಹಾಯ ಲಭಿಸುತ್ತದೆ. ಉದ್ಯೋಗದಲ್ಲಿ ಈಗ ಅಭಿವೃದ್ಧಿಯನ್ನು ಕಾಣಬಹುದು. ಧಾರ್ಮಿಕ ಮುಖಂಡರುಗಳಿಗೆ ಗೌರವ ದೊರೆಯುತ್ತದೆ.

ಧನುಸ್ಸು — ಮೂಲಾ, ಪೂರ್ವಾಷಾಢ, ಉತ್ತರಾಷಾಢ 1
ಮನಸಿಗೆ ಬಹಳ ಉಲ್ಲಾಸವಿರುತ್ತದೆ. ಆದಾಯವು ಕಡಿಮೆ ಇದ್ದರೂ ನಿರ್ವಹಣೆ ಮಾಡುವ ಅವಕಾಶವಿರುತ್ತದೆ. ಶತ್ರುಗಳನ್ನು ನಗುನಗುತ್ತಾ ಹದದಲ್ಲಿಡುವಿರಿ. ವಿದೇಶದಲ್ಲಿ ಆಸ್ತಿ ವ್ಯವಹಾರ ಮಾಡುವವರ ಲಾಭ ಹೆಚ್ಚುತ್ತದೆ. ಆಟೋಮೊಬೈಲ್ ಮಾರಾಟ ಮಾಡುತ್ತಿರುವವರಿಗೆ ಅಭಿವೃದ್ಧಿ ಇರುತ್ತದೆ. ಸಾಲ ಕೊಟ್ಟ ಹಣ ಈಗ ವಾಪಾಸ್ ಬರುವ ಸಾಧ್ಯತೆ ಇದೆ. ನಿಮ್ಮ ಸಂಗಾತಿ ಮಾಡುವ ವ್ಯವಹಾರಗಳಲ್ಲಿ ಆದಾಯ ಇರುವುದಿಲ್ಲ.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2
ಒತ್ತಡದಲ್ಲಿ ಕೆಲಸ ಮಾಡಿದರೂ ಅದರಲ್ಲಿ ಸಂತೋಷವನ್ನು ಕಾಣುವಿರಿ. ನಿಮ್ಮ ಆದಾಯವನ್ನು ವೃದ್ಧಿಸಿಕೊಳ್ಳುವತ್ತ ಗಮನಹರಿಸುವಿರಿ. ನಿಮ್ಮ ಬೆಳವಣಿಗೆಯನ್ನು ಬಂಧುಗಳು ವಿರೋಧಿಸುವರು. ನಿಮ್ಮ ಸಂಗಾತಿಯು ನಿಮ್ಮ ಕೆಲಸಕಾರ್ಯಗಳಿಗೆ ಬೆಂಬಲ ನೀಡುತ್ತಾರೆ. ಆಸ್ತಿ ವ್ಯವಹಾರಗಳನ್ನು ಮಾಡುವವರು ಹೆಚ್ಚು ಅಭಿವೃದ್ಧಿಯನ್ನು ಕಾಣುವರು. ವಿದ್ಯಾರ್ಥಿಗಳಿಗೆ ಹೆಚ್ಚಿನ ಯಶಸ್ಸು ಇರುತ್ತದೆ.

ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3
ಮನಸ್ಸಿನಲ್ಲಿ ದ್ವಂದ್ವಗಳಿದ್ದರೂ ಅದನ್ನು ಹೊರಗೆ ತೋರಿಸಿಕೊಳ್ಳುವುದು ಬೇಡ. ಮಾತಿನಲ್ಲಿ ಮೃದುತ್ವ ಇರಲಿ. ಕೆಲವು ಬಂಧುಗಳು ನಿಮ್ಮ ಕೆಲಸ ಕಾರ್ಯಗಳನ್ನು ತಡೆಯಲು ಪ್ರಯತ್ನಪಡುವರು. ಸಂಸಾರದಲ್ಲಿ ಸಂತೋಷವನ್ನು ಕಾಣುವಿರಿ. ರಿಯಲ್ ಎಸ್ಟೇಟ್ ಏಜೆಂಟರುಗಳಿಗೆ ಆದಾಯ ಹೆಚ್ಚುತ್ತದೆ. ತೆರಿಗೆ ತಜ್ಞರಿಗೆ ಬೇಡಿಕೆ ಹೆಚ್ಚುತ್ತದೆ. ಸಾಮಾನ್ಯ ವಿದ್ಯಾರ್ಥಿಗಳಿಗೆ ಮಧ್ಯಮ ಫಲಿತಾಂಶವಿರುತ್ತದೆ.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ
ಥಳುಕಿನ ಜೀವನವನ್ನು ರೂಢಿಸಿಕೊಳ್ಳಲು ಪ್ರಯತ್ನ ಪಡುವಿರಿ. ಆದಾಯವು ಮಧ್ಯಮ ಗತಿಯಲ್ಲಿರುತ್ತದೆ. ಕೆಲವೊಂದು ಕೆಲಸಗಳಿಗೆ ಹಿರಿಯರ ಸಹಕಾರ ಸಿಗುತ್ತದೆ. ವ್ಯಾಪಾರ ವ್ಯವಹಾರಗಳ ಬಗ್ಗೆ ಸಾಕಷ್ಟು ಚಿಂತನೆ ಮಾಡುವಿರಿ. ಕೃಷಿಯಿಂದ ಹೆಚ್ಚಿನ ಆದಾಯವನ್ನು ಪಡೆಯಬಹುದು. ವಿದ್ಯುತ್ ಕ್ಷೇತ್ರದಲ್ಲಿ ಕೆಲಸಮಾಡುತ್ತಿರುವವರಿಗೆ ಅಭಿವೃದ್ಧಿ ಇರುತ್ತದೆ. ಅತಿಯಾದ ತಲೆನೋವು ಕೆಲವರನ್ನು ಕಾಡಬಹುದು.

ಪದಬಂಧ 2865

ಮೇಲಿನಿಂದ ಕೆಳಕ್ಕೆ

1. ಹಬ್ಬಗಳಲ್ಲಿ ಸಂತೋಷದ ಜೊತೆ ಮೀಯುವ ಸಂಭ್ರಮ 4
2. ಎಂದೂ ಲೆಕ್ಕಕ್ಕೆ ಬಾರದ ಮಂದಿಯ ಆಂತರ್ಯ ಅನಿಸಿಕೆ 4
3. ಪುಣ್ಯ ಸಂಪಾದನೆಗಾಗಿ ನಾಲ್ಕು ಕ್ಷೇತ್ರಗಳ ಯಾತ್ರೆ 4
4. ಶಿರಡಿಯಲ್ಲಿ ನೆಲಸಿರುವ ನಿಜದ ಮೂರ್ತಿ 4
7. ಕಾಲಕ್ಕನುಗುಣವಾಗಿ ಮಿದುಳಲ್ಲಿ ಹೊಳೆಯುವ ಸೆಳೆ 5
8. ಲಲಿತಕಲೆಗಳ ಪ್ರದರ್ಶನಕ್ಕೆ ಮೀಸಲಾದ ರಂಗ ಮಂದಿರ 5
9. ಮಂದಿಯ ಮಧ್ಯೆ ತಂದಿಟ್ಟು ಗೃಹವನ್ನು ಬಗೆಯುವವ 5
10. ಸದಾ ಮನಸ್ಸಿಗೆ ಆಹ್ಲಾದ ತರುವ ನೆನಪು 5
15. ಬಯಕೆಗೆ ತಕ್ಕಂತೆ ಆಕಾರ ಪಡೆವ ಅಸ್ಸಾಂ ಜಿಲ್ಲೆ 4
16. ಇಗೋ ಬಂತು ಪಟಾಕಿಗಳ ಹಾವಳಿ ಅಂದ್ರಾ.... ಇಲ್ಲ ಇದು ಬೆಳಕಿನ ದಿವಾಳಿ 4
18. ನಷ್ಟ ಮಾಡದ ಹಸ್ತ 4
19. ಭೂಮಿಯಲ್ಲಿ ತೀರಾ ತಳಕ್ಕಿರುವ ನೀರು 4

ಎಡದಿಂದ ಬಲಕ್ಕೆ

1. ಹಾವಿನರಸ 4
3. ಯತಿಗಳ ವ್ರತಾಚರಣೆಯ ನಾಲ್ಕು ತಿಂಗಳು 4
5. ದೀಪಾವಳಿಯ ಚತುರ್ದಶಿಯಂದು ಮೂಡುವ ಸ್ವರ್ಗದ ವ್ಯತಿರಿಕ್ತ ಲೋಕದ ರಕ್ಕಸ 5
6. ರಾಮನವಮಿಯಂದು ತಂಪಾಗಿಸುವ ರುಚಿಯಾದ ದ್ರವ 5
9. ಅಂತಃಕರಣದ ಅಕ್ಕರೆಯ ವಾತ್ಸಲ್ಯಮಯ ತಾಯಿ 5
11. ಪಾಲನೆಯ ಜೊತೆ ಹಾಡಿ ತೂಗಿ ಬೆಳಸುವಿಕೆ 3
12. ಹಿಂದುಮುಂದಾದ ಗುರು ರಾಘವೇಂದ್ರರ ಕ್ಷೇತ್ರ 4
13. ಮನಸ್ಸಿಗೇನೋ ಇರುವ ಇರುಸುಮುರುಸು 4
14. ಕೊಂಬಿನಿಂದ ಗುದ್ದುವ ಪ್ರಾಣಿ 3
15. ದೀಪಾವಳಿಯ ತಿಂಗಳಲ್ಲಿ ಹಚ್ಚುವ ಹಣತೆ 5
17. ನೃತ್ಯ, ಸಂಗೀತ, ನಾಟಕ, ಲಲಿತಕಲೆ ಇತ್ಯಾದಿಗಳನ್ನು ಮನಸ್ಸಿನಿಂದ ಮೆಚ್ಚುವ ಶ್ರೀಮಂತಿಕೆ 5
20. ಮಹಿಳಯರೇ ವಿಹರಿಸುವ ಪ್ರಪಂಚ 5
21. ಪದಬಂಧದ ಚೌಕಗಳಲ್ಲಿ ಶಬ್ಧ ವಿನ್ಯಾಸದ ಆವರಣ 4
22. ದಸರಾ ದೀಪಾವಳಿಗಳಲ್ಲಿ ಶಾಲಾ, ಕಾಲೇಜುಗಳಿಗೆ ಸಿಗುವ ಬಿಡುವಿನ ಸಮಯ 4

ಪದಬಂಧ ಉತ್ತರ -2864

ಮೇಲಿಂದ ಕೆಳಕ್ಕೆ

1.ತೇನವಿನಾ 2.ಮಡಿವಂತಿಕೆ 3.ಮನಕಲಕು 4.ಉರಿಕೋಪ 8.ಕುರುಕುತಿಂಡಿ 10.ದೀನದಲಿತ 11.ಕಂಪನ 13.ದವಳ 14.ಹರಿತ 17.ಕರುಳದನಿ 18.ಸಕಲಗ್ರಹ 19.ಮಂತ್ರಕಾರ 21.ನವ್ಯಕಾವ್ಯ

ಎಡದಿಂದ ಬಲಕ್ಕೆ

2. ಮಧ್ಯಮ 3.ಗಾನಗಾರುಡಿ .ನಯಗಾರಿಕೆ 7.ನಾಕುತಂತಿ 9.ಲಕ್ಷದೀಪ 12.ಕೆದಕು 15.ಪರಾಕು 16.ದಳ್ಳುರಿ 17.ಕಳಸ 19.ಮಂಡಿಯೂರು 20.ಕಳ್ಳತನ 22.ಓಂಕಾರನಾದ 23.ಗ್ರಹಣಕಾಲ 24.ನಿಗ್ರಹ

ಕನ್ನಡ ಸಾಹಿತ್ಯ ಕೃತಿಗಳ ಪರಕಾಯ ಪ್ರವೇಶ

ನಟರಾಜ್ ಹುಳಿಯಾರ್

ಕೇಂದ್ರ ಸಾಹಿತ್ಯ ಅಕಾಡೆಮಿ 1986ರಲ್ಲಿ ಕುವೆಂಪು ಹೆಸರನ್ನು ನೊಬೆಲ್ ಪ್ರಶಸ್ತಿಗೆ ಶಿಫಾರಸು ಮಾಡಿದಾಗ ಕುವೆಂಪು ಕೃತಿಗಳು ಇಂಗ್ಲಿಷ್‌ಗೆ ಅನುವಾದವಾಗಿರಲಿಲ್ಲ. ಪ್ರಭುಶಂಕರ್ 'ಮಲೆಗಳಲ್ಲಿ ಮದುಮಗಳು'ವಿನ ಕೆಲವು ಅಧ್ಯಾಯಗಳನ್ನು ಅನುವಾದಿಸಿದರು. ಅದರಿಂದ ವಿಶೇಷ ಪರಿಣಾಮವಾಗಲಿಲ್ಲ. ಹತ್ತು ವರ್ಷಗಳ ಕೆಳಗೆ ಕೆ.ಎಂ.ಶ್ರೀನಿವಾಸಗೌಡ ಈ ಕಾದಂಬರಿಯನ್ನು ಇಂಗ್ಲಿಷ್‌ಗೆ ಅನುವಾದಿಸಿದರು. ಅದು ಪ್ರಕಟವಾಗಲಿಲ್ಲ. ಈಚೆಗೆ ವನಮಾಲ ವಿಶ್ವನಾಥ್ ಅನುವಾದಿಸಿದ 'ಬ್ರೈಡ್ ಇನ್ ದ ಹಿಲ್ಸ್' ಪ್ರಕಟವಾಗಿದೆ.



ಕನ್ನಡ ಕೃತಿಗಳು ಇಂಗ್ಲಿಷ್‌ಗೆ, ಭಾರತೀಯ ಭಾಷೆಗಳಿಗೆ ಅನುವಾದವಾಗುತ್ತಿಲ್ಲ ಎನ್ನುವ ಕೊರಗು ಹಿಂದಿನಿಂದಲೂ ಇದೆ. ಇದಕ್ಕೆ ಹಲವು ಕಾರಣಗಳನ್ನು ಲೇಖಕರು ಇಲ್ಲಿ ಗುರುತಿಸಿದ್ದು, ಈ ಕುರಿತು ವಿವಿಧ ಆಯಾಮಗಳಲ್ಲಿ ಚರ್ಚಿಸಿದ್ದಾರೆ.

ಕುವೆಂಪುವನ್ನು ಇಂಗ್ಲಿಷ್ ಜಗತ್ತು ಹೇಗೆ ಸ್ವೀಕರಿಸಲಿದೆ ಎಂಬ ಕುತೂಹಲದ ಜೊತೆಗೆ, ಮದುಮಗಳ ಇಂಗ್ಲಿಷ್ ಪಯಣ ತೀರಾ ತಡವಾಯಿತೇನೋ ಎಂಬ ವಿಷಾದವೂ ಮುತ್ತುತ್ತದೆ.

ಕನ್ನಡ ಕೃತಿಗಳು ಇಂಗ್ಲಿಷ್‌ಗೆ, ಇತರ ಭಾರತೀಯ ಭಾಷೆಗಳಿಗೆ ಅನುವಾದವಾಗುತ್ತಿಲ್ಲ ಎಂಬ ಕೊರಗು ಹಳೆಯದು. ಇದಕ್ಕೆ ಹಲವು ಕಾರಣಗಳಿವೆ: ತಮ್ಮ ಬರಹಗಳು ಇಂಗ್ಲಿಷ್‌ಗೆ ಅನುವಾದವಾಗಬೇಕೆಂಬ ಉತ್ಸಾಹ ಬಹುತೇಕ ಕನ್ನಡ ಲೇಖಕ, ಲೇಖಕಿಯರಿಗಿಲ್ಲ. ತಮ್ಮ ಕೃತಿಗಳು ಕನ್ನಡ ಜಗತ್ತಿನಲ್ಲೇ ಅರಳಿ ಬೆಳೆಯುವ ಸಾರ್ಥಕತೆ, ಅರ್ಥಪೂರ್ಣತೆಯ ಬಗ್ಗೆ, ಕನ್ನಡ ಓದುಗವಲಯದ ವ್ಯಾಪ್ತಿಯ ಬಗ್ಗೆ ಕನ್ನಡ ಬರಹಗಾರರಿಗಿರುವ ಆತ್ಮವಿಶ್ವಾಸ ನಿಜಕ್ಕೂ ಸುಂದರ. ಆದರೆ ವಿಚಾರ ಸಂಕಿರಣ, ಸಾಹಿತ್ಯೋತ್ಸವ ಇತ್ಯಾದಿಗಳಿಗಾಗಿ ದೇಶವಿದೇಶ ಸುತ್ತುವ ಲೇಖಕರಿಗೆ ತಮ್ಮ ಬರಹಗಳು ಇಂಗ್ಲಿಷ್‌ಗೆ ಹೋಗಬೇಕೆಂಬ ಮಹತ್ವಾಕಾಂಕ್ಷೆಯಿದ್ದರೆ, ಅದು ಕೂಡ ಸಹಜವೇ.

ತಂತಮ್ಮ ಕೃತಿಗಳ ಬಗ್ಗೆ ಉತ್ಸಾಹ; ತಾವು ಜಗತ್ತಿನ ದೊಡ್ಡ ಲೇಖಕರಿಗಿಂತ ಕಡಿಮೆಯೇನಲ್ಲ ಎಂಬ ಆತ್ಮವಿಶ್ವಾಸ, ಜಾಗತಿಕ ಸ್ಪರ್ಧೆಯ ಕಾತರ, ಖ್ಯಾತಿಯ ಬಯಕೆ, ಹೆಚ್ಚಿನ ಸಂಭಾವನೆ... ಇವುಗಳಿಂದಲೂ ಲೇಖಕರಲ್ಲಿ ಇಂಗ್ಲಿಷ್ ಅನುವಾದದ ಸೆಳೆತ ಹುಟ್ಟುತ್ತದೆ. ಅನಂತಮೂರ್ತಿಯವರ 'ಸಂಸ್ಕಾರ'ವನ್ನು ಶಿಕಾಗೋದಲ್ಲಿದ್ದ ಎ.ಕೆ.ರಾಮಾನುಜನ್ ಇಂಗ್ಲಿಷ್‌ಗೆ ಅನುವಾದಿಸಿದರು. ಇಂಗ್ಲಿಷ್ ಪರಿಸರದಲ್ಲಿದ್ದು, ಇಂಗ್ಲಿಷನ್ನು ಸೃಜನಶೀಲವಾಗಿ ಬಳಸಬಲ್ಲವರಾಗಿದ್ದ ರಾಮಾನುಜನ್ 'ಸಂಸ್ಕಾರ'ಕ್ಕಿಂತಲೂ ಮಹತ್ವದ ಆಧುನಿಕ ಕೃತಿಗಳನ್ನು ಅನುವಾದಿಸಲಿಲ್ಲ. ಆದರೆ ವಚನಗಳನ್ನು ವಿಶ್ವಮಟ್ಟಕ್ಕೆ ಒಯ್ದರು. ಕನ್ನಡದ ಪರಿಪೂರ್ಣ ನವ್ಯ ಕಾದಂಬರಿಯಾದ 'ಮುಕ್ತಿ'ಯನ್ನು ಬರೆದ ಇಂಗ್ಲಿಷ್ ಪ್ರೊಫೆಸರ್ ಶಾಂತಿನಾಥ ದೇಸಾಯಿ ಅನಂತಮೂರ್ತಿಯವರ 'ಅವಸ್ಥೆ'ಯನ್ನು ಇಂಗ್ಲಿಷ್‌ಗೆ ತಂದರು; 'ಮುಕ್ತಿ'ಯನ್ನು ಅನುವಾದಿಸಲಿಲ್ಲ.

ಗಿರೀಶ ಕಾರ್ನಾಡ ತಮ್ಮ ನಾಟಕಗಳನ್ನು ತಾವೇ ಇಂಗ್ಲಿಷ್‌ಗೆ ಅನುವಾದ ಮಾಡುತ್ತಿದ್ದರು; ಇಂಗ್ಲಿಷ್‌ನಲ್ಲಿ ಮರುಬರವಣಿಗೆ ಮಾಡುತ್ತಿದ್ದರು. ಕಾರ್ನಾಡ ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್ ಪ್ರಕಾಶನದಲ್ಲಿ ಕೆಲಸದಲ್ಲಿದ್ದಾಗ ಅವರ ನಾಟಕಗಳು ಅಲ್ಲೇ ಪ್ರಕಟವಾದವು. ಅನಂತಮೂರ್ತಿ ತಮ್ಮ ಕೃತಿಗಳು ಅನುವಾದವಾಗುವಂತೆ ನೋಡಿಕೊಂಡರು. ಸ್ವೀಡನ್ನಿನ ನೊಬೆಲ್ ಹಂಬಲದಿಂದ ಸ್ವೀಡಿಶ್ ಭಾಷೆಗೂ ಅವರ 'ಸಂಸ್ಕಾರ' ಅನುವಾದವಾಯಿತು. ಅನಂತಮೂರ್ತಿ, ಕಾರ್ನಾಡರಿಗೆ ಜಾಗತಿಕ ಪ್ರಶಸ್ತಿಗಳ ಮಹ ತ್ವಾಕಾಂಕ್ಷೆಯಿದ್ದುದರಿಂದ ಅವರು ಅನುವಾದಗಳ ಗುಣಮಟ್ಟದ ಬಗೆಗೆ ಗಮನ ಕೊಡುತ್ತಿದ್ದರು. ಅನಂತಮೂರ್ತಿ ಮ್ಯಾನ್‌ಬುಕರ್ ಪ್ರಶಸ್ತಿಗೂ ಶಾರ್ಟ್ ಲಿಸ್ಟ್ ಆಗಿದ್ದರು.



ಇಷ್ಟೆಲ್ಲ ಉತ್ಸಾಹ, ತಾಳ್ಮೆ, ಖ್ಯಾತಿಯ ತಹತಹ ಲಂಕೇಶ್, ತೇಜಸ್ವಿಯವರಿಗೆ ಇದ್ದಂತಿರಲಿಲ್ಲ. ಮುಂದೆ ಅವರ ಕೆಲವು ಕೃತಿಗಳು ಇಂಗ್ಲಿಷ್‌ಗೆ ಅನುವಾದವಾದವು. ಎಂಬತ್ತರ ದಶಕದಲ್ಲಿ ಬಂದ ದೇವನೂರರ 'ಕುಸುಮಬಾಲೆ'ಯ ಇಂಗ್ಲಿಷ್ ಅನುವಾದದ ಪ್ರಯತ್ನ ಶುರುವಾಗಿ ನಿಂತುಹೋಯಿತು. ಸೂಸನ್ ಡೇನಿಯಲ್ ಅನುವಾದ 2015ರಲ್ಲಿ ಬಂತು. ಸಿದ್ಧಲಿಂಗಯ್ಯನವರ ಬೆಂಕಿಕವಿತೆಗಳು ಎಪ್ಪತ್ತರ ದಶಕದಲ್ಲೇ ದಕ್ಷವಾಗಿ ಅನುವಾದಗೊಂಡಿದ್ದರೆ, ಅವು ದೇಶದ ಇತರ ಭಾಷೆಗಳ ದಲಿತ ಕಾವ್ಯದ ಮೇಲೆ ಪ್ರಭಾವ ಬೀರುವ ಸಾಧ್ಯತೆಯಿತ್ತು; ಅಥವಾ ಈಚೆಗೆ ನೊಬೆಲ್ ಪಡೆದ ಆಫ್ರೋ-ಅಮೆರಿಕನ್ ಗೀತರಚನಕಾರ ಬಾಬ್ ಡಿಲನ್ ಥರ ವಿಶ್ವದ ಗಮನ ಸೆಳೆಯುವ ಸಾಧ್ಯತೆಯೂ ಇತ್ತು.

ಆದ್ದರಿಂದಲೇ ಸಾಹಿತ್ಯ ಕೃತಿಗಳ ಅನುವಾದದಲ್ಲಿ 'ಟೈಮಿಂಗ್' ಕೂಡ ಮುಖ್ಯ. ಲ್ಯಾಟಿನ್ ಅಮೆರಿಕದ ಮಾರ್ಕ್ವೆಜ್ ಕೃತಿಗಳು ಇಂಗ್ಲಿಷ್‌ಗೆ ಬರುವ ಮೊದಲೇ ಅದೇ ಭೂಭಾಗದ ಇಸಬೆಲ್ಲಾ ಅಯಂಡೆಯ ಅನುವಾದಗಳು ಬಂದಿದ್ದರೆ ಅವಳ ಕೃತಿಗಳೇ ಮಾಂತ್ರಿಕ ವಾಸ್ತವತಾವಾದದ ಮುಂಚೂಣಿ ಕೃತಿಗಳಾಗಿರುತ್ತಿದ್ದವೇನೋ! ಮಾಂತ್ರಿಕ ವಾಸ್ತವತಾವಾದಿ ಮಾರ್ಗದ ಅಲೆಯೆದ್ದಿದ್ದ ಎಂಬತ್ತರ ದಶಕದಲ್ಲೇ 'ಕುಸುಮಬಾಲೆ' ಇಂಗ್ಲಿಷ್‌ಗೆ ಬಂದಿದ್ದರೆ ಅದು ಕನ್ನಡದಾಚೆಯ ಲೋಕದ ವಿಸ್ತೃತ ಗಮನ ಸೆಳೆಯಬಹುದಿತ್ತೋ ಏನೋ!

ಸಮಸ್ಯೆಯೆಂದರೆ, ಉತ್ತಮ ಕೃತಿ ಬರೆಯುವವರೆಲ್ಲರೂ ದಕ್ಷ ಅನುವಾದಕರನ್ನೂ ಹುಡುಕಿಕೊಳ್ಳುವುದು ಕಷ್ಟ. ಕನ್ನಡದ ಶ್ರೇಷ್ಠ ಕೃತಿಗಳನ್ನಾದರೂ ಇಂಗ್ಲಿಷ್‌ಗೆ ಅನುವಾದಿಸಲು ಸರ್ಕಾರ, ಸಾಂಸ್ಕೃತಿಕ ಸಂಸ್ಥೆಗಳು ಮುಂದಾಗಬೇಕಾಗುತ್ತದೆ. ಕನ್ನಡ-ಇಂಗ್ಲಿಷ್ ಭಾಷೆಗಳೆರಡನ್ನೂ ಬಲ್ಲ ಪ್ರೊಫೆಶನಲ್ ಅನುವಾದಕರಿಗೆ ಇನ್ನೂರು ಪುಟಗಳ ಕಾದಂಬರಿಯ ಅನುವಾದಕ್ಕೆ ಕೊನೆಯ ಪಕ್ಷ ಒಂದೆರಡು ಲಕ್ಷ ರೂಪಾಯಿ ಸಂಭಾವನೆ ಅಥವಾ ಫೆಲೋಶಿಪ್, ಹಾಗೂ ಕಾಪಿ ಎಡಿಟರುಗಳಿಗೂ ಅಷ್ಟೇ ಸಂಭಾವನೆ ಕೊಡಬೇಕಾಗುತ್ತದೆ. ಸಂಸ್ಥೆಗಳು, ಸಾಹಿತ್ಯಾಸಕ್ತ ಸಿರಿವಂತರು, ಲೇಖಕರು ಬಿಟ್ಟು ಹೋಗಿರಬಹುದಾದ ಆಸ್ತಿ, ಹಣವನ್ನು ಅನುಭವಿಸುತ್ತಿರುವ ವಾರಸುದಾರರೂ ಇದಕ್ಕೆ ಸಿದ್ಧರಿರಬೇಕಾಗುತ್ತದೆ.



ಕನ್ನಡದಿಂದ ಇಂಗ್ಲಿಷ್‌ಗೆ ದಕ್ಷವಾಗಿ ಅನುವಾದಿಸುವವರಿಗೆ ತಕ್ಕ ಸಂಭಾವನೆ ಕೊಡುವ ಸಂಸ್ಥೆಗಳೇ ಕರ್ನಾಟಕದಲ್ಲಿಲ್ಲ. ಮಾರ್ಕ್ವೆಜ್, ಮಿಲನ್ ಕುಂದೇರ ಥರದವರ ಕೃತಿಗಳ ಅನುವಾದಗಳನ್ನೇ ಪೂರ್ಣಾವಧಿ ವೃತ್ತಿಯನ್ನಾಗಿಸಿಕೊಂಡವರಿದ್ದಾರೆ. ಇಂಥ ಅವಕಾಶ ಕನ್ನಡದಲ್ಲಿಲ್ಲ. ಭಾಷಾಂತರವಾದ ಕೃತಿಗಳನ್ನು ಪ್ರಕಟಿಸುವಲ್ಲಿ ಏಜೆಂಟರು, ಪ್ರಕಾಶಕರ ಲೋಕ ಹಾಗೂ ಪ್ರಕಟಣೆಯ ಸರತಿಸಾಲಿನ ಕಷ್ಟಗಳೂ ಇವೆ. ಇಷ್ಟೆಲ್ಲ ಆಗಿ ಭಾರತದುದ್ದಕ್ಕೂ, ಭಾರತದಾಚೆಗೂ ಅವು ಗಮನ ಸೆಳೆದು, ಮಾರಾಟವಾಗುವ ಹಾದಿ ಸವಾಲಿನದೇ! ಅನಂತಮೂರ್ತಿ, ಕಾರ್ನಾಡ ಭಾರತದೆಲ್ಲೆಡೆ ಅಡ್ಡಾಡುತ್ತಿದ್ದುದರಿಂದ ಅವರ ಕೃತಿಗಳು ವಿವಿಧ ವಿಶ್ವವಿದ್ಯಾಲಯಗಳಲ್ಲಿ ಪಠ್ಯಗಳಾದವು. ಇಂಗ್ಲಿಷ್ ಲೋಕದ ಅಡ್ಡಾಟ, ಒಡನಾಟ, ಸೆಲ್ಫ್ ಪ್ರಮೋಶನ್, ಪ್ರಚಾರ ಇವೆಲ್ಲವೂ ಇಂಥ ಲೇಖಕರಿಗೆ ನೆರವಾಗಿವೆ. ಡಿ.ಆರ್. ನಾಗರಾಜರ ದಲಿತ್ ಥಿಯರಿಯ 'ದ ಫ್ಲೇಮಿಂಗ್ ಫೀಟ್' ಪುಸ್ತಕ ಹಾಗೂ ಅಖಿಲ ಭಾರತೀಯ ಸೆಮಿನಾರುಗಳಲ್ಲಿ ಅವರು ಇಂಗ್ಲಿಷಿನಲ್ಲಿ ಮಂಡಿಸುತ್ತಿದ್ದ ಚಿಂತನೆಗಳು ಅವರನ್ನು ಭಾರತದ ಮುಖ್ಯ ಚಿಂತಕರ ಸಾಲಿನಲ್ಲಿಟ್ಟವು. ಶಿವಪ್ರಕಾಶರ ಕಾವ್ಯ ಕೂಡ ದೇಶದ ಕಾವ್ಯವಲಯಕ್ಕೆ ಪರಿಚಿತವಾಗಿದೆ.

ಈ ನಡುವೆ ಅಪ್ಪಟ ಕನ್ನಡ ಕೃತಿಗಳು ಇಂಗ್ಲಿಷ್ ಅನುವಾದಕ್ಕೆ ಒಗ್ಗದಿರುವ ಕಷ್ಟಗಳೂ ಇವೆ. ರಾವಬಹದ್ದೂರರ 'ಗ್ರಾಮಾಯಣ' ಅಥವಾ ಕಂಬಾರರ ನಾಟಕಗಳ ದೇಶಿ ಒಗರು ಇಂಗ್ಲಿಷಿನಲ್ಲಿ ಮೂಡುವುದು ಕಷ್ಟ. ಭಾಷಿಕ ಕ್ರಿಯೆ, ಶಾಬ್ದಿಕ ಕ್ರಿಯೆ ಆಗಿರುವ ಕಾವ್ಯ ಇನ್ನೊಂದು ಭಾಷೆಗೆ ಪರಕಾಯ ಪ್ರವೇಶ ಮಾಡುವುದು ಕಷ್ಟ. 'ಕನ್ನಡವು ಕನ್ನಡವ ಕನ್ನಡಿಸುತಿರಬೇಕು' ಎಂದು ಭಾಷೆಯ ಅನಂತ ಸಾಧ್ಯತೆಗಳನ್ನು ನುಡಿಸಲೆತ್ನಿಸಿದ ಬೇಂದ್ರೆ ಕಾವ್ಯದ ಸಮೃದ್ಧಿ ಇಂಗ್ಲಿಷಿನಲ್ಲಿ ಸೋರಗಬಲ್ಲದು. ಬೇಂದ್ರೆಯೇ ತಮ್ಮ ನುಡಿಯಾಟಕ್ಕೆ ಮಿಡಿಯಬಲ್ಲ ಇಂಗ್ಲಿಷ್ ಕವಿಯ ಜೊತೆಗೆ ಕೂತು ಅನುವಾದಿಸಿದ್ದರೆ ಅಷ್ಟಿಷ್ಟು ಒಳ್ಳೆಯ ಅನುವಾದಗಳು ಬರುತ್ತಿದ್ದವೇನೋ! ಗೋಕಾಕರಿಂದ ಹಿಡಿದು ಈಚಿನ ಮಾಧವ ಅಜ್ಜಂಪುರವರೆಗೂ ಬೇಂದ್ರೆ ಕಾವ್ಯ ಅನುವಾದಕರಿಗೆ ಸವಾಲೆಸೆಯುತ್ತಲೇ ಇದೆ!

ಇಷ್ಟಾದರೂ ಕನ್ನಡ ಸಂಸ್ಕೃತಿ ಇಂಗ್ಲಿಷ್ ಅನುವಾದದ ಸವಾಲನ್ನು ಬಿಟ್ಟುಕೊಡಲಾಗದು. ವೃತ್ತಿಪರ ಸೃಜನಶೀಲ ಅನುವಾದಕರು ಶ್ರೇಷ್ಠ ಕನ್ನಡ ಕೃತಿಗಳ ಅನುವಾದವನ್ನು ಕೈಗೆತ್ತಿಕೊಳ್ಳಲು ಆರ್ಥಿಕ ಬೆಂಬಲ ನೀಡಬಲ್ಲ ಸಂಸ್ಥೆಗಳ ಅಗತ್ಯ ಈಗ ಹೆಚ್ಚು ಇದೆ. ಪ್ರಾಚೀನ ಕೃತಿಗಳ ಅನುವಾದದಲ್ಲಿ ತೊಡಗಿರುವ ಮೂರ್ತಿ ಕ್ಲಾಸಿಕ್ಸ್ ಥರದ ಸಂಸ್ಥೆಗಳು, ಕುವೆಂಪು ಭಾಷಾಭಾರತಿ ಪ್ರಾಧಿಕಾರ, ಕನ್ನಡ ಸಾಹಿತ್ಯ ಪರಿಷತ್ತು, ಇನ್ನಿತರ ಖಾಸಗಿ ಸಂಸ್ಥೆಗಳು ದೊಡ್ಡ ಮೊತ್ತದ ಸಂಭಾವನೆಯ ಮೂಲಕ ವೃತ್ತಿ ಅನುವಾದಕರನ್ನು ಸೆಳೆಯುವ, ರೂಪಿಸುವ ಕೆಲಸ ಮಾಡಬೇಕು. ಕನ್ನಡ ನೆಲದಲ್ಲಿ ವಿಕಾಸಗೊಂಡ ವೈಚಾರಿಕ ಚಿಂತನೆಗಳು, ಕನ್ನಡ ಕ್ಲಾಸಿಕ್ಸ್, ಕನ್ನಡ ಸ್ತ್ರೀವಾದ, ದಲಿತ ಸಾಹಿತ್ಯ, ಬಂಡಾಯ ಸಾಹಿತ್ಯ ಮಾರ್ಗಗಳ ವಿಶಿಷ್ಟ ಕೃತಿಗಳನ್ನು ಇಂಗ್ಲಿಷ್‌ಗೆ ಅನುವಾದಿಸುವ ಪ್ರೊಫೆಶನಲ್ ವಾತಾವರಣ ಸೃಷ್ಟಿಯಾಗಬೇಕು. ಇದಾಗದಿದ್ದರೆ, ಕನ್ನಡ ಕೃತಿಗಳ ಇಂಗ್ಲಿಷ್ ಅನುವಾದ ವ್ಯಾಪಕವಾಗಿ ನಡೆಯಲಾರದು. ಡಿ.ಆರ್. ನಾಗರಾಜರ 'ಅಲ್ಲಮಪ್ರಭು ಮತ್ತು ಶೈವಪ್ರತಿಭೆ'ಯನ್ನು ಅನುವಾದಿಸಲು ನ್ಯೂ ಇಂಡಿಯಾ ಫೌಂಡೇಶನ್ ಎನ್.ಎಸ್. ಗುಂಡೂರ್‌ಗೆ ಆರು ಲಕ್ಷ ರೂಪಾಯಿ ಫೆಲೋಶಿಪ್ ಕೊಟ್ಟಿತು. ಇಂಥ ಆಕರ್ಷಕ ಯೋಜನೆಗಳು ಕನ್ನಡದಲ್ಲೂ ವ್ಯಾಪಕವಾಗಿ ಶುರುವಾಗಬೇಕು. ಕನ್ನಡ ಸಂಸ್ಕೃತಿ ಹವ್ಯಾಸಿ ಅನುವಾದದಿಂದ ವೃತ್ತಿಪರ ಅನುವಾದದೆಡೆಗೆ ನಡೆಯುವುದು ಈ ಕಾಲದ ಅಗತ್ಯವಾಗಿದೆ. ❖

ದೀಪಾವಳಿ ಕಥೆ ಸ್ಪರ್ಧೆ 2024
ಮೆಚ್ಚುಗೆ ಪಡೆದ ಕಥೆ-ಸಲ್ಲೇಖನ

ಸುಧಾ ಆಡುಕಳ

ಉಡುಪಿಯ ಸರ್ಕಾರಿ ಪಿಯು ಕಾಲೇಜಿನಲ್ಲಿ ಗಣಿತ ಉಪನ್ಯಾಸಕಿ. ಮಕ್ಕಳ ನಾಟಕಗಳು, ಏಕವ್ಯಕ್ತಿ ರಂಗರೂಪಕಗಳನ್ನು ರಚಿಸಿದ್ದಾರೆ. ಇವರು ಬರೆದ 'ಬಕುಲದ ಬಾಗಿಲಿನಿಂದ' ಅಂಕಣ ಬರಹಗಳ ಕೃತಿಗೆ ಕರ್ನಾಟಕ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ. 'ಒಂದು ಇಡಿಯ ಬಳಪ' ಕಥಾಸಂಕಲನ ಮೈತ್ರಿ ಪುಸ್ತಕ ಬಹುಮಾನಕ್ಕೆ ಆಯ್ಕೆಗೊಂಡಿದೆ.

ಕಥೆ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ದೀಪಾವಳಿ ಕವನ ಸ್ಪರ್ಧೆ 2024
ಮೆಚ್ಚುಗೆ ಪಡೆದ ಕವನ-ಪರಿಮಳದ ಬಾಕಿ ಮೊತ್ತ

ಡಾ. ಲಕ್ಷ್ಮಣ ವಿ.ಎ.

ಬೆಂಗಳೂರಿನ ಎಲೆಕ್ಟ್ರಾನಿಕ್ ಸಿಟಿಯಲ್ಲಿ ವೈದ್ಯ ವೃತ್ತಿಯಲ್ಲಿ ತೊಡಗಿದ್ದಾರೆ. ಪ್ರವೃತ್ತಿಯಲ್ಲಿ ಕವಿ, ಕಥೆಗಾರ, ಪ್ರಬಂಧಕಾರ, ಅಂಕಣಕಾರ. ಇವರ ಕಥೆ ಮತ್ತು ಕವನ ಸಂಕಲನಗಳಿಗೆ ಬಹುಮಾನಗಳು ದೊರೆತಿವೆ. 2023 ನೇ ಸಾಲಿನ ಪ್ರಜಾವಾಣಿ ದೀಪಾವಳಿ ಕವನ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ಸಿಕ್ಕಿದೆ.

ಕವನ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಸಾದರ ಸ್ವೀಕಾರ

ಮಾರುಕಟ್ಟೆಯಲ್ಲಿನ ಹೊಸ ಪುಸ್ತಕಗಳ ಮಾಹಿತಿಗೆ ಮೊಬೈಲ್‌ನಲ್ಲಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಕಥೆ, ಕವಿತೆ, ಲೇಖನ, ಪ್ರತಿಕ್ರಿಯೆಗಳನ್ನು ಈ ಇ-ಮೇಲ್‌ಗೆ ಕಳುಹಿಸಿ
bhanuvara@prajavani.co.in

ಇಡಗುಂಜಿ ಮೇಳ ಜಗದಗಲ ಯಕ್ಷ ಕಂಪು

ಗಣಪತಿ ಹೆಗಡೆ

ಉತ್ತರ ಕನ್ನಡ ಜಿಲ್ಲೆ ಇಡಗುಂಜಿಯ ಮಹಾಗಣಪತಿ ಯಕ್ಷಗಾನ ಮಂಡಳಿಯ ಕಲಾವಿದರು ಯಕ್ಷಗಾನ ಪ್ರದರ್ಶನದಲ್ಲಿ ತೊಡಗಿರುವುದು

ಕಿರೀಟ, ಪ್ರಸಾದನ ಸಾಮಗ್ರಿಗಳನ್ನೆಲ್ಲ ಕಬ್ಬಿಣದ ಪೆಟ್ಟಿಗೆಯಲ್ಲಿ ಹೊತ್ತ ಊರೂರು ತಿರುಗುತ್ತ ಪೌರಾಣಿಕ ಪ್ರಸಂಗ ಪ್ರದರ್ಶಿಸುತ್ತಿದ್ದ ಕಾಲ... ತರುವಾಯ ಎತ್ತಿನಗಾಡಿಯಲ್ಲಿ ಸರಂಜಾಮು ಹೇರಿಕೊಂಡು ಸಾಗಿ ಪ್ರದರ್ಶನ ನೀಡುತ್ತಿದ್ದ ಸಮಯ... ಕಾಲ ಬದಲಾದಂತೆ ಡಾಂಬರು ರಸ್ತೆಯಲ್ಲಿ ಲಾರಿ, ಟೆಂಪೊ, ಜೀಪು ಹೀಗೆ ವಾಹನಗಳನ್ನೇರಿ ಕಲಾವಿದರೊಂದಿಗೆ ಟೆಂಟ್ ಹೂಡಿ ಯಕ್ಷಗಾನ ಆಡಿಸುತ್ತಿದ್ದ ಘಳಿಗೆ... ಮೊಬೈಲ್ ಯುಗದಲ್ಲಿ, ಕಾರ್ಪೊರೇಟ್ ಜಗತ್ತಿಗೆ ತಕ್ಕಂತೆಯೂ ಪ್ರದರ್ಶನಕ್ಕೆ ಕುಂದುಬಾರದಂತೆ ಕಲೆ ಪ್ರದರ್ಶಿಸುವ ಪರಿ... ಹೀಗೆ ಬದಲಾದ ಕಾಲಕ್ಕೆ ತಕ್ಕಂತೆ ವ್ಯವಸ್ಥೆಗಳನ್ನು ಬಳಸಿಕೊಳ್ಳುತ್ತಲೇ ಯಕ್ಷಗಾನ ಕಲೆಯ ಉಳಿವಿಗೆ ನಿರಂತರತೆ ಕಾದುಕೊಂಡು ಬಂದ 'ಶ್ರೀ ಇಡಗುಂಜಿ ಮಹಾಗಣಪತಿ ಯಕ್ಷಗಾನ ಮಂಡಳಿ'ಗೆ ('ಶ್ರೀ ಇಡಗುಂಜಿ ಮೇಳ' ಎಂಬುದಾಗಿ ಹೆಚ್ಚು ಚಾಲ್ತಿಯಲ್ಲಿದೆ) 91ರ ಹರೆಯ.

'ಕೆರೆಮನೆ' ಎಂಬ ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ ತಾಲ್ಲೂಕಿನ ಪುಟ್ಟ ಗ್ರಾಮವು ಜಾಗತಿಕ ಮಟ್ಟದಲ್ಲಿ ಗುರುತಿಸಿಕೊಳ್ಳಲು ಕಾರಣವಾದ ಇಡಗುಂಜಿ ಮೇಳಕ್ಕೆ ಯುನೆಸ್ಕೊ ಮಾನ್ಯತೆ ಸಿಕ್ಕಿದೆ. ಪುಟ್ಟ ಗ್ರಾಮವನ್ನು ವಿಶ್ವಕ್ಕೆ ಪರಿಚಯಿಸಿದ್ದಲ್ಲದೆ, ಯಕ್ಷಗಾನ ಕಲೆಗೆ ವಿಶ್ವ ಮಾನ್ಯತೆ ದೊರಯಲು ಕಾರಣವಾಗಿದೆ. ರಾಜ್ಯ, ರಾಷ್ಟ್ರದ ಅತ್ಯಲ್ಪ ಭಾಗಕ್ಕೆ ಪರಿಚಿತವಾಗಿದ್ದ 'ಯಕ್ಷಗಾನ ಕಲೆ' ಜಗದಗಲಕ್ಕೆ ಪಸರಿಸಲು ನಾಂದಿ ಹಾಡಿದೆ.

ಯಕ್ಷಗಾನ ಕ್ಷೇತ್ರದ ಯುಗಪುರುಷ ಎಂದೇ ಖ್ಯಾತಿ ಪಡೆದಿದ್ದ ದಿವಂಗತ ಕೆರೆಮನೆ ಶಿವರಾಮ ಹೆಗಡೆ ಇಡಗುಂಜಿ ಮೇಳ ಕಟ್ಟಿದವರು. 1934ರಲ್ಲಿ ಯಕ್ಷಗಾನ ಕಲೆಯನ್ನು ಪೋಷಿಸಲು, ಕಲಾವಿದರನ್ನು ಬೆಳೆಸಲು ಅವರು ಆರಂಭಿಸಿದ ಮೇಳಕ್ಕೆ ಈಗ 91ರ ಹರೆಯ. ಒಂಬತ್ತು ದಶಕ ಕಳೆದರೂ ಮೇಳದ ಖ್ಯಾತಿ ಕುಗ್ಗಿಲ್ಲ, ಯಕ್ಷಗಾನ ಲೋಕಕ್ಕೆ ವರ್ಷದಿಂದ ವರ್ಷಕ್ಕೆ ಹೊಸತನವನ್ನು ಕಟ್ಟಿಕೊಡುತ್ತ, ಹಳೆತನವನ್ನು ಉಳಿಸಿಕೊಳ್ಳುತ್ತಲೇ ನವನವೀನ ಕಲಾವಿದರನ್ನು ಪರಿಚಯಿಸುತ್ತ ಸಾಗಿಬಂದ ಮೇಳದ ಸಾಧನೆ ಸೋಜಿಗವೇ ಸರಿ.

ಸ್ವಾತಂತ್ರ್ಯ ಹೋರಾಟ ನಡೆಯುತ್ತಿದ್ದ ದಿನಗಳಲ್ಲಿ ಕಲೆಯೊಂದರ ಉಳಿವಿಗೆ ಶ್ರಮಿಸುತ್ತಲೇ ಸ್ವಾತಂತ್ರ್ಯ ಹೋರಾಟಕ್ಕೂ ಯಕ್ಷಗಾನದ ಮೂಲಕ ಬಲ ತುಂಬಿದ ಕೆರೆಮನೆ ಕುಟುಂಬ ಈ ಕ್ಷೇತ್ರದಲ್ಲಿ ಅಚ್ಚಳಿಯದ ಹೆಸರು ಮಾಡಿದೆ.

ಶಿವರಾಮ ಹೆಗಡೆ ನಂತರ ಅವರ ಮಗ ಕೆರೆಮನೆ ಶಂಭು ಹೆಗಡೆ ಹಲವು ದಶಕ ಮೇಳವನ್ನು ಯಶಸ್ವಿಯಾಗಿ ಮುನ್ನಡೆಸಿದರು. ಈಗ ಅವರ ಮಗ ಕೆರೆಮನೆ ಶಿವಾನಂದ ಹೆಗಡೆ ಮೇಳದ ಸಾರಥಿಯಾಗಿದ್ದಾರೆ. ಅವರ ಮಗ ಕೆರೆಮನೆ ಶ್ರೀಧರ ಹೆಗಡೆ ಕೂಡ ಉನ್ನತ ವ್ಯಾಸಂಗ ಮುಗಿಸಿ, ಊರಿಗೆ ಮರಳಿ ಯಕ್ಷ ಕೈಂಕರ್ಯಕ್ಕೆ ದುಡಿಯುತ್ತಿದ್ದಾರೆ.

ಒಂಬತ್ತು ದಶಕಗಳಲ್ಲಿ 9,000ಕ್ಕಿಂತ ಹೆಚ್ಚು ಯಕ್ಷಗಾನ ಪ್ರದರ್ಶನ ನೀಡಿರುವ ಮೇಳವು ನೂರಾರು ಕಲಾವಿದರನ್ನು ಪೋಷಿಸಿದೆ. ಕನ್ನಡನಾಡಿನ, ಬಡಗು ತಿಟ್ಟಿನ ಕಲೆಯನ್ನು ದೇಶದ ವಿವಿಧೆಡೆ ಹಾಗೂ ವಿದೇಶಗಳಲ್ಲಿಯೂ ಪ್ರದರ್ಶಿಸಿದ್ದು ಮೇಳದ ಸಾಧನೆ.

15ಕ್ಕೂ ಹೆಚ್ಚು ಕಲಾವಿದರು ಮೇಳದಲ್ಲಿ ದುಡಿಯುತ್ತಿದ್ದಾರೆ. ವರ್ಷದ ಬಹುಪಾಲು ದಿನವೂ ಒಂದಲ್ಲ ಒಂದು ವೇದಿಕೆಯಲ್ಲಿ ಯಕ್ಷ ವೇಷ ಧರಿಸಿ, ಕುಣಿಯುತ್ತಲೇ ಇರುವುದು ಇವರ ಕಾಯಕ. ದುಡಿಮೆಯ ಜೊತೆ ಜೊತೆಗೆ ಯಕ್ಷಗಾನ ಕಲೆಯನ್ನು ಪೋಷಿಸುತ್ತ ಮೇಳಕ್ಕೆ ಬಲ ತುಂಬುತ್ತಿದ್ದಾರೆ. ಇನ್ನೊಂದರ್ಥದಲ್ಲಿ ಮೇಳ ಇವರಿಗೆ ಜೀವನಾಡಿಯಾಗಿದೆ.

'ಯಕ್ಷಗಾನ ಕ್ಷೇತ್ರಕ್ಕೆ ನಮ್ಮ ಕುಟುಂಬದ ನಾಲ್ಕು ತಲೆಮಾರು ಸಂಪೂರ್ಣ ಜೀವನ ಅರ್ಪಿಸಿದೆ. ಕುಟುಂಬ ಅಂದರೆ ಕೇವಲ ಅಜ್ಜ, ಅಪ್ಪ, ಮಗ ಅಲ್ಲ. ಕ್ಷೇತ್ರದಲ್ಲಿ ದುಡಿಯುವ ಕಲಾವಿದರೆಲ್ಲರೂ ಕುಟುಂಬದ ಸದಸ್ಯರೆಂದು ಭಾವಿಸುತ್ತೇವೆ. ಇದನ್ನೇ ನಮ್ಮ ಪೂರ್ವಜರು ಕಲಿಸಿಕೊಟ್ಟಿದ್ದು. ಇಡಗುಂಜಿ ಮೇಳದ ಯಶಸ್ಸಿಗೆ ಈ ಆಶಯವೇ ಮುಖ್ಯ ಕಾರಣ' ಎನ್ನುತ್ತಾರೆ ಇಡಗುಂಜಿ ಮಹಾಗಣಪತಿ ಯಕ್ಷಗಾನ ಮೇಳದ ನಿರ್ದೇಶಕ ಕೆರೆಮನೆ ಶಿವಾನಂದ ಹೆಗಡೆ.

'ಅಜ್ಜ ಶಿವರಾಮ ಹೆಗಡೆ ಸ್ವಾತಂತ್ರ್ಯ ಹೋರಾಟ ನಡೆಯುತ್ತಿದ್ದ ದಿನಗಳಲ್ಲಿ ಬಡಗು ತಿಟ್ಟಿನ ಯಕ್ಷಗಾನ ಕಲೆಯನ್ನು ಪೋಷಿಸಲು ಸಮಾನ ಮನಸ್ಕ ಕಲಾವಿದರನ್ನು ಸೇರಿಸಿಕೊಂಡು ಮೇಳ ಕಟ್ಟಿದರು. ಅವರೇ ರಚಿಸಿದ ಹಲವು ಯಕ್ಷ ಪ್ರಸಂಗಗಳನ್ನು ಪ್ರದರ್ಶಿಸುತ್ತ, ಹಲವು ಕಲಾವಿದರನ್ನು ಬೆಳೆಸಿದರು. ಅವರ ಬಳಿಕ ತಂದೆ ಶಂಭು ಹೆಗಡೆ ಮೇಳವನ್ನು ಬ್ರ್ಯಾಂಡ್ ಆಗಿಸಿದರು. ಅವರ ಕಲಾಸಕ್ತಿ, ಪ್ರತಿಭೆ ಯಕ್ಷಗಾನ ಕ್ಷೇತ್ರವನ್ನು ದೇಶದ ಉದ್ದಗಲಕ್ಕೆ ಪರಿಚಯಿಸಲು ನೆರವಾಯಿತು' ಎನ್ನುತ್ತ ಮೇಳದ ಯಶೋಗಾಥೆ ವಿವರಿಸಿದರು.

'ಚಲನಚಿತ್ರದಲ್ಲಿ, ಕ್ರಿಕೆಟ್ ಅಂಗಳದಲ್ಲಿ ಖ್ಯಾತನಾಮ ಜೋಡಿ ಸೆಲೆಬ್ರೆಟಿಗಳು, ಆಟಗಾರರಿದ್ದರೆ ಪ್ರೇಕ್ಷಕ ಎವೆಯಿಕ್ಕದೆ ನೋಡುತ್ತಾನೆ. ಆಗ ನನ್ನಜ್ಜ ಕೆರೆಮನೆ ಶಿವರಾಮ ಹೆಗಡೆ ಕುಣಿತ, ಮಾವಿನಕೆರೆಯ ಯಾಜಿ ಭಾಗವತರ ಕಂಠಸಿರಿಗೆ, ಅಪ್ಪ ಕೆರೆಮನೆ ಶಂಭು ಹೆಗಡೆ ಕುಣಿತ ಮತ್ತು ನೆಬ್ಬೂರು ನಾರಾಯಣ ಭಾಗವತರ ಕಂಠ ಮಾಧುರ್ಯಕ್ಕೆ ಪ್ರೇಕ್ಷಕ ಮನಸೋಲುತ್ತಿದ್ದ. ಈಗಲೂ ಮೇಳದಲ್ಲಿ ಪ್ರೇಕ್ಷಕ ವರ್ಗ ಸೆಳೆಯಬಲ್ಲ ಕಲಾವಿದರಿದ್ದಾರೆ. ಆದರೆ, ಕಳೆದ ನಾಲ್ಕು ದಶಕಗಳಿಂದ ಈಚೆಗೆ ಯಕ್ಷಗಾನ ಮಿತಿ ಮೀರಿದ ವಿಕೃತಿ ಕಂಡಿದೆ. ಪೌರಾಣಿಕ ಕಥೆಗಳ ಹೊರತಾಗಿ ಹೊಸ ಪ್ರಸಂಗಗಳ ಹಾವಳಿ ಅಘಾತವನ್ನೇ ಉಂಟುಮಾಡಿದವು. ಇವುಗಳ ನಡುವೆಯೂ ಇಡಗುಂಜಿ ಮೇಳವು ದೀರ್ಘ ಪರಂಪರೆಗೆ ಧಕ್ಕೆ ತರಲು ಅವಕಾಶ ಕೊಡಲಿಲ್ಲ. ಪೌರಾಣಿಕ ಚೌಕಟ್ಟಿನ ಆಖ್ಯಾನಗಳೇ ಮೇಳ ಉಳಿಸಿದವು, ಕಲೆಯ ಮೂಲಸತ್ವವನ್ನೂ ಜೀವಂತವಿರಿಸುವ ಪ್ರಯತ್ನಕ್ಕೆ ಕುಂದು ಬರಲಿಲ್ಲ. ಇದನ್ನೇ ಯುನೆಸ್ಕೊ ಗುರುತಿಸಿತು' ಎನ್ನುತ್ತ ಮಾತಿಗೆ ವಿರಾಮ ನೀಡಿದರು.

ಜಾಗತಿಕ ವೇದಿಕೆ ಸಿಗುವ ನಿರೀಕ್ಷೆ

ಕೆರೆಮನೆ ಶಿವಾನಂದ ಹೆಗಡೆ

'ಇಡಗುಂಜಿ ಮೇಳಕ್ಕೆ ಯುನೆಸ್ಕೊ ಮಾನ್ಯತೆ ಸಿಕ್ಕಿರುವುದು ಕೇವಲ ಒಂದು ಮೇಳಕ್ಕೆ ಸಿಕ್ಕ ಶ್ರೇಯ ಎಂದು ಭಾವಿಸುವುದು ತಪ್ಪಾಗುತ್ತದೆ. ನಿರ್ದಿಷ್ಟ ಪ್ರದೇಶಕ್ಕೆ ಸೀಮಿತವಾಗಿದ್ದ ಯಕ್ಷಗಾನ ಕಲೆಯನ್ನು ಜಾಗತಿಕ ಮಟ್ಟದಲ್ಲಿಯೂ ಗುರುತಿಸಿದರಲ್ಲ ಎಂಬ ಸಮಾಧಾನದೊಂದಿಗೆ, ಕಲೆಗೆ ವಿಶ್ವ ಮಟ್ಟದಲ್ಲಿ ಗೌರವ ಸಿಕ್ಕಿತಲ್ಲ ಎಂಬ ಹೆಮ್ಮೆ ಪ್ರತಿಯೊಬ್ಬ ಯಕ್ಷಗಾನ ಕಲಾವಿದ, ಯಕ್ಷಪ್ರೇಮಿಯ ಎದೆಯಲ್ಲಿ ಮೂಡಬೇಕು. ಯುನೆಸ್ಕೊ ಮಾನ್ಯತೆಯಿಂದ ಮೇಳಕ್ಕೆ ವಿದೇಶದಿಂದಲೋ, ಸರ್ಕಾರದಿಂದಲೋ ಅನುದಾನ ಸಿಗಬಹುದು ಎಂಬ ಭಾವನೆ ಇದ್ದರೆ ತಪ್ಪು. ಆದರೆ, ಜಾಗತಿಕ ಮಟ್ಟದಲ್ಲಿ ಸಾಂಸ್ಕೃತಿಕ ಕ್ಷೇತ್ರದ ಕುರಿತಾಗಿನ ಚರ್ಚೆಗಳು ನಡೆದಾಗ ಯಕ್ಷಗಾನ ಕ್ಷೇತ್ರಕ್ಕೂ ವಿಷಯ ಮಂಡನೆಗೆ ಅವಕಾಶ ಆಗುತ್ತದೆ. ಯಕ್ಷಗಾನಕ್ಕೆ ಜಾಗತಿಕ ವೇದಿಕೆಯಲ್ಲೂ ಸ್ಥಾನಮಾನ ಸಿಗುತ್ತದೆ ಎಂಬ ವಿಶ್ವಾಸ ದೃಢವಾಗಿದೆ' ಎಂದು ಇಡಗುಂಜಿ ಮೇಳದ ನಿರ್ದೇಶಕ ಕೆರೆಮನೆ ಶಿವಾನಂದ ಹೆಗಡೆ ಹೇಳುತ್ತಾರೆ.

ಯಕ್ಷಗಾನ ಪ್ರಸಂಗವೊಂದರಲ್ಲಿ ಭಾವಾಭಿನಯದಲ್ಲಿ ತಲ್ಲೀನರಾದ ಕಲಾವಿದರು

ಮೊದಲ ಓದು

ಮಕ್ಕಳ ಮನೋಲ್ಲಾಸಕ್ಕೆ ಹೊಸ ಪುಸ್ತಕಗಳು

ಮಕ್ಕಳೇ ಒಕ್ಕೊರಲಿನಲ್ಲಿ ಹಾಡಿ ಹೇಳಬಹುದಾದ ಕವಿತೆಗಳು ಈ ಸಂಕಲನದಲ್ಲಿವೆ. ಓದಲು ಕುಳಿತರೆ ಆಕರ್ಷಕವಾದ ಚಿತ್ರಗಳು ಅವರಲ್ಲಿಯೂ ಕಲ್ಪನಾ ಹಕ್ಕಿ ಗರಿಗೆದರುವಂತೆ ಮಾಡುತ್ತವೆ. ಕಪ್ಪುಬಿಳುಪಿನ ಈ ಚಿತ್ರಗಳು, ಮಕ್ಕಳು ತಾವೂ ಸೀಸಕಡ್ಡಿಯಲ್ಲಿಯೇ ಚಿತ್ರ ಬರೆಯಬಹುದು ಎಂಬ ವಿಶ್ವಾಸ ಮೂಡಿಸುತ್ತವೆ. ಆದಿ ಅಂತ್ಯಪ್ರಾಸ ಇರುವ ಈ ಕವಿತೆಗಳು ಸರಾಗವಾಗಿ ಬಾಯಿಪಾಠವಾಗುವಂಥವು.

ಕಾವ್ಯದ ರಸಾಸ್ವಾದವನ್ನು ಕಲಿಸುವಂಥ ಈ ಕವಿತೆಗಳು ಎಳೆ ಓದುಗರನ್ನು ಕನ್ನಡ ಸಾಹಿತ್ಯದತ್ತ ಸೆಳೆಯುವ ಕೆಲಸವನ್ನಂತೂ ಮಾಡಬಲ್ಲವು. ಮನೆ, ಪರಿಸರ, ಹತ್ತಿರದ ವ್ಯಕ್ತಿಗಳು, ವೃತ್ತಿಗಳು ಎಲ್ಲವೂ ಈ ಸಂಕಲನದಲ್ಲಿ ಹಾದು ಹೋಗುತ್ತವೆ. ಓಹೊ.. ನಾನೂ ಹೀಗೆ ಹೇಳಬಹುದಲ್ಲ ಎನ್ನುವಂತನಿಸುವ ವಾಕ್ಯಗಳು ಹಲವಾರು ಈ ಕವನದಲ್ಲಿವೆ. ಬಿಸಿಬಿಸಿ ಭಾತು ಕವಿತೆಯಲ್ಲಿಯ ಗಪ್‌ಚುಪ್ ತಿನ್ನು ಎಂಬ ವಾಕ್ಯ ಎಲ್ಲ ತಾಯಂದಿರು ಹೇಳುವ ಮಾತೇ ಆಗಿದೆ. ಪ್ರತಿ ಕವನವೂ ಓದುಗರೊಂದಿಗೆ ಆಪ್ತ ಬಾಂಧವ್ಯ ಬೆಸೆಯುತ್ತದೆ. ಕನ್ನಡದ ಪದ್ಯಗಳನ್ನು ಹೇಳುವುದೇ ಕಡಿಮೆ ಆಗಿರುವ ಈ ದಿನಗಳಲ್ಲಿ ಈ ಪದ್ಯಗಳು ಮಕ್ಕಳ ನಾಲಗೆಯನ್ನು ಹೊರಳಿಸುತ್ತವೆ. ಮನವನ್ನು ಅರಳಿಸುತ್ತವೆ. ಸಂಗೀತ ನಿರ್ದೇಶಕ ವಿ.ಮನೋಹರ್ ಅವರ ಗೆರೆಗಳು ಪ್ರತಿ ಕವನವನ್ನೂ ಸಶಕ್ತವಾಗಿ ಹಿಡಿದಿಟ್ಟಿವೆ. ಕಪ್ಪುಬಿಳುಪಿನ ಚಿತ್ರಗಳಲ್ಲಿಯೂ ಕಲ್ಪನೆ ಗರಿಗೆದರುವ ಅಂದ ಇಲ್ಲಿ ಅನಾವರಣವಾಗಿದೆ. ಪದ್ಯಗಳ ಲಯ, ಮಕ್ಕಳನ್ನು ಹಿಡಿದಿಡುತ್ತವೆ. ದೊಡ್ಡವರು ಓದುತ್ತಿದ್ದರೆ ಅವರೂ ಮಕ್ಕಳಾಗಿ ನಲಿಯುವಂತಿವೆ.

ಪು: 62
₹90

ಬಿಸಿಬಿಸಿ ಬಾತು (ಮಕ್ಕಳ ಪದ್ಯಗಳು)
ಲೇ: ರಾಜಶೇಖರ ಕುಕ್ಕುಂದಾ
ಪ್ರ: ಅವ್ಯಕ್ತ ಪ್ರಕಾಶನ
ಸಂ: 8792693438



ಪು: 232
₹250

ಮಹಿ, ನೀಲಿ ಬೆಟ್ಟಗಳ ಮೇಲೆ ಹಾರಿದ ಆನೆ
ಲೇ: ಆನಂದ್ ನೀಲಕಂಠನ್
ಅನುವಾದ: ರತೀಶ್ ಬಿ.ಆರ್.
ಪ್ರ: ಹರಿವು ಬುಕ್ಸ್
ಸಂ: 808882217

ಪುಟ್ಟದೊಂದು ಆನೆ, ತನ್ನ ಅಪ್ಪ-ಅಮ್ಮನನ್ನು ಬಿಟ್ಟು ಬೆಟ್ಟಗಳ ಮೇಲೆ ಹಾರಲು ಹೊರಡುತ್ತದೆ. ಪುಟ್ಟ ಪುಟಾಣಿ ಹಕ್ಕಿಯೊಂದು ಸ್ನೇಹಿತನಾಗುತ್ತದೆ. ಮಹಿಯ ಆಸೆ, ಕನಸು, ಸಾಹಸ ಹಾಗೂ ಕಾಡಿನ ರಾಜಕೀಯ ಎಲ್ಲವೂ ಕತೆಯ ರೋಚಕತನವನ್ನು ಹೆಚ್ಚಿಸುತ್ತ ಹೋಗುತ್ತದೆ. ಸುಭದೀಪ್‌ರಾಯ್, ಶಿಲಾದಿತ್ಯ ಬೋಸ್ ಅವರು ತೆಗೆದಿರುವ ಆಕರ್ಷಕ ಚಿತ್ರಗಳು, ಮಹಿಯ ರೂಪವನ್ನೂ, ಕಾಡಿನ ಸಾಹಸಗಳನ್ನೂ ಚಿತ್ರಿಸಿಕೊಳ್ಳಲು ಸಹಾಯ ಮಾಡುತ್ತವೆ.

ವಾನರ, ಅಸುರ, ಅಜಯ ಪುಸ್ತಕಗಳ ಖ್ಯಾತಿಯ ಆನಂದ್ ನೀಲಕಂಠನ್ ಮಕ್ಕಳಿಗಾಗಿ ಈ ಕತೆ ಪುಸ್ತಕ ಎಂದು ಹೇಳಿಕೊಂಡಿದ್ದಾರೆ. 200 ಪುಟಗಳನ್ನು ಒಂದೇ ಗುಕ್ಕಿನಲ್ಲಿ ಓದಿ ಮುಗಿಸುವಂಥ ಸಾಹಸ ಮಕ್ಕಳಿಂದಾಗದು. ಓದಬಹುದಾದ ಮಕ್ಕಳಿಗೆ ಈ ಆನೆಯ ಕತೆ ರುಚಿಸಲಿಕ್ಕಿಲ್ಲ. ಆದರೂ ರುಡ್‌ಯಾರ್ಡ್ ಕಿಪ್ಲಿಂಗ್ ಅವರ ಜಂಗಲ್‌ಬುಕ್‌ನಂಥ ಒಂದೇ ಒಂದು ಕಾದಂಬರಿ ಭಾರತೀಯ ಭಾಷೆಯಲ್ಲಿಲ್ಲ ಎಂಬ ಹಳಹಳಿಕೆಯೊಂದಿಗೇ ಈ ಕತೆ ಆರಂಭಿಸಿದ್ದಾರೆ. ಭಾರತೀಯ ಜಾಯಮಾನಕ್ಕೆ ಹೊಂದುವಂಥ ಹೆಸರುಗಳನ್ನು ಪಾತ್ರಗಳಿಗೆ ನೀಡಿದ್ದರೆ ಇನ್ನೂ ಆತ್ಮೀಯವೆನಿಸುತ್ತಿತ್ತು. ಡಿಮಿತ್ರ, ಟ್ರಂಪು, ಮುಂಚುರು ಎಂಬಂಥ ಹೆಸರುಗಳು ನೆನಪಿಡಲು ಕಷ್ಟವೆನಿಸುತ್ತವೆ. ಓದಿನ ಓಘಕ್ಕೆ ತಡೆ ಒಡ್ಡುತ್ತವೆ. ಮಹಿ, ಇಳಾರಂತೆ ಸರಳವಾದ ಹೆಸರುಗಳನ್ನಿಟ್ಟರೆ ಇನ್ನಷ್ಟು ಆಪ್ತವೆನಿಸುತ್ತಿತ್ತು.

ರೋಚಕ ಮನರಂಜನೆಗೆ ಓದಬಹುದಾದ, ಓದಿಸಬಹುದಾದ ಪುಸ್ತಕ ಇದಾಗಿದೆ. ಕಿಶೋರಾವಸ್ಥೆ ದಾಟಿದ, ಹದಿಹರೆಯಕ್ಕೆ ಕಾಲಿಡದ ಮಕ್ಕಳು ಆನಂದಿಸಬಹುದು. ಉಳಿದ ಮಕ್ಕಳಿಗೆ ಪಾಲಕರು ಓದಿ ಹೇಳಲು, ಕತೆ ಕಟ್ಟಲು ಚಂದದ ಪುಸ್ತಕ ಇದಾಗಿದೆ.

ಮಕ್ಕಳಿಗೆ ಕನ್ನಡ ಕಲಿಸಲು, ಕತೆಗಳಲ್ಲಿ ಆಸಕ್ತಿ ಮೂಡಿಸಲು ಪೂರಕವಾಗಿದೆ ಹಳದಿ ಜೀರುಂಡೆ ಲಾರಾ ಎಂಬ ಪುಸ್ತಕ. ಕನ್ನಡದ ಅಕ್ಷರಗಳನ್ನು ಜೋಡಿಸಿ, ಓದಲು ಕಲಿಯುತ್ತಿರುವ ಯಾವುದೇ ವಯೋಮಾನದ ಮಕ್ಕಳಿಗೆ ಇದು ಖುಷಿ ಕೊಡುತ್ತದೆ. ಚಂದದಚಿತ್ರಗಳು, ಪುಟ್ಟಪುಟ್ಟ ವಾಕ್ಯಗಳ ಪುಟಗಳು. ಒಂದು ಪುಸ್ತಕ ಮುಗಿಸಿದೆ ಎಂಬ ಆತ್ಮವಿಶ್ವಾಸ ನೀಡುವ ಇದು ಹೆಚ್ಚಿನ ಪುಸ್ತಕಗಳನ್ನು ಓದಲು ಪ್ರೇರೇಪಿಸುತ್ತದೆ. ಕೆಂಪು ಜೀರುಂಡೆಗಳ ಗುಂಪಿನಲ್ಲಿರುವ ಲಾರಾ ಎಂಬ ಹಳದಿ ಜೀರುಂಡೆಯ ಕತೆ ಇದು. ತಾನೂ ಎಲ್ಲರಂತಾಗಬೇಕು ಎಂದು ಬಯಸುವ ಲಾರಾ ಒಂದಿನ ಬಣ್ಣ ಬಳಿದುಕೊಳ್ಳುತ್ತಾಳೆ. ತಾನಲ್ಲದ ತನ್ನನ್ನು ಎಲ್ಲರೂ ಗುರುತಿಸುತ್ತಾರೆಯೇ? ಲಾರಾಗೆ ಖುಷಿ ಆಯಿತೇ? ಉಳಿದವರು ಏನೆಂದರು? ಎಲ್ಲರಂತಾಗಬೇಕು ಎಂದು ಬಯಸುತ್ತಲೇ ತನ್ನನ್ನೇ ಇಷ್ಟಪಡದ ಲಾರಾಳ ಕತೆ ಮುಂದೇನಾಯಿತು? ಮಕ್ಕಳೊಂದಿಗೆ ನೀವೂ ಪುಸ್ತಕವನ್ನು ಓದಿ.



ಪು: 32
₹175

ಲಹಳದಿ ಜೀರುಂಡೆ
ಲೇ: ಲಾರಾ ಮಾರ್ತಾ ಇವಾನ್ಸ್
ಅನುವಾದ: ಶ್ವೇತಾರಾಣಿ ಎಚ್.ಕೆ
ಪ್ರ: ಮೊಗ್ಗು, ಋತುಮಾನ ಪುಸ್ತಕ
ಸಂ: 9480035877

ಈಜಿಪ್ಟ್‌ನ ಪಿರಮಿಡ್‌ಗಳು ಸದಾ ಕೌತುಕವನ್ನು ಉಂಟುಮಾಡುತ್ತಲೇ ಇವೆ. 4500 ವರ್ಷಗಳ ಹಿಂದೆ ನಿರ್ಮಾಣವಾದ ಇವುಗಳು 40 ಅಂತಸ್ತುಗಳಷ್ಟು ಎತ್ತರವಿದೆ. ವಿಶ್ವದ ಮೂಲೆ ಮೂಲೆಯಿಂದ ಪ್ರವಾಸಿಗರು ಪಿರಮಿಡ್‌ಗಳನ್ನು ಕಣ್ತುಂಬಿಕೊಳ್ಳಲು, ಒಳಹೊಕ್ಕು ನೋಡಲು ಬರುತ್ತಾರೆ. ಪಿರಮಿಡ್ ನಿರ್ಮಾಣದ ಕಥೆ, ನಂಬಿಕೆ, ರಾಜಕೀಯ ಇತ್ಯಾದಿ ಇಲ್ಲಿದೆ

ಮಡಿದವರ ಮಾಯಾಲೋಕ ಗೀಜಾ ಪಿರಮಿಡ್!

ಪ್ರವಾಸ

ಗೀಜಾ ಪಿರಮಿಡ್ ಅಗಾಧತೆಯನ್ನು ಅರಿಯಲು ಒಮ್ಮೆ ಅದರೆದುರು ನಿಲ್ಲಬೇಕು..



ಪಿರಮಿಡ್ ಒಳಗೆ ಕಿರು ದಾರಿ

ಡಾ. ಕೆ.ಎಸ್.ಚೈತ್ರಾ

ಬೆವರು ಸುರಿಯುತ್ತಿತ್ತು, ಏದುಸಿರು ಬರುತ್ತಿತ್ತು. ಕೈ -ಕಾಲು ಆಡಿಸಲು ಆಗದಷ್ಟು ಕಿರಿದಾದ ಸ್ಥಳ. ಗಾಳಿ-ಬೆಳಕು ಎರಡೂ ಕಡಿಮೆಯೇ. ಮಂದ ಬೆಳಕಿನಲ್ಲಿ ಕಷ್ಟಪಟ್ಟು ನಡೆಯುವಾಗ ನಿಗೂಢ ಲೋಕಕ್ಕೆ ಹೋದ ಅನುಭವ. ವಿಶ್ವದ ಏಳು ಅದ್ಭುತಗಳಲ್ಲಿ ಅತ್ಯಂತ ಪ್ರಾಚೀನವಾದ ಈಜಿಪ್ಟ್‌ನ ಗೀಜಾ ಪಿರಮಿಡ್ ಒಳಗೆ!

ಜಗತ್ತಿನಲ್ಲೇ ಅತ್ಯಂತ ಜನದಟ್ಟಣೆಯ ನಗರಗಳಲ್ಲೊಂದು ಕೈರೋ. ನಗರದ ಟ್ರಾಫಿಕ್ ನಡುವೆಯೇ ನೇರವಾದ ರಸ್ತೆಯಲ್ಲಿ ಓಡುತ್ತಿದ್ದ ಕಾರು ಹತ್ತು ನಿಮಿಷಗಳ ನಂತರ ತಿರುವಿನಲ್ಲಿ ಹೊರಳಿತ್ತು. ಆಗ ಕಣ್ಣಿಗೆ ಬಿತ್ತು; ಬೃಹದಾಕಾರ ಬಂಡೆಗಳ ಬೆಟ್ಟ. ಪರಿಪೂರ್ಣವಾದ ತ್ರಿಕೋನಾಕೃತಿಯ ಚೂಪಾದ ತುದಿಯಿಂದ ಆಕಾಶವನ್ನೇ ಮುಟ್ಟುವಂತಿದ್ದ ಅದು ಬೆಟ್ಟವಲ್ಲ; ಗೀಜಾ ಪಿರಮಿಡ್! ಹತ್ತಿರ ಹೋಗುತ್ತಿದ್ದಂತೆ ಪಿರಮಿಡ್‌ನ ಅಗಾಧತೆ ಅರಿವಾಯಿತು. 4500 ವರ್ಷಗಳ ಹಿಂದೆ ಅತ್ಯಾಧುನಿಕ ಸಾಧನಗಳಿಲ್ಲದೇ ವ್ಯವಸ್ಥಿತವಾಗಿ ಜೋಡಿಸಿಟ್ಟ 20 ಲಕ್ಷಕ್ಕೂ ಹೆಚ್ಚು ಸುಣ್ಣದ ಕಲ್ಲುಗಳ ವೈಜ್ಞಾನಿಕ ರಚನೆಯಿದು. ಸಣ್ಣಪುಟ್ಟ ಕಲ್ಲುಗಳಲ್ಲ, ಒಂದೊಂದೂ ಕನಿಷ್ಠ ಎರಡು ಟನ್‌ನಷ್ಟು ಭಾರವಿದೆ. ಈ ಕಲ್ಲುಗಳನ್ನು ನೂರಾರು ಮೈಲಿ ದೂರದಿಂದ ಮರಳು ಮತ್ತು ನೈಲ್ ನದಿಯ ಮೂಲಕ ಸಾಗಿಸಿ ಈ ಪಿರಮಿಡ್‌ಗಳನ್ನು ಕರಾರುವಾಕ್ಕಾಗಿ ಹೇಗೆ ನಿರ್ಮಿಸಿದರು ಎನ್ನುವುದೇ ರಹಸ್ಯ! 20 ವರ್ಷ ಸಾವಿರಾರು ಕಾರ್ಮಿಕರು ಇದರ ನಿರ್ಮಾಣಕ್ಕಾಗಿ ದುಡಿದಿದ್ದಾರೆ.

ಪಿರಮಿಡ್ ನಿರ್ಮಿಸಿರುವ ಒಂದೊಂದು ಕಲ್ಲುಗಳೂ ಆಳೆತ್ತರಕ್ಕಿವೆ

ಜೀವನ್ಮರಣಗಳ ಲೋಕದಲ್ಲಿ ಪಯಣ

ಅಂದಹಾಗೆ, ಪ್ರಾಚೀನ ಈಜಿಪ್ಟ್‌ನಲ್ಲಿ ಯಾರೇ ಯಾವಾಗಲೇ ದೊರೆಯಾದರೂ (ಫೆರೋ) ಮಾಡುತ್ತಿದ್ದ ಮೊದಲ ಕೆಲಸವೆಂದರೆ ತನ್ನ ಗೋರಿಯ ಸಿದ್ಧತೆ! ಪುನರ್ಜನ್ಮದಲ್ಲಿ ದೃಢವಾದ ನಂಬಿಕೆ ಇದಕ್ಕೆ ಕಾರಣ. ಸಾವಿನ ನಂತರ ಬದುಕಿದೆ. ಇಲ್ಲಿಂದ ಅಲ್ಲಿಗೆ ಪಯಣ ಮುಂದುವರಿಯುತ್ತದೆ. ಅದಕ್ಕಾಗಿ ಮೃತದೇಹವನ್ನು ಮಮ್ಮಿ ಮಾಡಿ ಕಾಪಿಟ್ಟು, ಅದನ್ನು ಪಿರಮಿಡ್ ಒಳಗೆ ಸಂರಕ್ಷಿಸಿದ್ದಲ್ಲದೇ ಪ್ರೀತಿಯ ವಸ್ತುಗಳ ಜತೆ ಮುಂದಿನ ಬದುಕಿಗೂ ಅಗತ್ಯವಿರುವ ವಸ್ತುಗಳನ್ನೂ ಜೋಡಿಸಿಡುವುದು ಕ್ರಮ.

'ರಾ' ಎಂದರೆ ಸೂರ್ಯನಿಗೆ ಇಲ್ಲಿ ವಿಶೇಷ ಸ್ಥಾನ. ನೆಲಮಾಳಿಗೆಯ ಗೋರಿಗಳ ಗೋಡೆಗಳ ಮೇಲೆ ಇರುವ ಆಕರ್ಷಕ ಚಿತ್ರಗಳಲ್ಲಿ, ದೇಗುಲಗಳ ಕೆತ್ತನೆಯಲ್ಲಿ, ದೋಣಿಯಲ್ಲಿ ಇರುವ 'ರಾ' ನನ್ನು ಕಾಣಬಹುದು. ಉದ್ದವಾದ ದೋಣಿಯಲ್ಲಿ ಜೀವನ ಮತ್ತು ಮೃತ್ಯು ಲೋಕಗಳ ನಡುವೆ ಪೂರ್ವದಿಂದ ಪಶ್ಚಿಮಕ್ಕೆ ದಿನವೂ ಆತನ ಪಯಣ. ಪ್ರತಿದಿನ ಜನನ ಮತ್ತು ಮರಣ! ಹಾಗಾಗಿಯೇ ಈಜಿಪ್ಟ್‌ನಲ್ಲಿ ಇರುವ ನೂರಕ್ಕೂ ಹೆಚ್ಚು ಪಿರಮಿಡ್‌ಗಳು ನೈಲ್ ನದಿಯ ಪಶ್ಚಿಮ ತೀರದಲ್ಲಿವೆ. 'ರಾ' ಮುಳುಗುವ ಈ ದಿಕ್ಕು ಮರಣದ ಸಂಕೇತ. ದೇವತೆಗಳನ್ನು ಆರಾಧಿಸುವ ದೇವಾಲಯಗಳು, ಪೂರ್ವತೀರದಲ್ಲಿವೆ. ಪಿರಮಿಡ್‌ನ ಚೂಪಾದ ತುದಿ ಸೂರ್ಯನ ಕಿರಣಗಳನ್ನು ಸಂಕೇತಿಸುತ್ತದೆ. ಇದರ ಮೂಲಕ ರಾಜನ ಆತ್ಮ, ಆಕಾಶ ಮಾರ್ಗವಾಗಿ ಸ್ವರ್ಗ ಸೇರುತ್ತದೆ. ಫೆರೋಗಳು ದೈವಾಂಶ ಸಂಭೂತರಾಗುತ್ತಾರೆ ಎನ್ನುವ ನಂಬಿಕೆ ಅಲ್ಲಿಯವರದ್ದು. ಹೀಗೆ ಧಾರ್ಮಿಕವಾಗಿ ಮೃತರು ದೇವರೊಂದಿಗೆ ಸಂಪರ್ಕ ಸಾಧಿಸಲು ಇವು ಸಹಾಯವಾಗಿತ್ತು. (ಈ ಪಿರಮಿಡ್‌ನ ಮುಂಭಾಗದಲ್ಲೂ ಎರಡು ಸೂರ್ಯದೋಣಿಗಳಿದ್ದವು. ಅವುಗಳಲ್ಲಿ ಒಂದನ್ನು ಮ್ಯೂಸಿಯಂನಲ್ಲಿ ಇಡಲಾಗಿದೆ.) ಈ ಪಿರಮಿಡ್‌ಗಳ ಗಾತ್ರ ದೊಡ್ಡದಾದಷ್ಟು, ಇಡುವ ವಸ್ತು ಹೆಚ್ಚಾದಷ್ಟು ಫೆರೋನ ಶಕ್ತಿ ಮತ್ತು ಸಂಪತ್ತನ್ನು ಸೂಚಿಸುತ್ತಿದ್ದವು. ಅಳಿದವರ ನೆನಪನ್ನು ಚಿರಸ್ಥಾಯಿಯಾಗಿಸುವ ಸಾಧನವಾಗಿಯೂ ಬಳಕೆಯಾಗುತ್ತಿದ್ದವು. ಹೀಗೆ ಪಿರಮಿಡ್‌ಗಳು ಕೇವಲ ಸಮಾಧಿ ಸ್ಥಳವಾಗಿರದೆ, ಧಾರ್ಮಿಕ-ಸಾಮಾಜಿಕ ಮತ್ತು ರಾಜಕೀಯ ಆಯಾಮಗಳನ್ನು ಹೊಂದಿದ್ದವು.

ಒಳಹೊಕ್ಕಂತೆ

ಸುಮಾರು 40 ಅಂತಸ್ತುಗಳಷ್ಟು ಎತ್ತರದ ಈ ಪಿರಮಿಡ್ ನೋಡಿ, ಅದರ ಮಹತ್ವ ಕೇಳಿ ಬೆರಗಾಗಿದ್ದೆವು. ಅಷ್ಟು ದೂರದಿಂದ ಬಂದು ಒಳಗೆ ಹೋಗದಿರಲು ಸಾಧ್ಯವೇ? ಪ್ರವೇಶಕ್ಕಾಗಿ ಪ್ರತ್ಯೇಕ ಟಿಕೆಟ್ ಪಡೆದಿದ್ದಾಯ್ತು. ಪಿರಮಿಡ್‌ನ ಮಧ್ಯಭಾಗದಲ್ಲಿ ಪ್ರವೇಶದ್ವಾರ. ಶುರುವಿನಲ್ಲಿ ಬೆಳಕು, ಗಾಳಿ ಸಾಕಷ್ಟಿತ್ತು. ಆರಾಮಾಗಿ ನಡೆದೆವು. ಆದರೆ ಮುಂದೆ ನಡೆದಂತೆ ದಾರಿ ಕಿರಿದು, ಬೆಳಕು-ಗಾಳಿಯೂ ಕಡಿಮೆ. ಕಡಿದಾದ, ಕಿರಿದಾದ ದಾರಿ. ಹತ್ತು-ಇಳಿ ಹೀಗೆ ಸಾಕಷ್ಟು ಕಸರತ್ತು ಮಾಡಬೇಕಾಯಿತು. ಮೆಟ್ಟಿಲುಗಳನ್ನು ಬೆನ್ನು ಬಾಗಿಸಿಯೇ ಹತ್ತಬೇಕು, ಇಳಿಯಬೇಕು. ತಲೆ ಮೇಲೆತ್ತಿದರೆ ಗಟ್ಟಿ ಕಲ್ಲಿನ ಗೋಡೆ. ಅಂತೂ 25 ನಿಮಿಷಗಳ ನಂತರ ಕಿಂಗ್ಸ್ ಚೇಂಬರ್ ಎಂದು ಕರೆಯುವ ಹೃದಯ ಭಾಗ ತಲುಪಿದ್ದೆವು. ಅದೇ ಫೆರೋ ಖುಫುವಿನ ಸಮಾಧಿ ಸ್ಥಳ. ಸಾಕಷ್ಟು ಎತ್ತರದ ಮಾಮೂಲು ಕೊಠಡಿಯ ಮೂಲೆಯಲ್ಲಿ ದೊಡ್ಡದಾದ ಕಲ್ಲಿನ ಶವ ಪೆಟ್ಟಿಗೆ. ಆಯತಾಕಾರದ ಮುರಿದ ಈ ಪೆಟ್ಟಿಗೆ ಸ್ನಾನ ಮಾಡುವ ಟಬ್ಬಿನಂತಿತ್ತು. ಅದನ್ನು ಬಿಟ್ಟರೆ ಅಲ್ಲಿ ಮತ್ತಿನ್ನೇನೂ ಇಲ್ಲ. ಪೂರ್ತಿ ಬಂಗಾರದ ಆಭರಣ ಅಮೂಲ್ಯ ವಸ್ತುಗಳಿಂದ ತುಂಬಿದ್ದ ಈ ಕೋಣೆಯಲ್ಲಿ ಈಗಿರುವುದು ಬರೀ ಕಲ್ಲಿನ ಪೆಟ್ಟಿಗೆ. ಗೋಡೆಗಳ ಮೇಲೂ ಹೆಚ್ಚಿಗೆ ಏನೂ ಬರಹ, ಅಲಂಕಾರ, ಬಣ್ಣದ ಚಿತ್ರವಿಲ್ಲ. ಹೊರಗಿನ ಭವ್ಯತೆಗೂ ಒಳಗಿನ ಸರಳತೆಗೂ ಸಂಬಂಧವೇ ಇಲ್ಲ! ಈ ಬೃಹತ್ ಪಿರಮಿಡ್‌ನಲ್ಲಿ ಇದಷ್ಟೇ ಅಲ್ಲ, ರಾಣಿ ಕೋಣೆ-ಭೂಗತ ಕೊಠಡಿ, ರಹಸ್ಯ ಮಾರ್ಗಗಳು, ಸುರಂಗಗಳಿದ್ದರೂ ಅವುಗಳಿಗೆ ಪ್ರವೇಶವಿಲ್ಲ. ದೈಹಿಕವಾಗಿ ಸಮರ್ಥರಿದ್ದರೆ ಖಂಡಿತವಾಗಿ ಒಳಹೊಕ್ಕು ನೋಡಬೇಕು, ಒಳಗೆ ಏನಿದೆ ಎನ್ನುವುದು ಮುಖ್ಯವಲ್ಲ. ಮೆಟ್ಟಿಲು ತಿರುವು ಏರು ಸುರಂಗದಲ್ಲಿ ಇಡುವ ಪ್ರತಿ ಹೆಜ್ಜೆಯೂ ಮಡಿದವರ ಮಾಯಾಲೋಕದಲ್ಲಿ ಮರೆಯಲಾಗದ ಅನುಭವ. ಈಗೇನೋ ಪ್ರವಾಸಿಗರಿಗೆ ಏರಲು-ಇಳಿಯಲು ಮೆಟ್ಟಿಲು, ಆಧಾರಕ್ಕೆ ಕಟಾಂಜನ, ಅಲ್ಲಲ್ಲಿ ದೀಪಗಳ ವ್ಯವಸ್ಥೆ ಮಾಡಲಾಗಿದೆ. ಪಿರಮಿಡ್ಡಿನ ವಾಸ್ತುವಿಗೆ ತೊಂದರೆಯಾಗದಂತೆ ಒಳಗಿನ ತಾಪಮಾನ ಯಾವಾಗಲೂ 20 ಡಿಗ್ರಿ ಸೆಲ್ಸಿಯಸ್ ಇರುವಂತೆ ಮಾಡಿದ್ದಾರೆ.

ಅಂತೂ ಈಜಿಪ್ಟಿನ ನೂರಾರು ಕತೆಗಳು ರೋಚಕ. ಈ ಪಿರಮಿಡ್‌ಗಳ ನಿರ್ಮಾಣವೂ ಕೌತುಕವೇ ನಿಜ. ಆದರೆ 'ಭವ್ಯ ದೀಪ'ದ ಒಳಗಿನ ಕತ್ತಲೆ ಮತ್ತು ಖಾಲಿತನ ನನಗಂತೂ ರೂಪಕವಾಗಿ ಗೋಚರಿಸಿತು.

ಇಖೆತ್ (ಭವ್ಯ ದೀಪ)!

ಗೀಜಾದ ಪಿರಮಿಡ್ ಅನ್ನು ಫೆರೋ ಖುಫುಗಾಗಿ ನಿರ್ಮಿಸಲಾಗಿರುವುದರಿಂದ ಖುಫು ಪಿರಮಿಡ್ ಎಂದು ಕರೆಯಲಾಗುತ್ತದೆ. ಇದನ್ನು ಹಳೆಯ ಈಜಿಪ್ಟ್ ಸಾಮ್ರಾಜ್ಯದ ನಾಲ್ಕನೇ ರಾಜವಂಶದ ಅವಧಿಯಲ್ಲಿ ಕ್ರಿಸ್ತಪೂರ್ವ 2580-2560 ರಲ್ಲಿ ನಿರ್ಮಿಸಲಾಯಿತು. ಪೂರ್ಣವಾದಾಗ ಸುಮಾರು 481 ಅಡಿ ಎತ್ತರವಿದ್ದು ಕಾಲಕ್ರಮೇಣ ನೈಸರ್ಗಿಕ ಸವೆತ ಮತ್ತು ದಾಳಿಯಿಂದ ಈಗ 455 ಅಡಿಗೆ ಕುಗ್ಗಿರುವ ಇದು ಗೀಜಾ ಪ್ರಸ್ಥಭೂಮಿಯಲ್ಲಿರುವ ಮೂರು ಪಿರಮಿಡ್‌ಗಳಲ್ಲಿ ಎಲ್ಲಕ್ಕಿಂತ ದೊಡ್ಡದು. ಸುಣ್ಣದ ಕಲ್ಲುಗಳಿಂದ ನಿರ್ಮಿತವಾದ ಈ ಪಿರಮಿಡ್‌ನ ಹೊರಭಾಗವನ್ನು ಚೆನ್ನಾಗಿ ಪಾಲಿಶ್ ಮಾಡಲಾದ ಕೇಸಿಂಗ್ ಕಲ್ಲುಗಳಿಂದ ಮುಚ್ಚಲಾಗಿತ್ತು. ಈ ಹೊರ ಕವಚ ಸೂರ್ಯನ ಬೆಳಕನ್ನು ಪ್ರತಿಬಿಂಬಿಸಿ ಇಡೀ ಪಿರಮಿಡ್ ವಜ್ರದಂತೆ ಹೊಳೆಯುತ್ತಿತ್ತು. 14 ನೇ ಶತಮಾನದಲ್ಲಿ ಸಂಭವಿಸಿದ ಭೂಕಂಪದ ಸಮಯದಲ್ಲಿ ಇತರ ಕಟ್ಟಡ ನಿರ್ಮಿಸಲು ಈ ಕಲ್ಲುಗಳನ್ನು ಕಿತ್ತು ಬಳಸಿದ್ದರಿಂದ ಈ ಹೊರ ಕವಚ ನಷ್ಟವಾಗಿದ್ದು, ಅಲ್ಲಲ್ಲಿ ಸ್ವಲ್ಪ ಉಳಿದಿದೆ. ಮೂಲ ಪಿರಮಿಡ್ ಬೃಹತ್ ಕನ್ನಡಿಯಂತೆ ಪ್ರತಿಫಲಿಸಿ ಹೊಳೆಯುವ ನಕ್ಷತ್ರದಂತೆ ಚಂದ್ರನಿಂದ ನೋಡಿದರೂ ಗೋಚರಿಸುವಷ್ಟು ಶಕ್ತಿಯುತವಾಗಿತ್ತು ಎಂದು ವಿಜ್ಞಾನಿಗಳು ಊಹಿಸಿದ್ದಾರೆ. ಅದಕ್ಕೆ ಸರಿಯಾಗಿ ಪ್ರಾಚೀನ ಈಜಿಪ್ಟಿನವರು ಇದಕ್ಕಿಟ್ಟ ಹೆಸರು 'ಇಖೆತ್' (ಭವ್ಯ ದೀಪ)!

ಮಜ ಮಜ ಮಜಕೂರ

• ಎಂ.ಎಸ್.ಪೂಜಾರ



ಕೈ ತಪ್ಪಿದ ಮೀನು

• ಕಲೆ–ಪರಿಕಲ್ಪನೆ: ಸಂತೋಷ್ ಸಸಿಹಿತ್ಲು

ಗುಂಡ ಮೀನು ಹಿಡಿಯಲೆಂದು ಕೆರೆ ದಂಡೆಗೆ ಹೋದ. ಒಂದು ಕೋಲಿನ ತುದಿಗೆ ಹಗ್ಗ ಕಟ್ಟಿ, ಆ ಹಗ್ಗದ ತುದಿಗೆ ಗಾಳ ಸಿಕ್ಕಿಸಿದ. ಸ್ವಲ್ಪ ಹೊತ್ತಿನಲ್ಲೇ ಒಂದು ದೊಡ್ಡ ಮೀನು ಗಾಳಕ್ಕೆ ಬಿತ್ತು. ತಕ್ಷಣವೇ ಗುಂಡ ಕೋಲನ್ನು ಜೋರಾಗಿ ಎಳೆದ. ಮೀನು ಗಾಬರಿಗೊಂಡು ತನ್ನ ರೆಕ್ಕೆಯನ್ನು ಜೋರಾಗಿ ಬಡಿಯುತ್ತಾ ಜಿಗಿಯಿತು. ಆ ರಭಸಕ್ಕೆ ಗುಂಡನ ಕೈಯಿಂದ ಕೋಲು ಜಾರಿತು. ಅದರೊಂದಿಗೆ ಮೀನು ಕೊಂಚ ದೂರ ಹಾರಿ ಹೋಗಿ ನೀರು ಸೇರಿತು.



ಪ್ರಾಸ ಪದ ಬಂಧ

ಇಲ್ಲಿ ಕೊಟ್ಟಿರುವ ಅಕ್ಷರ ಪಟ್ಟಿಯಿಂದ ಒಂದು ಸೂಕ್ತವಾದ ಅಕ್ಷರಗಳನ್ನು ಆಯ್ಕೆ ಮಾಡಿಕೊಂಡು ಕೆಳಗೆ ಕೊಟ್ಟಿರುವ ಜೋಡಿ ಅಕ್ಷರಗಳಿಗೆ ತುಂಬಿ ಪ್ರಾಸಪದ ರಚಿಸಿ.

ಅಕ್ಷರ ಪಟ್ಟಿ			
ಆ	ನಾ	ಭ	ಸಂ
ನಂ	ಚಂ	ಪ	ಪ
ನಿ	ಶಿ	ಹು	ಬಿ

1

	ವಾ	ನಿ
	ವಾ	ನಿ

2

	ಯ	ಮ
	ಯ	ಮ

3

	ಲಿ	ಗೆ
	ಲಿ	ಗೆ

4

	ಜೀ	ವ
	ಜೀ	ವ

5

	ರು	ಕು
	ರು	ಕು

6

	ದ	ನ
	ದ	ನ

ಕಾರು ಓಟದ ಆಟ

ಮಕ್ಕಳೇ, ಇದು ಆರು ಜನರು ಆಡುವ ಆಟ. ಪಕ್ಕದಲ್ಲಿ ನೀಡಿರುವಂತೆ ಒಂದು ಕಾಗದದಲ್ಲಿ ಎರಡು ನಗರಗಳ ನಡುವೆ ಬರುವ ಪ್ರಮುಖ ಊರುಗಳ ಹೆಸರುಗಳನ್ನು ಬರೆಯಿರಿ. ಕೆಲವು ಊರುಗಳಲ್ಲಿ ಟ್ರಾಫಿಕ್ ಜಾಮ್, ಪಂಚರ್, ಸಿಗ್ನಲ್, ಪೆಟ್ರೋಲ್ ಖಾಲಿ, ಬ್ರೇಕ್ ಫೇಲ್ ಹೀಗೆ ಕೆಲ ಅಡೆತಡೆಗಳನ್ನು ಆರೂ ಚೌಕಗಳಲ್ಲಿ ಸೃಷ್ಟಿಸಿ. ಒಂದು ಡೈಸ್ ತೆಗೆದುಕೊಳ್ಳಿ. ಅದರ ಆರು ಬದಿಗಳಲ್ಲಿ ಆರು ಕಾರು ಕಂಪನಿಗಳ ಹೆಸರುಗಳನ್ನು ಬರೆದು ಅಂಟಿಸಿ. ನಂತರ ಆರು ಜನರು ತಮ್ಮ ಕಾರುಗಳನ್ನು ಆಯ್ದುಕೊಳ್ಳಲಿ. ಇದಕ್ಕೆ ಅನುಗುಣವಾಗಿ ಬೇರೆ ಬೇರೆ ಬಣ್ಣದ ಕಾಯಿಗಳನ್ನು ಆಯ್ದುಕೊಳ್ಳಿ. ಹೀಗೆ ಆಟ ಪ್ರಾರಂಭಿಸಿ. ಡೈಸ್‌ನಲ್ಲಿ ಯಾವ ಕಾರಿನ ಹೆಸರು ಬರುತ್ತದೆಯೋ ಅವರು ಒಂದೊಂದು ಊರು ದಾಟುತ್ತಾ ಸಾಗಲಿ. ಹೀಗೆ ಮೈಸೂರಿನಿಂದ ಹೊರಟು ಬೆಂಗಳೂರಿಗೆ ಮೊದಲು ತಲುಪಿದವರು ವಿಜೇತರಾಗುತ್ತಾರೆ. ಅಡೆತಡೆ ಸಿಕ್ಕಿದರೆ ಅವರಿಗೆ ಒಂದು ಆಟವಿರುವುದಿಲ್ಲ.

	ಟಾಟಾ	ಮಾರುತಿ	ರೆನಾಲ್ಟ್	ಹ್ಯುಂಡೈ	ಮಹೀಂದ್ರಾ	ಹೋಂಡಾ
ಮೈಸೂರು						
ಶ್ರೀರಂಗಪಟ್ಟಣ						
ಮಂಡ್ಯ			ಸಿಗ್ನಲ್			
ಮದ್ದೂರು				ಪೆಟ್ರೋಲ್ ಖಾಲಿ		
ಚನ್ನಪಟ್ಟಣ	ಪಂಚರ್					
ರಾಮನಗರ					ಟ್ರಾಫಿಕ್ ಜಾಮ್	
ಬಿಡದಿ		ಬ್ರೇಕ್ ಫೇಲ್				
ಕುಂಬಳಗೋಡು						
ಕೆಂಗೇರಿ						ಟ್ರಾಫಿಕ್ ಜಾಮ್
ಬೆಂಗಳೂರು						

ಜಾಣಪದ ಆಟ

ಇಲ್ಲಿ ಕೊಟ್ಟಿರುವ ಒತ್ತಕ್ಷರಕ್ಕೆ ಪದ ಪಟ್ಟಿಯಿಂದ ಆಯ್ದ ಪದವನ್ನು ಒತ್ತಕ್ಷರವನ್ನು ನಡುವೆ ಮಾಡಿಕೊಂಡು ತುಂಬಿದರೆ ಒಂದು ಅರ್ಥಬದ್ಧ ಪದವಾಗುತ್ತದೆ. ತುಂಬಲು ಪ್ರಯತ್ನಿಸಿ.

ಉದಾ: 'ಕ್ಷ'ದ ಆಚೆ ಈಚೆ 'ಅರ'ಶಬ್ದ ತುಂಬಿದರೆ ಅಕ್ಷರ ಎಂಬ ಪದವಾಗುತ್ತದೆ.

ಪದಪಟ್ಟಿ				
ಗರಿ	ಚಡಿ	ಹೆಣ	ಉರ	ಬೆಳ್ಳಿ
ಉರಿ	ಬರಿ	ಅರ	ಎಡ	ಬೆಲೆ

1		ಕ್ಷ	
2		ತ್ತ	
3		ಕ್ಕ	
4		ಕ್ಕ	
5		ದ್ದ	
6		ಳ್ಳ	
7		ತ್ತ	
8		ಳ್ಳ	
9		ಗ್ಗ	
10		ಜ್ಜ	

ಹೇಗಾದರೂ ಓದಿ

ಈ ಶಬ್ದಗಳನ್ನು ಎಡದಿಂದಾದರೂ ಓದಿ ಬಲದಿಂದಾದರೂ ಓದಿ.

1.ರೋಡಿನಲ್ಲೇನಡಿರೋ
2.ಮನುಜನಹೀನಜನುಮ
3.ಸಮಾನಮಾಸ
4.ಮರಾಠಿರಾಮ
5.ಸದಾನವಜೀವನದಾಸ

ಮಜ ಮಜ ಮಜಕೂರದ ಕಳೆದ ಸಂಚಿಕೆಯ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಸರಿ ಉತ್ತರ ಮುಂದಿನ ವಾರ..

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಆರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು. ಉತ್ತರ ಕಳುಹಿಸಲು ಇಮೇಲ್ ವಿಳಾಸ:

majakoora@prajavani.co.in

ಕಳೆದ ಸಂಚಿಕೆಯ ಸರಿ ಉತ್ತರಗಳು

ಪ್ರಾಸಪದಬಂಧ: 1.ಮಂದಿರ-ಚಂದಿರ 2.ಪುದಿನ-ಸುದಿನ 3.ಕಳಿಸು-ಉಳಿಸು 4.ಗರಡಿ-ಪರಡಿ 5.ಜೀರಿಗೆ-ಕೂರಿಗೆ 6.ನೆರಳು-ಕೊರಳು

ಜಾಣಪದ ಆಟ: 1.ಅಲ್ಲಾವರ 2.ಪೇಜಾವರ 3.ನಟವರ 4.ಕಳಾವರ 5.ಕಾಂತಾವರ 6.ಬಾಣಾವರ 7.ಸ್ವಯಂವರ 8.ಸರೋವರ

ಒಗಟು-ಒಡಿ: 1.ಕಣ್ಣು 2.ಪೊರಕೆ 3.ಛತ್ರಿ 4.ವಿಮಾನ 5.ಗಾಳಿ

ಸರಿ ಉತ್ತರ ನೀಡಿದ ಆಯ್ದ ಆರು ಪುಟಾಣಿಗಳು

ಹಾರ್ದಿಕ್ ಬಾಲಾಜಿ ಎಚ್.ಜಿ., ಬೆಂಗಳೂರು

ನಿಹಾಲ್ ಜೆ.ಎಚ್.ಗೌಡ
ಬಿ.ಜಿ.ನಗರ

ಸನ್ಹಾ ಅನಮ್
ಚಿಕ್ಕಮಗಳೂರು

ಅಕ್ಷರ ಎಂ.ಎಸ್.
ಮೈಸೂರು

ಪೂರ್ವಿಕಾ ಶಿ.ಬಿರಾದಾರ
ಬಳ್ಳಾರಿ

ಹರೀಶಕುಮಾರ್ ಬಿ.ಟಿ.
ನಂದಿಬೇವೂರು

ಬೆಂಗಳೂರಿನಲ್ಲಿ ಶನಿವಾರ ಆರಂಭವಾದ ನೆಟ್ಟಕಲ್ಲಪ್ಪ ಅಖಿಲ ಭಾರತ ಈಜು ಚಾಂಪಿಯನ್‌ಷಿಪ್ 3ನೇ ಆವೃತ್ತಿಯಲ್ಲಿ ಮಹಿಳೆಯರ 200 ಮೀಟರ್ ಮೆಡ್ಲೆಯಲ್ಲಿ ಬಸವನಗುಡಿ ಅಕ್ವೆಟಿಕ್ಸ್‌ನ ಹಷಿಕಾ ರಾಮಚಂದ್ರ ಚಿನ್ನದ ಪದಕ ಗೆದ್ದರು (ಎಡಚಿತ್ರ). ಮಹಿಳೆಯರ ಸ್ಕಿನ್ಸ್ ವಿಭಾಗದ ಬಟರ್ ಫ್ಲೈ ಸ್ಪರ್ಧೆಯಲ್ಲಿ ನೆಟ್ಟಕಲ್ಲಪ್ಪ ಅಕ್ವೆಟಿಕ್ಸ್ ಸೆಂಟರ್‌ನ ನೈಶಾ ಶೆಟ್ಟಿ ಚಾಂಪಿಯನ್ ಆದರು ಪ್ರಜಾವಾಣಿ ಚಿತ್ರಗಳು/ ಪ್ರಶಾಂತ್ ಎಚ್.ಜಿ.

ನೆಟ್ಟಕಲ್ಲಪ್ಪ ಅಖಿಲ ಭಾರತ ಈಜು ಚಾಂಪಿಯನ್‌ಷಿಪ್: ಚಿಂತನ್, ಆಕಾಶ ಮಣಿ ಪ್ರಥಮ

ಚಿನ್ನದ ಅಲೆ ಎಬ್ಬಿಸಿದ ಹಷಿಕಾ, ನೈಶಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಸವನಗುಡಿ ಈಜುಕೇಂದ್ರ ಹಷಿಕಾ ರಾಮಚಂದ್ರ ಮತ್ತು ಆತಿಥೇಯ ನೆಟ್ಟಕಲ್ಲಪ್ಪ ಅಕ್ವೆಟಿಕ್ಸ್ ಸೆಂಟರ್‌ನ ನೈಶಾ ಶೆಟ್ಟಿ ಶನಿವಾರ ಆರಂಭವಾದ 'ನೆಟ್ಟಕಲ್ಲಪ್ಪ ಅಖಿಲ ಭಾರತ ಈಜು ಚಾಂಪಿಯನ್‌ಷಿಪ್'ನಲ್ಲಿ ತಲಾ ಮೂರು ಚಿನ್ನದ ಪದಕ ಜಯಿಸಿದರು.

ಬೆಳಿಗ್ಗೆಯಿಂದ ನಡೆದ ವಿವಿಧ ಸ್ಪರ್ಧೆಗಳಲ್ಲಿ 3 ಚಿನ್ನ ಗೆದ್ದಿದ್ದ ಹಷಿಕಾ ಅವರನ್ನು ನೈಶಾ ಶೆಟ್ಟಿ ಅವರು ಸಂಜೆ ನಡೆದ ಓಪನ್ ಸ್ಕಿನ್ಸ್ ವಿಭಾಗದ ಮಹಿಳೆಯರ 50 ಮೀ ಬಟರ್‌ಫ್ಲೈ ಸ್ಪರ್ಧೆಯಲ್ಲಿ ಹಿಂದಿಕ್ಕಿದರು. ಈ ರೋಚಕ ಸ್ಪರ್ಧೆಯಲ್ಲಿ ನೈಶಾ ಅವರು ಮೇಲುಗೈ ಸಾಧಿಸಿದರು. ನೈಶಾ ಅವರು 29.54 ಸೆಕೆಂಡುಗಳಲ್ಲಿ ಗುರಿ ಮುಟ್ಟಿದರೆ, ಹಷಿಕಾ 29.58 ಸೆಕೆಂಡುಗಳಲ್ಲಿ ತಲುಪಿದರು.

ಇದಲ್ಲದೇ ಹಷಿಕಾ ಅವರು ಗುಂಪು 1ರ 400 ಮೀ ಫ್ರೀಸ್ಟೈಲ್, 200 ಮೀ ವೈಯಕ್ತಿಕ ಮೆಡ್ಲೆ ಮತ್ತು 100 ಮೀ ಬಟರ್‌ಫ್ಲೈನಲ್ಲಿ ಮೊದಲಿಗರಾದರು. ನೈಶಾ ಅವರು ಸೀನಿಯರ್ ವಿಭಾಗದಲ್ಲಿ 100 ಮೀ ಬ್ಯಾಕ್‌ಸ್ಟ್ರೋಕ್ ಮತ್ತು 100 ಮೀ ಬಟರ್‌ಫ್ಲೈ ವಿಭಾಗದಲ್ಲಿ ಚಿನ್ನ ಗೆದ್ದರು. ಪುರುಷರ ವಿಭಾಗದ ಸ್ಕಿನ್ಸ್ ಬಟರ್‌ಫ್ಲೈನಲ್ಲಿ ಲಕ್ಷ್ಯನ್ ಅಕಾಡೆಮಿ ಆಫ್ ಸ್ಪೋರ್ಟ್ಸ್‌ನ ಚಿಂತನ್ ಶೆಟ್ಟಿ (26.13ಸೆ) ಚಿನ್ನ ಗೆದ್ದರು.

ಫಲಿತಾಂಶಗಳು: ಪುರುಷರು: ಓಪನ್; ಸ್ಕಿನ್ಸ್: 50 ಮೀ ಬ್ಯಾಕ್‌ಸ್ಟ್ರೋಕ್: ಆಕಾಶ ಮಣಿ (ಬಸವನಗುಡಿ ಅಕ್ವೆಟಿಕ್ ಸೆಂಟರ್; ಕಾಲ: 26.18ಸೆ)–1, ನಿತಿಕ್ ನಟಾಲಿಯಾ (ಎಸ್‌ಆರ್‌ಎಂ ಯುನಿವರ್ಸಿಟಿ)–2, ಬಿ ಜತಿನ್ (ಗ್ಲೋಬಲ್ ಸ್ವಿಮ್ ಸೆಂಟರ್)–3.
ಸ್ಕಿನ್ಸ್: 50 ಮೀ ಬಟರ್‌ಫ್ಲೈ: ಚಿಂತನ್ ಎಸ್ ಶೆಟ್ಟಿ (ಲಕ್ಷ್ಯನ್ ಅಕಾಡೆಮಿ ಆಫ್ ಸ್ಪೋರ್ಟ್ಸ್; 26.13ಸೆ)–1, ಎಸ್. ವಿದಿತ್ ಶಂಕರ್ (ಡಾಲ್ಫಿನ್ ಅಕ್ವೆಟಿಕ್ಸ್)–2, ದೇವಗಣೇಶ್ ನೀಲಂ (ಜಿಎಸ್‌ಸಿ)–3
200 ಮೀ ಮೆಡ್ಲೆ: ಅನೀಶ್ ಎಸ್ ಗೌಡ (ಬಿಎಸಿ; 2ನಿ,13.74ಸೆ)–1, ಎಸ್. ವಿದಿತ್ ಶಂಕರ್ (ಡಾಲ್ಫಿನ್ ಅಕ್ವೆಟಿಕ್ಸ್)–2, ಶಿವಾಂಕ್ ವಿಶ್ವನಾಥ್ (ಬಿಎಸಿ)–3.
100 ಮೀ ಬ್ಯಾಕ್‌ಸ್ಟ್ರೋಕ್: ಆಕಾಶ ಮಣಿ (ಬಿಎಸಿ; 59.24ಸೆ)–1, ನಿತಿಕ್ ನತೇಲಾ (ಎಸ್‌ಆರ್‌ಎಂ ವಿಶ್ವವಿದ್ಯಾಲಯ)–2, ಬಿ ಜತಿನ್ (ಜಿಎಸ್‌ಸಿ)–3.
100 ಮೀ ಬಟರ್‌ಫ್ಲೈ: ಅನೀಶ್ ಎಸ್ ಗೌಡ(ಬಿಎಸಿ; 57.11ಸೆ)–1, ಕಾರ್ತಿಕೇಯನ್ ನಾಯರ್ (ಡಾಲ್ಫಿನ್)–2, ಶಿವಾಂಕ್ ವಿಶ್ವನಾಥ್ (ಬಿಎಸಿ)–3,

ನಗರದ ನೆಟ್ಟಕಲ್ಲಪ್ಪ ಅಕ್ವೆಟಿಕ್ ಸೆಂಟರ್‌ನಲ್ಲಿ ಅಖಿಲ ಭಾರತ ಈಜು ಕೂಟವನ್ನು ಉದ್ಘಾಟಿಸಿದ ಒಲಿಂಪಿಯನ್ ನಿಶಾ ಮಿಲೆಟ್ ಅವರಿಗೆ ಕೆ.ಎನ್. ಗುರುಸ್ವಾಮಿ ಶಿಕ್ಷಣ ಮತ್ತು ಚಾರಿಟೆಬಲ್ ಟ್ರಸ್ಟ್ ಚೇರ್ಮನ್ ಕೆ.ಎನ್. ತಿಲಕಕುಮಾರ್ ಅವರು ಸ್ಮರಣಿಕೆ ನೀಡಿ ಗೌರವಿಸಿದರು. ಈ ಸಂದರ್ಭದಲ್ಲಿ ಅಂತರರಾಷ್ಟ್ರೀಯ ಈಜು ತರಬೇತುದಾರ ಪ್ರದೀಪ್ ಕುಮಾರ್, ಟ್ರಸ್ಟ್ ನಿರ್ದೇಶಕಿ ಸುಜಾತಾ ತಿಲಕಕುಮಾರ್ ಹಾಜರಿದ್ದರು –ಪ್ರಜಾವಾಣಿ ಚಿತ್ರ

ಬಾಲಕರು ಗುಂಪು 1: 100 ಮೀ ಬ್ಯಾಕ್‌ಸ್ಟ್ರೋಕ್: ಅಮನ್ ಅಭಿಜಿತ್ ಸುಣಗಾರ (ಡಾಲ್ಫಿನ್; 1ನಿ, 01.26ಸೆ)–1, ಕೆ. ಕುಶಾಲ (ಬಿಎಸಿ)–2, ಇದಾಂತ್ ಚತುರ್ವೇದಿ (ಬಿಎಸಿ)–3
400 ಮೀ ಫ್ರೀಸ್ಟೈಲ್: ದಕ್ಷಣ್ (ಬಿಎಸಿ; 4ನಿ,19.70ಸೆ)–1, ಎಸ್. ದರ್ಶನ್ (ಬಿಎಸಿ)–2, ಪೃಥ್ವಿರಾಜ್ ಮೆನನ್ (ಬಿಎಸಿ)–3.
200 ಮೀ ಮೆಡ್ಲೆ: ದೇವಾ ಗಣೇಶ್ ನೀಲಂ (ಜಿಎಸ್‌ಸಿ; 2ನಿ,14.35ಸೆ)–1, ಸೂರ್ಯ ಜೊಯಪ್ಪಾ (ಬಿಎಸಿ)–2, ಆರ್. ನವನೀತ್ ಗೌಡ (ಡಾಲ್ಫಿನ್)–3
100 ಮೀ ಬಟರ್‌ಫ್ಲೈ: ಎಸ್. ದರ್ಶನ್ (ಬಿಸಿ; 57.91ಸೆ)–1, ಚಿಂತನ್ ಎಸ್ ಶೆಟ್ಟಿ (ಲಕ್ಷ್ಯನ್ ಅಕಾಡೆಮಿ)–2, ದಕ್ಷಣ್ (ಬಿಎಸಿ)–3
2ನೇ ಗುಂಪು: 100 ಮೀ ಬ್ಯಾಕ್‌ಸ್ಟ್ರೋಕ್: ಸಮರ್ಥ ಗೌಡ ಬಿಎಸ್ (ಬಿಎಸಿ; 1ನಿ, 02.17ಸೆ)–1, ಅದ್ವೈತಾ ವೆಂಕಟ ಮದಿರಾ (ಬಿಎಸಿ)–2, ಗಣಪತಿ ಭಾರದ್ವಾಜ (ಗೋಲ್ಡನ್ ಫಿನ್ಸ್)–3
100 ಮೀ ಬಟರ್‌ಫ್ಲೈ: ಸಮರ್ಥ ಗೌಡ ಬಿಎಸ್ (ಬಿಎಸಿ; 1ನಿ,01.03ಸೆ)–1, ಎಸ್. ಶರಣ್ (ಮತ್ಸ್ಯ ಇನ್‌ಕಾರ್ಪೋರೇಷನ್)–2, ಅಕ್ಷಜ್ ಠಾಕೂರಿಯಾ (ಡಾಲ್ಫಿನ್)–3.
ಮಹಿಳೆಯರು: ಓಪನ್: ಸ್ಕಿನ್ಸ್: 50 ಮೀ ಬ್ಯಾಕ್‌ಸ್ಟ್ರೋಕ್: ವಿಹಿತಾ ನಯನಾ (ಬಿಎಸಿ; 30.45ಸೆ)–1, ಆರ್. ಶಾಲಿನಿ ದೀಕ್ಷಿತ್ (ಡಾಲ್ಫಿನ್)–2, ಜಿ. ಸಿದ್ಧ ಶಹಾ (ಡಾಲ್ಫಿನ್)–3
ಸ್ಕಿನ್ಸ್ 50 ಮೀ ಬಟರ್‌ಫ್ಲೈ: ನೈಶಾ ಶೆಟ್ಟಿ (ನೆಟ್ಟಕಲ್ಲಪ್ಪ ಅಕ್ವೆಟಿಕ್ಸ್ ಸೆಂಟರ್; 29.54ಸೆ)–1, ಹಷಿಕಾ ರಾಮಚಂದ್ರ (ಬಿಎಸಿ)–2, ರಿಷಿಕಾ ಯು ಮಾಂಗ್ಲೆ (ಬಿಎಸಿ)–3
ಸೀನಿಯರ್ಸ್: 200 ಮೀ ಮೆಡ್ಲೆ: ಶ್ರುಂಗಿ ರಾಜೇಶ್ ಬಾಂದೇಕರ್ (ಜೈನ್ ಕಾಲೇಜು; 2ನಿ, 35.45ಸೆ)–1, ಎಸ್. ಲಕ್ಷ್ಯ (ಇನ್‌ಸ್ಪಾಯರ್ ಇನ್‌ಸ್ಟ್ಯೂಟ್ ಆಫ್ ಸ್ಪೋರ್ಟ್ಸ್)–2, ಯಶ್ವಿ ಪ್ರದೀಪ್ ಕರಾಟ್ (ಜಿಎಸ್‌ಸಿ)–3.
100 ಮೀ ಬ್ಯಾಕ್‌ಸ್ಟ್ರೋಕ್: ನೈಶಾ ಶೆಟ್ಟಿ (ಎನ್‌ಎಸಿ; 1ನಿ, 11.44ಸೆ)–1, ಶ್ರುಂಗಿ ಬಾಂದೇಕರ್ (ಜೈನ್ ಕಾಲೇಜು)–2, ಎಸ್. ಲಕ್ಷ್ಯ (ಇನ್‌ಸ್ಪಾಯರ್ ಇನ್‌ಸ್ಟ್ಯೂಟ್)–3.
100 ಮೀ ಬಟರ್‌ಫ್ಲೈ: ನೈಶಾ ಶೆಟ್ಟಿ (ಎನ್‌ಎಸಿ; 1ನಿ,06.17ಸೆ)–1, ಥಿತೀಕ್ಷಾ ಹನುಮಂತರಾಜು (ಜಿಎಸ್‌ಸಿ)–2, ಅನುಮತಿ ಚೌಗುಲೆ (ಬಿಎಸಿ)–3
ಬಾಲಕಿಯರು: ಗುಂಪು 1: 100 ಮೀ ಬ್ಯಾಕ್‌ಸ್ಟ್ರೋಕ್: ವಿಹಿತಾ ನಯನಾ (ಬಿಎಸಿ; 1ನಿ,08.81ಸೆ)–1, ಮೀನಾಕ್ಷಿ ಮೆನನ್ (ಬಿಎಸಿ)–2,ಜಿ. ಸಿದ್ಧಿ ಶಹಾ (ಡಾಲ್ಫಿನ್)–3
400 ಮೀ ಫ್ರೀಸ್ಟೈಲ್: ಹಷಿಕಾ ರಾಮಚಂದ್ರ (ಬಿಎಸಿ; 4ನಿ, 37.19ಸೆ)–1, ಮೀನಾಕ್ಷಿ ಮೆನನ್ (ಬಿಎಸಿ)–2, ಅದಿತಿ ಎನ್ ಮೂಲ್ಯ (ಬಿಎಸಿ)–3.
200 ಮೀ ಮೆಡ್ಲೆ: ಹಷಿಕಾ ರಾಮಚಂದ್ರ (ಬಿಎಸಿ; 2ನಿ,30.75ಸೆ)–1, ಮೀನಾಕ್ಷಿ ಮೆನನ್ (ಬಿಎಸಿ)–2, ದಯನೀತಾ ಶಂಕರ್ (ಸ್ವಿಮ್ ಸ್ಕೇರ್)–3.
100 ಮೀ ಬಟರ್‌ಫ್ಲೈ: ಹಷಿಕಾ ರಾಮಚಂದ್ರ (ಬಿಎಸಿ; 1ನಿ,05.92ಸೆ)–1, ರಿಷಿಕಾ ಯು ಮಾಂಗ್ಲೆ (ಬಿಎಸಿ)–2, ಅಂಜಲಿ ಹೊಸಕೆರೆ (ಬಿಎಸಿ)–3.
ಗುಂಪು 2: 100 ಮೀ ಬ್ಯಾಕ್‌ಸ್ಟ್ರೋಕ್: ಆದ್ಯಾ ನಾಯರ್ (ಡಾಲ್ಫಿನ್, 1ನಿ,12.77ಸೆ)–1, ಆಕಾಂಕ್ಷಾ ತಗಡೂರು (ನೆಟ್ಟಕಲ್ಲಪ್ಪ ಅಕ್ವೆಟಿಕ್ ಸೆಂಟರ್)–2, ಧೃತಿ ಕರಿಬಸವೇಶ್ವರ (ಅನೆಪ್ಪಾ ಸೆಂಟರ್ ಫಾರ್ ಎಕ್ಸೆಲನ್ಸ್)–3.
100 ಮೀ ಬಟರ್‌ಫ್ಲೈ: ತ್ರಿಷಾ ಸಿಂಧು (ಜಿಎಸ್‌ಸಿ; 1ನಿ, 09.82ಸೆ)–1, ಚರಿತಾ ಫಣೀಂದ್ರನಾಥ (ಎಲೈಟ್ ಅಕ್ವೆಟಿಕ್ ಸೆಂಟರ್)–2, ಹಿತಾಶ್ರೀ ಎನ್ (ಎನ್‌ಎಸಿ)–3.

ಹರ್ಮನ್‌ಪ್ರೀತ್, ಶ್ರೀಜೇಶ್‌ಗೆ ಎಫ್‌ಐಎಚ್ ವಾರ್ಷಿಕ ಪ್ರಶಸ್ತಿ

ಲಾಸೆನ್, ಸ್ವಿಟ್ಜರ್‌ಲೆಂಡ್ (ಪಿಟಿಐ): ಭಾರತ ಹಾಕಿ ತಂಡದ ನಾಯಕ ಹರ್ಮನ್‌ಪ್ರೀತ್ ಸಿಂಗ್ ಮತ್ತು ಗೋಲ್ ಕೀಪರ್ ಪಿ.ಆರ್. ಶ್ರೀಜೇಶ್ ಅವರು ಎಫ್‌ಐಎಚ್ ವಾರ್ಷಿಕ ಪ್ರಶಸ್ತಿ ಗೌರವಕ್ಕೆ ಪಾತ್ರರಾಗಿದ್ದಾರೆ.

ಒಮಾನ್‌ನಲ್ಲಿ ಶುಕ್ರವಾರ ರಾತ್ರಿ ನಡೆದ ಕಾರ್ಯಕ್ರಮದಲ್ಲಿ ಹರ್ಮನ್ ಮತ್ತು ಶ್ರೀಜೇಶ್ ಅವರಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು. ಇದು 2024ನೇ ಸಾಲಿನ ಪ್ರಶಸ್ತಿಯಾಗಿದೆ.

ಈ ಪ್ರಶಸ್ತಿಗಾಗಿ ಪೈಪೋಟಿಯಲ್ಲಿದ್ದ ನೆದರ್ಲೆಂಡ್ಸ್‌ನ ಜೋಪ್ ಡಿ ಮೋಲ್, ಥೀರಿ ಬ್ರಿಂಕ್‌ಮ್ಯಾನ್, ಜರ್ಮನಿಯ ಹೆನೆಸ್ ಮುಲ್ಲರ್, ಇಂಗ್ಲೆಂಡ್‌ನ ಝಾಕ್ ವಾಲೆಸ್ ಅವರನ್ನು ಹಿಂದಿಕ್ಕಿದ ಹರ್ಮನ್ ಪ್ರಶಸ್ತಿ ಗಳಿಸಿದ್ದರು.

ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಭಾರತ ತಂಡದ ನಾಯಕ ಹರ್ಮನ್‌ಪ್ರೀತ್ ಸಿಂಗ್ 10 ಗೋಲು ಗಳಿಸಿದರು. ತಂಡವು ಕಂಚಿನ ಪದಕ ಗಳಿಸಿತ್ತು.

ಹರ್ಮನ್‌ಪ್ರೀತ್

ಶ್ರೀಜೇಶ್

ಪ್ಯಾರಿಸ್ ಒಲಿಂಪಿಕ್ಸ್ ನಂತರ ನಿವೃತ್ತಿ ಘೋಷಿಸಿದ್ದ ಶ್ರೀಜೇಶ್ ಅವರು, ಪಿರ್ಮಿನ್ ಬ್ಲಾಕ್ (ನೆದರ್ಲೆಂಡ್ಸ್), ಲೂಯಿಸ್ ಕಾಲ್‌ಝಾಡೊ (ಸ್ಪೇನ್), ಜೀನ್ ಪಾಲ್ ಡ್ಯಾನ್‌ಬರ್ಗ್ (ಜರ್ಮನಿ) ಮತ್ತು ಥಾಮಸ್ ಸ್ಯಾಂಟಿಯಾಗೊ (ಅರ್ಜೆಂಟೀನಾ) ಅವರ ಸ್ಪರ್ಧೆಯನ್ನು ಮೀರಿ ಪ್ರಶಸ್ತಿ ಪಡೆದರು. ಶ್ರೀಜೇಶ್ ಅವರು ಟೋಕಿಯೊ ಮತ್ತು ಪ್ಯಾರಿಸ್ ಒಲಿಂಪಿಕ್ ಕೂಟಗಳಲ್ಲಿ ಪದಕ ಜಯಿಸಿದ ಭಾರತದ ಗೋಲ್‌ಕೀಪರ್ ಆಗಿ ಮಿಂಚಿದ್ದರು.

ಟಿ20 ಎರಡನೇ ಪಂದ್ಯ ಇಂದು

ಗೆಬರ್ಹಾ (ಪೋರ್ಟ್ ಎಲಿಜಬೆತ್), (ಪಿಟಿಐ): ಅಮೋಘ ಲಯದಲ್ಲಿರುವ ಸಂಜು ಸ್ಯಾಮ್ಸನ್ ಅವರು ಬೌಲರ್‌ಗಳ ಮೇಲಿನ ಪಾರಮ್ಯವನ್ನು ಮುಂದು ವರಿಸುವ ಉತ್ಸಾಹದಲ್ಲಿದ್ದಾರೆ. ಆದರೆ, ದಕ್ಷಿಣ ಆಫ್ರಿಕಾ ವಿರುದ್ಧ ಭಾನುವಾರ ನಡೆಯುವ ಟಿ20 ಸರಣಿಯ ಎರಡನೇ ಪಂದ್ಯದಲ್ಲಿ ಭಾರತ ತಂಡವು ಅಗ್ರ ಕ್ರಮಾಂಕದ ಇತರ ಬ್ಯಾಟರ್‌ಗಳಿಂದಲೂ ಸ್ಥಿರ ಪ್ರದರ್ಶನದ ನಿರೀಕ್ಷೆಯಲ್ಲಿದೆ.

ಸಂಜು ಸ್ಯಾಮ್ಸನ್

ಶುಕ್ರವಾರ ನಡೆದ ಮೊದಲ ಪಂದ್ಯದಲ್ಲಿ ಸ್ಯಾಮ್ಸನ್ ಸ್ಫೋಟಕ ಇನಿಂಗ್ಸ್ ಆಡಿ 50 ಎಸೆತಗಳಲ್ಲಿ 107 ರನ್ ಸಿಡಿಸಿದ್ದರು. ಆದರೆ ಇತರ ಬ್ಯಾಟರ್‌ಗಳಿಂದ ಅಂಥ ಅಬ್ಬರ ಕಾಣಿಸಲಿಲ್ಲ. ಭಾರತ ಈ ಪಂದ್ಯವನ್ನು 61 ರನ್‌ಗಳಿಂದ ಸುಲಭವಾಗಿ ಗೆದ್ದು ಕೊಂಡಿತ್ತು. ಆ ಮೂಲಕ ಚುಟುಕು ಮಾದರಿಯಲ್ಲಿ ಪ್ರವಾಸಿ ತಂಡ ಯಶಸ್ಸಿನ ಓಟ ಮುಂದುವರಿಸುವ ಉತ್ಸಾಹದಲ್ಲಿದೆ.

ಕೇರಳದ ವಿಕೆಟ್ ಕೀಪರ್– ಬ್ಯಾಟರ್ ಮೇಲೆ ಹೆಚ್ಚಿನ ಒತ್ತಡ ಬೀಳದೇ ಇರಬೇಕಾದರೆ ಇತರ ಬ್ಯಾಟರ್‌ಗಳು ಉಪಯುಕ್ತ ಕೊಡುಗೆ ನೀಡುವ ಅಗತ್ಯವಿದೆ. ಅಭಿಷೇಕ್ ಶರ್ಮಾ ಲಭಿಸಿದ ಅನೇಕ ಅವಕಾಶಗಳನ್ನು ಬಳಸಿಕೊಂಡಿಲ್ಲ. ಇದು ತಂಡಕ್ಕೆ ಚಿಂತೆಯ ವಿಷಯ. ಕಡೆಯ ಏಳು ಇನಿಂಗ್ಸ್‌ಗಳಲ್ಲಿ ಬೀಸು ಹೊಡೆತದ ಎಡಗೈ ಆಟಗಾರನ ಗಳಿಕೆ– 0, 10, 14, 16, 15, 4 ಮತ್ತು 7.

ಮೊದಲ ಪಂದ್ಯದಲ್ಲಿ ಕೊನೆಯ ಆರು ವಿಕೆಟ್‌ಗಳು 36 ರನ್ ಅಂತರದಲ್ಲಿ ಉರುಳಿದ್ದವು. ಒಂದು ಹಂತದಲ್ಲಿ 2 ವಿಕೆಟ್‌ಗೆ 166 ರನ್ ಗಳಿಸಿ ಉತ್ತಮ ಮೊತ್ತದತ್ತ ಕಣ್ಣಿಟ್ಟಿದ್ದ ಭಾರತ 20 ಓವರುಗಳು ಮುಗಿದಾಗ 8 ವಿಕೆಟ್‌ಗೆ 202 ರನ್ ಗಳಿಸಿತ್ತು.

ಬೌಲಿಂಗ್ ವಿಭಾಗದಲ್ಲಿ ತಂಡದ ಪ್ರದರ್ಶನ ಉತ್ತಮವಾಗಿತ್ತು. ಸ್ಪಿನ್ನರ್‌ಗಳು ಮಧ್ಯಮ ಹಂತದ ಓವರುಗಳಲ್ಲಿ ಹರಿಣಗಳನ್ನು ಕಟ್ಟಿಹಾಕಿದರು.

ಅನುಭವಿಗಳಾದ ಕ್ವಿಂಟನ್ ಡಿಕಾಕ್, ಕಗಿಸೊ ರಬಾಡ, ಆನ್ರಿಚ್ ನಾಕಿಯಾ ಮತ್ತು ತಬ್ರೇಜ್ ಸಂಶಿ ಅವರ ಗೈರಿನಲ್ಲಿ ದಕ್ಷಿಣ ಆಫ್ರಿಕಾ ಮೊದಲ ಪಂದ್ಯದಲ್ಲಿ ಪರದಾಡಿದೆ.

ಪಂದ್ಯ ಆರಂಭ: ರಾತ್ರಿ 7.30: ನೇರ ಪ್ರಸಾರ: ಸ್ಪೋರ್ಟ್ಸ್ 18 ಮತ್ತು ಜಿಯೊ ಸಿನಿಮಾ

ಮಯಂಕ್ ಬಳಗದ ನಾಕೌಟ್ ಹಾದಿ ಜಟಿಲ

ಕರ್ನಾಟಕ–ಬಂಗಾಳ ಪಂದ್ಯ ಡ್ರಾ; ಸುದೀಪ್ ಘರಾಮಿ ಶತಕ, ಸಹಾ ಅರ್ಧಶತಕ

• ಗಿರೀಶ ದೊಡ್ಡಮನಿ

ಬೆಂಗಳೂರು: ಶನಿವಾರ ಬೆಳಿಗ್ಗೆ ವೇಗಿ ವಿದ್ಯಾಧರ ಪಾಟೀಲ ಅವರು ಬಂಗಾಳ ತಂಡದ ಎರಡು ವಿಕೆಟ್ ಗಳಿಸಿದಾಗ ಕರ್ನಾಟಕ ಬಳಗದಲ್ಲಿ ಗೆಲುವಿನ ಸಣ್ಣ ಆಸೆಯೊಂದು ಚಿಗುರಿತ್ತು.

ಆಗ ಬಂಗಾಳದ ಸ್ಕೋರು 5 ವಿಕೆಟ್‌ಗಳಿಗೆ 160 ಆಗಿತ್ತು. 240 ರನ್‌ಗಳ ಮುನ್ನಡೆ ಸಾಧಿಸಿತ್ತು. ಆದಷ್ಟು ಬೇಗ ಉಳಿದ ವಿಕೆಟ್ ಗಳಿಸಿ ಉಳಿದ ಅವಧಿಯಲ್ಲಿ ಗೆಲುವಿಗೆ ಪ್ರಯತ್ನಿಸುವ ಉತ್ಸಾಹ ಮಯಂಕ್ ಅಗರವಾಲ್ ಬಳಗದಲ್ಲಿ ಗರಿಗೆದರಿತ್ತು. ಆದರೆ ಪ್ರವಾಸಿ ತಂಡದ ಬ್ಯಾಟರ್ ಸುದೀಪ್ ಕುಮಾರ್ ಘರಾಮಿ (ಔಟಾಗದೆ 101, 193ಎ, 4X13, 6X1) ಮತ್ತು ವೃದ್ಧಿಮಾನ್ ಸಹಾ (ಔಟಾಗದೆ 63; 70ಎ, 4X7, 6X1) ಅವರು ಕರ್ನಾಟಕ ತಂಡದ ಆಸೆಗೆ ಅಡ್ಡಿಯಾದರು. ಕರ್ನಾಟಕದ ನಾಕೌಟ್ ಹಾದಿಯು ಮತ್ತಷ್ಟು ಕಠಿಣವಾಗುವಂತೆ ಮಾಡಿದರು. ಡ್ರಾ ಆದ ಪಂದ್ಯದಲ್ಲಿ ಬಂಗಾಳವು ಮೊದಲ ಇನಿಂಗ್ಸ್ ಮುನ್ನಡೆಯಿಂದಾಗಿ 3 ಅಂಕ ಗಳಿಸಿತು. ಆತಿಥೇಯ ಬಳಗವು ಒಂದು ಅಂಕ ಪಡೆದು ನಿಟ್ಟುಸಿರು ಬಿಟ್ಟಿತು.

ಬಂಗಾಳದ ಘರಾಮಿ ಮತ್ತು ಸಹಾ ಜೋಡಿ ಊಟದ ವಿರಾಮದವರೆಗೆ ಪಾರಮ್ಯ ಮೆರೆಯಿತು. ತಂಡವು 81.4 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 283 ರನ್ ಗಳಿಸಿ ಡಿಕ್ಲೇರ್ಡ್ ಮಾಡಿಕೊಂಡಿತು. ಕರ್ನಾಟಕಕ್ಕೆ 364 ರನ್‌ಗಳ ಗೆಲುವಿನ ಗುರಿಯೊಡ್ಡಿತು. ಆಗ ದಿನದಾಟದಲ್ಲಿ 50 ಓವರ್‌ಗಳು ಮಾತ್ರ ಬಾಕಿ ಇದ್ದವು. ಆದ್ದರಿಂದ ಈ ಗುರಿ ಕಠಿಣವಾಗಿತ್ತು.

ಬ್ಯಾಟಿಂಗ್ ಆರಂಭಿಸಿದ ಕರ್ನಾಟಕ ತಂಡಕ್ಕೆ ಬಂಗಾಳದ ಸೂರಜ್ ಸಿಂಧು ಜೈಸ್ವಾಲ್ (27ಕ್ಕೆ3) ಬಲವಾದ ಪೆಟ್ಟು ನೀಡಿದರು. ನಾಯಕ ಮಯಂಕ್ ಅಗರವಾಲ್ ಎರಡನೇ ಓವರ್‌ನಲ್ಲಿ ಅನುಸ್ತುಪ್ ಮಜುಂದಾರ್‌ಗೆ ಕ್ಯಾಚಿತ್ತರು. ಜೈಸ್ವಾಲ್ ಹಾಕಿದ ಆರನೇ ಓವರ್‌ನಲ್ಲಿ ಕಿಶನ್ ಬೆದಾರೆ ಕೂಡ ಶಕೀರ್ ಗಾಂಧಿಗೆ ಕ್ಯಾಚ್ ಕೊಟ್ಟರು. ಈ ಹಂತದಲ್ಲಿ ಜೊತೆಗೂಡಿದ ಆರ್. ಸ್ಮರಣ್ (ಔಟಾಗದೆ 35) ಮತ್ತು ಶ್ರೇಯಸ್ ಗೋಪಾಲ್ (32 ರನ್) ಅವರು ಮೂರನೇ ವಿಕೆಟ್ ಜೊತೆಯಾಟದಲ್ಲಿ 54 ರನ್ ಸೇರಿಸಿದರು. ಈ ಜೊತೆಯಾಟವನ್ನೂ ಜೈಸ್ವಾಲ್ ಅವರು ಶ್ರೇಯಸ್‌ಗೆ ಎಲ್‌ಬಿ ಡಬ್ಲ್ಯು ಬಲೆಯಲ್ಲಿ ಬೀಳಿಸುವ ಮೂಲಕ ಮುರಿದರು.



ವೃದ್ಧಿಮಾನ್ ಸಹಾ ಮತ್ತು ಸುದೀಪ್ ಕುಮಾರ್ ಘರಾಮಿ –ಪ್ರಜಾವಾಣಿ ಚಿತ್ರ/ಎಸ್.ಕೆ. ದಿನೇಶ್

ಚಹಾ ವಿರಾಮದ ನಂತರ ಒಂದಿಷ್ಟು ಹೊತ್ತು ಸ್ಮರಣ್ ಮತ್ತು ಮನೀಷ್ ಪಾಂಡೆ (ಔಟಾಗದೆ 30) ಅವರು ಬ್ಯಾಟಿಂಗ್ ಮುಂದು ವರಿಸಿದರು. ತಂಡವು 28 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 110 ರನ್ ಗಳಿಸಿದ್ದ ಸಂದರ್ಭದಲ್ಲಿ ಉಭಯ ತಂಡದ ನಾಯಕರು ಡ್ರಾ ಗೆ ಸಮ್ಮತಿಸಿ ಕೈಕುಲುಕಿದರು.

'ನಾಕೌಟ್ ಪ್ರವೇಶಕ್ಕಾಗಿ ಯಾವುದೇ ಲೆಕ್ಕಾಚಾರಗಳನ್ನು ಮಾಡುತ್ತಿಲ್ಲ. ಆದರೆ ಇನ್ನು ನಮ್ಮ ಮುಂದೆ ಉಳಿದಿರುವ ಎಲ್ಲ ಪಂದ್ಯಗಳಲ್ಲಿಯೂ ಉತ್ತಮ ಅಂತರದಿಂದ ಜಯಿಸುವ ಸಂಪೂರ್ಣ ಪ್ರಯತ್ನ ಮಾಡುತ್ತೇವೆ' ಎಂದು ಪಂದ್ಯದ ನಂತರದ ಸುದ್ದಿಗೋಷ್ಠಿಯಲ್ಲಿ ಮಯಂಕ್ ಅಗರವಾಲ್ ಹೇಳಿದರು.

ಸಿ ಗುಂಪಿನಲ್ಲಿ ಕರ್ನಾಟಕದ ಮೊದಲೆರಡು ಪಂದ್ಯಗಳು ಮಳೆಗೆ ಕೊಚ್ಚಿಹೋಗಿದ್ದವು. ಆದರೆ ಬಿಹಾರ ಎದುರಿನ ಪಂದ್ಯದಲ್ಲಿ ಗೆದ್ದಿದ್ದ ತಂಡವು ಮೂರನೇ ಸ್ಥಾನಕ್ಕೇರಿತ್ತು. ತವರಿನಂಗಳದಲ್ಲಿ ಬಂಗಾಳ ಎದುರು ಜಯಿಸುವ ಕರ್ನಾಟಕದ ಆಸೆ ಕೈಗೂಡಲಿಲ್ಲ. ಮೊದಲ ಇನಿಂಗ್ಸ್ ಮುನ್ನಡೆಯೂ ದೊರೆಯಲಿಲ್ಲ. ಆದ್ದರಿಂದ ಇನ್ನುಳಿದಿರುವ ಮೂರು ಪಂದ್ಯಗಳಲ್ಲಿ ಜಯಿಸಿದರೆ ಮಾತ್ರ ನಾಕೌಟ್ ಅವಕಾಶ ಸಿಗುವ ಸಾಧ್ಯತೆ ಇದೆ.

ಸಂಕ್ಷಿಪ್ತ ಸ್ಕೋರ್: ಮೊದಲ ಇನಿಂಗ್ಸ್: ಬಂಗಾಳ 301. ಕರ್ನಾಟಕ 221. ಎರಡನೇ ಇನಿಂಗ್ಸ್: ಬಂಗಾಳ 81.4 ಓವರ್‌ಗಳಲ್ಲಿ 5ಕ್ಕೆ283 ಡಿಕ್ಲೇರ್ಡ್ (ಸುದೀಪ್‌ಕುಮಾರ್ ಔಟಾಗದೇ 101, ವೃದ್ಧಿಮಾನ್ ಸಹಾ ಔಟಾಗದೇ 63; ವಿದ್ಯಾಧರ ಪಾಟೀಲ 53ಕ್ಕೆ 3). ಕರ್ನಾಟಕ 28 ಓವರ್‌ಗಳಲ್ಲಿ 3ಕ್ಕೆ110 (ಆರ್. ಸ್ಮರಣ್ ಔಟಾಗದೇ 35, ಶ್ರೇಯಸ್ ಗೋಪಾಲ್ 32, ಮನೀಷ್ ಪಾಂಡೆ ಔಟಾಗದೇ 30; ಸೂರಜ್ ಸಿಂಧು ಜೈಸ್ವಾಲ್ 27ಕ್ಕೆ 3). ಫಲಿತಾಂಶ: ಪಂದ್ಯ ಡ್ರಾ. ಬಂಗಾಳಕ್ಕೆ 3, ಕರ್ನಾಟಕಕ್ಕೆ 1 ಅಂಕ. ಪಂದ್ಯದ ಆಟಗಾರ: ಅನುಸ್ತುಪ್ ಮಜುಂದಾರ್ (ಬಂಗಾಳ)

ರಣಜಿ ಟ್ರೋಫಿ: ಸಿ ಗುಂಪಿನ ಪಾಯಿಂಟ್ ಪಟ್ಟಿ

	ತಂಡ	ಪಂದ್ಯ	ಗೆಲುವು	ಸೋಲು	ಡ್ರಾ	ಅಂಕ
1	ಹರಿಯಾಣ	4	2	0	2	19
2	ಕೇರಳ	4	2	0	2	15
3	ಮಧ್ಯಪ್ರದೇಶ	4	1	0	3	9
4	ಕರ್ನಾಟಕ	4	1	0	3	9
5	ಬಂಗಾಳ	4	0	0	3	8
6	ಉತ್ತರಪ್ರದೇಶ	4	0	1	3	5
7	ಪಂಜಾಬ್	4	0	2	2	4
8	ಬಿಹಾರ	4	0	3	0	1

* ಬಂಗಾಳ ಮತ್ತು ಬಿಹಾರದ ತಲಾ 1 ಪಂದ್ಯ ಮಳೆಯಿಂದ ರದ್ದಾಗಿದೆ

ಗ್ರ್ಯಾಂಡ್‌ಮಾಸ್ಟರ್ಸ್ ಚೆಸ್: ಅರ್ಜುನ್ ಮುನ್ನಡೆ ತಗ್ಗಿಸಿದ ಅರೋನಿಯನ್

ಚೆನ್ನೈ: ಅಮೆರಿಕದ ಲೆವೊನ್ ಅರೋನಿಯನ್ ಅವರು ಫ್ರಾನ್ಸ್‌ನ ಮ್ಯಾಕ್ಸಿಂ ವೇಷಿಯರ್ ಲಗ್ರಾವ್ ಅವರನ್ನು ಮಣಿಸಿದರು. ಇದರಿಂದ ಚೆನ್ನೈ ಗ್ರ್ಯಾಂಡ್ ಮಾಸ್ಟರ್ಸ್ ಚೆಸ್ ಟೂರ್ನಿಯ ಐದನೇ ಸುತ್ತಿನ ಬಳಿಕ ಅರೋನಿಯನ್, ಅಗ್ರಸ್ಥಾನ ದಲ್ಲಿರುವ ಅರ್ಜುನ್ ಇರಿಗೇಶಿ ಬೆನ್ನ ತ್ತಿದ್ದು, ಅರ್ಧ ಪಾಯಿಂಟ್ ಅಂತರದಿಂದ ಎರಡನೇ ಸ್ಥಾನದಲ್ಲಿದ್ದಾರೆ.

ಭಾರತದ ಚೆಸ್ ತಾರೆ ಅರ್ಜುನ್ ಅವರು ಶನಿವಾರ ಇನ್ನೊಂದು ಪಂದ್ಯದಲ್ಲಿ ಇರಾನ್‌ನ ಪರ್ಹಾಮ್ ಮಘಸೂಡ್ಲೂ ಜೊತೆ 'ಡ್ರಾ'ಕ್ಕೆ ಒಪ್ಪಬೇಕಾಯಿತು. ಅರ್ಜುನ್ ನಾಲ್ಕು ಪಾಯಿಂಟ್ಸ್ ಸಂಗ್ರಹಿಸಿದರೆ, ಅರೋನಿಯನ್ 3.5 ಪಾಯಿಂಟ್ಸ್ ಕಲೆಹಾಕಿದ್ದಾರೆ. ಈ ಟೂರ್ನಿಯ ಮಾಸ್ಟರ್ಸ್ ವಿಭಾಗ ಪ್ರಬಲ ಆಟಗಾರರನ್ನು ಹೊಂದಿದೆ. ಸರಾಸರಿ ರೇಟಿಂಗ್ 2729. ಮೊದಲ ಬಾರಿ ಚಾಲೆಂಜರ್ ವಿಭಾಗವನ್ನು ಸೇರ್ಪಡೆ ಮಾಡಲಾಗಿದ್ದು, ಇದರಲ್ಲಿ ಭಾರತದ ಭರವಸೆಯ ಆಟಗಾರರಿಗೆ ಅವಕಾಶ ಮಾಡಿಕೊಡಲಾಗಿದೆ.

ವಿದಿತ್ ಗುಜರಾತಿ 57 ನಡೆಗಳ ನಂತರ ಇರಾನ್‌ನ ಅಮಿನ್ ತಬಾತಬೇಯಿ ಜೊತೆ 'ಡ್ರಾ'ಕ್ಕೆ ಸಹಿಹಾಕಿದರು. ಅರವಿಂದ ಚಿದಂಬರಂ ಮತ್ತು ಸರ್ಬಿಯಾದ ಅಲೆಕ್ಸಿ ಸರನ ಕೂಡ ಪಾಯಿಂಟ್ ಹಂಚಿಕೊಂಡರು.

ಚಾಲೆಂಜರ್ಸ್ ವಿಭಾಗದಲ್ಲಿ ಮಹಿಳಾ ಗ್ರ್ಯಾಂಡ್‌ಮಾಸ್ಟರ್‌ಗಳಾದ ವೈಶಾಲಿ ಆರ್. ಮತ್ತು ದ್ರೋಣವಲ್ಲಿ ಹಾರಿಕಾ ತಮ್ಮ ಪಂದ್ಯ ಡ್ರಾ ಮಾಡಿಕೊಂಡರು. ಸತತ ನಾಲ್ಕು ಜಯ ಗಳಿಸಿದ್ದ ವಿ.ಪ್ರಣವ್ ಅವರು ಐದನೇ ಸುತ್ತಿನಲ್ಲಿ ಸ್ವದೇಶದ ರೌನಕ್ ಸಾಧ್ವಾನಿ ಜೊತೆ 39 ನಡೆಗಳ ನಂತರ ಡ್ರಾ ಮಾಡಿಕೊಳ್ಳಬೇಕಾಯಿತು. ಮುರಳಿ ಕಾರ್ತಿಕೇಯನ್ ಸ್ವದೇಶದ ಅಭಿಮನ್ಯು ಪುರಾಣಿಕ್ ಅವರನ್ನು ಸೋಲಿಸಿದರು.

ಸೋತ ಪಂದ್ಯದಲ್ಲಿ ಮಿಂಚಿದ ಜುರೆಲ್

ಮೆಲ್ಬರ್ನ್ (ಪಿಟಿಐ): ಸತತ ಎರಡನೇ ಅರ್ಧ ಶತಕ ಬಾರಿಸುವ ಮೂಲಕ ವಿಕೆಟ್ ಕೀಪರ್ ಧ್ರುವ್ ಜುರೆಲ್ ಅವರು, ಇದೇ 22ರಂದು ಆರಂಭವಾಗುವ ಟೆಸ್ಟ್ ಸರಣಿಯಲ್ಲಿ ಭಾರತದ ತಂಡದ ಕದ ತಟ್ಟಿದರು. ಆದರೆ ಭಾರತ ಎ ತಂಡ, ಎರಡನೇ 'ಟೆಸ್ಟ್' ಪಂದ್ಯದ ನಾಲ್ಕನೇ ದಿನವಾದ ಶನಿವಾರ ಆಸ್ಟ್ರೇಲಿಯಾ ಎ ಎದುರು 6 ವಿಕೆಟ್‌ಗಳ ಸೋಲನುಭವಿಸಿತು.

ಭಾರತ ಎ ತಂಡ, ಎರಡು ಟೆಸ್ಟ್‌ಗಳ ಸರಣಿಯಲ್ಲಿ 0–2 ಸೋಲನುಭವಿಸಿತು. ಮ್ಯಾಕೆಯಲ್ಲಿ ನಡೆದ ಮೊದಲ 'ಟೆಸ್ಟ್'ನಲ್ಲಿ ಭಾರತ ಏಳು ವಿಕೆಟ್‌ಗಳಿಂದ ಪರಾಭವಗೊಂಡಿತ್ತು. ಶುಕ್ರವಾರ 5 ವಿಕೆಟ್‌ಗೆ 73 ರನ್‌ಗಳಿಂದ ಆಟ ಮುಂದುವರಿಸಿದ ಭಾರತ 229 ರನ್‌ಗಳಿಗೆ ಆಲೌಟ್ ಆಯಿತು. ಮೊದಲ ಇನಿಂಗ್ಸ್‌ನಲ್ಲಿ ಕೆಚ್ಚೆದೆಯಿಂದ ಆಡಿ 80 ರನ್ ಬಾರಿಸಿದ್ದ, ಜುರೆಲ್ ಎರಡನೇ ಸರದಿಯಲ್ಲಿ 122 ಎಸೆತಗಳನ್ನು ಎದುರಿಸಿ ತಾಳ್ಮೆಯ 68 ರನ್ ಹೊಡೆದರು.

ಧ್ರುವ್ ಜುರೆಲ್ –ಎಎಫ್‌ಪಿ ಚಿತ್ರ

ಸ್ಕೋರುಗಳು: ಭಾರತ ಎ: 161 ಮತ್ತು 77.5 ಓವರುಗಳಲ್ಲಿ 229 (ಧ್ರುವ್ ಜುರೆಲ್ 68, ; ಆಸ್ಟ್ರೇಲಿಯಾ ಎ:223 ಮತ್ತು 47.5 ಓವರುಗಳಲ್ಲಿ 4 ವಿಕೆಟ್‌ಗೆ 169 (ನಥಾನ್ ಮ್ಯಾಕ್‌ಸ್ವೀನಿ 25, ಸ್ಯಾಮ್ ಕಾನ್‌ಸ್ಟಾಸ್ ಔಟಾಗದೇ 73, ಬ್ಯೂ ವೆಬ್‌ಸ್ಟರ್ ಔಟಾಗದೇ 46; ಪ್ರಸಿದ್ಧಕೃಷ್ಣ 37ಕ್ಕೆ2)

ಪಂಕಜ್‌ಗೆ 28ನೇ ವಿಶ್ವ ಕಿರೀಟ

ನವದೆಹಲಿ (ಪಿಟಿಐ): ಭಾರತದ ಅನುಭವಿ ಆಟಗಾರ ಪಂಕಜ್ ಅಡ್ವಾಣಿ ಅವರು ದೋಹಾದಲ್ಲಿ ಶನಿವಾರ ಮುಕ್ತಾಯಗೊಂಡ ಐಬಿಎಸ್‌ಎಫ್ ವಿಶ್ವ ಬಿಲಿಯರ್ಡ್ಸ್ ಚಾಂಪಿಯನ್‌ಷಿಪ್‌ನಲ್ಲಿ ಸತತ ಏಳನೇ ಬಾರಿ ಪ್ರಶಸ್ತಿ ಮುಡಿಗೇರಿಸಿಕೊಂಡರು. ಅವರಿಗೆ ಒಟ್ಟಾರೆ ಇದು ದಾಖಲೆಯ 28ನೇ ವಿಶ್ವ ಪ್ರಶಸ್ತಿಯಾಗಿದೆ.

39 ವರ್ಷ ವಯಸ್ಸಿನ ತಾರೆ ಪಂಕಜ್ ಫೈನಲ್‌ನಲ್ಲಿ 4–2ರಿಂದ ಇಂಗ್ಲೆಂಡ್‌ನ ರಾಬರ್ಟ್ ಹಾಲ್ ಅವರನ್ನು ಮಣಿಸಿದರು. ಸಿಂಗಪುರದ ಪೀಟರ್ ಗಿಲ್‌ಕ್ರಿಸ್ಟ್ ಮತ್ತು ಭಾರತದ ಸೌರವ್ ಕೊಠಾರಿ ಅವರು ಜಂಟಿ ಕಂಚು ಗೆದ್ದರು.

ನೀರಜ್ ಕೋಚ್ ಆಗಿ ಝೆಲೆಝ್ನಿ

ನವದೆಹಲಿ (ಪಿಟಿಐ): ಜಾವೆಲಿನ್ ತಾರೆ ನೀರಜ್ ಚೋಪ್ರಾ ಅವರು ಮೂರು ಬಾರಿಯ ಒಲಿಂಪಿಕ್ ಚಾಂಪಿಯನ್ ಹಾಗೂ ವಿಶ್ವದಾಖಲೆ ವೀರ ಯಾನ್ ಝೆಲೆಝ್ನಿ ಅವರನ್ನು ತಮ್ಮ ಕೋಚ್ ಆಗಿ ಸೆಳೆಯುವಲ್ಲಿ ಯಶಸ್ವಿಯಾಗಿದ್ದಾರೆ.



ಯಾನ್ ಝೆಲೆಝ್ನಿ

58 ವರ್ಷ ವಯಸ್ಸಿನ ಝೆಲೆಝ್ನಿ ಅವರು ಅವರು ಆಧುನಿಕ ಯುಗದ ಮಹಾನ್ ಜಾವೆಲಿನ್ ಥ್ರೋವರ್ ಆಗಿ ಗುರುತಿಸಿಕೊಂಡಿದ್ದಾರೆ. ತಮ್ಮ ಯಶಸ್ವಿ ವೃತ್ತಿಜೀವನದಲ್ಲಿ ಸತತ ಮೂರು ಒಲಿಂಪಿಕ್ಸ್‌ಗಳಲ್ಲಿ (1992, 1996 ಮತ್ತು 2000) ಅವರು ಚಿನ್ನ ಗೆದ್ದಿದ್ದರು. 1993, 1995 ಮತ್ತು 2001ರಲ್ಲಿ ವಿಶ್ವ ಚಾಂಪಿಯನ್ ಕೂಡ ಆಗಿದ್ದರು. ವಿಶ್ವ ದಾಖಲೆ (98.48 ಮೀ.) ದೀರ್ಘ ಕಾಲದಿಂದ ಅವರ ಹೆಸರಿನಲ್ಲಿದೆ. 1996ರಲ್ಲಿ ಜರ್ಮನಿಯಲ್ಲಿ ಅವರು ಆ ಚಾರಿತ್ರಿಕ ಥ್ರೊ ದಾಖಲಿಸಿದ್ದರು.

ಚೋಪ್ರಾ ಐದು ವರ್ಷಗಳಿಂದ ಜರ್ಮನಿಯ ಕ್ಲಾಸ್ ಬರ್ತೊನೀಟ್ಜ್ ಅವರಿಂದ ತರಬೇತಿ ಪಡೆಯುತ್ತಿದ್ದರು. ಅವರು ಕೌಟುಂಬಿಕ ಕಾರಣಗಳಿಂದ ಒಪ್ಪಂದ ಮುಂದುವರಿಸಿರಲಿಲ್ಲ. ನೀರಜ್ 2020 ಟೋಕಿಯೊ ಒಲಿಂಪಿಕ್ ಕ್ರೀಡೆಗಳಲ್ಲಿ ಚಿನ್ನ ಗೆದ್ದರೆ, 2024ರ ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಬೆಳ್ಳಿ ಗೆದ್ದಿದ್ದರು.

ತಾವು ಝೆಲೆಝ್ನಿ ಅವರ ದೊಡ್ಡ ಅಭಿಮಾನಿಯಾಗಿರುವುದಾಗಿ ಭಾರತದ ಜಾವೆಲಿನ್ ತಾರೆ ಹೇಳಿದ್ದರು. ತಮ್ಮ ಕೌಶಲ ವರ್ಧನೆಗೆ ಝೆಕ್ ತಾರೆಯ ವಿಡಿಯೊಗಳನ್ನು ನೋಡುತ್ತಿದ್ದುದಾಗಿಯೂ ಅವರು ಹೇಳಿದ್ದರು.

ಸಂಕ್ಷಿಪ್ತ ಸುದ್ದಿ

ಪಾಕಿಸ್ತಾನ ಪ್ರವಾಸ ಇಲ್ಲ: ಬಿಸಿಸಿಐ

ನವದೆಹಲಿ (ಪಿಟಿಐ): ಐಸಿಸಿ ಚಾಂಪಿಯನ್ಸ್ ಟ್ರೋಫಿಯಲ್ಲಿ ಆಡಲು ಪಾಕಿಸ್ತಾನಕ್ಕೆ ಹೋಗುವುದಿಲ್ಲ ಎಂದು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ, ಐಸಿಸಿಗೆ ತನ್ನ ಅಸಹಾಯಕತೆ ವ್ಯಕ್ತ ಪಡಿಸಿದೆ. ಹೀಗಾಗಿ ಭಾರತ ಪಾಲ್ಗೊಳ್ಳ ಬೇಕಾದರೆ, ಪಾಕಿಸ್ತಾನ ಕ್ರಿಕೆಟ್ ಮಂಡಳಿಗೆ 'ಹೈಬ್ರಿಡ್ ಮಾದರಿ' ಅನುಸರಿಸದೇ ಅನ್ಯಮಾರ್ಗವಿಲ್ಲದಂತಾಗಿದೆ.

'ಇದು ಐಸಿಸಿ ಟೂರ್ನಿಯಾಗಿದೆ. ಹೀಗಾಗಿ ಭಾರತ ತಂಡವು ಪಾಕಿಸ್ತಾನ ಪ್ರವಾಸ ಕೈಗೊಳ್ಳುವುದಿಲ್ಲ ಎಂದು ಐಸಿಸಿಗೆ ತಿಳಿಸಿದೆ. ಈ ಬೆಳವಣಿಗೆ ಕುರಿತು ಆತಿಥೇಯ ಪಾಕಿಸ್ತಾನಕ್ಕೆ ಐಸಿಸಿ ಮಾಹಿತಿ ನೀಡಬೇಕಾಗಿದೆ. ನಂತರವಷ್ಟೇ ಅಂತಿಮ ವೇಳಾ ಪಟ್ಟಿ ರೂಪಿಸಬೇಕಾಗುತ್ತದೆ' ಎಂದು ಬಿಸಿಸಿಐ ಮೂಲ ತಿಳಿಸಿದೆ.

'ಆದರೆ ಈ ವಿಷಯದ ಕುರಿತು ಬಿಸಿಸಿಐನಿಂದ ನಮಗೆ ಯಾವುದೇ ಅಧಿಕೃತ ಮಾಹಿತಿ ಬಂದಿಲ್ಲ ಎಂದು ಪಾಕಿಸ್ತಾನ ಕ್ರಿಕೆಟ್ ಮಂಡಳಿ ಹೇಳಿದೆ.

ವಾರಿಯರ್ಸ್‌ಗೆ ತಿವಿಯದ ಬುಲ್ಸ್

ಹೈದರಾಬಾದ್: ಬೆಂಗಾಲ್ ವಾರಿಯರ್ಸ್ ತಂಡ, ಪ್ರೊ ಕಬಡ್ಡಿ ಲೀಗ್‌ನ ಹೈದರಾಬಾದ್ ಚರಣದ ಅಂತಿಮ ಪಂದ್ಯದಲ್ಲಿ 40–29 ಪಾಯಿಂಟ್‌ಗಳಿಂದ ಬೆಂಗಳೂರು ಬುಲ್ಸ್ ತಂಡವನ್ನು ಸೋಲಿಸಿತು.

ಗಚ್ಚಿಬೌಲಿ ಕ್ರೀಡಾಂಗಣದಲ್ಲಿ ಶನಿವಾರ ನಡೆದ ಈ ಪಂದ್ಯದಲ್ಲಿ ಆರಂಭದಿಂದಲೇ ಪಡೆದ ಮುನ್ನಡೆಯನ್ನು ವಾರಿಯರ್ಸ್ ಹಂತಹಂತವಾಗಿ ಹೆಚ್ಚಿಸುತ್ತ ಹೋಯಿತು. ಇದು ಎಂಟು ಪಂದ್ಯಗಳಲ್ಲಿ ಬುಲ್ಸ್‌ಗೆ ಆರನೇ ಸೋಲು. ವಾರಿಯರ್ಸ್‌ಗೆ 7 ಪಂದ್ಯಗಳಲ್ಲಿ ಮೂರನೇ ಜಯ

ಟೈಟನ್ಸ್‌ಗೆ ಜಯ: ಇದಕ್ಕೆ ಮೊದಲು, ನಾಟಕೀಯ ಅಂತ್ಯಕಂಡ ಪಂದ್ಯದಲ್ಲಿ ಆತಿಥೇಯ ತೆಲುಗು ಟೈಟನ್ಸ್ ತಂಡ 34–33 ಪಾಯಿಂಟ್‌ಗಳಿಂದ ಪುಣೇರಿ ಪಲ್ಟನ್ ತಂಡನ್ನು ಸೋಲಿಸಿತು. ಇದು ಟೈಟನ್ಸ್‌ಗೆ ಸತತ ನಾಲ್ಕನೇ ಜಯವಾಗಿದ್ದು, ಪಾಯಿಂಟ್ ಪಟ್ಟಿಯಲ್ಲಿ ಎರಡನೇ ಸ್ಥಾನಕ್ಕೇರಿತು.

ಭಾನುವಾರದಿಂದ ನೊಯ್ಡಾದಲ್ಲಿ ಪಿಕೆಎಲ್ ಎರಡನೇ ಚರಣದ ಪಂದ್ಯಗಳು ನಡೆಯಲಿವೆ.

ಕಿರಣ್‌ಗೆ ಸೋಲು

ಇಕ್ಸಾನ್ ಸಿಟಿ (ದಕ್ಷಿಣ ಕೊರಿಯಾ), (ಪಿಟಿಐ): ಕೊರಿಯಾ ಮಾಸ್ಟರ್ಸ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಭಾರತದ ಯುವ ಆಟಗಾರ ಕಿರಣ್ ಜಾರ್ಜ್ ಅವರ ಯಶಸ್ಸಿನ ಓಟ ಸೆಮಿಫೈನಲ್‌ನಲ್ಲಿ ಅಂತ್ಯಗೊಂಡಿತು. ಶನಿವಾರ ನಡೆದ ಪಂದ್ಯದ ಕಿರಣ್ ಅವರು 12–21, 20–22 ಗೇಮ್‌ಗಳಿಂದ ಅಗ್ರ ಶ್ರೇಯಾಂದ ಆಟಗಾರ ಕುನ್ಲಾವುಟ್ ವಿಟಿಡ್ಸರ್ನ್ (ಥಾಯ್ಲೆಂಡ್) ವಿರುದ್ಧ ಸೋಲುಂಡರು.